ಮಂಗಳವಾರ, ಜೂನ್ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 174 | ಪುಟ 14
prajavani.net prajavani ● www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭಕ್ತಿ-ಭಾವ
ದಕ್ಷಿಣ ಆಸ್ಟ್ರೇಲಿಯಾದ ಗವರ್ನರ್ ಫ್ರಾನ್ಸಸ್ ಆ್ಯಡಮ್ಸನ್ ಎ.ಸಿ. ಅವರು ಸೋಮವಾರ ಹಲಸೂರಿನ ಸೋಮೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು

ದಿನಿಧಿ ದಾಖಲೆ
ಕರ್ನಾಟಕದ ಈಜುಪಟು ದಿನಿಧಿ ದೇಸಿಂಗು ಅವರು ಒಡಿಶಾದ ಭುವನೇಶ್ವರದಲ್ಲಿ ಸೋಮವಾರ ಮಹಿಳೆಯರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿದರು

ಸೆನ್ಸೆಕ್ಸ್ 81,896 | ನಿಫ್ಟಿ 24,971 | $/₹ 86.78 | ಚಿನ್ನ (Std. 10g) ₹1.03 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.13 ಲಕ್ಷ (ಬೆಂಗಳೂರು)

‘ಲಂಚ’: ದನಿ ಏರಿಸಿದ ಶಾಸಕರು

‘ರಾಜ್ಯ ನಾಯಕರನ್ನೇ ಕೇಳಿ’ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರೆ, ‘ಶಾಸಕರ ಜತೆ ಮಾತನಾಡುವೆ’ ಎಂದಿದ್ದಾರೆ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಸತಿ ಇಲಾಖೆಯಲ್ಲಿ ಮನೆ ಹಂಚಿಕೆಗೆ ಲಂಚ ನಡೆಯುತ್ತಿದೆ’ ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಆಳಂದ ಶಾಸಕ ಬಿ.ಆರ್. ಪಾಟೀಲ ಮಾಡಿರುವ ಆರೋಪ ದಿನದಿಂದ ದಿನಕ್ಕೆ ಗಂಭೀರ ಸ್ವರೂಪ ಪಡೆಯುತ್ತಿದೆ.

ಪಾಟೀಲರು ತಮ್ಮ ನಿಲುವಿನಲ್ಲಿ ಅಚಲವಾಗಿ ನಿಂತಿದ್ದರೆ, ಕಾಗವಾಡ ಶಾಸಕ ರಾಜು ಕಾಗೆಯವರು ಪಾಟೀಲರ ಬೆಂಬಲಕ್ಕೆ ನಿಂತಿದ್ದಾರೆ. ಮೊಳಕಾಲ್ಮುರು ಶಾಸಕ ಎನ್.ವೈ. ಗೋಪಾಲಕೃಷ್ಣ ಅವರು, ‘ನನ್ನಿಂದ ಒಂದು ಚರಂಡಿ ಕಟ್ಟಿಸಲೂ ಆಗಿಲ್ಲ’ ಎಂದು ಅಳಲು ತೋಡಿಕೊಂಡಿದ್ದಾರೆ. ಸಾಗರದ ಶಾಸಕ ಬೇಳೂರು ಗೋಪಾಲಕೃಷ್ಣ, ‘ಆರೋಪಿತ ಸಚಿವರು ರಾಜೀನಾಮೆ ಕೊಟ್ಟು ತನಿಖೆ ಎದುರಿಸಲಿ’ ಎಂದು ಆಗ್ರಹಿಸಿದ್ದಾರೆ. ಇವುಗಳನ್ನು ಪ್ರಸ್ತಾಪಿಸಿರುವ ವಿರೋಧ ಪಕ್ಷದ ನಾಯಕರು, ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

ಸೋಮವಾರ ರಾಯಚೂರಿನಲ್ಲಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರನ್ನು ಈ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, ‘ಈ ಬಗ್ಗೆ ರಾಜ್ಯ ನಾಯಕರನ್ನೇ ಕೇಳಿ’ ಎಂದಷ್ಟೇ ಹೇಳಿದರು.

▶6

ತಮ್ಮದೇ ಪಕ್ಷದ ಸರ್ಕಾರದ ವಿರುದ್ಧ ಶಾಸಕರು ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಬಿ.ಆರ್. ಪಾಟೀಲ, ರಾಜು ಕಾಗೆ ಅಷ್ಟೇ ಅಲ್ಲ, ಇನ್ನೂ ಹತ್ತಾರು ಶಾಸಕರು ಮಾತನಾಡಲಿದ್ದಾರೆ
ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಬಡವರ ವಸತಿ ಯೋಜನೆಗಳಲ್ಲೇ ₹2,100 ಕೋಟಿ ಕಮಿಷನ್ ಪಡೆದಿದೆ. ಯಾರಿಗೆ ಎಷ್ಟು ಕಮಿಷನ್ ಹೋಗಿದೆ ಎಂಬ ನಿಖರ ಮಾಹಿತಿಯುಳ್ಳ ಪಟ್ಟಿ ನನ್ನ ಬಳಿಯಿದೆ
ಆರ್. ಅಶೋಕ, ವಿರೋಧ ಪಕ್ಷದ ನಾಯಕ

‘ಸಂಬಂಧಿಸಿದವರು ರಾಜೀನಾಮೆ ಕೊಡಲಿ’

ಶಿವಮೊಗ್ಗ: ‘ವಸತಿ ಯೋಜನೆ ಅಡಿ ಮನೆ ಹಂಚಿಕೆಗೆ ಲಂಚ ಕೊಡಬೇಕಿದೆ ಎಂದು ಬಿ.ಆರ್.ಪಾಟೀಲ ಗಂಭೀರ ಆರೋಪ ಮಾಡಿದ್ದಾರೆ. ಅದು ನಿಜವಾಗಿದ್ದರೆ ಸಂಬಂಧಿಸಿದ ಸಚಿವರು ರಾಜೀನಾಮೆ ಕೊಡುವುದು ಒಳ್ಳೆಯದು. ಅದರಲ್ಲಿ ಎರಡು ಮಾತಿಲ್ಲ’ ಎಂದು ಸಾಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಗೋಪಾಲಕೃಷ್ಣ ಬೇಳೂರು ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬೇರೆ ಬೇರೆ ಹಗರಣಗಳಲ್ಲಿ ಹಲವರು ರಾಜೀನಾಮೆ ಕೊಟ್ಟು ತನಿಖೆ ಎದುರಿಸಿದ ನಿದರ್ಶನಗಳು ಇವೆ. ಅಂಥದ್ದೇನಾದರೂ ಇದ್ದರೆ ತನಿಖೆ ಆಗಲಿ. ಸಂಬಂಧಿಸಿದ ಸಚಿವರು ರಾಜೀನಾಮೆ ಕೊಟ್ಟು ತನಿಖೆ ಎದುರಿಸಲಿ ಎಂಬ ಒತ್ತಾಯ ನನ್ನದು’ ಎಂದರು.

‘ರಾಜೀನಾಮೆ ನೀಡಬೇಕಿರುವುದು ಜಮೀರ್ ಅಹಮದ್ ಅವರೇ’ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ಯಾರೇ ಇರಲಿ. ಸಂಬಂಧಪಟ್ಟವರು ಯಾರಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಅವರು ರಾಜೀನಾಮೆ ಕೊಟ್ಟು ತನಿಖೆ ಎದುರಿಸಿ ನಿರ್ದೋಷಿಯಾಗಿ ಹೊರಬರುವುದು ಒಳ್ಳೆಯದು. ನಂತರ ಬೇಕಿದ್ದರೆ ಅವರನ್ನು ಸಂಪುಟಕ್ಕೆ ವಾಪಸ್ ತೆಗೆದುಕೊಳ್ಳಲು ಅವಕಾಶವಿರುತ್ತದೆ’ ಎಂದು ಹೇಳಿದರು.

‘ರಾಜೀನಾಮೆ ನಿರ್ಧಾರ ಶೀಘ್ರ’

ಕಾಗವಾಡ (ಬೆಳಗಾವಿ ಜಿಲ್ಲೆ): ‘ಬಿ.ಆರ್.ಪಾಟೀಲ ಅವರು ಮಾಡಿದ ಭ್ರಷ್ಟಾಚಾರ ಆರೋಪದಲ್ಲಿ ಸತ್ಯಾಂಶವಿದೆ. ಅವರಿಗೆ ನನ್ನ ಸಂಪೂರ್ಣ ಬೆಂಬಲವಿದೆ. ನನ್ನದು ಅಂಥದ್ದೇ ಪರಿಸ್ಥಿತಿಯಿದೆ. ಒಂದು ಕೆಲಸವೂ ಆಗುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶೀಘ್ರವೇ ಭೇಟಿಯಾಗಿ, ರಾಜೀನಾಮೆ ಬಗ್ಗೆ ನಿರ್ಧರಿಸುವೆ’ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ, ಸ್ಥಳೀಯ ಶಾಸಕ ಭರಮಗೌಡ (ರಾಜು) ಕಾಗೆ ಹೇಳಿದರು.

‘ರಾಜ್ಯ ಸರ್ಕಾರದ ಆಡಳಿತ ಸಂಪೂರ್ಣವಾಗಿ ವಿಫಲವಾಗಿದೆ. ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣವಿಲ್ಲ. ನನ್ನ ಮನಸ್ಸಿಗೆ ತುಂಬಾ ನೋವಾಗಿದೆ’ ಎಂದು ಅವರು ಐನಾಪುರದಲ್ಲಿ ಸುದ್ದಿಗಾರರಿಗೆ ಹೇಳಿದರು.

‘ಕಾಗವಾಡ ವಿಧಾನಸಭಾ ಕ್ಷೇತ್ರಕ್ಕೆ ಎರಡು ವರ್ಷಗಳ ಹಿಂದೆ ಮುಖ್ಯಮಂತ್ರಿ ವಿಶೇಷ ಅನುದಾನದಲ್ಲಿ ₹12 ಕೋಟಿಯ ರಸ್ತೆ ಕಾಮಗಾರಿಗೆ ಮತ್ತು ₹13 ಕೋಟಿಯ ಸಮುದಾಯ ಭವನಗಳಿಗೆ ಮಂಜೂರಾಗಿದೆ. ಆದರೆ, ಇನ್ನೂ ಕಾರ್ಯಾದೇಶ ಬಂದಿಲ್ಲ. 72 ಸಮುದಾಯ ಭವನಗಳು ಸೇರಿ ಯಾವ ಕಾಮಗಾರಿಯೂ ನಡೆದಿಲ್ಲ’ ಎಂದರು.

ರಸ್ತೆಯ ಕಾಮಗಾರಿಗೆ ತೆಂಗಿನಕಾಯಿ ಒಡೆದು, ಪೂಜೆ ಮಾಡಿ ಒಂದು ವರ್ಷವಾಗಿದೆ. ಅಂದು ಮುಖ ತೋರಿಸಿದ ಗುತ್ತಿಗೆದಾರ ಮತ್ತೆ ಬಂದಿಲ್ಲ. ಜನ ನಮಗೆ ಛೀ–ಥೂ ಎಂದು ಉಗುಳುವಂತಾಗಿದೆ ಎಂದೂ ಅವರು ಹೇಳಿದರು.

ರಾಜು ಕಾಗೆಯಂತೆ ಬಹಳ ಮಂದಿ ಮಾತನಾಡುವರು: ಬಿ.ಆರ್. ಪಾಟೀಲ

ಕಲಬುರಗಿ: ‘ಶಾಸಕ ರಾಜು ಕಾಗೆ ಅವರಂತೆ ಬಹಳಷ್ಟು ಮಂದಿ ಮಾತನಾಡುವವರು ಇದ್ದಾರೆ’ ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಆಳಂದ ಶಾಸಕ ಬಿ.ಆರ್. ಪಾಟೀಲ ಹೇಳಿದರು. ರಾಜು ಕಾಗೆ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿ ಅವರು, ‘ಶಾಸಕಾಂಗ ಪಕ್ಷದ ಸಭೆಯಲ್ಲಿ 6 ತಿಂಗಳ ಹಿಂದೆಯೇ ಏನು ಹೇಳಬೇಕೋ ಅದೆಲ್ಲವನ್ನೂ ರಾಜು ಕಾಗೆ ಹೇಳಿದ್ದಾರೆ. ಅವರಂತೆ ಇನ್ನೂ ಬಹಳ ಮಂದಿ (ಶಾಸಕರು) ಹೇಳುವವರು ಇದ್ದಾರೆ’ ಎಂದರು.

▶6

ಅಮೆರಿಕ ಸೇನಾ ನೆಲೆಗಳ ಮೇಲೆ ಇರಾನ್ ದಾಳಿ

ದುಬೈ(ಎಪಿ): ಕತಾರ್ ಹಾಗೂ ಇರಾಕ್‌ನಲ್ಲಿರುವ ಅಮೆರಿಕ ಸೇನಾ ನೆಲೆಗಳನ್ನು ಗುರಿಯಾಗಿರಿಸಿಕೊಂಡು ಇರಾನ್ ಸೋಮವಾರ ಕ್ಷಿಪಣಿ ದಾಳಿ ನಡೆಸಿತು.

ತನ್ನ ದೇಶದ ಪರಮಾಣು ಘಟಕಗಳ ಮೇಲೆ ಅಮೆರಿಕ ಬಾಂಬ್ ದಾಳಿ ನಡೆಸಿದ್ದಕ್ಕೆ ಪ್ರತೀಕಾರವಾಗಿ ಈ ದಾಳಿ ನಡೆಸಿದೆ.

ತನ್ನ ದೇಶದ ಅಲ್‌-ಯುಡೀಡ್ ವಾಯುನೆಲೆಯ ಮೇಲೆ ದಾಳಿ ನಡೆಸಿದ್ದನ್ನು ಕತಾರ್ ಖಂಡಿಸಿದೆ. ಇರಾನ್‌ನ ಎಲ್ಲ ಕ್ಷಿಪಣಿಗಳನ್ನು ಪ್ರತಿಬಂಧಿಸಲಾಗಿದ್ದು, ಯಾವುದೇ ಸಾವು–ನೋವು ಸಂಭವಿಸಿಲ್ಲ. ವಾಯುಪ್ರದೇಶವು ಸಂಪೂರ್ಣ ಸುರಕ್ಷಿತವಾಗಿದೆ ಎಂದು ಸ್ಪಷ್ಟಪಡಿಸಿದೆ.

ಸೇನಾ ನೆಲೆಗಳನ್ನು ಗುರಿಯಾಗಿರಿಸಿಕೊಂಡು, ಇರಾನ್ ದಾಳಿ ನಡೆಸಿರುವುದನ್ನು ಅಮೆರಿಕ ಸರ್ಕಾರ ಸೋಮವಾರ ರಾತ್ರಿ ಖಚಿತಪಡಿಸಿದೆ. ಅಲ್‌-ಯುಡೀಡ್ ವಾಯುನೆಲೆಯು ಕತಾರ್, ಅಮೆರಿಕ ಹಾಗೂ ಬ್ರಿಟನ್ ದೇಶಗಳ ಜಂಟಿ ವಾಯು ಕಾರ್ಯಾಚರಣಾ ನೆಲೆಯಾಗಿದೆ.

‘ಅಮೆರಿಕದ ಬಾಂಬ್ ದಾಳಿಗೆ ನೀಡಿರುವ ಸರಿಯಾದ ಉತ್ತರವಿದು. ಜನನಿಬಿಡ ಪ್ರದೇಶದಿಂದ ಹೊರಗಿದ್ದ ಕಾರಣ ಈ ನೆಲೆಯನ್ನು ಗುರಿಯಾಗಿಸಲಾಗಿತ್ತು’ ಎಂದು ಇರಾನ್ ತಿಳಿಸಿದೆ.

ಇರಾನ್‌ನ ಸರ್ಕಾರಿ ಚಾನೆಲ್‌ನಲ್ಲಿ ಯುದ್ಧದ ಸಂಗೀತ ಪ್ರಸಾರವಾಗುತ್ತಿದ್ದಂತೆಯೇ, ದಾಳಿ ನಡೆಸಿರುವುದನ್ನು ಘೋಷಿಸಿತು.

‘ಅಮೆರಿಕದ ಆಕ್ರಮಣಶೀಲತೆಗೆ ಇದು ಅದ್ಭುತವೂ ಯಶಸ್ವಿವೂ ಆದ ಪ್ರತಿಕ್ರಿಯೆ’ ಎಂದು ಶೀರ್ಷಿಕೆ ಸಹಿತ ಟಿ.ವಿ ಪರದೆಯಲ್ಲಿ ಸುದ್ದಿ ಪ್ರಸಾರಗೊಂಡಿತು.

ಅದೇ ರೀತಿ, ಪಶ್ಚಿಮ ಇರಾಕ್‌ನಲ್ಲಿರುವ ‘ಯೆನ್‌-ಅಲ್‌-ಅಸ್ಸಾದ್’ ಅಮೆರಿಕ ಸೇನಾ ನೆಲೆಯ ಮೇಲೂ ಇರಾನ್ ದಾಳಿ ನಡೆಸಿತು. ಈ ವಿಚಾರವನ್ನು ಇರಾಕ್‌ನ ಭದ್ರತಾ ಅಧಿಕಾರಿಗಳು ಬಹಿರಂಗವಾಗಿ ಒಪ್ಪಿಕೊಂಡಿಲ್ಲ.

ಇರಾನ್‌ನ ರೆವಲ್ಯೂಷನರಿ ಗಾರ್ಡ್ ದಾಳಿ ನಡೆಸಿರುವುದು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗಿದೆ ಎಂದು ಕತಾರ್‌ನ ವಿದೇಶಾಂಗ ಸಚಿವಾಲಯವು ತಿಳಿಸಿದೆ.

▶10

ದಾಳಿ ಬಳಿಕ ನಡೆದಿದ್ದೇನು?

- ಇರಾನ್ ದಾಳಿಯ ಬೆನ್ನಲ್ಲೇ ಕತಾರ್ ವಾಯುಪ್ರದೇಶ ತಾತ್ಕಾಲಿಕ ಬಂದ್
- ಸೂಕ್ತ ಆಶ್ರಯ ಪಡೆದುಕೊಳ್ಳಿ: ಕತಾರ್‌ನಲ್ಲಿ ನೆಲಸಿದ ಅಮೆರಿಕ, ಬ್ರಿಟನ್‌ನ ನಾಗರಿಕರಿಗೆ ಸೂಚನೆ
- ದೋಹಾ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದ 100 ವಿಮಾನಗಳ ಮಾರ್ಗ ಬದಲು
- ಮಧ್ಯಪ್ರಾಚ್ಯದ ಹಲವೆಡೆ ವಾಯುಮಾರ್ಗ ನಿರ್ಬಂಧ– ಹಲವು ವಿಮಾನಗಳ ಮಾರ್ಗ ಮರು ಸಂಯೋಜಿಸಿದ ಎತಿಹಾದ್ ಏರ್‌ವೇಸ್



ಕತಾರ್‌ನ ದೋಹಾದಲ್ಲಿರುವ ಅಲ್–ಯುಡೀಡ್ ವಾಯುನೆಲೆ ಕ್ಷಿಪಣಿ ದಾಳಿ ನಡೆಸಿದ ಚಿತ್ರವನ್ನು ವ್ಯಕ್ತಿಯೊಬ್ಬರು ಮೊಬೈಲ್‌ನಲ್ಲಿ ಸೆರೆಹಿಡಿದರು —ಎಎಫ್‌ಪಿ ಚಿತ್ರ

ಅಣು ಘಟಕಕ್ಕೆ ಇಸ್ರೇಲ್ ದಾಳಿ

ಟೆಹರಾನ್/ಜೆರುಸಲೇಂ/ವಿಯೆನ್ನಾ (ಎಪಿ/ರಾಯಿಟರ್ಸ್): ಇರಾನ್‌ನ ಫೋರ್ಡೊ ಪರಮಾಣು ಘಟಕದ ಮೇಲೆ ಇಸ್ರೇಲ್ ಸೋಮವಾರ ದಾಳಿ ನಡೆಸಿದೆ. ಫೋರ್ಡೊ ಸೇರಿದಂತೆ ಇರಾನ್‌ನ ಮೂರು ಪರಮಾಣು ಘಟಕಗಳ ಮೇಲೆ ಅಮೆರಿಕವು ಭಾನುವಾರ ಭಾರಿ ತೂಕದ ಬಾಂಬ್‌ಗಳನ್ನು ಬೀಳಿಸಿತ್ತು.

ಮೂರೂ ಪರಮಾಣು ಘಟಕಗಳಲ್ಲಿ ಫೋರ್ಡೊ ಘಟಕವು ಭಾರಿ ಸುರಕ್ಷಿತ ಎನ್ನಲಾಗಿತ್ತು. ವಾಯು ದಾಳಿಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿಯೇ ಪರ್ವತವನ್ನು ಕೊರೆದು ಸುಮಾರು 80ರಿಂದ 90 ಮೀಟರ್ ಆಳದಲ್ಲಿ ಈ ಘಟಕವನ್ನು ಸ್ಥಾಪಿಸಲಾಗಿದೆ.

‘ಶೇ 60ರಷ್ಟು ಶುದ್ಧತೆಯ ಯುರೇನಿಯಂ ಖನಿಜ ಇರುವ ಈ ಘಟಕವನ್ನು ತಲುಪುವ ದಾರಿಯನ್ನು ಧ್ವಂಸ ಮಾಡಿದ್ದೇವೆ’ ಎಂದು ಇಸ್ರೇಲ್ ಸೇನೆ ಹೇಳಿಕೊಂಡಿದೆ. ‘ನಮ್ಮ ದಾಳಿಯಿಂದ ಘಟಕಗಳು ಸಂಪೂರ್ಣವಾಗಿ ನಾಶವಾಗಿವೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದಾರೆ.

ಅಮೆರಿಕವು ಪರಮಾಣು ಘಟಕಗಳ ಮೇಲೆ ದಾಳಿ ಮಾಡುವ ಮುನ್ನವೇ ಸುಮಾರು 400 ಕೆ.ಜಿ ಯುರೇನಿಯಂ ದಾಸ್ತಾನನ್ನು ಇರಾನ್ ಬೇರೆಡೆಗೆ ಸ್ಥಳಾಂತ ರಿಸಿತ್ತು ಎನ್ನುವ ಮಾತೂ ಕೇಳಿಬರುತ್ತಿದೆ.

ಅಮೆರಿಕ ಮತ್ತು ಇಸ್ರೇಲ್ ದಾಳಿಗಳಿಂದ ಎಷ್ಟರ ಮಟ್ಟಿಗೆ ಹಾನಿಗಳಾಗಿವೆ ಎನ್ನುವ ಬಗ್ಗೆ ಅಧಿಕೃತ ಮಾಹಿತಿ ದೊರಕಿಲ್ಲ. ಆದರೆ, ಕೆಲವು ಸುದ್ದಿ ಸಂಸ್ಥೆಗಳು ಉಪಗ್ರಹಗಳ ಚಿತ್ರಗಳನ್ನು ಅವಲೋಕಿಸಿ ಹಾನಿಯ ಅಂದಾಜು ಮಾಡಲು ಯತ್ನಿಸಿವೆ.

ಪಡಿತರ ಜೊತೆ ‘ಇಂದಿರಾ ಕಿಟ್’?

● ರಾಜೇಶ್ ರೈ ಚಟ್ಲ

ಬೆಂಗಳೂರು: ಎಲ್ಲ ಆದ್ಯತಾ ಕುಟುಂಬಗಳ ಪಡಿತರ ಚೀಟಿದಾರರಿಗೆ ಪೌಷ್ಟಿಕ ವಸ್ತುಗಳನ್ನು ಒಳಗೊಂಡ ‘ಇಂದಿರಾ ಆಹಾರ ಕಿಟ್’ಗಳನ್ನು ಪ್ರತಿ ತಿಂಗಳು ವಿತರಿಸಲು ರಾಜ್ಯ ಸರ್ಕಾರ ಮುಂದಾಗಿದೆ. ‘ಅನ್ನ ಭಾಗ್ಯ’ ಯೋಜನೆಯಡಿ ಹೆಚ್ಚುವರಿಯಾಗಿ ಹಂಚಿಕೆ ಮಾಡುತ್ತಿರುವ 5 ಕಿಲೋ ಅಕ್ಕಿಗೆ ಪರ್ಯಾಯವಾಗಿ ಈ ಕಿಟ್‌ಗಳನ್ನು ನೀಡಲಾಗುವುದು.

ಈ ಕುರಿತು ಪ್ರಸ್ತಾವವನ್ನು ಆಹಾರ ಇಲಾಖೆ ಸಿದ್ಧಪಡಿಸಿದೆ. ನಂದಿಬೆಟ್ಟ-ದಲ್ಲಿ ಜುಲೈ 2ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವ ಮಂಡನೆಯಾಗುವ ಸಾಧ್ಯತೆಯಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಅನ್ನ ಭಾಗ್ಯ ಯೋಜನೆಯಲ್ಲಿ ಆದ್ಯತಾ ಕುಟುಂಬಗಳ ಪಡಿತರ ಚೀಟಿದಾರರಿಗೆ (ಪಿಎಚ್‌ಎಚ್) ತಿಂಗಳಿಗೆ 10 ಕಿಲೋ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಇದರಲ್ಲಿ ಕೇಂದ್ರದ ಪಾಲು ಐದು ಕಿಲೋವಾದರೆ ರಾಜ್ಯದ ಪಾಲು 5 ಕಿಲೋ ಆಗಿದೆ.

ಕೆಲವು ಕುಟುಂಬಗಳು ಪಡೆಯುತ್ತಿರುವ ಅಕ್ಕಿಯ ಪ್ರಮಾಣವು ತಿಂಗಳ ಬಳಕೆಯ ಅಗತ್ಯಕ್ಕಿಂತ ಹೆಚ್ಚು ಇದೆ. ಈ ಹೆಚ್ಚುವರಿ ಅಕ್ಕಿಯು ಕಡಿಮೆ ದರಕ್ಕೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಪಡಿತರ ಅಕ್ಕಿಯ ದುರುಪಯೋಗ ತಪ್ಪಿಸಲು ಹೆಚ್ಚುವರಿಯಾಗಿ ಹಂಚಿಕೆ ಮಾಡುವ ಅಕ್ಕಿಯ ಬದಲು ಪೌಷ್ಟಿಕಾಂಶ ಒಳಗೊಂಡ ಅಗತ್ಯ ವಸ್ತುಗಳ ಕಿಟ್ ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸದ್ಯದ ಲೆಕ್ಕಾಚಾರ ಪ್ರಕಾರ, ಪ್ರತಿ ಕಿಲೋ ಅಕ್ಕಿಗೆ (ಸಾಗಣೆ ವೆಚ್ಚ ಸೇರಿ) ₹25.50 ವೆಚ್ಚ ತಗಲುತ್ತಿದೆ. ಅಕ್ಕಿ ವಿತರಿಸುವುದಕ್ಕಾಗಿ ಪ್ರತಿ ತಿಂಗಳು ₹573 ಕೋಟಿಯಂತೆ ವಾರ್ಷಿಕ ಒಟ್ಟು ₹6,876 ಕೋಟಿ ವೆಚ್ಚವು ರಾಜ್ಯಕ್ಕೆ ತಗಲುತ್ತಿದೆ ಎಂದು ಆಹಾರ ಇಲಾಖೆಯ ಮೂಲಗಳು ತಿಳಿಸಿವೆ.

▶6

ಉದ್ದೇಶಿತ ಕಿಟ್‌ನಲ್ಲಿ ಏನೆಲ್ಲ ಇರಲಿದೆ?

ವಸ್ತು	ಪ್ರಮಾಣ
ಸಕ್ಕರೆ	1 ಕಿಲೋ
ಉಪ್ಪು	1 ಕಿಲೋ
ತೊಗರಿ ಬೇಳೆ	1 ಕಿಲೋ
ಅಡುಗೆ ಎಣ್ಣೆ	1 ಲೀಟರ್
ಚಹಾ ಪುಡಿ	100 ಗ್ರಾಂ
ಕಾಫಿ ಪುಡಿ	50 ಗ್ರಾಂ
ಗೋಧಿ	2 ಕಿಲೋ

ಪಡಿತರ ಅಕ್ಕಿ ಕಾಳಸಂತೆಗೆ ಹೋಗುವುದನ್ನು ತಡೆಯಲು ಪೌಷ್ಟಿಕ ವಸ್ತುಗಳನ್ನು ಒಳಗೊಂಡ ಕಿಟ್ ವಿತರಿಸುವ ಯೋಜನೆ ರೂಪಿಸಲಾಗಿದೆ. ಮುಂದಿನ ಸಚಿವ ಸಂಪುಟ ಸಭೆಗೆ ಪ್ರಸ್ತಾವವನ್ನು ಮಂಡಿಸಲಾಗುವುದು
ಕೆ.ಎಚ್. ಮುನಿಯಪ್ಪ, ಆಹಾರ ಸಚಿವ

ರಾಜ್ಯದ ಕೆಲವೆಡೆ ಮಳೆ

ಮಡಿಕೇರಿ/ಚಿಕ್ಕಮಗಳೂರು: ರಾಜ್ಯದ ಕೆಲವೆಡೆ ಭಾನುವಾರ ರಾತ್ರಿ ಮತ್ತು ಸೋಮವಾರ ಮಳೆಯಾಗಿದೆ. ಕೊಡಗು ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಭಾನುವಾರ ಇಡೀ ರಾತ್ರಿ ಹಾಗೂ ಸೋಮವಾರ ಬಿರುಸಿನ ಗಾಳಿಯೊಂದಿಗೆ ಭಾರಿ ಮಳೆ ಸುರಿಯಿತು.

ಇನ್ನಷ್ಟು ವಿವರ ▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



ರಾಹುಲ್– ಪಂತ್ ಶತಕ ವೈಭವ

ಲೀಡ್ಸ್: ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಕ್ರಿಕೆಟ್‌ನ ನಾಲ್ಕನೇ ದಿನವಾದ ಸೋಮವಾರ ಭಾರತದ ಕೆ.ಎಲ್. ರಾಹುಲ್ ಮತ್ತು ರಿಷಭ್ ಪಂತ್ ಅವರ ಶತಕಗಳ ವೈಭವ ಗಮನ ಸೆಳೆಯಿತು. ಪಂತ್ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಬಾರಿಸಿದ ವಿಶ್ವದ ಎರಡನೇ ವಿಕೆಟ್ ಕೀಪರ್ ಎನಿಸಿದರು. ಭಾರತ ಎರಡನೇ ಇನಿಂಗ್ಸ್‌ನಲ್ಲಿ 96 ಓವರ್‌ಗಳಲ್ಲಿ 364 ರನ್ ಗಳಿಸಿ, ಒಟ್ಟು 370 ರನ್‌ಗಳ ಮುನ್ನಡೆ ಪಡೆದಿದೆ.

ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸರ್ಕಾರದ ನೂತನ ಕ್ರಮ

ಸಾಂಪ್ರದಾಯಿಕ ‘ಎಣ್ಣೆಗಾಣ’ಗಳಿಗೆ ಮರುಜೀವ

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಹಳ್ಳಿಗಳಲ್ಲಿ ಕಣ್ಮರೆಯಾಗುತ್ತಿರುವ ಗಾಣದ ಎಣ್ಣೆ ತಯಾರಿಕೆಯ ಸಾಂಪ್ರದಾಯಿಕ ಪದ್ಧತಿಗೆ ಮರುಜೀವ ನೀಡಲು ಮತ್ತು ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ರಾಜ್ಯದ 5,950 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ‘ಎಣ್ಣೆಗಾಣ’ ಸ್ಥಾಪಿಸಲು ಸರ್ಕಾರ ಮುಂದಾಗಿದೆ.

2024–25ನೇ ಸಾಲಿನ ಆಯವ್ಯಯದ ಘೋಷಣೆಯ ಪ್ರಕಾರ ತಲಾ ₹1 ಲಕ್ಷ ನೆರವಿನೊಂದಿಗೆ ರಾಷ್ಟ್ರೀಯ ಜೀವನೋಪಾಯ ಅಭಿಯಾನದ (ಎನ್.ಆರ್.ಎಲ್.ಎಂ) ಸಹಯೋಗದಲ್ಲಿ ಮಹಿಳಾ ಸ್ವ–ಸ್ವಹಾಯ ಸಂಘಗಳ ಸದಸ್ಯರಿಂದ ಗಾಣ ನಡೆಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಯೋಜನೆ ರೂಪಿಸಿದ್ದು, ಆಡಳಿತಾತ್ಮಕ ಅನುಮೋದನೆಯೂ ಸಿಕ್ಕಿದೆ.

ಪ್ರತಿ ಪಂಚಾಯಿತಿಯಲ್ಲಿ ಗಾಣಕ್ಕಾಗಿ ಸ್ಥಳ, ಸ್ವ–ಸಹಾಯ ಗುಂಪುಗಳ ಆಯ್ಕೆ, ಬೇಕಾಗಿರುವ ಅನುದಾನ, ಎಣ್ಣೆಕಾಳುಗಳ ಲಭ್ಯತೆಯ ವಿವರಗಳನ್ನು ತುರ್ತಾಗಿ ನೀಡುವಂತೆ ಎಲ್ಲ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪಂಚಾಯತ್ ರಾಜ್ ಆಯುಕ್ತಾಲಯದ ನಿರ್ದೇಶಕರು (ಅಭಿವೃದ್ಧಿ) ಸೂಚಿಸಿದ್ದಾರೆ.

ಗಾಣದಲ್ಲಿ ಎಣ್ಣೆ ತಯಾರಿಸುತ್ತಿರುವ ಮಹಿಳೆಯರು (ಸಾಂದರ್ಭಿಕ ಚಿತ್ರ)

ನರೇಗಾ ನೆರವು: ನರೇಗಾ ಯೋಜನೆಯಡಿ ₹17.50 ಲಕ್ಷ ವೆಚ್ಚದಲ್ಲಿ ಪ್ರತಿ ಘಟಕ ಸ್ಥಾಪನೆಗೆ 6x6 ಮೀಟರ್ ವಿಸ್ತೀರ್ಣದ ಮೆಕ್ಯಾನಿಕಲ್ ಕೊಠಡಿ ಮತ್ತು ಶೌಚಾಲಯ ಒಳಗೊಂಡ ‘ವರ್ಕ್‌ಶೆಡ್’ ನಿರ್ಮಾಣ ಮಾಡಿಕೊಡಲಾಗುತ್ತದೆ.

ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು ಗುರುತಿಸುವ ಸ್ವಸಹಾಯ ಗುಂಪುಗಳ ಸದಸ್ಯರ ಸಹಯೋಗದೊಂದಿಗೆ ಎಣ್ಣೆ ಕಾಳುಗಳು ಹಾಗೂ ಪರಿಕರಗಳ ಸಂಗ್ರಹ, ತರಬೇತಿ, ಮಾರುಕಟ್ಟೆಗಾಗಿ ಪ್ಯಾಕಿಂಗ್, ಲೇಬಲಿಂಗ್‌ಗಾಗಿ ಎನ್.ಆರ್.ಎಲ್.ಎಂ. ಮತ್ತು ಪ್ರಧಾನಮಂತ್ರಿ ಕೇಂದ್ರ ಪಾಯೋಜಿತ ಕಿರು ಆಹಾರ ಸಂಸ್ಕರಣಾ ಉದ್ದಿಮೆ (ಪಿ.ಎಂ.ಎಫ್.ಎಂ.ಇ) ಯೋಜನೆ ಅನುದಾನವನ್ನು ಬಳಸಿಕೊಳ್ಳಲು ಆರ್ಥಿಕ ಇಲಾಖೆ ಅನುಮತಿ ನೀಡಿದೆ.

171 ಗ್ರಾಮ ಪಂಚಾಯಿತಿಗಳು ಸ್ಥಳವನ್ನು ಗುರುತಿಸಿದ್ದು, 97 ಪಂಚಾಯಿತಿಗಳು ಗಾಣದ ‘ವರ್ಕ್‌ಶೆಡ್’ ತಯಾರಿಕೆಗೆ ಕ್ರಿಯಾಯೋಜನೆ ರೂಪಿಸಿವೆ.

‘ಸ್ಥಳೀಯವಾಗಿ ಲಭ್ಯವಿರುವ ಕೊಬ್ಬರಿ, ಎಳ್ಳು, ಹುಚ್ಚೆಳ್ಳು, ಹರಳು ಮತ್ತು ಕಡಲೆಕಾಯಿ ಎಣ್ಣೆಗಳನ್ನು ತಯಾರಿಸಬಹುದು. ಮಹಿಳೆಯರಿಗೆ ಉದ್ಯೋಗಾವಕಾಶ ಕಲ್ಪಿಸಿ, ಸ್ವಾವಲಂಬಿ ಜೀವನಕ್ಕೆ ಉತ್ತೇಜನ ನೀಡುತ್ತದೆ’ ಎನ್ನುತ್ತಾರೆ ಮಂಡ್ಯ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ) ಲಕ್ಷ್ಮಿ ಪಿ.

ಎಣ್ಣೆಗಾಣ ಸ್ಥಾಪನೆಗೆ ಸ್ಥಳ ಗುರುತಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಮಹಿಳೆಯರಿಗೆ ಆರ್ಥಿಕ ಶಕ್ತಿ ನೀಡುವ ಈ ಯೋಜನೆ ಅನುಷ್ಠಾನಕ್ಕೆ ಅಗತ್ಯ ಕ್ರಮ ಕೈಗೊಂಡಿದ್ದೇವೆ
ಕೆ.ಆರ್.ನಂದಿನಿ, ಸಿಇಒ, ಮಂಡ್ಯ ಜಿ.ಪಂ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಹಗುರ ಮಳೆಯಾಗಲಿದೆ

ಉದ್ಯಮಿ ಮೊಹಮ್ಮದ್ ನಿವಾಸದಲ್ಲಿ ಇ.ಡಿ. ಅಧಿಕಾರಿಗಳ ಶೋಧ

ಬೆಂಗಳೂರು: 'ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ' (ಫಾರಿನ್ ಎಕ್ಸ್‌ಚೇಂಜ್ ಮ್ಯಾನೇಜ್‌ಮೆಂಟ್ ಆಕ್ಟ್–ಫೆಮಾ) ಉಲ್ಲಂಘನೆ ಆರೋಪದಡಿ ಅನಿವಾಸಿ ಉದ್ಯಮಿ ಮೊಹಮ್ಮದ್ ಇಕ್ಬಾಲ್ ಮತ್ತು ಇತರರಿಗೆ ಸೇರಿದ ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಜಾರಿ ನಿರ್ದೇಶನಾಲಯ ಗುರುವಾರ ಶೋಧ ನಡೆಸಿದೆ. ಮಹತ್ವದ ದಾಖಲೆ, ಡಿಜಿಟಲ್ ವಸ್ತು ಜಪ್ತಿ ಮಾಡಲಾಗಿದೆ. ಕಂಪನಿಗಳಿಗೆ ಕಾರ್ಮಿಕರನ್ನು ಒದಗಿಸುವ ಉದ್ಯಮಿ ಎನ್.ಆರ್.ಇ/ಎನ್.ಆರ್.ಒ ಖಾತೆಗೆ ₹70 ಕೋಟಿ ವರ್ಗಾಯಿಸಿರುವುದು ಪತ್ತೆ ಆಗಿದೆ ಎಂದು ಪ್ರಕಟಣೆ ತಿಳಿಸಿದೆ.

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ. Y/E.29/2025-26/12 ದಿನಾಂಕ: 17.06.2025 — ಅಂದಾಜು ಮೌಲ್ಯ ರೂ. 17,52,632.71

ಇ–ಟೆಂಡರ್ ಸೂಚನೆ ಸಂ. Y/E.29/2025-26/13 ದಿನಾಂಕ: 17.06.2025 — ಅಂದಾಜು ಮೌಲ್ಯ ರೂ. 20,72,473.20

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08.07.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಸಾಮಾನ್ಯ/ಮೈಸೂರು

PUB/213/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ. SWR_SBC_COA_09 Stations ದಿನಾಂಕ: 18.06.2025 — ಅಂದಾಜು ಮೌಲ್ಯ ರೂ. 49,58,419.06

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.07.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಬೆಂಗಳೂರು

PUB/217/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ.: 11/2025/SBC ದಿನಾಂಕ: 19.06.2025

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.07.2025, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಬೆಂಗಳೂರು

PUB/220/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRRLY

ಬಯೋ ಸಿಎನ್‌ಜಿ ಪ್ಲಾಂಟ್ ಚರ್ಚೆ

ಬೆಂಗಳೂರು: ತರಕಾರಿ ಮತ್ತು ಇತರ ತ್ಯಾಜ್ಯ ಬಳಕೆ ಮಾಡಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪನೆಗೆ ಕೇಂದ್ರ ಸರ್ಕಾರದ ಕಾರ್ಬನ್ ಕ್ರೆಡಿಟ್ (ಇಂಗಾಲದ ಆದಾಯ) ಅನುದಾನ ಬಳಕೆ ಮಾಡುವ ಕುರಿತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಜೊತೆ ದೆಹಲಿಯ ಕೊಸ್ಯಾಮ್ (ಕೌನ್ಸಿಲ್ ಆಫ್ ಸ್ಟೇಟ್ ಅಗ್ರಿಕಲ್ಚರ್ ಮಾರ್ಕೆಟಿಂಗ್ ಡಿಪಾರ್ಟ್‌ಮೆಂಟ್) ವ್ಯವಸ್ಥಾಪಕ ನಿರ್ದೇಶಕ ಜೆ.ಎಸ್. ಯಾದವ್ ಅವರು ಸೋಮವಾರ ಚರ್ಚೆ ನಡೆಸಿದರು.

ಬೆಂಗಳೂರಿನ ದಾಸನಪುರ, ಮೈಸೂರು ಮತ್ತು ಕೋಲಾರದಲ್ಲಿ ಈಗಾಗಲೇ ಬಯೋ ಸಿಎನ್‌ಜಿ ಪ್ಲಾಂಟ್ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ ಎಂದು ಶಿವಾನಂದ ಪಾಟೀಲ ಅವರು ಯಾದವ್ ಅವರ ಗಮನಕ್ಕೆ ತಂದರು.

ಘನತ್ಯಾಜ್ಯ ನಿರ್ವಹಣೆ ಕಾಯ್ದೆಗೆ ಕೇಂದ್ರ ಸರ್ಕಾರ ಅಕ್ಟೋಬರ್‌ನಲ್ಲಿ ತಿದ್ದುಪಡಿ ತರಲಿದೆ. ಲಭ್ಯ ನಿಧಿಯನ್ನು ಬಳಸಿ ಎಪಿಎಂಸಿಗಳಲ್ಲಿ ಪ್ಲಾಂಟ್‌ಗಳನ್ನು ನಿರ್ಮಾಣ ಮಾಡಬಹುದು ಎಂದರು.

ಬೆಂಗಳೂರು, ಮೈಸೂರು ಮತ್ತು ಕೋಲಾರದಲ್ಲಿ ಈ ಯೋಜನೆ ಆರಂಭಿಸುವುದು ಸೂಕ್ತ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಕೃಷಿ ಮಾರುಕಟ್ಟೆ ಇಲಾಖೆ ನಿರ್ದೇಶಕ ಶಿವಾನಂದ ಕಾಪಸೆ, ಸೂಪರಿಂಟೆಂಡೆಂಟ್ ಎಂಜಿನಿಯರ್ ರಘುನಂದನ್, ಕರ್ನಾಟಕ ಕೃಷಿ ಮಾರಾಟ ಮಹಾ ಮಂಡಳದ ಮುಖ್ಯ ಪ್ರಧಾನ ವ್ಯವಸ್ಥಾಪಕ ಚಂದ್ರಕಾಂತ್ ಪಾಟೀಲ ಇದ್ದರು.

ಜಾನುವಾರು ಸಮೇತ ಪ್ರತಿಭಟನೆ

ಸಾಕಮ್ಮ ಬಡಾವಣೆ ನಿವಾಸಿಗಳಿಂದ ಹಕ್ಕುಪತ್ರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಹಕ್ಕುಪತ್ರಕ್ಕೆ ಒತ್ತಾಯಿಸಿ ಕಗ್ಗಲಿಪುರ ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ಸಾಕಮ್ಮ ಬಡಾವಣೆ ನಿವಾಸಿಗಳು ಜಾನುವಾರುಗಳ ಸಹಿತ ಪ್ರತಿಭಟನೆ ನಡೆಸಿದರು

ಬೆಂಗಳೂರು: 'ಹಕ್ಕುಪತ್ರ ನೀಡಿ, ಗುಡಿಸಲುವಾಸದಿಂದ ಮುಕ್ತಗೊಳಿಸಿ' ಎಂದು ಒತ್ತಾಯಿಸಿ ಬೆಂಗಳೂರು ಉತ್ತರ ತಾಲ್ಲೂಕಿನ ಸಾಕಮ್ಮ ಬಡಾವಣೆಯ ನಿವಾಸಿಗಳು ಸೋಮವಾರ ಕೋಳಿ, ಕುರಿ, ದನಗಳ ಸಹಿತ ಕಗ್ಗಲಿಪುರ ಗ್ರಾಮ ಪಂಚಾಯಿತಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಹಕ್ಕುಪತ್ರ ನೀಡುವವರೆಗೂ ಪಂಚಾಯಿತಿ ಕಚೇರಿ ಬಿಟ್ಟು ಹೋಗಲ್ಲ ಎಂದು ಹಠ ಹಿಡಿದ ನಿವಾಸಿಗಳು, ಆವರಣದಲ್ಲೇ ಜಾನುವಾರು ಸಮೇತ ಪ್ರತಿಭಟನೆಗೆ ಕುಳಿತು, ಅಲ್ಲೇ ಅಡುಗೆ ಮಾಡಲು ಸಿದ್ಧರಾದರು.

ಇದರಿಂದ ಕಂಗಾಲಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪರಿಸ್ಥಿತಿ ನಿಯಂತ್ರಿಸಲು ಪೊಲೀಸರನ್ನು ಕರೆಸಿದರು. 'ನಾವು ಪ್ರತಿಭಟನೆಗೆ ಬಂದಿಲ್ಲ. ಗುಡಿಸಲು ವಾಸದಿಂದ ಮುಕ್ತಿ ಪಡೆಯಲು ನಿವೇಶನದ ಹಕ್ಕುಪತ್ರ ಪಡೆಯಲು ಕಚೇರಿಗೆ ಬಂದಿದ್ದೇವೆ. ಹಕ್ಕುಪತ್ರ ನೀಡುವವರೆಗೂ ಕಚೇರಿಯ ಮುಂಭಾಗದ ಪಡಸಾಲೆಯಲ್ಲಿ ವಾಸ ಮಾಡುತ್ತೇವೆ' ಎಂದು ಪೊಲೀಸರಿಗೆ, ಅಧಿಕಾರಿಗಳಿಗೆ ಪ್ರತಿಕ್ರಿಯಿಸಿದರು.

ಈ ವೇಳೆ ಮಾತನಾಡಿದ ರಾಜ್ಯ ರೈತ ಹಿತರಕ್ಷಣಾ ಸಂಘದ ರಾಜ್ಯಾಧ್ಯಕ್ಷ ನದೀಂ ಪಾಷ, '50 ವರ್ಷಗಳಿಂದ, ಗುಡಿಸಲಿನಲ್ಲಿರುವ ಸಾಕಮ್ಮ ಬಡಾವಣೆ ಜನರ ಬದುಕು ನಿತ್ಯ ನರಕವಾಗಿದೆ. ಗುಡಿಸಲು ಮುಕ್ತ, ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಣೆಗಳನ್ನು ಕೂಗುವ ರಾಜ್ಯದ ನಾಯಕರು ಒಂದು ದಿನ ಈ ಗುಡಿಸಲಲ್ಲಿ ವಾಸ್ತವ್ಯ ಮಾಡಿದರೆ ಜನರ ಸಂಕಷ್ಟ ಅರ್ಥವಾದೀತು' ಎಂದರು.

ನಂತರ ಮಾತನಾಡಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಧನಂಜಯ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷ ಪರ್ವೀಜ್, 'ಪಂಚಾಯಿತಿ ವತಿಯಿಂದ ಎಲ್ಲಾ ಪ್ರಕ್ರಿಯೆಗಳು ಮುಗಿದಿವೆ. ತಕ್ಷಣವೇ ಗ್ರಾಮ ಸಭೆ ಆಯೋಜಿಸಿ ಈ ಬಗ್ಗೆ ವಿಚಾರ ಮಂಡಿಸಿ ನಿರ್ಣಯ ಕೈಗೊಂಡು ಫಲಾನುಭವಿಗಳ ಪಟ್ಟಿ ಮಾಡಿ ಸಂಬಂಧಿಸಿದ ಇಲಾಖೆಗೆ ಕಳಿಸುತ್ತೇವೆ' ಎಂದು ಭರವಸೆ ನೀಡಿದರು.

'ಸ್ಥಳೀಯ ದಲಿತ ಮುಖಂಡರೊಬ್ಬರು ತಮ್ಮ ಸಂಘಟನೆಯವರು ಹೇಳಿದವರಿಗೆ ಹಕ್ಕುಪತ್ರ ಕೊಡಬೇಕು' ಎಂದು ದೂರು ನೀಡಿ ತೊಂದರೆ ಕೊಡುತ್ತಿದ್ದರು. ಆದರೆ, ನಾವು ಕಾನೂನು ಪ್ರಕ್ರಿಯೆ ಅನುಸಾರವೇ ಹಕ್ಕು ಪತ್ರ ವಿತರಿಸುತ್ತೇವೆ' ಎಂದು ತಿಳಿಸಿದರು.

ರಾಜ್ಯ ರೈತ ಹಿತರಕ್ಷಣಾ ಸಂಘದ ಪ್ರಶಾಂತ್ ಹೊಸದುರ್ಗ, ವೆಂಕಟೇಶ್, ರಾಮು ಹಾಗೂ ಸಾಕಮ್ಮ ಬಡಾವಣೆಯ ನಿವಾಸಿಗಳು ಭಾಗವಹಿಸಿದ್ದರು.

ಅಲ್ಲೇ ಅಡುಗೆ

ಬೆಳಿಗ್ಗೆ ಗ್ರಾಮ ಪಂಚಾಯಿತಿ ಕಚೇರಿಯ ಬಾಗಿಲು ತೆರೆಯುತ್ತಿದ್ದಂತೆ ಸಾಕಮ್ಮ ಬಡಾವಣೆಯ ಗುಡಿಸಲು ನಿವಾಸಿಗಳು ಜಾನುವಾರುಗಳೊಂದಿಗೆ ಕಚೇರಿಯ ಆವರಣ ಪ್ರವೇಶಿಸಿ, ಬಾಗಿಲ ಬಳಿ ಕುಳಿತರು. ಜಾನುವಾರುಗಳನ್ನು ಕಚೇರಿಯ ಆವರಣದಲ್ಲಿಯೇ ಕಟ್ಟಿಹಾಕಿದರು. ಅಲ್ಲೇ ಒಲೆ ವ್ಯವಸ್ಥೆ ಮಾಡಿ, ಅಡುಗೆ ಮಾಡಲು ಆರಂಭಿಸಿದರು.

'ಬರುವ ಶುಕ್ರವಾರವೇ ವಿಶೇಷ ಸಭೆ ಕರೆದು ಹಕ್ಕುಪತ್ರ ವಿತರಿಸುವ ಬಗ್ಗೆ ನಿರ್ಣಯ ಕೈಗೊಳ್ಳುತ್ತೇವೆ' ಎಂದು ಅಧಿಕಾರಿಗಳು ಭರವಸೆ ನೀಡಿದ ನಂತರ, ನಿವಾಸಿಗಳು ಪ್ರತಿಭಟನೆ ಕೈಬಿಟ್ಟರು. ನಂತರ ಅಲ್ಲೇ ತಯಾರಿಸಿದ ಅಡುಗೆಯನ್ನು ಊಟ ಮಾಡಿ ನಂತರ ಅಲ್ಲಿಂದ ತೆರಳಿದರು.

ನೈಋತ್ಯ ರೈಲ್ವೆ

ಇ–(ಐಆರ್‌ಇಪಿಎಸ್) ಟೆಂಡರು ಸೂಚನೆ ಸಂ.: 16 UBL 2025-26 ದಿನಾಂಕ: 17.06.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	**ಹುಬ್ಬಳ್ಳಿ ವಿಭಾಗ: ಉಪ ಕಾಮಗಾರಿ–1: ವಿಜಯಪುರ–ಹೊಟಗಿ ವಿಭಾಗ:** 10.4 ಟಿಕಿಮೀ. ದೂರಕ್ಕೆ ಡೌನ್ ಲೈನಿನ ಪ್ಯಾಚ್‌ಗಳಲ್ಲಿ ಸಿಟಿಆರ್(ಪಿ) ಕಾಮಗಾರಿ. **ಉಪ ಕಾಮಗಾರಿ–2: ಗದಗ–ಹೊಟಗಿ ವಿಭಾಗ:** ನಿಂಬಾಳ–ಹೊಟಗಿ ವಿಭಾಗದ ಪ್ಯಾಚ್‌ಗಳಲ್ಲಿ ಟಿಆರ್‌ಆರ್(ಪಿ) – 40.9 ಟಿಕಿಮೀ. (ಡಿ–ಮಾರ್ಕ್ ಮೈಲ್ ರೈಲ್ ರಿನ್ಯೂವಲ್). **ಉಪ ಕಾಮಗಾರಿ–3: ಗದಗ–ಹೊಟಗಿ ವಿಭಾಗ:** ವಿಜಯಪುರ – ನಿಂಬಾಳ ವಿಭಾಗದ ಪ್ಯಾಚ್‌ಗಳಲ್ಲಿ ಟಿಆರ್‌ಆರ್(ಪಿ) – 31.3 ಟಿಕಿಮೀ. (ಎರಡು ಪ್ಯಾಕೆಟ್ ಸಿಸ್ಟಮ್)	ರೂ. 15,32,56,899/-
2	**ಹುಬ್ಬಳ್ಳಿ ವಿಭಾಗ: ಉಪ ಕಾಮಗಾರಿ–1:** ಹುಬ್ಬಳ್ಳಿ – ಗದಗ ಮತ್ತು ಹುಬ್ಬಳ್ಳಿ – ಕರಜಗಿ ವಿಭಾಗದಲ್ಲಿ 32 ರ ಟಿಟಿಆರ್ (ಟಿಡಬ್ಲ್ಯೂಎಸ್+ಡಬ್ಲ್ಯೂಸಿಎಂಎಸ್‌ಸಿ+ಎಫ್‌ಎಸ್). **ಉಪ ಕಾಮಗಾರಿ–2: ಹುಬ್ಬಳ್ಳಿ – ಗದಗ:** ಟಿಎಫ್‌ಆರ್ – 26.500 ಟಿಕಿಮೀ. (ಇಆರ್‌ಸಿ ರಹಿತ) – 35.500 ಟಿಕಿಮೀ. & (ಇಆರ್‌ಸಿ ಸಹಿತ) 35.500 ಟಿಕಿಮೀ.	ರೂ. 2,28,89,450/-
3	**ಹುಬ್ಬಳ್ಳಿ ವಿಭಾಗ: ಗದಗ – ಹೊಟಗಿ ವಿಭಾಗ:** ಮುಳವಾಡ – ಜುಮನಾಳ (ಎಂವಿಡಿ–ಜೆಎಂಎಲ್) ವಿಭಾಗದಲ್ಲಿ 10.95 ಟಿಕಿಮೀ. ಅಪ್ ದೂರಕ್ಕೆ ಟಿಎಸ್‌ಆರ್(ಪಿ) ಕಾಮಗಾರಿ.	ರೂ. 7,00,26,176/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **17.07.2025, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/208/AAF/PRB/SWR/2025-26 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಹುಬ್ಬಳ್ಳಿ

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRRLY

ವಿದ್ಯುತ್ ಪರಿವೀಕ್ಷಣಾಲಯ

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ
ಬೆಂಗಳೂರು ಹೆಚ್ಚುವರಿ ಪೂರ್ವ ವೃತ್ತ, ನಂ: 255, 1ನೇ ಮಹಡಿ
1ನೇ ಕ್ರಾಸ್ ರಸ್ತೆ, ಗಂಗಾನಗರ ಲೇಔಟ್, ಬೆಂಗಳೂರು–560032
ದೂರವಾಣಿ : 080–23332862, ಇ–ಮೇಲ್: dcei.bae@gmail.com

ಸಂಖ್ಯೆ: ಉಮುವಿಪ/ಬೆಂಹೆ.ಪೂ/ಅ/ಆಡಳಿತ/ಇ–ಟೆಂಡರ್/ವಾಹನ/2117/2025-26 ದಿನಾಂಕ: 21.06.2025

ಇ–ಟೆಂಡರ್ ಪ್ರಕಟಣೆ

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ ವೃತ್ತ ಕಚೇರಿಯ ಉಪಯೋಗಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆ ವಾಹನ ಪಡೆಯಲು ಇ–ಟೆಂಡರ್ ಆಹ್ವಾನಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಚೇರಿಯ **ಅಧಿಕೃತ ಕೆಲಸಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ 02 ಸಂಖ್ಯೆಯ ಎ.ಸಿ ಕಾರು ಹಾಗೂ 01 ಸಂಖ್ಯೆಯ ನಾನ್ ಎ.ಸಿ ಕಾರು, ಒಟ್ಟು 03 ಕಾರುಗಳನ್ನು ಹಾಗೂ ಚಾಲಕರನ್ನು ಬಾಡಿಗೆಗೆ ಪೂರೈಸಲು** (ಹಳದಿ ಬಣ್ಣದ ನಂಬರ್ ಬೋರ್ಡ್ ಹೊಂದಿದ) ಇ.ಎಂ.ಡಿ. ಮೊತ್ತ: **ರೂ.35,000/–**ಗಳೊಂದಿಗೆ ಕರ್ನಾಟಕ ಪೋರ್ಟಲ್ **https://kppp.karnataka.gov.in** ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ವೇಳಾ ಪಟ್ಟಿ ವಿವರ ಈ ಕೆಳಗಿನಂತಿದೆ: 1) ಟೆಂಡರ್ ಷರತ್ತು ಸಂಬಂಧ ವಿವರ/ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ : **30.06.2025 ಸಾಯಂಕಾಲ 5.00 ಗಂಟೆಯವರೆಗೆ** 2) ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: **01.07.2025ರ ಸಾಯಂಕಾಲ 5.30 ಗಂಟೆಯವರೆಗೆ** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 03.07.2025 ಬೆಳಿಗ್ಗೆ 11:00 ಗಂಟೆಗೆ** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 03.07.2025 ಸಂಜೆ 05:03.03 ಗಂಟೆಯ ನಂತರ.**

ಹೆಚ್ಚಿನ ವಿವರಗಳನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಾರ್ಯಾಲಯದಲ್ಲಿ ಕೆಲಸದ ದಿನಗಳಂದು ಪಡೆಯಬಹುದು.

ಸಹಿ/–
ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು
ಬೆಂಗಳೂರು ಹೆಚ್ಚುವರಿ ಪೂರ್ವ, ಬೆಂಗಳೂರು

DIPR/CP/SA/1415/2025-26

ಸಾಧಕರಿಗೆ ಕಲಾದರ್ಪಣ ಪ್ರಶಸ್ತಿ ಪ್ರದಾನ

ಬೆಂಗಳೂರು: ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯ ಪ್ರತಿಭಾ ವೇದಿಕೆ ಸೀಸನ್–5 ಸಂಭ್ರಮದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ಕಲಾದರ್ಪಣ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರವೀಂದ್ರ ಕಲಾಕ್ಷೇತ್ರದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತ ಟಿ.ವಿ. ಬಾಬು ಅವರಿಗೆ 'ಕಲಾ ಪೋಷಕ ರತ್ನ', ಎಂ. ಶಿವರಾಜು ಅವರಿಗೆ 'ಜನಸೇವಾ ರತ್ನ', ಕೊಪ್ಪಳದ ಶೈಲಶ್ರೀ ಹುಗ್ಗಿ ಅವರಿಗೆ 'ವಿಶೇಷ ವೀರ ರತ್ನ', ಮಸ್ಕತ್‌ನಲ್ಲಿರುವ ಕನ್ನಡದ ಯುವ ಗಾಯಕ ಅನನ್ಯ ಪ್ರಸಾದ್, ಆಯುಷ್ ಮರಾಠ ಅವರಿಗೆ ಉದಯೋನ್ಮುಖ ಪ್ರತಿಭಾ ರತ್ನ ಎಂಬ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಲಾವಿದ ಎಸ್. ಅಭಿಷೇಕ್ ಉದ್ಘಾಟಿಸಿದರು. ಚಿತ್ರ ಕಲಾವಿದೆ ಹೇಮಾ ಪಾಟೀಲ್ ಹಾಜರಿದ್ದರು.

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್

(ಭಾರತ ಸರ್ಕಾರದ ಅಧೀನ ಸಂಸ್ಥೆ–ಅಣುಶಕ್ತಿ ಇಲಾಖೆ)
ಮನವಲಕುರಿಚಿ, ತಮಿಳುನಾಡು, ಇ–ಮೇಲ್: purchase-mk@irel.co.in
ಐಎಸ್‌ಒ 9001, 14001 & 45001 ಪ್ರಮಾಣೀಕೃತ ಘಟಕ, ಫೋನ್: 04651–200402
ಸಿಐಎನ್: U15100MH1950GOI008187

ಉಲ್ಲೇಖ: ಎಂಕೆ/ಪಿ.ಜಾಹೀ/2025–26/03 ದಿನಾಂಕ: 17.06.2025

ಟೆಂಡರ್ ಪ್ರಕಟಣೆ

ಐಆರ್‌ಇಎಲ್ ಮನವಲಕುರಿಚಿ ಘಟಕ ಇವರಿಂದ ಈ ಕೆಳಗಿನವುಗಳಿಗಾಗಿ ಟೆಂಡರ್ ಆಹ್ವಾನಿಸಲಾಗಿದೆ:

ಟೆಂಡರ್ ನಂ.	ವಿವರ
ಜಿಇಎಂ/2025/ಬಿ/6353135	400–450 ಕೆ.ಜಿ. ಸಾಮರ್ಥ್ಯದ ಸಿಲಿಂಡರ್‌ಗಳಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಭರ್ತಿ ಮಾಡಿ ಪೂರೈಸುವುದು.

ಆಸಕ್ತಿಯುಳ್ಳ ಬಿಡ್‌ದಾರರು https://gem.gov.in, https://www.irelc.co.in ಮತ್ತು ಸಿಪಿಪಿ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮೇಲ್ಕಂಡ ಟೆಂಡರ್‌ಗೆ ಸಂಬಂಧಿತ ಯಾವುದೇ ತಿದ್ದುಪಡಿ / ಮಾರ್ಪಾಡು ಸೂಚನೆಗಳನ್ನು ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

CBC 48147/12/0004/2526 ಸಿಜಿಎಂ & ಮುಖ್ಯಸ್ಥರು, ಎಂ.ಕೆ

ನಾಲ್ಕು ಕೃತಿಗಳ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿರಿನಗರದ ಶ್ರೀರಾಮ-ಚಂದ್ರಾಪುರ ಮಠದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ರಾಘವೇಶ್ವರ ಭಾರತೀ ಸ್ವಾಮೀಜಿಯವರ 'ತತ್ತ್ವ-ಭಾಗವತಮ್' ಪ್ರವಚನಗಳನ್ನು ಆಧರಿಸಿದ 'ಪಿಬತ ಭಾಗವತಮ್', 'ನಲ ದಮಯಂತಿ', 'ಕಲಿಸಂತರಣ' ಹಾಗೂ 'ಅವತಾರಕಥಾ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ರಾಘವೇಶ್ವರ ಭಾರತೀ ಸ್ವಾಮೀಜಿ, ಪುಸ್ತಕಗಳ ಸಂಪಾದಕರಾದ ಪಾದೇಕಲ್ಲು ವಿಷ್ಣು ಭಟ್ ಮತ್ತು ಅನೂರಾಧಾ ಪಾರ್ವತೀ ಅವರು ಭಾಗವಹಿಸಿದ್ದರು.

'ಪಿಬತ ಭಾಗವತಮ್' ಕೃತಿಯಲ್ಲಿ ಭಾರವಿ, ಮಲ್ಲಿನಾಥ ಸೂರಿ, ವಾಚಸ್ಪತಿ ಮಿಶ್ರ, ಪಾಣಿನಿ, ಮೀರ ಇವರ ಅದ್ಭುತ ಕಥೆಗಳಿವೆ. 'ಕಲಿಸಂತರಣ' ಕೃತಿಯಲ್ಲಿ ಪಂಚಪಾಂಡವರ ನಿರ್ಯಾಣದ ಕಥನ, ಕಲಿಯ ಪ್ರವೇಶ, ಪರೀಕ್ಷಿತ ಮೋಕ್ಷ ಇವೆಲ್ಲದರ ಚಿತ್ರಣವಿದೆ. 'ನಲ ದಮಯಂತಿ' ಕೃತಿಯಲ್ಲಿ ರಾಮ ಸೀತೆಯರಿಗೆ ಆದರ್ಶವಾದ ನಲ ದಮಯಂತಿಯರ ಅದ್ಭುತ ಕಥನವಿದೆ. ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ ಇವರ ಕಥಾನಕಗಳು 'ಅವತಾರಕಥಾ' ಕೃತಿಯಲ್ಲಿವೆ. ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಶ್ರೀಮಠದ ಪ್ರಶಾಸನಾಧಿಕಾರಿ ಸಂತೋಷ ಹೆಗಡೆ, ವಿತ್ತಾಧ್ಯಕ್ಷ ಗಣೇಶ ಜೆ.ಎಲ್., ಶ್ರೀಭಾರತೀ ಪ್ರಕಾಶನದ ಅಧ್ಯಕ್ಷ ಸಚಿನ್ ಎಲ್. ಎಸ್., ಹಿರಿಯ ಉಪಾಧ್ಯಕ್ಷ ಗಮಕಿ ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್, ಧರ್ಮಭಾರತೀ ಸಂಪಾದಕ ಗಣೇಶ್ ಕೃಷ್ಣ ಹೆಗಡೆ ಹಾಗೂ ಪ್ರಕಾಶನ ಸಮಿತಿಯ ಸದಸ್ಯರು ಭಾಗವಹಿಸಿದ್ದರು. ಪುಸ್ತಕಗಳಿಗಾಗಿ ಶ್ರೀಪುಸ್ತಕಮ್ - 9591542454 ಸಂಪರ್ಕಿಸಬಹುದು.

'ವಿಎಸ್‌ಕೆ' ಮಾಧ್ಯಮ ಪ್ರಶಸ್ತಿ ಪ್ರಕಟ

ಬೆಂಗಳೂರು: ವಿಶ್ವ ಸಂವಾದ ಕೇಂದ್ರ ಕರ್ನಾಟಕ (ವಿಎಸ್‌ಕೆ) ನೀಡುವ 2025ನೇ ಸಾಲಿನ 'ವಿಎಸ್‌ಕೆ ಮಾಧ್ಯಮ ಪ್ರಶಸ್ತಿ' ಪ್ರಕಟವಾಗಿದೆ.

'ತಿ.ತಾ. ಶರ್ಮ ಪತ್ರಿಕೋದ್ಯಮ ಪ್ರಶಸ್ತಿ'ಗೆ ಕನ್ನಡಪ್ರಭ ಪತ್ರಿಕೆಯ ಪ್ರಧಾನ ಸಂಪಾದಕ ರವಿ ಹೆಗಡೆ, 'ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿ'ಗೆ ಸುಧರ್ಮಾ ಪತ್ರಿಕೆಯ ಸಂಪಾದಕಿ ಕೆ.ಎಸ್. ಜಯಲಕ್ಷ್ಮಿ, 'ಎಂ.ವಿ. ಕಾಮತ್ ಪತ್ರಿಕೋದ್ಯಮ ಪ್ರಶಸ್ತಿ'ಗೆ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನ ಸಹಾಯಕ ಸ್ಥಾನಿಕ ಸಂಪಾದಕ ರಾಮು ಪಾಟೀಲ್, 'ಚಂದ್ರಶೇಖರ ಭಂಡಾರಿ ಪತ್ರಿಕೋದ್ಯಮ ಪ್ರಶಸ್ತಿ'ಗೆ ನ್ಯೂಸ್ 18 ಕನ್ನಡ ವಾಹಿನಿಯ ಪ್ರಧಾನ ಸಂಪಾದಕ ಹರಿಪ್ರಸಾದ್.ಎ, 'ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ'ಗೆ ಹೊಸದಿಗಂತ ಪತ್ರಿಕೆಯ ಅಂಕಣಕಾರ ರಾಧಾಕೃಷ್ಣ ಕಲ್ಚಾರ್ ಹಾಗೂ 'ವಿಎಸ್‌ಕೆ ಡಿಜಿಟಲ್ ಮೀಡಿಯಾ ಪ್ರಶಸ್ತಿ'ಗೆ ಟಿ.ವಿ ವಿಕ್ರಮದ ನಿರೂಪಕಿ ಮುಮ್ತಾಜ್ ಅಬ್ದುಲ್ ನೆಲ್ಯಡ್ಕ ಆಯ್ಕೆಯಾಗಿದ್ದಾರೆ.

ಜೂನ್ 29ರಂದು ಬೆಳಿಗ್ಗೆ 10.30ಕ್ಕೆ ಬಸವನಗುಡಿಯ ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮ ದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತೀಯ ಸಹಬೌದ್ಧಿಕ್ ಪ್ರಮುಖ್ ಸುಧೀರ್, ವಿಎಸ್‌ಕೆಯ ಅಧ್ಯಕ್ಷ ವಿ. ಶ್ರೀಧರ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರೈಲ್ವೆ ಸಚಿವಾಲಯ

(ನೈಋತ್ಯ ರೈಲ್ವೆ ನಿರ್ಮಾಣ ಸಂಸ್ಥೆ)

ಅಸಾಧಾರಣ

ಅಧಿಸೂಚನೆ

ಭಾಗ–II ವಿಭಾಗ 3 ಉಪ–ವಿಭಾಗ (ii)

ಬೆಂಗಳೂರು, 16 ಜೂನ್ 2025

02.05.2025 ದಿನಾಂಕದ ಎಸ್.ಓ. 1987(ಇ) ರಲ್ಲಿ ಹೊರಡಿಸಲಾದ ಅಧಿಸೂಚನೆಗೆ ತಿದ್ದುಪಡಿ

15.05.2025 ದಿನಾಂಕದ ಪ್ರಕಟಣೆ ಸಂ. PUB/105/AAF/PRB/SWR/2025-26 ಗೆ ತಿದ್ದುಪಡಿ

ಎಸ್.ಓ. 2698(ಇ).–ರೈಲ್ವೆ ಕಾಯ್ದೆ, 1989 (1989 ರ 24) (ಇನ್ನು ಮುಂದೆ ಸದರಿ ಕಾಯ್ದೆ ಎಂದು ಉಲ್ಲೇಖಿಸಲಾಗಿದೆ) ರ ಸೆಕ್ಷನ್ 20ಎ ರ ಉಪವಿಭಾಗ (1) ರಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕೇಂದ್ರ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ, ಕರ್ನಾಟಕ ರಾಜ್ಯದಲ್ಲಿ "ಕ್ಯಾತಸಂದ್ರ – ತುಮಕೂರು @ ಚೈ. 65/300–400 (ಬಡ್ಡಿಹಳ್ಳಿ ರಸ್ತೆ, ಅಗ್ನಿಶಾಮಕ ಠಾಣೆಯ ಬಳಿ, ಕ್ಯಾತಸಂದ್ರ ಗ್ರಾಮ)" ಎಂಬ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನಕ್ಕೆ, ಇಲ್ಲಿ ಲಗತ್ತಿಸಲಾದ ವೇಳಾಪಟ್ಟಿಯಲ್ಲಿ ಸಂಕ್ಷಿಪ್ತ ವಿವರಣೆಯನ್ನು ನೀಡಲಾದ ಭೂಮಿಯನ್ನು ಅಗತ್ಯವಿದೆ ಎಂದು ತೃಪ್ತಿಪಡಿಸಿದ ನಂತರ, ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಈ ಮೂಲಕ ಘೋಷಿಸುತ್ತದೆ.

ಸದರಿ ಭೂಮಿಯಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು, ಅಧಿಕೃತ ಗೆಜೆಟ್‌ನಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಕದಿಂದ ಮೂವತ್ತು ದಿನಗಳ ಒಳಗೆ, ಸದರಿ ಕಾಯಿದೆಯ ಸೆಕ್ಷನ್ 20ಡಿ ಯ ಉಪ–ವಿಭಾಗ (1) ರ ಅಡಿಯಲ್ಲಿ ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ಬಳಸಲು ಆಕ್ಷೇಪಣೆ ಸಲ್ಲಿಸಬಹುದು.

"ಕ್ಯಾತಸಂದ್ರ – ತುಮಕೂರು @ ಚೈ. 65/300–400 (ಬಡ್ಡಿಹಳ್ಳಿ ರಸ್ತೆ, ಅಗ್ನಿಶಾಮಕ ಠಾಣೆ ಬಳಿ, ಕ್ಯಾತಸಂದ್ರ ಗ್ರಾಮ) ನಲ್ಲಿ ಎಲ್‌ಸಿ ಸಂಖ್ಯೆ 38ರ ಬದಲಿಗೆ ಆರ್‌ಓಬಿ ನಿರ್ಮಾಣ"ಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗಾಗಿ "**ಸಮರ್ಥ ಪ್ರಾಧಿಕಾರ**" ಅಂದರೆ, ತುಮಕೂರು – ರಾಯದುರ್ಗ ರೈಲ್ವೆ ಯೋಜನೆ, ತುಮಕೂರು ಮತ್ತು ಪ್ರಾದೇಶಿಕ ಆಯುಕ್ತರು, ಬೆಂಗಳೂರು ಅವರಿಗೆ "**ಮಧ್ಯಸ್ಥಿಕೆದಾರ**"ರಾಗಿ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಬೇಕು ಮತ್ತು ಅದರ ಆಧಾರವನ್ನು ನಿಗದಿಪಡಿಸಬೇಕು ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆದಾರರಿಗೆ ವೈಯಕ್ತಿಕವಾಗಿ ಅಥವಾ ಕಾನೂನು ವೃತ್ತಿಪರರ ಮೂಲಕ ಕೇಳಲು ಅವಕಾಶವನ್ನು ನೀಡಬೇಕು ಮತ್ತು ಅಂತಹ ಎಲ್ಲಾ ಆಕ್ಷೇಪಣೆಗಳನ್ನು ಆಲಿಸಿದ ನಂತರ ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ, ಯಾವುದಾದರೂ ಇದ್ದರೆ, ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಭಾವಿಸಿದಂತೆ, ಆದೇಶದ ಮೂಲಕ, ಆಕ್ಷೇಪಣೆಗಳನ್ನು ಅನುಮತಿಸಬಹುದು ಅಥವಾ ನಿರಾಕರಿಸಬಹುದು.

ಸದರಿ ಕಾಯ್ದೆಯ ಸೆಕ್ಷನ್ 20ಡಿ ಯ ಉಪ–ವಿಭಾಗ (2) ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯ ಅಡಿಯಲ್ಲಿ ಬರುವ ಭೂಮಿಯ ನಕ್ಷೆಗಳು ಮತ್ತು ಇತರ ವಿವರಗಳು ಲಭ್ಯವಿದೆ ಮತ್ತು ಆಸಕ್ತ ವ್ಯಕ್ತಿಯು ಮೇಲೆ ತಿಳಿಸಲಾದ ಸಕ್ಷಮ ಪ್ರಾಧಿಕಾರದ ಕಚೇರಿಯಲ್ಲಿ ಪರಿಶೀಲಿಸಬಹುದು.

ವೇಳಾಪಟ್ಟಿ

ಕರ್ನಾಟಕ ರಾಜ್ಯದಲ್ಲಿ ಲೆವೆಲ್ ಕ್ರಾಸಿಂಗ್ ಸಂಖ್ಯೆ 38 (ಬಡ್ಡಿಹಳ್ಳಿ ಗೇಟ್) ಬದಲಿಗೆ ಸೇವಾ ರಸ್ತೆಯೊಂದಿಗೆ ಎರಡು ಪಥದ ಆರ್‌ಓಬಿ ನಿರ್ಮಾಣಕ್ಕಾಗಿ ಉದ್ದೇಶಿತ ವಿಶೇಷ ರೈಲ್ವೆ ಯೋಜನೆಗೆ ಒಳಪಡುವ, ರಚನೆಯೊಂದಿಗೆ ಅಥವಾ ಇಲ್ಲದೆ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ಜಿಲ್ಲೆ: ತುಮಕೂರು — **ಗ್ರಾಮ:** ದೇವರಾಯಪಟ್ಟಣ (ಕ್ಯಾತಸಂದ್ರ ಪ್ರದೇಶ)

ಹೋಬಳಿ: ಕಸಬಾ — **ತಾಲ್ಲೂಕು:** ತುಮಕೂರು

ಕ್ರ. ಸಂ.	ಸ. ಸಂ.	ಫಲಾನುಭವಿ	ವಿಸ್ತಾರ (ಎಕರೆಗಳಲ್ಲಿ – ಗುಂಟಾದಲ್ಲಿ)				ಭೂಮಿಯ ವರ್ಗೀಕರಣ
			ಒಟ್ಟು (ಎ–ಗುಂ)	ಎ ಖರಾಬ್ (ಎ–ಗುಂ)	ಬಿ ಖರಾಬ್ (ಎ–ಗುಂ)	ಸಮತೋಲನ (ಎ–ಗುಂ)	
1.	104/2	ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಮಹಾನಿರ್ದೇಶಕರು	0–07	–	–	0–07	ಒಣ
2.	105	ಸರ್ಕಾರ ಭೂಮಿ	0–06	–	0–06	–	ಸರ್ಕಾರ ಭೂಮಿ
3.	107/2	ಕೆ.ಎಸ್. ಶಾಂತಯ್ಯ	0–13	–	0–00 1/4	0–12 3/4	ಒಣ
4.	107/3	ಕೆ.ಎಸ್. ಶಾಂತಯ್ಯ, ಗಂಗಾಂಭಿಕಾ ಕೋಂ ದಿವಂಗತ ಉಮೇಶ್ (ಜಂಟಿ)	0–02	–	–	0–02	ಒಣ
		ಒಟ್ಟು	**0–28**	–	**0–06 1/4**	**0–21 3/4**	–

ನಂ. ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025–26/ಲ್ಯಾಂಡ್ ಎಎಸ್‌ಆರ್‌ಪಿ/1727

(ಯೋಗಾನಂದ ಬಾಬು ಯಗಾನಿ)
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಸಾಮಾನ್ಯ
ನೈಋತ್ಯ ರೈಲ್ವೆ, ಬೆಂಗಳೂರು ಕಂಟೋನ್ಮೆಂಟ್

PUB/216/AAF/PRB/SWR/2025-26

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು–560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com; ವೆಬ್‌ಸೈಟ್: www.gokaldasexports.com

ಅಂಚೆ ಮತಪತ್ರದ ನೋಟೀಸ್

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯಿದೆ, 2013 ("ಕಾಯ್ದೆ") ಸೆಕ್ಷನ್ 108 ಮತ್ತು 110ರ ಅನುಗುಣವಾಗಿ ಮತ್ತು ಅನ್ವಯವಾಗುವ ಇತರೆ ಅನ್ವಯವಾಗುವ ನಿಬಂಧನೆಗಳು, ಯಾವುದಾದರೂ ಇದ್ದಲ್ಲಿ, ಜೊತೆಗೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು")ರ ಕಂಪನಿಗಳ ನಿಯಮ 20 ಮತ್ತು 22ನ್ನು ಓದಿಕೊಂಡಂತೆ, (ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಕಾನೂನುಬದ್ಧ ಮಾರ್ಪಾಡು ಅಥವಾ ಮರು–ಅನುಷ್ಠಾನ ಸೇರಿದಂತೆ) ಮತ್ತು ಮಿನಿಸ್ಟ್ರಿ ಆಫ್ ಕಾರ್ಪೋರೇಟ್ ಅಫೇರ್ಸ್‌ನಿಂದ ("ಎಂಸಿಎ") ಹೊರಡಿಸಲಾದ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 8, 2020, ಸುತ್ತೋಲೆ ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020, ಸುತ್ತೋಲೆ ಸಂಖ್ಯೆ 09/2024 ದಿನಾಂಕ ಸೆಪ್ಟೆಂಬರ್ 19, 2024 (ಇನ್ನು ಮುಂದೆ ಒಟ್ಟಾರೆಯಾಗಿ "ಎಂಸಿಎ" ಸುತ್ತೋಲೆಗಳು ಎಂದು ಉಲ್ಲೇಖಿಸಲಾಗಿದೆ), ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾರವರು ಹೊರಡಿಸಿದ ಸಾಮಾನ್ಯ ಸಭೆಗಳ ಮೇಲೆ ಸೆಕ್ರೆಟರಿ ಸ್ಟ್ಯಾಂಡರ್ಡ್ಸ್‌ನ ನಿಯಮಗಳಿಗೆ ಅನುಗುಣವಾಗಿ, ಸೆಕ್ಯೂರಿಟೀಸ್ ಆಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ದ ("ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಷರ್ ರಿಕ್ವಾಯರ್‌ಮೆಂಟ್ಸ್ ನಿಬಂಧನೆಗಳು") ನಿಯಂತ್ರಣಗಳು, 2015ರ (**"ಎಲ್‌ಒಆರ್‌ಡಿ ರೆಗ್ಯುಲೇಷನ್ಸ್"**) ನಿಯಂತ್ರಣ 44ಅನ್ನು ಓದಿಕೊಂಡಂತೆ ಮತ್ತು ಕಾಯ್ದೆಯ ಇತರ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳಡಿಯ ನಿಯಮಗಳು, ಸುತ್ತೋಲೆಗಳು ಮತ್ತು ಅಧಿಸೂಚನೆಗಳಂತೆ (ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಅದರ ಮರುರೂಪಿಸುವಿಕೆ(ಗಳು) ಸೇರಿದಂತೆ) ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ (**"ಕಂಪನಿ"**) ವಿದ್ಯುನ್ಮಾನ ಮೂಲಕ ಮತದಾನ (ಸದೂರ ಇ–ಮತದಾನ) ಪ್ರಕ್ರಿಯೆಯ ಮೂಲಕ ದಿನಾಂಕ ಮೇ 21, 2025ರ ಅಂಚೆ ಮತಪತ್ರ ನೋಟೀಸ್‌ನ ಮೂಲಕ ಈ ಕೆಳಗೆ ತಿಳಿಸಲಾದ ವಿಶೇಷ ನಿರ್ಣಯದ ಮೇಲೆ ತನ್ನ ಸದಸ್ಯರಿಂದ ಅನುಮೋದನೆ ಅಪೇಕ್ಷಿಸುತ್ತದೆ.

ವಿಶೇಷ ನಿರ್ಣಯದ ವಿವರ
1. 'ಜಿಇಎಲ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2025' ("ESOP 2025"/ "ಯೋಜನೆ") ಅನುಮೋದನೆ
2. 'ಜಿಇಎಲ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2025' ("ESOP 2025"/ "ಯೋಜನೆ") ಅಡಿಯಲ್ಲಿ ಕಂಪನಿಯ ಅಂಗಸಂಸ್ಥೆ ಕಂಪನಿಯ (ಗಳು) ಅರ್ಹ ಉದ್ಯೋಗಿಗಳಿಗೆ ಉದ್ಯೋಗಿ ಸ್ಟಾಕ್ ಆಯ್ಕೆಗಳ ಮಂಜೂರಾತಿಗೆ ಅನುಮೋದನೆ.

ಎಂಸಿಎ ಸುತ್ತೋಲೆಗಳ ಅನುಸಾರವಾಗಿ, ಶುಕ್ರವಾರ, ಜೂನ್ 20, 2025ರಂತೆ (**"ಕಟ್–ಆಫ್ ದಿನಾಂಕ"**) ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ಡಿಪಾಸಿಟರೀಸ್ / ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು)ರವರೊಂದಿಗೆ ಮತ್ತು ಕಂಪನಿಯ ಷೇರು ವರ್ಗಾವಣೆ ಏಜೆಂಟ್, ಅಂದರೆ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್ ಟೆಕ್) ನೊಂದಿಗೆ ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಕಂಪನಿಯು ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಪೋಸ್ಟಲ್ ಬ್ಯಾಲೆಟ್ ನೋಟೀಸ್ ರವಾನೆಯನ್ನು ಸೋಮವಾರ, ಸೋಮವಾರ, ಜೂನ್ 23, 2025ರಂದು ಪೂರ್ಣಗೊಳಿಸಿದೆ. ಅಂಚೆ ಮತಪತ್ರದ ನೋಟೀಸನ್ನು ಕಂಪನಿಯ ವೆಬ್‌ಸೈಟ್ www.gokaldasexports.com ನಿಂದ ಅಥವಾ ಕೆಫಿನ್ ಟೆಕ್ ವೆಬ್‌ಸೈಟ್‌ನಿಂದ https://evoting.kfintech.com/ ಡೌನ್‌ಲೋಡ್ ಮಾಡಬಹುದು. ನೋಟೀಸನ್ನು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾಗಿರುವಲ್ಲಿ ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಮತ್ತು ಬಿಎಸ್‌ಇ ಲಿಮಿಟೆಡ್ (www.bseindia.com)ನ ವೆಬ್‌ಸೈಟ್‌ನಲ್ಲಿ ಸಹ ಪ್ರಕಟಿಸಲಾಗಿರುತ್ತದೆ.

ಕಟ್–ಆಫ್ ದಿನಾಂಕದಂದು ಸದಸ್ಯರು / ಫಲಾನುಭವಿ ಮಾಲೀಕರ ಹೆಸರಿನಲ್ಲಿ ನೋಂದಾಯಿಸಲಾದ ಈಕ್ವಿಟಿ ಷೇರುಗಳ ಪಾವತಿಸಿದ ಮೌಲ್ಯದ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ನೋಟೀಸನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸತಕ್ಕದ್ದು. ಸದಸ್ಯರ ಸಮ್ಮತಿ ಅಥವಾ ಅಸಮ್ಮತಿ ಅಭಿಪ್ರಾಯದ ಸಂವಹನವು ರಿಮೋಟ್ ಇ–ಮತದಾನ ವ್ಯವಸ್ಥೆಗಳ ಮೂಲಕ ಮಾತ್ರ ನಡೆಯುತ್ತದೆ.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ಮತದಾನದ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಕೆಫಿನ್ ಟೆಕ್‌ನ ಸೇವೆಗಳನ್ನು ಬಳಸಿಕೊಂಡಿದೆ. ಇ–ಮತದಾನದ ಅವಧಿಯು ಬುಧವಾರ, ಜೂನ್ 25, 2025ರಂದು ಬೆಳಿಗ್ಗೆ 9.00 ಗಂಟೆ ಐಎಸ್‌ಟಿಗೆ ಪ್ರಾರಂಭವಾಗುತ್ತದೆ ಮತ್ತು ಗುರುವಾರ, ಜುಲೈ 24, 2025ರ ಸಂಜೆ 5.00 ಗಂಟೆ ಐಎಸ್‌ಟಿಗೆ ಮುಕ್ತಾಯಗೊಳ್ಳುತ್ತದೆ. ತದನಂತರ ಇ–ಮತದಾನವನ್ನು ಕೆಫಿನ್ ಟೆಕ್‌ನಿಂದ ನಿಷ್ಕ್ರಿಯಗೊಳಿಸಲಾಗುವುದು.

ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸದ ಸದಸ್ಯರು, ಕೆಫಿನ್ ಟೆಕ್‌ನೊಂದಿಗೆ ಅದರ ವೆಬ್‌ಸೈಟ್‌ನಲ್ಲಿ ತಾತ್ಕಾಲಿಕವಾಗಿ ನೋಂದಾಯಿಸಲು/ ನವೀಕರಿಸಲು ವಿನಂತಿಸಲಾಗಿದೆ. ಇ–ಮೇಲ್ ವಿಳಾಸದ ಶಾಶ್ವತ ನೋಂದಣಿಗಾಗಿ, ಸದಸ್ಯರು ತಮ್ಮ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟ್‌ರವರೊಂದಿಗೆ ಹೊಂದಿರುವ ಎಲೆಕ್ಟ್ರಾನಿಕ್ ಹೋಲ್ಡಿಂಗ್‌ಗಳು ಮತ್ತು ಕೆಫಿನ್ ಟೆಕ್‌ನೊಂದಿಗೆ ಹೊಂದಿರುವ ಭೌತಿಕ ಹೋಲ್ಡಿಂಗ್‌ಗಳಿಗೆ ಅನುಗುಣವಾಗಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು ವಿನಂತಿಸಲಾಗಿದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸಿರುವ ಯಾವುದೇ ಸದಸ್ಯರು, ಅಂಚೆ ಮತಪತ್ರದ ನೋಟೀಸ್, ರಿಮೋಟ್ ಇ–ಮತದಾನಕ್ಕಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಸ್ವೀಕರಿಸದಿದ್ದರೆ, ಅಂತಹ ಸದಸ್ಯರು ಅದನ್ನು ಸ್ವೀಕರಿಸಲು ತಮ್ಮ ನೋಂದಾಯಿತ ಇಮೇಲ್ ವಿಳಾಸದಿಂದ einward.ris@kfintech.com ಗೆ ಬರೆಯುವುದರ ಮೂಲಕ ಪಡೆಯಬಹುದು.

ರಿಮೋಟ್ ಇ–ಮತದಾನ ಕಾರ್ಯವಿಧಾನದ ಮೂಲಕ ನಡೆಯುವ ಪೋಸ್ಟಲ್ ಬ್ಯಾಲೆಟ್ ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯ ನಿರ್ದೇಶಕರ ಮಂಡಳಿಯು, ಕಂಪನಿ ಕಾರ್ಯದರ್ಶಿ (ಸದಸ್ಯತ್ವ ಸಂಖ್ಯೆ ಎಫ್‌ಸಿಎಸ್ 5553) ಶ್ರೀ ನಾಗೇಂದ್ರ ಡಿ ರಾವ್ ಅವರನ್ನು ಪರಿವೀಕ್ಷಕರನ್ನಾಗಿ ನೇಮಿಸಿದೆ.

ಇ–ಮತದಾನದ ಫಲಿತಾಂಶಗಳನ್ನು ಸೋಮವಾರ, ಜುಲೈ 28, 2025ರಂದು ಅಥವಾ ಮೊದಲು ಪ್ರಕಟಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.gokaldasexports.com ಮತ್ತು ಕೆಫಿನ್ ಟೆಕ್‌ನ ವೆಬ್‌ಸೈಟ್ https://evoting.kfintech.com/ ನಲ್ಲಿ ಪ್ರಕಟಣೆ ಮಾಡಲಾಗುವುದು ಜೊತೆಗೆ ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳೊಂದಿಗೆ ಸಂವಹನ ಮಾಡಲಾಗುತ್ತದೆ.

ಇ–ಮತದಾನಕ್ಕೆ ಸಂಬಂಧಿಸಿದಂತೆ ಸದಸ್ಯರು ಯಾವುದೇ ಪ್ರಶ್ನೆಗಳು/ ಕುಂದುಕೊರತೆಗಳಿಗಾಗಿ https://evoting.kfintech.com (ಕೆಫಿನ್ ಟೆಕ್ ವೆಬ್‌ಸೈಟ್) ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಸಹಾಯ ಮತ್ತು ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQ ಗಳು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು ವೀಕ್ಷಿಸಬಹುದು ಅಥವಾ ಶ್ರೀ ಶಿವಕುಮಾರ್ ರವರನ್ನು evoting@kfintech.com ನಲ್ಲಿ ಅಥವಾ ಕೆಫಿನ್ ಟೆಕ್‌ನ ಟೋಲ್ ಫ್ರೀ ಸಂಖ್ಯೆ 1–800–309–4001 ಗೆ ಕರೆ ಮಾಡಿ ಸಂಪರ್ಕಿಸಬಹುದು ಅಥವಾ ಕಂಪನಿ ಕಾರ್ಯದರ್ಶಿ ಶ್ರೀ ಗೌರೀಶ್ ಹೆಗಡೆ ಅವರನ್ನು cs@gokaldasexports.com ನ ಮೂಲಕ ಸಂಪರ್ಕಿಸಬಹುದು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಜೂನ್ 23, 2025

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ಶ್ರೀ ಗೌತಮ್ ಪ್ರಕಾಶ್ ದೇಶ್‌ಪಾಂಡೆ ಮೆ॥ ಬೆಲ್ಲೋನ ಹಾಸ್ಪಿಟಾಲಿಟಿ ಸರ್ವೀಸಸ್ ಲಿಮಿಟೆಡ್‌ರವರು ಮೆ॥ ಸ್ಪಾರ್ಕಲ್ ಒನ್ ಮಾಲ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್, ಫೀಯೊನಿಕ್ಸ್ ಮಾಲ್ ಆಫ್ ಏಷಿಯಾ, ಖಾತಾ ನಂ.239/240/275/88/1 & 240/276/89/1, ಯುನಿಟ್ ನಂ.ಎಸ್–26, 27, 28, 28ಎ & 29, 2ನೇ ಫ್ಲೋರ್, ಬ್ಯಾಟರಾಯನಪುರ ವಿಲೇಜ್, ಯಲಹಂಕ ಹೋಬಳಿ, ಬೆಂಗಳೂರು–560092 ಇಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಬಗ್ಗೆ ಸಾರ್ವಜನಿಕರ ಅಕ್ಷೇಪಣೆ/ಸಲಹೆಗಳು ಏನಾದರೂ ಇದ್ದಲ್ಲಿ, ಅವುಗಳನ್ನು ಲಿಖಿತ ಮೂಲಕ ಸಹಿಯೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ 15 ದಿನಗಳೊಳಗಾಗಿ ಉಪ ಪೊಲೀಸ್ ಆಯುಕ್ತರು (ಆಡಳಿತ), ಪೊಲೀಸ್ ಆಯುಕ್ತರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001 ರವರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗಧಿತ ಅವಧಿಯಲ್ಲಿ ಯಾವುದೇ ಅಕ್ಷೇಪಣೆ/ಸಲಹೆಗಳು ಬಾರದಿದ್ದಲ್ಲಿ ಅರ್ಜಿದಾರರು ಸದರಿ ಸ್ಥಳದಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಉದ್ದೇಶಿತ ಕೇಂದ್ರದ ಚಕ್ಕುಬಂದಿ
1 ಪೂರ್ವಕ್ಕೆ: ರಾಷ್ಟ್ರೀಯ ಹೆದ್ದಾರಿ (ಬಳ್ಳಾರಿ ರಸ್ತೆ)
2. ಪಶ್ಚಿಮಕ್ಕೆ: ಸಹಕಾರ ನಗರ ರಸ್ತೆ
3. ಉತ್ತರಕ್ಕೆ: ಎಲ್ & ಟಿ ಪ್ರಾಪರ್ಟಿ
4. ದಕ್ಷಿಣಕ್ಕೆ: ಎಲ್&ಟಿ ರೇಸ್ ಟ್ರೀ ಬುಲೆವರ್ಡ್

ಸಹಿ/–
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ
ದಿ: 21.06.2025

PUBLIC NOTICE

My client has decided to purchase the property bearing Municipal No.45, 5th Cross, 5th Main, Malleshwaram, Bengaluru measuring East to West: 100 feet and North to South: 30 feet in all measuring 3000 square feet, bounded as East by: Conservancy Lane, West by: 5th Main RoadNorth by: Residential property of Sri. Rama Reddy, South by: House No.548 of Dallai Hanumaiah from Smt. Asma Sulthana, Smt. Shaheeda Sulthana, Smt. Shabeena Sulthana and Sri. Fariduddin Khan. They are representing that, they are the absolute owners of the said property. In case of any rival claim, right, title, interest share ownership over the said property by anybody, they can submit their grievance to the address below within 7 days from the date of this notice. No grievance is received from anybody within the said date, it will be treated as no grievance from anybody and proceed further to deal with the said property with the said persons.

MOHAN.S B.Com., LL.B., ADVOCATE
No.43, "Nandi" Nehru Nagara, Main Road, Sheshadripuram, Bengaluru-560 020
Call: 9845167034
E-mail: smohan1710@gmail.com
Bengaluru
Date: 24.06.2025

BUSINESS

Business Offers

Finance

MSME LOANS
Available for any start up company, any existing Companies avail this opportunity contact-7204995189

LOAN AVAILABLE @5% Yearly Interest Business Project Mortgage Agriculture Takeover Personal HomeLoan 8787091647 Agents Welcome

CORRIGENDUM

In the advertisement released for faculty positions at MES College of Arts, Commerce & Science and MES Institute of Management on 22.06.2025 in Deccan Herald and Prajavani, **all the posts are for Self- Financed (un-aided) programs.**

CHIEF EXECUTIVE

EDUCATIONAL

Correspondence Courses

PASS DIRECT 2nd PUC within 4 months eligible for NEET and CET also for Admission Contact: 9880498484/ 9900004099.

PERSONAL

Announcements

I,PAWAR Y.S, S/o Santhoji Rao, residing at #321/2B, Shanthi Nivas, 3rd A cross, 1st Stage BTM Layout, Old Madiwala Bengaluru-560068 here by declare that PAWAR Y.S stands for YASHWANTH SANTHOJI RAO PAWAR and both are same person, vide affidavit dated:21.06.2025 Notary K.V.Mani, Bangalore.

Change of Name

WE, KIRAN NALLAPETA K and SARASWATHI N.K has changed our minor daughter's name from SANCHITHA N to SANCHITHA N.K vide affidavit dated 21/06/2025 sworn before notary T.R.Raghavendra Rao, Bangalore.

I ARJUN MEDIMI SRINIVASR/a. #790, 1st D Main Road2nd Phase, Girinagar,Bengaluru- 560085 HaveChanged my Name ToARJUN MEDIMI SREENIVASVide Affidavit Dated23/06/2025 before NotaryMamatha N.K Bangalore

I, KHALID Jamkhan residing at H.no 7/2 Bhusappa chowk line bazar Dharwad, have changed my name to Khalid Ahmed Jamkhan vide affidavit sworn before Esther Rani dated 20/06/2025

CHANGE OF NAME

I, **Ram Suthar** S/o Gopal Ram Suthar, R/at No. 304, 4th Floor, Magvin Aastha, 3rd A Main Road, Akshayanagar, Bengaluru South PO, Begur, Bengaluru, Karnataka-560068, have changed my name to **RAMESH SUTHAR** for all future purposes vide affidavit dated 21.06.2025, before notary Jain Swarnamala, Bengaluru.

I, SAI SWAROOP, Residing at #2, Ashwath Narayana Building, Vinayaka Nagar, Near BES School, Hebbagodi Town, Anekal Taluk, Bengaluru-99 have changed my name as K.C SAI SWAROOP, vide affidavit dated 21/06/2025 before Notary C.N.Sreekanta Sastry, Bengaluru

Lost

Lost Of Document

I, **Anand Rao A C. S/o. Late A. Chandra Rao,** R/at No.97/1, 2nd Cross, 4th Block, T.R Nagar, Bangalore - 70. Have Lost My Original Sale Deed Document No.KRI-1-27429-2004-05 dated 12.01.2005, SiteNo.188, Katha No.126, Regarding This Complaint (No.1660906/2025) Dated: 19.06.2025. If Anybody Finds The Document Please Inform To The Above Address Or Contact
Ph: 9886763997.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

DH Classifieds More value, more impact — ಪ್ರಜಾವಾಣಿ

RECRUITMENT

BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY

@ 2481/-* FOR 15 WORDS

www.dhclassifieds.com

BOOK NOW

*Conditions apply

For more details contact:
+91 9845114560
+91 9900428036 | +91 9731810277
+91 9886213331 | 080- 45557163/164

ಹೊಯ್ಸಳ ಶೈಲಿಯಲ್ಲಿ ತಲೆ ಎತ್ತಲಿದೆ ಧಾರ್ಮಿಕ ಸೌಧ

ಕೆ.ಆರ್. ಸರ್ಕಲ್ ಬಳಿ ₹10 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿದೆ ನಾಲ್ಕು ಅಂತಸ್ತಿನ ಕಟ್ಟಡ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಗರದ ಹೃದಯ ಭಾಗದಲ್ಲಿ ಹೊಯ್ಸಳ ಶೈಲಿಯಲ್ಲಿ ನಾಲ್ಕು ಅಂತಸ್ತಿನ ಭವ್ಯ ಕಟ್ಟಡವನ್ನು ಮುಜರಾಯಿ ಇಲಾಖೆ ನಿರ್ಮಿಸಲಿದೆ. ಆಧುನಿಕ ಮತ್ತು ಪಾರಂಪರಿಕ ಲಕ್ಷಣವಿರುವ ಈ 'ಧಾರ್ಮಿಕ ಸೌಧ' ನಗರದ ಆಕರ್ಷಣೆಯ ಕೇಂದ್ರವಾಗಲಿದೆ.

ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಯ (ಮುಜರಾಯಿ) ಕಚೇರಿಗಳು ಸದ್ಯ ಮಿಂಟೊ ಆಸ್ಪತ್ರೆ ಎದುರುಗಡೆಯ ಬಾಡಿಗೆ ಕಟ್ಟಡದಲ್ಲಿವೆ. ಪ್ರತಿ ತಿಂಗಳು ₹11 ಲಕ್ಷ ಬಾಡಿಗೆ ಪಾವತಿಸಲಾಗುತ್ತಿದೆ. ಧಾರ್ಮಿಕ ಸೌಧ ನಿರ್ಮಾಣಗೊಂಡ ಬಳಿಕ ಮುಜರಾಯಿ ಇಲಾಖೆಯ ಎಲ್ಲ ಕಚೇರಿಗಳು ಸೌಧಕ್ಕೆ ಸ್ಥಳಾಂತರಗೊಳ್ಳಲಿವೆ.

ವಿಧಾನಸೌಧ–ಕೆ.ಆರ್. ಸರ್ಕಲ್ ಮಧ್ಯೆ ಇರುವ ಬಹುಮಹಡಿ ಕಟ್ಟಡದ ಎದುರುಗಡೆ ಮುಜರಾಯಿ ಇಲಾಖೆಗೆ ಸೇರಿದ ರಾಮಾಂಜನೇಯ ದೇವಸ್ಥಾನವಿದೆ. ಇಲ್ಲಿ ಒಟ್ಟು 26 ಗುಂಟೆ ಜಮೀನು ಇದ್ದು, 6 ಗುಂಟೆಯಲ್ಲಿ ದೇವಸ್ಥಾನವಿದೆ. ಉಳಿದ 20 ಗುಂಟೆ ಜಮೀನಿನಲ್ಲಿ ₹10 ಕೋಟಿ ವೆಚ್ಚದಲ್ಲಿ 'ಧಾರ್ಮಿಕ ಸೌಧ' ನಿರ್ಮಿಸಲು ರಾಜ್ಯ ಧಾರ್ಮಿಕ ಪರಿಷತ್ತು ನಿರ್ಧರಿಸಿದೆ.

ಹೊಯ್ಸಳ ಶೈಲಿಯಲ್ಲಿ ನಾಲ್ಕು ಅಂತಸ್ತಿನ ಸೌಧ ನಿರ್ಮಾಣದ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ. ನೆಲಮಹಡಿಯಲ್ಲಿ ವಾಹನಗಳ ನಿಲುಗಡೆಗೆ ವ್ಯವಸ್ಥೆ ಇರಲಿದೆ. ಮೊದಲನೆಯ ಮಹಡಿಯಲ್ಲಿ ನ್ಯಾಯಾಲಯ ಸಭಾಂಗಣ, ಆಯುಕ್ತರ ಕಚೇರಿ, ಸರ್ವೆ ವಿಭಾಗ, ಇಲಾಖೆಯ ಕೇಂದ್ರಸ್ಥಾನ ಸಹಾಯಕರ ಕಚೇರಿಗಳು ಇರಲಿವೆ. ಎರಡನೇ ಮಹಡಿಯಲ್ಲಿ ಆಗಮ ಅಧಿಕಾರಿ ವಿಭಾಗ, ಐಟಿ ವಿಭಾಗ, ಎಂಜಿನಿಯರಿಂಗ್ ವಿಭಾಗ, ಮೀಟಿಂಗ್ ಹಾಲ್, ಕೇಂದ್ರಸ್ಥಾನ ಸಹಾಯಕ–1ರ ಕಚೇರಿಗಳು ನಿರ್ಮಾಣಗೊಳ್ಳಲಿವೆ. ಮೂರನೇ ಮಹಡಿಯಲ್ಲಿ ತೆರೆದ ಕಚೇರಿ ಸಭಾಂಗಣ, ಅಧೀಕ್ಷಕರ ಕಚೇರಿಗಳು, ಡಿಜಿಟಲ್ ಗ್ರಂಥಾಲಯ, ದಾಖಲೆಗಳ ಕೊಠಡಿ ನಿರ್ಮಿಸಲಾಗುತ್ತದೆ. ನಾಲ್ಕನೇ ಮಹಡಿಯಲ್ಲಿ ಆಡಿಟೋರಿಯಂ ಇರಲಿದೆ ಎಂದು ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ರಾಮಾಂಜನೇಯ ದೇವಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಅರ್ಚಕರಿಗೆ ಎರಡು ಬೆಡ್ ರೂಂನ ಮನೆಗಳನ್ನು ಕೂಡ ಪಕ್ಕದಲ್ಲಿಯೇ ನಿರ್ಮಿಸಲಾಗುವುದು. ದೇವಸ್ಥಾನದ ಮುಂದೆ ಇರುವ ಯಾಗಶಾಲೆ, ಪಾಕಶಾಲೆಗಳನ್ನು ನವೀಕರಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಮುಜರಾಯಿ ಸಂಸ್ಥೆಗಳು: ಸ್ವಾತಂತ್ರ್ಯ ಬಂದ ಬಳಿಕ ವಿವಿಧ ಕಾಯ್ದೆಯಡಿ ಮುಜರಾಯಿ ಸಂಸ್ಥೆಗಳು ಮತ್ತು ದೇವಸ್ಥಾನಗಳು ಕಾರ್ಯನಿರ್ವಹಿಸುತ್ತಾ ಬಂದಿದ್ದು, 1997ರಲ್ಲಿ ಏಕರೂಪ ಮತ್ತು ಸಮರ್ಪಕ ನಿರ್ವಹಣೆಗಾಗಿ ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿ ಕಾಯ್ದೆ ರೂಪಿಸಲಾಯಿತು. ರಾಜ್ಯದಲ್ಲಿರುವ 'ಎ', 'ಬಿ', 'ಸಿ' ವರ್ಗದ ಒಟ್ಟು 34,564 ದೇವಸ್ಥಾನಗಳಲ್ಲದೇ ಮೈಸೂರು ಮಹಾರಾಜ ಸಂಸ್ಕೃತ ಕಾಲೇಜು, ಆಗಮ ವಿಭಾಗ ಮತ್ತು ಮೇಲುಕೋಟೆ ಸರ್ಕಾರಿ ಸಂಸ್ಕೃತ ಕಾಲೇಜು ಹಾಗೂ ಆಂಧ್ರಪ್ರದೇಶದ ತಿರುಮಲ, ಮಂತ್ರಾಲಯ, ಶ್ರೀಶೈಲ, ಮಹಾರಾಷ್ಟ್ರದ ತುಳಜಾಪುರ ಮತ್ತು ಉತ್ತರ ಪ್ರದೇಶದ ವಾರಾಣಸಿಯಲ್ಲಿರುವ ಕರ್ನಾಟಕ ರಾಜ್ಯದ ಛತ್ರಗಳು ಮುಜರಾಯಿ ಇಲಾಖೆ ಅಡಿಯಲ್ಲಿ ಬರುತ್ತವೆ.



ಬೆಂಗಳೂರಿನಲ್ಲಿ ನಿರ್ಮಾಣಗೊಳ್ಳಲಿರುವ 'ಧಾರ್ಮಿಕ ಸೌಧ'ದ ಮಾದರಿ

ಒಕ್ಕೂಟದ ಒತ್ತಾಯ ಕಾರಣ

ಕೆ.ಇ. ರಾಧಾಕೃಷ್ಣ

ಮುಜರಾಯಿ ಇಲಾಖೆಯ ಕಚೇರಿಗಳು ಬಾಡಿಗೆ ಕಟ್ಟಡದಲ್ಲಿವೆ. ಅಲ್ಲದೆ ಅಲ್ಲಿ ಸೂಕ್ತ ಸ್ಥಳಾವಕಾಶ ಇಲ್ಲ. ಹೀಗಾಗಿ ಧಾರ್ಮಿಕ ಸೌಧ ನಿರ್ಮಿಸಿ ಎಂದು ಅಖಿಲ ಕರ್ನಾಟಕ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ಹಿಂದಿನಿಂದಲೂ ಒತ್ತಾಯಿಸುತ್ತಾ ಬಂದಿದೆ. ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅದರ ಪರಿಣಾಮ ಮುಜರಾಯಿ ಇಲಾಖೆಗೆ ಸ್ವಂತ ಕಟ್ಟಡ ನಿರ್ಮಾಣಗೊಳ್ಳಲಿದೆ ಎಂದು ಒಕ್ಕೂಟದ ಅಧ್ಯಕ್ಷ ಕೆ.ಇ. ರಾಧಾಕೃಷ್ಣ ತಿಳಿಸಿದರು.

'ಧಾರ್ಮಿಕ ಇಲಾಖೆಗೂ, ಕಂದಾಯ ಇಲಾಖೆಗೂ ನಿಕಟ ಸಂಬಂಧ ಇದೆ. ಕಂದಾಯ ಇಲಾಖೆ ಬಹುಮಹಡಿ ಕಟ್ಟಡದಲ್ಲಿರುವುದರಿಂದ ಸಂಪರ್ಕ ಸುಲಭವಾಗಲಿದೆ. ಮುಜರಾಯಿ ಇಲಾಖೆಗೆ ವಿವಿಧ ಕೆಲಸಗಳ ನಿಮಿತ್ತ ಬರುವ ಅರ್ಚಕರಿಗೆ ವಿಶ್ರಾಂತಿ ತೆಗೆದುಕೊಳ್ಳುವುದಕ್ಕಾಗಿ ವಿಶ್ರಾಂತಿ ಗೃಹವನ್ನು ಕೂಡ 'ಧಾರ್ಮಿಕ ಸೌಧ'ದಲ್ಲಿ ನಿರ್ಮಿಸಬೇಕು ಎಂಬ ಬೇಡಿಕೆ ಇಟ್ಟಿದ್ದೇವೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಅಂಕಿ ಅಂಶಗಳು



205
₹25 ಲಕ್ಷಕ್ಕಿಂತ ಅಧಿಕ ವರಮಾನ ಇರುವ 'ಎ' ವರ್ಗದ ದೇವಸ್ಥಾನಗಳು

193
₹5 ಲಕ್ಷದಿಂದ ₹25 ಲಕ್ಷ ವರಮಾನ ಇರುವ 'ಬಿ' ವರ್ಗದ ದೇವಸ್ಥಾನಗಳು

34,166
₹5 ಲಕ್ಷಕ್ಕಿಂತ ಕಡಿಮೆ ವರಮಾನ ಇರುವ 'ಸಿ' ವರ್ಗದ ದೇವಸ್ಥಾನಗಳು

'ನಮ್ಮದೇ ಜಾಗ, ನಮ್ಮದೇ ಹಣ'



ರಾಮಲಿಂಗಾರೆಡ್ಡಿ

'ಮುಜರಾಯಿ ಇಲಾಖೆಗೆ ಸೇರಿದ ಜಾಗದಲ್ಲಿಯೇ ಸೌಧ ನಿರ್ಮಾಣಗೊಳ್ಳಲಿದೆ. ಇದಕ್ಕೆ ಬೇರೆ ಅನುದಾನ ಬಳಸುತ್ತಿಲ್ಲ. ನಮ್ಮದೇ ಇಲಾಖೆಯಲ್ಲಿರುವ ಸಾಮಾನ್ಯ ಸಂಗ್ರಹ ನಿಧಿಯನ್ನು ಬಳಸಿಕೊಳ್ಳಲಾಗುತ್ತಿದೆ. ಮುಜರಾಯಿ ಇಲಾಖೆಗೆ ಸಂಬಂಧಿಸಿದ ನೂರಾರು ಎಕರೆ ಜಮೀನು ರಾಜ್ಯದಲ್ಲಿದೆ. ಬೆಂಗಳೂರಿನಲ್ಲಿಯೂ ಇದೆ. ಆದರೂ ಸ್ವಂತ ಕಟ್ಟಡ ಇರಲಿಲ್ಲ' ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ನಾಳೆ ಸಚಿವ ಸಂಪುಟದಲ್ಲಿ ಚರ್ಚೆ

'ಧಾರ್ಮಿಕ ಸೌಧ'ದ ನೀಲನಕ್ಷೆ ಸಿದ್ಧವಾಗಿದ್ದು, ಬುಧವಾರ (ಜೂನ್ 25) ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲಾಗುವುದು' ಎಂದು ಮುಜರಾಯಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿ ಗುರುವಾರ ಸಚಿವ ಸಂಪುಟ ಸಭೆ ನಡೆಯುವುದು ವಾಡಿಕೆ. ಈ ವಾರ ಒಂದು ದಿನ ಮೊದಲೇ ಸಭೆ ನಡೆಯಲಿದೆ. ಸಭೆಯಲ್ಲಿ ಈ ಪ್ರಸ್ತಾವದ ಬಗ್ಗೆ ಚರ್ಚೆಯಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.

ಚಿಟಿಕೆ ಸುದ್ದಿ

ಕನ್ನಡ ಜಾನಪದ ಸಮ್ಮೇಳನ ನಾಳೆ

ಬೆಂಗಳೂರು: ಕನ್ನಡ ಜಾನಪದ ಪರಿಷತ್‌ನ ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರ ಘಟಕದ ವತಿಯಿಂದ ಜೂನ್ 25ರಂದು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಜಾನಪದ ಸಮ್ಮೇಳನ ಆಯೋಜಿಸಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕನ್ನಡ ಜಾನಪದ ಪರಿಷತ್‌ನ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ರ. ನರಸಿಂಹಮೂರ್ತಿ, 'ನಿವೃತ್ತ ಐಎಎಸ್ ಅಧಿಕಾರಿ ಸಿ. ಸೋಮಶೇಖರ್ ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ಪೀಠಾಧ್ಯಕ್ಷ ಅಲ್ಲಮಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಪ್ರಿಯಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ಹೇಳಿದರು.

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರ ಸಾಲ, ಬ್ಯಾಂಕ್‌ಗಳ ಸಹಯೋಗದೊಂದಿಗೆ ಆರ್ಯ ವೈಶ್ಯ ಆಹಾರ ವಾಹಿನಿ ಯೋಜನೆ, ವಾಸವಿ ಜಲಶಕ್ತಿ ಹಾಗೂ ಅರಿವು ಶೈಕ್ಷಣಿಕ ಸಾಲ ಯೋಜನೆಗಳಡಿ ಸಾಲ ಸೌಲಭ್ಯಗಳನ್ನು ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಜುಲೈ 31ರೊಳಗೆ http://kacdc.karnataka.gov.in ಅರ್ಜಿಗಳನ್ನು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 080-23156006.

ಭಯದ ವಾತಾವರಣ ನಿರ್ಮಾಣ:ಬಿಎಸ್‌ವೈ

ಬೆಂಗಳೂರು: 'ರಾಜಕೀಯದಿಂದ ದೂರ ಇರುವ ಯಾರೂ ಈ ಸರ್ಕಾರದ ವಿರುದ್ಧ ಮಾತನಾಡುವಂತಿಲ್ಲ. ಅಂಥ ಭಯದ ವಾತಾವರಣವನ್ನು ಸಿದ್ದರಾಮಯ್ಯ ನಿರ್ಮಾಣ ಮಾಡುತ್ತಿದ್ದಾರೆ' ಎಂದು ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್ ಯಡಿಯೂರಪ್ಪ ಹೇಳಿದರು. ಉದ್ಯಮಿ ಮೋಹನ್‌ದಾಸ್ ಪೈ ಅವರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಸರ್ಕಾರ ಸುಳ್ಳು ಕಾರಣ ಹೇಳಿ ಎಫ್‌ಐಆರ್ ಹಾಕಿದೆ. ಇದು ಸರಿಯಲ್ಲ ಎಂದರು.

ಕಾರು ತಾಗಿದ ವಿಚಾರಕ್ಕೆ ಹೆದ್ದಾರಿಯಲ್ಲಿ ಗಲಾಟೆ: ದಾಬಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲು

ಅನಂತ್ ಕುಮಾರ್ ವಿರುದ್ಧ ಹಲ್ಲೆ ಆರೋಪ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ/ನೆಲಮಂಗಲ: ಕೇಂದ್ರದ ಮಾಜಿ ಸಚಿವ ಅನಂತ್ ಕುಮಾರ್ ಹೆಗಡೆ, ಅವರ ಪುತ್ರ, ಭದ್ರತಾ ಸಿಬ್ಬಂದಿ, ಚಾಲಕ ಹಾಗೂ ಮತ್ತೊಂದು ಕಾರಿನ ಪ್ರಯಾಣಿಕರ ಮಧ್ಯೆ ಕಾರನ್ನು ಹಿಂದಿಕ್ಕಿದ ವಿಚಾರಕ್ಕೆ ಪುಣೆ– ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 4ರ ಹಳೇ ನಿಜಗಲ್ ಬಳಿ ಸೋಮವಾರ ಗಲಾಟೆ ನಡೆದಿದೆ.

ಅನಂತ್ ಕುಮಾರ್ ಹೆಗಡೆ ಅವರೂ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಹೆಗಡೆ ಅವರು ಪ್ರಯಾಣಿಸುತ್ತಿದ್ದ ಕಾರನ್ನು ಮತ್ತೊಂದು ಕಾರು ಹಿಂದಿಕ್ಕಿತ್ತು ಎಂಬ ವಿಚಾರಕ್ಕೆ ಗಲಾಟೆ ಆಗಿದೆ ಎಂದು ಮೂಲಗಳು ತಿಳಿಸಿವೆ.

ಅನಂತ್ ಕುಮಾರ್ ಹೆಗಡೆ, ಕಾರು ಚಾಲಕ ಮಹೇಶ್, ಭದ್ರತಾ ಸಿಬ್ಬಂದಿ ಶ್ರೀಧರ್ ಮತ್ತು ಅನಂತ್ ಕುಮಾರ್ ಅವರ ಪುತ್ರ ಆಶುತೋಷ್ ಹಾಗೂ ಮತ್ತೊಂದು ಕಾರಿನಲ್ಲಿದ್ದ ಸಲ್ಮಾನ್, ಸೈಫ್, ಇಲಿಯಾಜ್ ಖಾನ್, ಗುಲಷಿರ್ ಉನ್ನೀಸಾ ಅವರ ಮಧ್ಯೆ ಗಲಾಟೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ದಾಬಸ್‌ಪೇಟೆ ಬಳಿ ಕಾರು ನಿಲುಗಡೆ ಮಾಡಿ ಹಲ್ಲೆ ನಡೆಸಿದ್ದಾರೆ ಎಂದು ಸಲ್ಮಾನ್ ಆರೋಪಿಸಿದ್ದಾರೆ.

ಹಲ್ಲೆಯಿಂದ ಗಾಯಗೊಂಡವರನ್ನು ದಾಬಸ್‌ಪೇಟೆಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲ್ಲೆಗೆ ಒಳಗಾದವರು ಅನಂತ ಕುಮಾರ್ ಹೆಗಡೆ, ಕಾರು ಚಾಲಕ ಹಾಗೂ ಭದ್ರತಾ ಸಿಬ್ಬಂದಿ ವಿರುದ್ಧ ದೂರು ನೀಡಿದ್ದಾರೆ. ನೆಲಮಂಗಲ ಡಿವೈಎಸ್‌ಪಿ ಕಚೇರಿಯಲ್ಲಿ ಮೂವರನ್ನು ವಿಚಾರಣೆ ನಡೆಸಿದ್ದು ದೂರು ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಹಲ್ಲೆ ಮಾಡಿಲ್ಲ': 'ಕಾರಿನಲ್ಲಿ ಬೆಂಗಳೂರಿಗೆ ಬರುತ್ತಿದ್ದೆವು. ಹಳೇ ನಿಜಗಲ್ ಬಳಿ ಇನೊವಾ ಕಾರೊಂದು ನಮ್ಮ ಕಾರನ್ನು ಹಿಂದಿಕ್ಕುವ ವೇಳೆ ತಾಗಿತ್ತು. ನಮ್ಮ ಕಾರು ಚಾಲಕ ಪ್ರಶ್ನೆ ಮಾಡಿದ್ದ. ಆಗ ವಾಗ್ವಾದ ನಡೆದಿದೆ. ಯಾರ ಮೇಲೂ ಹಲ್ಲೆ ನಡೆಸಿಲ್ಲ ಎಂಬುದಾಗಿ ಅನಂತ್ ಕುಮಾರ್ ಹೆಗಡೆ ಅವರು ಪೊಲೀಸರಿಗೆ ತಿಳಿಸಿದ್ದಾರೆ' ಎಂದು ಮೂಲಗಳು ಹೇಳಿವೆ. ಹಲ್ಲೆ ನಡೆಸುತ್ತಿರುವ ಹಾಗೂ ಭದ್ರತಾ ಸಿಬ್ಬಂದಿ ರಿವಾಲ್ವರ್ ಹಿಡಿದುಕೊಂಡಿದ್ದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಮದುವೆ ಮುಗಿಸಿಕೊಂಡು ತುಮಕೂರಿನಿಂದ ಹಾಲೇನಹಳ್ಳಿ ಗ್ರಾಮಕ್ಕೆ ತೆರಳುತ್ತಿದ್ದೆವು. ಆಗ ಘಟನೆ ನಡೆದಿದೆ. ಹಲ್ಲೆಯಿಂದ ಹಲ್ಲು ಮುರಿದಿದೆ. ಮುಖಕ್ಕೆ ಪೆಟ್ಟು ಬಿದ್ದಿದೆ' ಎಂದು ಹಲ್ಲೆಗೆ ಒಳಗಾದ ಸಲ್ಮಾನ್ ಖಾನ್ ಆರೋಪಿಸಿದ್ದಾರೆ.

ಠಾಣೆ ಬಳಿ ಬಂದ ಜನರು: ಘಟನೆಯ ವಿಚಾರ ತಿಳಿಯುತ್ತಿದ್ದಂತೆಯೇ ಸಲ್ಮಾನ್ ಹಾಗೂ ಅನಂತ್‌ಕುಮಾರ್ ಹೆಗಡೆ ಬೆಂಬಲಿಗರು ಠಾಣೆಯ ಎದುರು ಜಮಾಯಿಸಿ ಪ್ರತಿಭಟನೆ ನಡೆಸಿದರು. ಇದರಿಂದ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಠಾಣೆಯ ಎದುರು ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಗಲಾಟೆಯ ದೃಶ್ಯ

ಟಿಟಿಡಿ: ಮಾಜಿ ಸದಸ್ಯನ ಬಂಧನ

ಬೆಂಗಳೂರು: ಯುವತಿಯ ಮೇಲೆ ದೌರ್ಜನ್ಯ ಎಸಗಿದ್ದ ಆರೋಪದ ಅಡಿ ತಿರುಪತಿ ತಿರುಮಲ ದೇವಾಲಯದ (ಟಿಟಿಡಿ) ಆಡಳಿತ ಮಂಡಳಿಯ ಮಾಜಿ ಸದಸ್ಯ, ರಿಯಲ್ ಎಸ್ಟೇಟ್ ಉದ್ಯಮಿ ಬೂದಾಟಿ ಲಕ್ಷ್ಮೀ ನಾರಾಯಣ್ (56) ಅವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

2023ರ ಜುಲೈ 27ರಂದು ನಗರದ ಪಂಚತಾರಾ ಹೋಟೆಲ್‌ನಲ್ಲಿ ತಂಗಿದ್ದ ಲಕ್ಷ್ಮೀ ನಾರಾಯಣ್ ಅವರು ಪರಿಚಿತ ಯುವತಿಯನ್ನು ಕೊಠಡಿಗೆ ಕರೆಸಿಕೊಂಡು ದೌರ್ಜನ್ಯ ಎಸಗಿ ಪರಾರಿ ಆಗಿದ್ದರು ಎಂಬ ಆರೋಪದ ಅಡಿ ದೂರು ದಾಖಲಾಗಿತ್ತು. 'ದೂರು ನೀಡಿದರೆ ಮೊಬೈಲ್‌ನಲ್ಲಿ ಸೆರೆಯಾಗಿರುವ ಖಾಸಗಿ ಫೋಟೊ, ವಿಡಿಯೊ ಬಿಡುಗಡೆ ಮಾಡುವುದಾಗಿ ಬೆದರಿಸಿದ್ದರು' ಎಂಬ ಆರೋಪವಿತ್ತು. ಲೈಂಗಿಕ ಕಿರುಕುಳ ಹಾಗೂ ಬೆದರಿಕೆ ಆರೋಪಗಳನ್ನು ಮಾತ್ರವೇ ಉಲ್ಲೇಖಿಸಿ ಸಂತ್ರಸ್ತೆ ಈ ಹಿಂದೆ ದೂರು ನೀಡಿದ್ದರು. ಈ ಸಂಬಂಧ ಸಂತ್ರಸ್ತೆಯ ಹೇಳಿಕೆಯನ್ನು ನ್ಯಾಯಾಧೀಶರ ಎದುರು ದಾಖಲಿಸುವಾಗ ಆರೋಪಿ ದೌರ್ಜನ್ಯ ಎಸಗಿರುವುದಾಗಿ ತಿಳಿಸಿದ್ದರು. ಹಾಗಾಗಿ ಲಕ್ಷ್ಮೀ ನಾರಾಯಣ್ ಅವರನ್ನು ಬಂಧನ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಸಾಂಬಾರ್ ವಿಚಾರಕ್ಕೆ ಗಲಾಟೆ: ಕೊಲೆ

ಬೆಂಗಳೂರು: ಸಾಂಬಾರ್ ತಯಾರಿಸುವ ವಿಚಾರಕ್ಕೆ ನೇಪಾಳದ ಸೆಕ್ಯುರಿಟಿ ಗಾರ್ಡ್‌ಗಳ ಮಧ್ಯೆ ನಡೆದ ಗಲಾಟೆಯು ಕೊಲೆಯಲ್ಲಿ ಅಂತ್ಯಗೊಂಡಿದ್ದು, ಈ ಸಂಬಂಧ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಝುರಿಲಾಲ್ (70) ಕೊಲೆಯಾದ ಸೆಕ್ಯುರಿಟಿ ಗಾರ್ಡ್. ಕೃತ್ಯ ಎಸಗಿದ ಆರೋಪಿ ಮಹೇಂದ್ರ (28) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಝುರಿಲಾಲ್ ಹಾಗೂ ಮಹೇಂದ್ರ ಸಂಬಂಧಿಗಳು. ಇಬ್ಬರಿಗೂ ಸೆಕ್ಯುರಿಟಿ ಗಾರ್ಡ್ ಕೆಲಸ ಸಿಕ್ಕಿತ್ತು. ಇಬ್ಬರೂ ಒಂದೇ ಮನೆಯಲ್ಲಿ ವಾಸವಾಗಿದ್ದರು. ಭಾನುವಾರ ಝುರಿಲಾಲ್ ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ ಮಹೇಂದ್ರ ಸಾಂಬಾರ್ ತಯಾರಿಸಿರಲಿಲ್ಲ. ಆಗ ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ಪಕ್ಕದಲ್ಲೇ ಇದ್ದ ಲಟ್ಟಣಿಗೆಯಿಂದ ಝುರಿಲಾಲ್ ಮೇಲೆ ಹಲ್ಲೆ ನಡೆಸಿದ್ದರಿಂದ ಕುಸಿದು ಬಿದ್ದು ಸ್ಥಳದಲ್ಲೇ ಮೃತಪಟ್ಟರು' ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ವಿಭಾಗದ ಇಸ್ರೊ ಲೇಔಟ್, ಸುಬ್ರಹ್ಮಣ್ಯಪುರ, ಬನಶಂಕರಿ ವಿದ್ಯುತ್ ಉಪಕೇಂದ್ರದಲ್ಲಿ ಕೆಪಿಟಿಸಿಎಲ್‌ನಿಂದ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳುತ್ತಿರುವ ಕಾರಣ, ಮಂಗಳವಾರ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ, ಕೇಂದ್ರಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಇಸ್ರೊ ಲೇಔಟ್, ಕುಮಾರಸ್ವಾಮಿ ಲೇಔಟ್, ಇಳಯಸನಗರ, ವಿವೇಕಾನಂದ ಕಾಲೊನಿ, ಪ್ರಗತಿಪುರ, ಸರಬಂಡೆ ಪಾಳ್ಯ, ಪ್ರತಿಭಾ ಇಂಡಸ್ಟ್ರಿಯಲ್ ಏರಿಯಾ, ಸುಪ್ರೀಮ್ ಲೆದರ್ ಗಾರ್ಮೆಂಟ್ಸ್, ಚಂದ್ರಾನಗರ, ಕಾಶಿನಗರ, ವಿಕ್ರಮನಗರ, ನಂಜಪ್ಪ ಲೇಔಟ್, ಬಿಕಾಸಿಪುರ, ಟೀಚರ್ಸ್ ಕಾಲೊನಿ, ಬೇಂದ್ರೆ ನಗರ, ಮಿನಿಯಾಜ್ ನಗರ, ಕನಕನಗರ, ಗುಬ್ಬಾಲಾಳ, ಉತ್ತರಹಳ್ಳಿ ಭಾಗಶಃ, ಆದರ್ಶ್ ಅಪಾರ್ಟ್‌ಮೆಂಟ್ 1 ಮತ್ತು 2, ಮಂತ್ರಿಟ್ರಾನ್‌ಕ್ವಿಲ್ ಅಪಾರ್ಟ್‌ಮೆಂಟ್ ಸುತ್ತಮುತ್ತಲಿನ ಪ್ರದೇಶ.

ಮಾರುತಿ ಲೇಔಟ್, ಭರತ್ ಲೇಔಟ್, ದೊಡ್ಡಕಲ್ಲಸಂದ್ರ, ಅಗ್ರಹಾರ, ವಿಠಲ್‌ನಗರ, ಯಾದಲಾಂ ನಗರ, ಅರೇಹಳ್ಳಿ, ಇಟ್ಟುಮಡು, ಎಜಿಎಸ್ ಲೇಔಟ್, ಚಿಕ್ಕಲ್ಲಸಂದ್ರ, ಟಿ.ಜಿ.ಲೇಔಟ್, ಭುವನೇಶ್ವರಿನಗರ, ಶ್ರೀನಗರ, ಹೊಸಕೆರೆಹಳ್ಳಿ, ಪಿಇಎಸ್ ಎಂಜಿನಿಯರಿಂಗ್ ಕಾಲೇಜು, ವೀರಭದ್ರನಗರ, ಬ್ಯಾಂಕ್ ಕಾಲೊನಿ, ತ್ಯಾಗರಾಜ ನಗರ, ಬಸವನ ಗುಡಿ, ಬನಶಂಕರಿ 3ನೇ ಹಂತ, ಕತ್ರಿಗುಪ್ಪೆ, ಗಿರಿನಗರ 4ನೇ ಫೇಸ್, ಐಟಿಐ ಲೇಔಟ್, 100 ಅಡಿ ರಿಂಗ್ ರೋಡ್, ಕಾಮಾಕ್ಯ ಸುತ್ತಮುತ್ತಲಿನ ಪ್ರದೇಶಗಳು.

ಬುಧವಾರ ವಿದ್ಯುತ್ ಇಲ್ಲ: ಪುರವಂಕರ ಪಾಮ್ ಬೀಚ್ ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳುವುದರಿಂದ ಕೇಂದ್ರ ವ್ಯಾಪ್ತಿಯ ಪ್ರದೇಶಗಳಲ್ಲಿ ಬುಧವಾರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಹಳೇಹಳ್ಳಿ, ಮಾರ್ಗೊಂಡನಹಳ್ಳಿ, ಕಲ್ಕೆರೆ ರಸ್ತೆ, ಬೈರತಿ ಗ್ರಾಮ, ಕನಕಶ್ರೀ ಲೇಔಟ್, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ, ಗುಬ್ಬಿ ಅಡ್ಡ ರಸ್ತೆ, ಬೈರತಿ ಬಂಡೆ, ಕ್ಯಾಲಸನಹಳ್ಳಿ, ಪುರವಂಕರ ಅಪಾರ್ಟ್‌ಮೆಂಟ್, ಕಲ್ಕೆರೆ ರಸ್ತೆ, ಪೂರ್ಣಪ್ರಜ್ಞ, ಮಾರಗೊಂಡನಹಳ್ಳಿ, ಗವಿಗುಡಿ ಮತ್ತು ಸುತ್ತಮುತ್ತಲಿನ ಪ್ರದೇಶ. ಇದೇ ದಿನ ಶೋಭಾ ಇಂದ್ರಪ್ರಸ್ಥ ವಿದ್ಯುತ್ ಉಪಕೇಂದ್ರದಲ್ಲೂ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳುವುದರಿಂದ ಶೋಭಾ ಇಂದ್ರಪ್ರಸ್ಥ ಅಪಾರ್ಟ್‌ಮೆಂಟ್ ಹಾಗೂ ಗ್ಲೋಬಲ್ ಮಾಲ್‌ನಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ದಕ್ಷಿಣ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲು

ಹೂಡಿಕೆ ಹೆಸರಿನಲ್ಲಿ ₹16 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ನೀಡುವುದಾಗಿ ನಂಬಿಸಿ, 44 ವರ್ಷದ ವ್ಯಕ್ತಿಯೊಬ್ಬರಿಗೆ ₹16.97 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೈಬರ್ ವಂಚಕರ ವಿರುದ್ಧ ಗುರುರಾಜ್ ಲೇಔಟ್ ಬಿ.ಎಸ್.ಕೆ ಮೂರನೇ ಹಂತದ ನಿವಾಸಿ ಸುಜಯ್ ಕುಮಾರ್ ಅವರು ನೀಡಿದ ದೂರು ಆಧರಿಸಿ ಮಾಹಿತಿ ತಂತ್ರಜ್ಞಾನ ಕಾಯ್ದೆ– 2008 ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 318(4) ಹಾಗೂ 319(2)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಪೊಲೀಸರು ತಿಳಿಸಿದರು.

'ಎಸ್‌ಎಂಸಿ ಗ್ಲೋಬಲ್ ಸೆಕ್ಯೂರಿಟೀಸ್ ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ದೂರುದಾರರನ್ನು ಸೇರಿಸಲಾಗಿತ್ತು. ಅದಾದ ಕೆಲವು ದಿನಗಳ ಬಳಿಕ, ಅನುಪ್ರೀತಾ ಹಾಗೂ ಅಜಯ್ ಗರ್ಗ್ ಅವರು ಸುಜಯ್ ಕುಮಾರ್‌ಗೆ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳುಹಿಸಿ ಹೂಡಿಕೆಯ ಬಗ್ಗೆ ಮಾಹಿತಿ ನೀಡಿದ್ದರು.

ಹೂಡಿಕೆ ಮಾಡಿದರೆ ಶೇ 150ರಷ್ಟು ಲಾಭ ನೀಡುವುದಾಗಿ ನಂಬಿಸಿದ್ದರು. ಸೈಬರ್ ವಂಚಕರ ಮಾತು ನಂಬಿದ್ದ ದೂರುದಾರರು, ಹೂಡಿಕೆ ಮಾಡಲು ಒಪ್ಪಿದ್ದರು. ವಂಚಕರು ಕಳುಹಿಸಿದ್ದ ಲಿಂಕ್ ಬಳಸಿ ಸುಜಯ್ ಅವರು ನೋಂದಣಿ ಮಾಡಿಕೊಂಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ದೂರುದಾರರು ಆರಂಭದಲ್ಲಿ ₹40 ಸಾವಿರ ಹೂಡಿಕೆ ಮಾಡಿದ್ದರು. ಅವರಿಗೆ ಲಾಭದ ರೂಪದಲ್ಲಿ ₹1,58,978 ಸಿಕ್ಕಿತ್ತು. ಮತ್ತಷ್ಟು ಹಣ ಹೂಡಿಕೆ ಮಾಡಿದರೆ ಇನ್ನೂ ಹೆಚ್ಚಿನ ಹಣವನ್ನು ನೀಡುವುದಾಗಿ ಸೈಬರ್ ವಂಚಕರು ನಂಬಿಸಿದ್ದರಿಂದ ದೂರುದಾರರು ಹಂತ ಹಂತವಾಗಿ ₹16.97 ಲಕ್ಷ ಹೂಡಿಕೆ ಮಾಡಿದ್ದರು. ಕೆಲವು ತಿಂಗಳು ಕಳೆದ ಮೇಲೆ ಹೂಡಿಕೆ ಹಣವನ್ನು ಡ್ರಾ ಮಾಡಿಕೊಳ್ಳಲು ಸುಜಯ್ ತೆರಳಿದ್ದರು. ಅವರಿಗೆ ಹಣ ಡ್ರಾ ಮಾಡಿಕೊಳ್ಳಲು ಸಾಧ್ಯ ಆಗಿರಲಿಲ್ಲ.

ಸಂದೇಶ ಕಳುಹಿಸಿದ್ದವರನ್ನು ವಿಚಾರಿಸಿದಾಗ ಇನ್ನೂ ಹೆಚ್ಚಿನ ಹಣ ಹೂಡಿಕೆ ಮಾಡಿದರೆ ಹಣ ಸಿಗಲಿದೆ ಎಂಬುದಾಗಿ ಹೇಳಿದ್ದರು. ಆಗ ಮೋಸ ಹೋಗಿರುವುದು ಗೊತ್ತಾಗಿ ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಹೂಡಿಕೆ ಮಾಡಿದರೆ ಶೇ 150ರಷ್ಟು ಲಾಭ ನೀಡುವುದಾಗಿ ಆಮಿಷ
- ವಾಟ್ಸ್‌ಆ್ಯಪ್ ಲಿಂಕ್ ಬಳಸಿ ನೋಂದಣಿ
- ಆರಂಭದಲ್ಲಿ ₹40,000ಕ್ಕೆ ₹1,58,978 ವಾಪಸ್ ನೀಡಿದ್ದ ಅಪರಾಧಿಗಳು

'ಲೋಕಾ' ಸೋಗಿನಲ್ಲಿ ಎಇಇಗೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯದ ಬಿಬಿಎಂಪಿ ಎಇಇ ಜ್ಯೋತಿ ಜಿ. ಚೌಲುರ್ಕರ್ ಅವರಿಗೆ ಲೋಕಾಯುಕ್ತ ಪೊಲೀಸರ ಸೋಗಿನಲ್ಲಿ ಬೆದರಿಕೆ ಹಾಕಿದ್ದು, ಅಪರಿಚಿತರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜ್ಯೋತಿ ಅವರು ಲೋಕಾಯುಕ್ತ ಕಚೇರಿಗೆ ಹಾಜರಾಗಿ ಮಾಹಿತಿ ನೀಡಿದ್ದರು. ಅದನ್ನು ಆಧರಿಸಿ ಲೋಕಾಯುಕ್ತ ನಗರ ವಿಭಾಗದ ಇನ್‌ಸ್ಪೆಕ್ಟರ್ ಎಸ್.ಶ್ರೀಕಾಂತ್ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಎರಡು ಪ್ರತ್ಯೇಕ ಸಂಖ್ಯೆಗಳಿಂದ ಆರೋಪಿಗಳು, ಲೋಕಾಯುಕ್ತ ಎಸ್‌ಪಿ ಹಾಗೂ ಲೋಕಾಯುಕ್ತ ಎಡಿಜಿಪಿ ಎಂಬುದಾಗಿ ಜ್ಯೋತಿ ಅವರಿಗೆ ಸಂದೇಶ ಕಳುಹಿಸಿದ್ದರು. ನಂತರ, ತಮ್ಮ ಮೇಲೆ ಗೋಪ್ಯ ದೂರು ಬಂದಿದ್ದು, ಬಿ–ರಿಪೋರ್ಟ್ ಹಾಕುತ್ತೇವೆ. ಎಸ್‌ಪಿ ಅವರು ಹೇಳಿದಂತೆ ನಡೆದುಕೊಳ್ಳಿ ಎಂದು ಕರೆ ಮಾಡಿ ತಿಳಿಸಿದ್ದರು. ಅದೇ ರೀತಿ ನಿವೃತ್ತ ಕಾರ್ಯಪಾಲಕ ಎಂಜಿನಿಯರ್ ರಾಮಮೋಹನ್ ಅವರಿಗೂ ಬೆದರಿಕೆ ಕರೆ ಬಂದಿತ್ತು. ಟ್ರೂ ಕಾಲರ್‌ನಲ್ಲಿ ಪರಿಶೀಲನೆ ನಡೆಸಿದಾಗ, ಕರ್ನಾಟಕ ಲೋಕಾಯುಕ್ತ ಎಂದು ತೋರಿಸುತ್ತಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಲೋಕಾಯುಕ್ತ ಪೊಲೀಸರ ಹೆಸರು ಬಳಸಿಕೊಂಡು ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡಿ ಬೆದರಿಕೆ ಹಾಕಿ ಹಣ ವಸೂಲಿ ಮಾಡುತ್ತಿರುವುದು ಕಂಡುಬಂದಿದೆ. ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

ಬಿಬಿಎಂಪಿ ಅರಣ್ಯ ಘಟಕದ ಅಧಿಕಾರಿಗಳಿಗೆ ಪೊಲೀಸರ ನೋಟಿಸ್

ಬೆಂಗಳೂರು: ಮರದ ಕೊಂಬೆ ಬಿದ್ದು ಅಕ್ಷಯ್ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಅರಣ್ಯ ಘಟಕದ ಅಧಿಕಾರಿಗಳಿಗೆ ಹನುಮಂತನಗರ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಬೈಕ್‌ನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ಮರದ ಕೊಂಬೆ ಬಿದ್ದು ಅಕ್ಷಯ್ ಅವರು ಮೃತಪಟ್ಟಿದ್ದರು. ಅಕ್ಷಯ್ ಅವರ ಸಹೋದರ ಬೆನಕರಾಜ್ ಅವರ ದೂರು ಆಧರಿಸಿ, ಬಿಬಿಎಂಪಿ ಅರಣ್ಯ ವಿಭಾಗದ ಆರ್‌ಎಫ್‌ಒ, ಎಸಿಎಫ್, ಡಿಎಫ್‌ಒ ಮತ್ತು ಅರಣ್ಯ ಇಲಾಖೆಯ ಇತರೆ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

ಸ್ಥಳ ಮಹಜರು ನಡೆಸಲಾಗಿದೆ. ವಿಚಾರಣೆಗೆ ಬರುವಂತೆ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಆಪ್ತ ಸಮಾಲೋಚನೆ ಹೊಣೆ

ಆತ್ಮಹತ್ಯೆ ತಡೆ ತರಬೇತಿ ಕಾರ್ಯಾಗಾರ

• ಪ್ರಜಾವಾಣಿ ವಾರ್ತೆ

ರಾಮನಗರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ 'ಗೇಟ್-ಕೀಪರ್ ತರಬೇತಿ: ಆತ್ಮಹತ್ಯೆ ತಡೆಗಟ್ಟುವುದರಲ್ಲಿ ಇವರ ಪಾತ್ರ, ಕರ್ತವ್ಯ, ಜವಾಬ್ದಾರಿ' ಕುರಿತು ಶುಕ್ರವಾರ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಸುರಕ್ಷಾ ಯೋಜನೆ ಅಡಿ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ತಜ್ಞರು, ಜಿಲ್ಲೆಯ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ, ಹಿಮಾಲಯ ವೆಲ್‌ನೆಸ್ ಕಂಪನಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಮಾನಸಿಕ ಆರೋಗ್ಯ ವಿಭಾಗದ ಸಹಯೋಗದಲ್ಲಿ ಈ ಕಾರ್ಯಾಗಾರ ಆಯೋಜಿಸಲಾಗಿತ್ತು.

ಕಾರ್ಯಾಗಾರ ಉದ್ಘಾಟಿಸಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನ್ಮೋಲ್ ಜೈನ್, ಆತ್ಮಹತ್ಯೆ ಮಾಡಿಕೊಳ್ಳುವವರು ಅನುಭವಿಸುವ ಒತ್ತಡ ಹಾಗೂ ಮಾನಸಿಕ ತುಮುಲಗಳಿಗೆ ಸಕಾಲದಲ್ಲಿ ಆಪ್ತ ಸಮಾಲೋಚನೆ ಸಿಕ್ಕರೆ ಅಂತಹವರು ಆತ್ಮಹತ್ಯೆ ಆಲೋಚನೆಗಳಿಂದ ಹೊರಗೆ ಬರುತ್ತಾರೆ ಎಂದರು.

ವಿದ್ಯಾರ್ಥಿಗಳು ಪರೀಕ್ಷೆಯ ವೇಳೆ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ. ಅವರು ತಮಗೆ ಎದುರಾದ ಸಮಸ್ಯೆಗಳನ್ನು ಶಿಕ್ಷಕರು ಮತ್ತು ಪೋಷಕರೊಂದಿಗೆ ಮಾತನಾಡಿ ಬಗೆಹರಿಸಿಕೊಳ್ಳಲು ಹಿಂಜರಿಯುತ್ತಾರೆ. ಅಂತಹ ಮಕ್ಕಳನ್ನು ಗುರುತಿಸಿ ಅವರ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಕಿವಿಮಾತು ಹೇಳಿದರು.

ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಜಾಲದಲ್ಲಿ ಸಿಲುಕಿರುವವರು ಸಹ ಅದರಿಂದ ಹೊರಬರಲಾಗದೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಅಂತಹವರ ಕುರಿತು ಸ್ಥಳೀಯವಾಗಿ ಸಿಗುವ ಮಾಹಿತಿ ಆಧರಿಸಿ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಅವರನ್ನು ಗುರುತಿಸಿ ಆತ್ಮಹತ್ಯೆ ಮಾಡಿಕೊಳ್ಳದಂತೆ ಆಪ್ತ ಸಮಾಲೋಚನೆ ಮಾಡಿ ಅವರನ್ನು ಆ ಆಲೋಚನೆಯಿಂದ ಹೊರತರಬೇಕು ಎಂದು ಸಲಹೆ ಮಾಡಿದರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ ಮನೋವೈದ್ಯಕೀಯ ಸಾಮಾಜಿಕ ಕಾರ್ಯ ವಿಭಾಗದ ಹೆಚ್ಚುವರಿ ಪ್ರಾಧ್ಯಾಪಕ ಡಾ. ಅನಿಶ್ ವಿ. ಚೆರಿಯನ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಪದ್ಮರಾಜ್ ಭಾಗ ವಹಿಸಿದ್ದರು.

ಟೆಲಿಮನಸ್: ಆಪ್ತ ಸಮಾಲೋಚನೆ

ಮಾನಸಿಕ ಒತ್ತಡಕ್ಕೆ ಒಳಗಾಗಿರುವವರು ಹಾಗೂ ತಮ್ಮ ಸಮಸ್ಯೆಗಳನ್ನು ಹೊರಗಿನವರೊಂದಿಗೆ ಹಂಚಿಕೊಳ್ಳಲು ಬಯಸದವರು 'ಟೆಲಿಮನಸ್' ಸಹಾಯವಾಣಿ 14416 ಸಂಖ್ಯೆಗೆ ಕರೆ ಮಾಡಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಖಿನ್ನತೆ, ಆತ್ಮಹತ್ಯೆ ಆಲೋಚನೆ ಸೇರಿದಂತೆ ವಿವಿಧ ರೀತಿಯ ಮಾನಸಿಕ ಸಮಸ್ಯೆಗಳಿಗೂ ಟೆಲಿಮನಸ್ ಸಹಾಯವಾಣಿಯಲ್ಲಿ ಸಲಹೆ, ಸೂಚನೆ ನೀಡಲಾಗುತ್ತದೆ. ಅಲ್ಲದೆ, ಸಹಾಯವಾಣಿಗೆ ಕರೆ ಮಾಡುವವರ ಗುರುತನ್ನು ಗೋಪ್ಯವಾಗಿಡಲಾಗುತ್ತದೆ ಎಂದು ಜಿ.ಪಂ. ಸಿಇಒ ಅನ್ಮೋಲ್ ಜೈನ್ ತಿಳಿಸಿದರು.

ಆತ್ಮಹತ್ಯೆ ತಡೆ ಕುರಿತ ತರಬೇತಿ ಕಾರ್ಯಾಗಾರವನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನ್ಮೋಲ್ ಜೈನ್ ಉದ್ಘಾಟಿಸಿದರು

ನಗರದಲ್ಲಿ ಇಂದು

ಮೂಡಲಪಾಯ ಯಕ್ಷೋತ್ಸವ: ಉದ್ಘಾಟನೆ: ಕೆ.ಎಂ. ಗಾಯಿತ್ರಿ, ಅಧ್ಯಕ್ಷತೆ: ತಲ್ಲೂರು ಶಿವರಾಮ ಶೆಟ್ಟಿ, ಅತಿಥಿಗಳು: ಕಲ್ಮನೆ ಎ.ಎಸ್. ನಂಜಪ್ಪ, ಶ್ರೀನಿವಾಸ ಸಾಸ್ತಾನ, ಚಿಕ್ಕಣ್ಣ ಯಣ್ಣೆಕಟ್ಟೆ, ಅಶೋಕ ಎನ್. ಛಲವಾದಿ, 'ಮೂಡಲಪಾಯ ತಾಳಮೇಳ' ಅಂಗದ ಸಂಧಾನ: ಪ್ರಸ್ತುತಿ: ಹೇಮಾಂಬಿಕಾ ಯಕ್ಷಗಾನ ಕಲಾ ಸಂಘ, 'ಮೂಡಲಪಾಯ, ಕೇಳಿಕೆ, ಘಟ್ಟದಕೋರೆ, ಬೊಂಬೆಯಾಟದ ಪಾತ್ರಗಳ ವೈಶಿಷ್ಟ್ಯ' ವಿಚಾರಸಂಕಿರಣ: ಟಿ. ಗೋವಿಂದರಾಜು, ಕುರುವ ಬಸವರಾಜು, ಪೂರ್ಣಿಮಾ ಜೋಗಿ ಎಸ್., ಡಿ.ಬಿ. ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ: ವೇಮಗಲ್ ನಾರಾಯಣಸ್ವಾಮಿ, ಆಯೋಜನೆ: ಕರ್ನಾಟಕ ಯಕ್ಷಗಾನ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

'1975 ತುರ್ತು ಪರಿಸ್ಥಿತಿ 50 ವರ್ಷ': ಉದ್ಘಾಟನೆ: ಎಚ್.ಡಿ. ದೇವೇಗೌಡ, ಅಧ್ಯಕ್ಷತೆ: ಬಿ.ಎಸ್. ಯಡಿಯೂರಪ್ಪ, ಮುಖ್ಯ ಭಾಷಣ: ಎಸ್. ಗುರುಮೂರ್ತಿ, ಸಂಚಾಲನೆ: ವಿಷ್ಣುಕಾಂತ್ ಚಟಪಲ್ಲಿ, ಆಯೋಜನೆ: ಸಿಟಿಜನ್ ಫಾರ್ ಸೋಷಿಯಲ್ ಜಸ್ಟೀಸ್ ಬೆಂಗಳೂರು, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 4.30

ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು ನಗರ ಜಿಲ್ಲಾ ಘಟಕದ ಕಚೇರಿಯ ಉದ್ಘಾಟನೆ, ಅಭಿನಂದನಾ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಎಂ. ಕೃಷ್ಣಪ್ಪ, ಅಭಿನಂದಿಸುವವರು: ಪ್ರಿಯಕೃಷ್ಣ, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಅತಿಥಿಗಳು: ಟಿ. ತಿಮ್ಮೇಗೌಡ, ವೇಮಗಲ್ ನಾರಾಯಣಸ್ವಾಮಿ, ಉಪಸ್ಥಿತಿ: ಆದಿತ್ಯ ನಂಜರಾಜ್, ಅಭಿನಂದಿತರು: ಸಿರಿಗಂಧ ಶ್ರೀನಿವಾಸಮೂರ್ತಿ, ಅಪ್ಪಗೆರೆ ತಿಮ್ಮರಾಜು, ಜೋಗಿಲ ಸಿದ್ಧರಾಜು, ಆಶಯ ನುಡಿ: ಟಿ. ತಿಮ್ಮೇಶ್, ಆಯೋಜನೆ: ಕರ್ನಾಟಕ ಜಾನಪದ ಪರಿಷತ್ತು, ಸ್ಥಳ: ನಾಡೋಜ ಡಾ.ಎಂ. ಚಿದಾನಂದಮೂರ್ತಿ ಸಭಾಂಗಣ, ವಿಜಯನಗರ, ಸಂಜೆ 5



ನಿರ್ಮಲಾನಂದನಾಥ ಸ್ವಾಮೀಜಿ

ಭಜನೆ: ಶ್ರೀಕೃಷ್ಣಾಮೃತ ಭಜನಾ ಮಂಡಳಿ, 'ತಿರುಪತಿ ಕ್ಷೇತ್ರದ ಮಹಿಮೆ' ಧಾರ್ಮಿಕ ಪ್ರವಚನ: ಪ್ರಾಣೇಶಾಚಾರ್ಯ, ಸ್ಥಳ: ಶ್ರೀಮದ್ ಉತ್ತರಾದಿಮಠ, ಸಹಕಾರನಗರ, ಸಂಜೆ 6ರಿಂದ

'ಸಮಗ್ರ ಮಹಾಭಾರತ' ಧಾರ್ಮಿಕ ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಮತ್ತು ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

ನಮ್ಮ ನಡಿಗೆಯ ವೇಗ ನಮ್ಮ ಆರೋಗ್ಯದ ಸೂಚಕ. ಇದು ನಮ್ಮ ಮಿದುಳಿನ ವಯಸ್ಸನ್ನೂ ಸೂಚಿಸುತ್ತದೆಯಂತೆ

ಮಿದುಳಿನ ಗಡ್ಡೆಗಳೆಲ್ಲ ಕ್ಯಾನ್ಸರ್ ಅಲ್ಲ!

ಒಂದು ಅಂದಾಜಿನ ಪ್ರಕಾರ, ದೇಹದಲ್ಲಿ ಕಂಡುಬರುವ ಗಡ್ಡೆಗಳ ಪೈಕಿ ಶೇ 9ರಷ್ಟು ಮಿದುಳಿನಲ್ಲಿಯೇ ಕಂಡುಬರುತ್ತವೆ.

• ಡಾ. ಅನಿರುದ್ಧ ಕುಲಕರ್ಣಿ

'ಮಿದುಳುಗಡ್ಡೆ' ('ಬ್ರೈನ್ ಟ್ಯೂಮರ್') – ಈ ಪದವೇ ಜನರಲ್ಲಿ ಭಯವನ್ನು ಮೂಡಿಸುತ್ತದೆ. ಮಿದುಳಿನಲ್ಲಿ ಗಡ್ಡೆ ಬೆಳೆದುಕೊಂಡಿದೆ ಎಂದಾಕ್ಷಣ ರೋಗಿಯ ಜೀವಿತಾವಧಿ ಕಡಿಮೆ ಎಂದು ಭಾವಿಸಬೇಕಿಲ್ಲ. ಎಲ್ಲ ಮಿದುಳುಗಡ್ಡೆಗಳು ಕ್ಯಾನ್ಸರ್ ಅಲ್ಲ. ಕಳೆದೊಂದು ದಶಕದಲ್ಲಿ ನರಶಸ್ತ್ರ ಚಿಕಿತ್ಸಾ ವಿಧಾನದಲ್ಲಿ ಆಗಿರುವಂಥ ಅದ್ಭುತ ಸಂಶೋಧನೆಗಳಿಂದ ಮಿದುಳುಗಡ್ಡೆಯ ಚಿಕಿತ್ಸಾ ವಿಧಾನಗಳು ಹೆಚ್ಚು ಫಲಕಾರಿಯಾಗುತ್ತಿವೆ.

ಕೆಲವು ಸಲ ತಲೆನೋವು, ವಾಂತಿ, ದೃಷ್ಟಿದೋಷ, ಅಪಸ್ಮಾರದಿಂದ ಬಳಲುತ್ತಿರುವ ರೋಗಿಗಳು ನರತಜ್ಞರಲ್ಲಿ ಪರೀಕ್ಷೆ ಮಾಡಿಸಲೂ ಹೆದರುತ್ತಾರೆ. ಒಂದು ಅಂದಾಜಿನ ಪ್ರಕಾರ, ದೇಹದಲ್ಲಿ ಕಂಡುಬರುವ ಗಡ್ಡೆಗಳ ಪೈಕಿ ಶೇ 9ರಷ್ಟು ಮಿದುಳಿನಲ್ಲಿ ಕಂಡುಬರುತ್ತವೆ.

ರೋಗಲಕ್ಷಣಗಳು

ಮಿದುಳಿನ ಗಡ್ಡೆಯ ಗಾತ್ರ ದೊಡ್ಡದಾದಂತೆ ತೀವ್ರವಾದ, ನಿರಂತರ ತಲೆನೋವು ಬರಬಹುದು. ಬೆಳಿಗ್ಗೆ ಎದ್ದ ಕೂಡಲೇ ವಾಂತಿಯಾಗುವುದು, ದೃಷ್ಟಿ ಮಂದವಾಗುವುದು; ಜೊತೆಗೆ ಅಪಸ್ಮಾರ ಬರಬಹುದು. ಇನ್ನೊಂದು ಗುಂಪಿನ ರೋಗ ಲಕ್ಷಣಗಳು, ಮಿದುಳಿನ ಯಾವ ಭಾಗದಲ್ಲಿ ಗಡ್ಡೆ ಒತ್ತಡವನ್ನು ಉಂಟುಮಾಡುತ್ತಿದೆ ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ. ಗಡ್ಡೆಯು ಕೈ ಅಥವಾ ಕಾಲಿನ ಚಲನವಲನಕ್ಕೆ ಸಂಬಂಧಿಸಿದ ಕ್ಷೇತ್ರದಲ್ಲಿದ್ದರೆ, ಆ ಭಾಗ ನಿಷ್ಕ್ರಿಯವಾಗಿ ಚೈತನ್ಯವನ್ನು ಕಳೆದುಕೊಳ್ಳಬಹುದು.

ಮಾತನಾಡುವ ಅಥವಾ ಸಂವಹನಕ್ಕೆ ಅಗತ್ಯವಿರುವ ಭಾಗದಲ್ಲಿ ಗಡ್ಡೆಯಿದ್ದರೆ ಮಾತಿನಲ್ಲಿ ಏರುಪೇರಾಗಬಹುದು. ಎಷ್ಟೋಂದು ರೋಗಿಗಳು ಇದನ್ನು ಕೇವಲ ಪಾರ್ಶ್ವವಾಯು ಎಂದು ಕಡೆಗಣಿಸಿ, ಬೇರೆ ಚಿಕಿತ್ಸಾ ವಿಧಾನಗಳನ್ನು ತೆಗೆದುಕೊಳ್ಳುವ ಉದಾಹರಣೆಗಳುಂಟು. ಗಡ್ಡೆಯು ಮಿದುಳಿನ ಮುಂಭಾಗದಲ್ಲಿದ್ದರೆ ವ್ಯಕ್ತಿಯ ನಡವಳಿಕೆಯಲ್ಲಿ ವಿಪರೀತ ವ್ಯತ್ಯಾಸ ಕಂಡುಬರುವ ಸಾಧ್ಯತೆ ಇದೆ; ವ್ಯಕ್ತಿ ಬುದ್ಧಿಭ್ರಮಣೆಗೆ ಈಡಾದವನಂತೆ ಕಾಣಬಹುದು.

ಗಡ್ಡೆ ಪಿಟ್ಯುಟರಿಗ್ರಂಥಿಯಲ್ಲಿ ಕಂಡುಬಂದರೆ, ರಾಸಾಯನಿಕ ರಸದೂತಗಳ ಉತ್ಪತ್ತಿಯಲ್ಲಿ ಏರುಪೇರಾಗಬಹುದು; ಕಣ್ಣಿನ ದೃಷ್ಟಿ ಮಂದವಾಗಬಹುದು.

ಗ್ಲಿಯೋಮಾ ಗಡ್ಡೆಗಳು

ಪ್ರಾಥಮಿಕ ಗಡ್ಡೆಗಳ ಪೈಕಿ ಮಿದುಳಿನ ಜೀವಕೋಶಗಳಿಂದ ಉದ್ಭವವಾಗುವ ಗ್ಲಿಯೋಮಾ ಗಡ್ಡೆಗಳು ಬಹುಸಾಮಾನ್ಯ (ಶೇ 60-65). ಕೆಲವೊಂದು ಗಡ್ಡೆಗಳು ಮಿದುಳಿನ ಹೊರಪೊರೆಗಳಿಂದ ಹುಟ್ಟಬಹುದು (ಮೆನಿಂಜಿಯೋಮಾ). ಕೆಲವು ಗಡ್ಡೆಗಳು ಪಿಟ್ಯುಟರಿ ಗ್ರಂಥಿಗಳಿಂದ ಹುಟ್ಟುತ್ತವೆ. ಈ ಗ್ಲಿಯೋಮಾ ಗಡ್ಡೆಗಳಲ್ಲಿ ಬಹಳಷ್ಟು ವಿಷಮ ಗಡ್ಡೆಗಳಾಗಿ (Malignant) ಬೆಳೆಯುತ್ತವೆ. ಇವು ಮನುಷ್ಯನನ್ನು ಕೆಲವೇ ತಿಂಗಳಲ್ಲಿ ಸಾವಿಗೆ ನೂಕುತ್ತವೆ. ಇವುಗಳು ಗ್ರೇಡ್ ಮೂರು ಅಥವಾ ನಾಲ್ಕನೆಯ ಹಂತದಲ್ಲಿದ್ದರೆ ಶಸ್ತ್ರಚಿಕಿತ್ಸೆಯ ಜೊತೆಗೆ ವಿಕಿರಣ ಚಿಕಿತ್ಸೆ ಹಾಗೂ ಕೀಮೊಥೆರಪಿಗಳ ಮೊರೆ ಹೋಗಬೇಕಾಗುತ್ತದೆ.

ಪರೀಕ್ಷಾ ವಿಧಾನ

ಮಿದುಳಿನಲ್ಲಿ ಗಡ್ಡೆ ಇದೆ ಎಂದು ಸಾಬೀತಾದಲ್ಲಿ ನರಶಸ್ತ್ರ-ಚಿಕಿತ್ಸಕರು ಸಮರ್ಪಕವಾದ ಚಿಕಿತ್ಸೆಯನ್ನು ನೀಡಬಲ್ಲರು. ರೋಗಿಯಿಂದ ವಿವರವಾದ ರೋಗಲಕ್ಷಣಗಳ ಮಾಹಿತಿ ಪಡೆದುಕೊಂಡ ನಂತರ, ನರಶಸ್ತ್ರ ಚಿಕಿತ್ಸಕ, ರೋಗಿಯ ದೇಹದ ನರಗಳ ವಿಸ್ತೃತವಾದ ಪರೀಕ್ಷೆ ಮಾಡುತ್ತಾರೆ. ದೇಹದ ಯಾವುದೇ ಭಾಗದಲ್ಲಿ ನಿಷ್ಕ್ರಿಯತೆ ಇದೆಯೇ? ಕಣ್ಣಿನ ಹಾಗೂ ಶ್ರವಣಶಕ್ತಿಯ ವೈಪರೀತ್ಯ ಇದೆಯೇ? ಮಾನಸಿಕ ಕ್ರಿಯೆಗಳಲ್ಲಿ ಏನಾದರೂ ಏರುಪೇರುಗಳಿವೆಯೇ? ಎಂಬುದನ್ನು ಪರೀಕ್ಷೆಯ ಮುಖಾಂತರ ದೃಢೀಕರಿಸಿಕೊಂಡು, ಮಿದುಳಿನ ಸ್ಕ್ಯಾನಿಂಗ್ ತೆಗೆಸುತ್ತಾರೆ. 'ಸಿಟಿ' ಅಥವಾ 'ಎಂಆರ್‌ಐ' ಸ್ಕ್ಯಾನಿಂಗ್‌ನಲ್ಲಿ ಗಡ್ಡೆಯ ಬಹುಸ್ಪಷ್ಟವಾದ ಮಾಹಿತಿ ದೊರೆಯುತ್ತದೆ. 'ಫಂಕ್ಷನಲ್ ಎಂಆರ್‌ಐ.' ಅತ್ಯಾಧುನಿಕ ತಪಾಸಣಾ ವ್ಯವಸ್ಥೆ. ಮಿದುಳಿನಲ್ಲಿರುವ ಗಡ್ಡೆ, ಮಾತನಾಡುವ ಕೇಂದ್ರ, ದೃಷ್ಟಿಕೇಂದ್ರ, ಕೈ-ಕಾಲು ನಿಯಂತ್ರಣ ಕೇಂದ್ರಗಳಿಗೆ ಎಷ್ಟು ಸನಿಹದಲ್ಲಿದೆ ಎಂಬುದರ ಸ್ಪಷ್ಟ ಚಿತ್ರಣವು ಶಸ್ತ್ರಚಿಕಿತ್ಸೆಯ ಮೊದಲೇ ಲಭಿಸುತ್ತದೆ.

ನರಶಸ್ತ್ರ ಚಿಕಿತ್ಸೆ

ಕೆಲವೊಮ್ಮೆ ಗಡ್ಡೆಗಳು ಈ ನಿಯಂತ್ರಣ ಕೇಂದ್ರದಲ್ಲಿ ಅಥವಾ ಅದರ ಸನಿಹದಲ್ಲಿದ್ದಾಗ ಅವುಗಳನ್ನು ಶಸ್ತ್ರಚಿಕಿತೆಯ ಮೂಲಕ ತೆಗೆಯುವುದು ಒಂದು ದೊಡ್ಡ ಸವಾಲು. ಶಸ್ತ್ರಕ್ರಿಯೆ ನಂತರ ದೇಹದಲ್ಲಿ ನ್ಯೂನತೆಗಳು ಕಂಡುಬರಬಹುದು. ಹೀಗಾಗಿ ಎಚ್ಚರ ಸ್ಥಿತಿಯಲ್ಲಿ ಇರುವಾಗಲೇ ಮಿದುಳಿನ ಶಸ್ತ್ರಚಿಕಿತ್ಸೆಯನ್ನು ಮಾಡುವುದು ಬಲು ಪ್ರಯೋಜನಕಾರಿ. ಅರವಳಿಕೆ ವಿಧಾನದಲ್ಲಿ ಆಗಿರುವ ಬೆಳವಣಿಗೆಗಳಿಂದ ರೋಗಿ ಎಚ್ಚರದ ಸ್ಥಿತಿಯಲ್ಲಿ ಇದ್ದಾಗಲೂ ಅವನಿಗೆ ನೋವಾಗದಂತೆ ನರಶಸ್ತ್ರ ಚಿಕಿತ್ಸೆಯನ್ನು ಮಾಡಬಹುದಾಗಿದೆ. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರೋಗಿಯನ್ನು ಮಾತನಾಡಿಸುತ್ತಾ, ಸೂಕ್ಷ್ಮ ವಿದ್ಯುತ್ ತರಂಗಗಳಿಂದ ಮಿದುಳಿನ ಮುಖ್ಯ ಕೇಂದ್ರಗಳನ್ನು ಕಂಡುಹಿಡಿಯಬಹುದಾಗಿದೆ. 'ನ್ಯೂರೊನಾವಿಗೇಷನ್' ತಂತ್ರಜ್ಞಾನದ ಆವಿಷ್ಕಾರದಿಂದ ಮಿದುಳುಗಡ್ಡೆಯ 3-ಡಿ ಚಿತ್ರಣ ಲಭ್ಯವಾಗುತ್ತದೆ. ಸುರಕ್ಷಿತ ಹಾಗೂ ಸನಿಹದ ದಾರಿ ತೋರುವ ಈ ವ್ಯವಸ್ಥೆ ನಿಜಕ್ಕೂ ಪರಿಣಾಮಕಾರಿ.

ನರಶಸ್ತ್ರ ಚಿಕಿತ್ಸೆಯ ನಂತರ, ಗಡ್ಡೆಯನ್ನು ಅದರ ರೋಗಲಕ್ಷಣ ಅಧ್ಯಯನಗೋಸ್ಕರ ಹಿಸ್ಟೊಪೆಥಾಲಾಜಿ ರಿಪೋರ್ಟ್‌ಗೆ ಕಳಿಸಲಾಗುತ್ತದೆ. ಇವು ಗ್ಲಿಯೋಮಾ ಆಗಿದ್ದಲ್ಲಿ, ಗ್ರೇಡ್ 3 ಅಥವಾ 4ನೇ ಗಡ್ಡೆಗಳಿಗೆ ವಿಕಿರಣ ಚಿಕಿತ್ಸೆ ಮತ್ತು ಔಷಧಚಿಕಿತ್ಸೆ ಬಹು ಮುಖ್ಯ; ಇಲ್ಲವಾದಲ್ಲಿ ಈ ಕ್ಯಾನ್ಸರ್ ಕಣಗಳು ಮತ್ತೆ ಉಲ್ಬಣಗೊಂಡು ತೊಂದರೆ ಕೊಡಬಹುದು. ಮಿದುಳಿನ ಹೊರಪೊರೆಗಳಿಂದ ಬಂದಿರುವ ಗಡ್ಡೆಗಳಾಗಿದ್ದಲ್ಲಿ, ಶಸ್ತ್ರಚಿಕಿತ್ಸೆಯಿಂದ ಸಂಪೂರ್ಣವಾಗಿ ಗುಣಪಡಿಸಬಹುದು.

ಮಿದುಳಿನ ಗಡ್ಡೆಯ ಶಸ್ತ್ರಚಿಕಿತ್ಸೆ ಆದ ನಂತರ ವ್ಯಕ್ತಿಯಲ್ಲಿ ಕೆಲವು ದೈಹಿಕ ನ್ಯೂನತೆಗಳಿಂದ ಅವನ ಕೆಲವು ಶಕ್ತಿ ಸಾಮರ್ಥ್ಯಗಳು ಕುಂದಬಹುದು. ಮಾನಸಿಕ ಚಟುವಟಿಕೆಗಳಲ್ಲಿ ಏರುಪೇರು ಕಂಡುಬರಬಹುದು. ಹೀಗಾಗಿ ರೋಗಿಗೆ ಧೈರ್ಯ, ಸ್ಫೂರ್ತಿ ತುಂಬಿ ಸ್ವಾವಲಂಬಿಯಾಗಿ ಬದುಕಲು, ಸರಿಯಾದ ತರಬೇತಿ ಹಾಗೂ ಫಿಸಿಯೋಥೆರಪಿ ಅತಿ ಅವಶ್ಯಕ. ರೋಗಿಯ ಪುನಶ್ಚೇತನದಲ್ಲಿ ಮನೆಯ ಬಂಧುಗಳು, ಸಹೋದ್ಯೋಗಿಗಳು, ಸ್ನೇಹಿತರು, ಸಮಾಜವು ಭಾಗಿಯಾದಲ್ಲಿ ರೋಗಿಯು ಸ್ವಾವಲಂಬಿಯಾಗಿ ಬದುಕಬಹುದು.





ಜ್ವರ ಎಂಬುದು ದೇಹಕ್ಕೆ ಸಹಜ

• ಡಾ. ಕುಶ್ವಂತ್ ಕೋಳಿಬೈಲು

ಜ್ವರ ಬಂದಿತೆಂದರೆ ರೋಗಿ ಮತ್ತವರ ಮನೆಯವರು ಆತಂಕಕ್ಕೆ ಒಳಗಾಗುತ್ತಾರೆ. ಮಕ್ಕಳಿಗೆ ಜ್ವರ ಬಂದರೆ ಅದು ಕಡಿಮೆಯಾಗುವ ತನಕ ಹೆತ್ತವರಿಗೆ ನೆಮ್ಮದಿಯಿಂದ ಇರಲಾಗುವುದಿಲ್ಲ. ಜ್ವರವು ಆರೋಗ್ಯವಂತ ಶರೀರದ ನೈಸರ್ಗಿಕ ಪ್ರತಿಕ್ರಿಯೆ - ಎಂಬ ಸತ್ಯವು ಹೆಚ್ಚಿನವರಿಗೆ ಗೊತ್ತಿರುವುದಿಲ್ಲ. ನಮ್ಮ ದೇಹದ ತಾಪಮಾನದ ಸೂಕ್ತ ನಿಯಂತ್ರಣವು ಬಹಳ ಪ್ರಮುಖವಾದ ಅಂಶವಾಗಿದೆ. ನಮ್ಮ ದೇಹದ ವಿವಿಧ ಕಣ ಮತ್ತು ಕೋಶಗಳ ಕ್ರಿಯೆಗಳನ್ನು ನಿಯಂತ್ರಿಸುವ ವಿವಿಧ ಹಾರ್ಮೋನುಗಳು ಮತ್ತು ಕಿಣ್ವಗಳು ಸರಿಯಾಗಿ ಕೆಲಸಮಾಡಲು ದೇಹದ ತಾಪಮಾನದ ನಿಯಂತ್ರಣವು ಅತ್ಯಗತ್ಯ. ದೇಹದ ತಾಪಮಾನವನ್ನು ಮಿದುಳಿನ 'ಹೈಪೋಥೆಲಾಮಸ್' ಎಂಬ ಭಾಗವು ನಿಯಂತ್ರಿಸುತ್ತದೆ. ಚಳಿಗಾಲದಲ್ಲಿ ಹೊರಗಿನ ವಾತಾವರಣದ ತಾಪಮಾನ ಕಡಿಮೆಯಾದಲ್ಲಿ ದೇಹದೊಳಗೆ ನಡೆಯುವ ವಿವಿಧ ಕ್ರಿಯೆಗಳು ತಾಪಮಾನ ಹೆಚ್ಚುವಂತೆ ನೋಡಿಕೊಳ್ಳುತ್ತವೆ. ಹೆಚ್ಚು ಚಳಿಯಾದಾಗ ನಡುಗುವುದು ಮತ್ತು ಹಲ್ಲು ಕಡಿಯುವುದು ಕೂಡ ತಾಪಮಾನವನ್ನು ಹೆಚ್ಚು ಮಾಡುವ ಪ್ರಯತ್ನಗಳು. ಸೆಕೆ ವಿಪರೀತವಾಗಿ ಹೊರಗಿನ ಉಷ್ಣತೆ ಜಾಸ್ತಿಯಾದಾಗ ದೇಹವು ಬೆವರುವ ಮೂಲಕ ಮತ್ತು ದೇಹದೊಳಗೆ ನಡೆಯುವ ವಿವಿಧ ಕ್ರಿಯೆಗಳ ಮೂಲಕ ತಾಪಮಾನದ ನಿಯಂತ್ರಣವನ್ನು ಮಾಡುತ್ತದೆ. ನಮ್ಮ ದೇಹದ ತಾಪಮಾನದ ಬದಲಾವಣೆಗಳು ನಮ್ಮ ಗಮನಕ್ಕೆ ಬರುವ ಕಾರಣದಿಂದ ನಾವು ಸೂಕ್ತ ವಸ್ತ್ರಗಳನ್ನು ಧರಿಸುವ ಮೂಲಕ ವಾತಾವರಣಕ್ಕೆ ಹೊಂದಿಕೊಳ್ಳುತ್ತೇವೆ. ಮನುಷ್ಯನು ಸಸ್ತನಿಗಳ ವರ್ಗಕ್ಕೆ ಬರುವ ಜೀವಿಯಾದುದರಿಂದ ಸಸ್ತನಿಗಳು ದೇಹದ ತಾಪಮಾನವನ್ನು ಸೂಕ್ತ ರೀತಿಯಲ್ಲಿ ನಿಯಂತ್ರಿಸುತ್ತವೆ. ಸರೀಸೃಪಗಳು ಮತ್ತು ಉಭಯಚರಗಳು ತಮ್ಮ ದೇಹದ ತಾಪಮಾನದಲ್ಲಿ ಹೆಚ್ಚು ಬದಲಾವಣೆಗಳಾದರೂ ಅವುಗಳು ಅದಕ್ಕೆ ಹೊಂದಿಕೊಳ್ಳುವುದನ್ನು ಕರಗತ ಮಾಡಿಕೊಂಡಿವೆ.

ನಮ್ಮ ದೇಹದೊಳಗಡೆ ಯಾವುದೇ ಕೀಟಾಣುವಿನ ಪ್ರವೇಶವಾದಾಗ ಅದರ ವಿರುದ್ಧ ನಮ್ಮ ದೇಹದ ವಿವಿಧ ಕಣಗಳು ಪ್ರತಿಕ್ರಿಯೆ ನೀಡುತ್ತವೆ. ದೇಹದ ರೋಗನಿರೋಧಕ ಕಣಗಳು ಜಾಗೃತವಾಗುತ್ತವೆ. ದೇಹದ ತಾಪಮಾನವನ್ನು ನಿಯಂತ್ರಿಸುವ 'ಹೈಪೋಥೆಲಾಮಸ್' ಎಂಬ ಮಿದುಳಿನ ಭಾಗದ ಮೇಲೆ ದೇಹದಲ್ಲಿ ಉತ್ಪತ್ತಿಯಾದ 'ಪ್ರೋಸ್ಟಾಗ್ಲಾಂಡಿನ್' ಸ್ಥಳೀಯ ಹಾರ್ಮೋನಿನ ರೀತಿ ಕೆಲಸಮಾಡುತ್ತದೆ. ಈ ಪ್ರೋಸ್ಟಾಗ್ಲಾಂಡಿನ್ ಕಣಗಳು ಹೈಪೋಥೆಲಾಮಸ್ ಅಂಗದಲ್ಲಿ ದೇಹದ ತಾಪಮಾನದ ನಿಗದಿತ ಮಟ್ಟವನ್ನು ಏರಿಸುವ ಕೆಲಸವನ್ನು ಮಾಡುತ್ತದೆ. ಹೈಪೋಥೆಲಾಮಸಿನಲ್ಲಿ ನಿಗದಿಯಾಗುವ ತಾಪಮಾನವನ್ನು ದೇಹವು ಅನುಸರಿಸುವ ಕಾರಣದಿಂದ ಇಡೀ ದೇಹದ ತಾಪಮಾನವು ಹೈಪೋಥೆಲಾಮಸ್‌ನಲ್ಲಿ ಎಷ್ಟು ಏರಿದೆಯೊ, ಅಷ್ಟೆ ಪ್ರಮಾಣದಲ್ಲಿ ಏರುತ್ತದೆ. ದೇಹದ ಈ ನೈಸರ್ಗಿಕ ಪ್ರತಿಕ್ರಿಯೆಯನ್ನು ನಾವು 'ಜ್ವರ' ಎಂದು ಕರೆಯುತ್ತೇವೆ.

ಮಾನವನ ವಿಕಾಸದಲ್ಲಿ ಈ ಜ್ವರ ಕೂಡ ಅಪಾಯಕ್ಕೆ ಹೊಂದಿಕೊಂಡು ಅದರಲ್ಲಿ ಮೇಲುಗೈ ಪಡೆಯುವ ಒಂದು ಕಾರ್ಯವಿಧಾನವಾಗಿದೆ. ತೀವ್ರ ರೀತಿಯಲ್ಲಿ ಅಸ್ವಸ್ಥವಾದ ದೇಹ ಮತ್ತು ನವಜಾತ ಶಿಶುಗಳ ದೇಹಗಳು ಜ್ವರದ ಪ್ರತಿಕ್ರಿಯೆಯನ್ನು ನೀಡಲು ಸಶಕ್ತವಾಗಿರುವುದಿಲ್ಲ. ಜ್ವರ ಬಂದಾಗ ನಾವು ನಮ್ಮ ಹೃದಯದ ಬಡಿತ, ಉಸಿರಾಟ ಮುಂತಾದ ನೈಸರ್ಗಿಕ ಕ್ರಿಯೆಗಳು ಹೆಚ್ಚು ವೇಗವಾಗುವುದನ್ನು ಗಮನಿಸಿರಬಹುದು. ದೇಹದ ತಾಪಮಾನವು ಜ್ವರದ ಸಮಯದಲ್ಲಿ ಹೆಚ್ಚಾಗಿರುವುದು ದೇಹದ ರೋಗನಿರೋಧಕ ಶಕ್ತಿಗೆ ಸಹಾಯವಾಗುತ್ತದೆ. ಹೆಚ್ಚಿನ ತಾಪಮಾನದಲ್ಲಿ ದೇಹದ ವಿವಿಧ ರೋಗ ನಿರೋಧಕ ಕಣಗಳು ಕೀಟಾಣುಗಳ ವಿರುದ್ಧ ಹೆಚ್ಚು ಸಮರ್ಥವಾಗಿ ಹೋರಾಡುತ್ತವೆ.

ನಮ್ಮ ದೇಹದೊಳಗೆ ಸೇರಿಕೊಂಡಿರುವ ವಿವಿಧ ಬ್ಯಾಕ್ಟೀರಿಯಾ ಅಥವಾ ವೈರಸ್‌ಗಳು ಉತ್ಪಾದನೆ ಮಾಡುವ ಜ್ವರದ ಪ್ರಮಾಣ ಮತ್ತು ಅವುಗಳ ಪುನರಾವರ್ತನೆಯ ಸಮಯವು ಆಯಾ ಕೀಟಾಣುವಿನ ಗುಣಲಕ್ಷಣಕ್ಕೆ ಅನುಗುಣವಾಗಿ ವಿಭಿನ್ನವಾಗಿರುತ್ತವೆ. ಜ್ವರಗಳ ತೀವ್ರತೆ ಮತ್ತು ಅವುಗಳ ಪುನರಾವರ್ತನೆಯ ಸಮಯದ ಆಧಾರದಲ್ಲಿ ರೋಗಗಳನ್ನು ಅಂದಾಜಿಸಬಹುದಾಗಿದೆ.

ಹೆಚ್ಚಿನ ಜ್ವರಗಳ ಪ್ರಮಾಣವನ್ನು 'ಪ್ಯಾರಾಸೆಟಮಾಲ್' ಮುಂತಾದ ಔಷಧಿಗಳು ಕಡಿಮೆ ಮಾಡಿ ರೋಗಿಯ ಅನನುಕೂಲತೆಯನ್ನು ಶಮನ ಮಾಡಬಲ್ಲವು. ಕೆಲವು ಸಂದರ್ಭಗಳಲ್ಲಿ ಜ್ವರವು ತನ್ನ ಪಾಡಿಗೆ ತಾನೇ ಅಥವಾ ಔಷಧಿಗಳ ಸಹಾಯದಿಂದ ಶಮನವಾಗದೆ ಇದ್ದಲ್ಲಿ ಅವು ದೇಹದ ಅಂಗಾಂಗಗಳ ಕೆಲಸಕಾರ್ಯದ ಮೇಲೆ ದುಷ್ಪರಿಣಾಮವನ್ನು ಬೀರಬಲ್ಲವು. ಜ್ವರವು ಕೇವಲ ಕೀಟಾಣುಗಳ ಕಾರಣಗಳಿಂದ ಮಾತ್ರ ಬರುವುದಿಲ್ಲ. ಜ್ವರವು ಕೆಲವು ವಾರಗಳ ತನಕ ಮುಂದುವರಿದಲ್ಲಿ ಕ್ಷಯರೋಗ, ಕ್ಯಾನ್ಸರ್ ಅಥವಾ ಅಟೋಇಮ್ಯೂನ್ ಕಾಯಿಲೆಗಳಿರುವ ಬಗ್ಗೆ ಶಂಕೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಐದು ವರ್ಷಗಳ ಕೆಳಗಿನ ಕೆಲವು ಮಕ್ಕಳಲ್ಲಿ ಜ್ವರವು ನಿಯಂತ್ರಣಕ್ಕೆ ಬರದಿದ್ದಾಗ ಅವರಲ್ಲಿ ಮೂರ್ಛೆರೋಗವು ಕಾಣಿಸಿಕೊಂಡು ಹೆತ್ತವರ ಆತಂಕವನ್ನು ಅದು ಹೆಚ್ಚಿಸಬಹುದು. ಆದರೆ, ಇದರಿಂದಾಗಿ ಮಗುವಿನಲ್ಲಿ ಯಾವುದೇ ದೀರ್ಘಕಾಲದ ಸಮಸ್ಯೆಗಳು ಉಂಟಾಗುವುದಿಲ್ಲ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.1

4. ಮುಂದೆ ನೀಡಿದವುಗಳಲ್ಲಿ ಯಾವ ರೇಖಾತ್ಮಕ ಸಮೀಕರಣಗಳ ಜೋಡಿಗಳು ಸ್ಥಿರವಾಗಿವೆ/ಅಸ್ಥಿರವಾಗಿವೆ? ಸ್ಥಿರವಾಗಿದ್ದರೆ, ನಕ್ಷಾಕ್ರಮದಿಂದ ಪರಿಹಾರವನ್ನು ಪಡೆಯಿರಿ

(i) $x + y = 5$, $2x + 2y = 10$
(ii) $x - y = 8$, $3x - 3y = 16$
(iii) $2x + y - 6 = 0$, $4x - 2y - 4 = 0$
(iv) $2x - 2y - 2 = 0$, $4x - 4y - 5 = 0$

ಪರಿಹಾರ:–

(i) $x + y = 5$ ಮತ್ತು $2x + 2y = 10$ ದತ್ತ

$(a_1/a_2) = 1/2$
$(b_1/b_2) = 1/2$
$(c_1/c_2) = 1/2$
$\therefore (a_1/a_2) = (b_1/b_2) = (c_1/c_2)$

ಆದ್ದರಿಂದ ದತ್ತ ಸಮೀಕರಣಗಳ ಜೋಡಿಗೆ ಅಪರಿಮಿತ ಸಂಖ್ಯೆಯ ಪರಿಹಾರಗಳಿವೆ, ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ.

$x + y = 5$ ಅಥವಾ $x = 5 - y$

x	4	3	2
y	1	2	3

$2x + 2y = 10$ ಅಥವಾ $x = (10-2y)/2$

x	4	3	2
y	1	2	3

ಸಮೀಕರಣಗಳನ್ನು ಜೋಡಿಗೆ ಈ ರೀತಿ ನಕ್ಷೆಯಲ್ಲಿ ತೋರಿಸಬಹುದಾಗಿದೆ



ಸಮೀಕರಣಗಳನ್ನು ಪ್ರತಿನಿಧಿಸುವ ಎರಡು ಸರಳರೇಖೆಗಳು ಐಕ್ಯಗೊಂಡಿವೆ ಎಂಬುದನ್ನು ನಕ್ಷೆಯಲ್ಲಿ ಕಾಣಬಹುದು ಆದ್ದರಿಂದ ದತ್ತ ಸಮೀಕರಣಗಳ ಜೋಡಿಗೆ ಅಪರಿಮಿತ ಪರಿಹಾರಗಳಿವೆ.

(ii) Given, $x - y = 8$ and $3x - 3y = 16$

$(a_1/a_2) = 1/3$
$(b_1/b_2) = -1/-3 = 1/3$
$(c_1/c_2) = 8/16 = 1/2$
$\therefore (a_1/a_2) = (b_1/b_2) \neq (c_1/c_2)$

ಆದ್ದರಿಂದ ದತ್ತ ಸಮೀಕರಣಗಳು ಪರಸ್ಪರ ಸಮಾಂತರವಾಗಿವೆ, ದತ್ತ ರೇಖಾತ್ಮಕ ಸಮೀಕರಣದ ಜೋಡಿಗೆ ಪರಿಹಾರವಿಲ್ಲ ಆದ್ದರಿಂದ ರೇಖಾತ್ಮಕ ಸಮೀಕರಣದ ಜೋಡಿಯು ಅಸ್ಥಿರವಾಗಿದೆ

(iii) $2x + y - 6 = 0$ ಮತ್ತು $4x - 2y - 4 = 0$ ದತ್ತ

$(a_1/a_2) = 2/4 = ½$
$(b_1/b_2) = 1/-2$
$(c_1/c_2) = -6/-4 = 3/2$
$\therefore (a_1/a_2) \neq (b_1/b_2)$

ಆದ್ದರಿಂದ ದತ್ತ ಸಮೀಕರಣದ ಜೋಡಿಗೆ ಒಂದೇ ಒಂದು ಪರಿಹಾರವಿದೆ. ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಯು ಸ್ಥಿರವಾಗಿದೆ.

$2x + y - 6 = 0$ ಅಥವಾ $y = 6 - 2x$

x	0	1	2
y	6	4	2

ಮತ್ತು $4x - 2y - 4 = 0$ ಅಥವಾ $y = (4x-4)/2$

x	1	2	3
y	0	2	4

ಸಮೀಕರಣಗಳನ್ನು ಜೋಡಿಗೆ ಈ ರೀತಿ ನಕ್ಷೆಯಲ್ಲಿ ತೋರಿಸಬಹುದಾಗಿದೆ



ಸಮೀಕರಣಗಳನ್ನು ಪ್ರತಿನಿಧಿಸುವ ಎರಡು ಸರಳರೇಖೆಗಳು (2, 2) ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತವೆ. ಎಂದು ನಕ್ಷೆಯಿಂದ ನಾವು ಗಮನಿಸಬಹುದು. ಆದ್ದರಿಂದ ದತ್ತ ಸಮೀಕರಣಗಳ ಜೋಡಿಯ ಪರಿಹಾರ (2, 2) ಆಗಿದೆ.

(iv) $2x - 2y - 2 = 0$ ಮತ್ತು $4x - 4y - 5 = 0$ ದತ್ತ

$(a_1/a_2) = 2/4 = ½$
$(b_1/b_2) = -2/-4 = 1/2$
$(c_1/c_2) = 2/5$
$\therefore, a_1/a_2 = b_1/b_2 \neq c_1/c_2$

ಆದ್ದರಿಂದ ದತ್ತ ಸಮೀಕರಣಗಳು ಪರಸ್ಪರ ಸಮಾಂತರವಾಗಿವೆ, ದತ್ತ ರೇಖಾತ್ಮಕ ಸಮೀಕರಣದ ಜೋಡಿಗೆ ಪರಿಹಾರವಿಲ್ಲ ಆದ್ದರಿಂದ ರೇಖಾತ್ಮಕ ಸಮೀಕರಣದ ಜೋಡಿಯು ಅಸ್ಥಿರವಾಗಿದೆ

5. **ಉದ್ದವು ಅಗಲಕ್ಕಿಂತ 4m ಹೆಚ್ಚಾಗಿರುವ ಆಯತಾಕಾರದ ಒಂದು ಹೂದೋಟದ ಸುತ್ತಳತೆಯ ಅರ್ಧವು 36m. ಹೂದೋಟದ ಅಳತೆಗಳನ್ನು ಕಂಡುಹಿಡಿಯಿರಿ**

ಪರಿಹಾರ::ಹೂದೋಟದ ಉದ್ದವು x ಮತ್ತು ಅದರ ಅಗಲವು y ಆಗಿರಲಿ

ಆಗ ಆಯತಾಕರದ ಹೂದೋಟದ ಸುತ್ತಳತೆ=2(ಉದ್ದ+ಅಗಲ)=2(x+ y)

ಆದ್ದರಿಂದ ಸುತ್ತಳತೆಯ ಅರ್ಧ= (x + y)m

ಆದರೆ ಸುತ್ತಳತೆಯ ಅರ್ಧ= 36 m ದತ್ತ

$(x + y)= 36$……………………(1)

ಹೂದೋಟದ ಉದ್ದ= 4+ ಹೂದೋಟದ ಅಗಲ

$x = y + 4 \Rightarrow x - y = 4$………(2)

ಈಗ

$y - x = 4$ ಮತ್ತು $y + x = 36$

ಮೊದಲಿಗೆ $y - x = 4$ ಅಥವಾ $y = x + 4$

x	0	8	12
y	4	12	16

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

DETERMINANTS

1. The cost of 4 kg. onion, 3 kg. wheat and 2 kg. rice is Rs. 60. The cost of 2 kg. onion, 4 kg. wheat and 6 kg. rice is Rs. 90. The cost of 6 kg. onion, 2 kg. wheat and 3 kg. rice is Rs.70. Find cost of each item per kg. by matrix method.

A shopkeeper wants to purchase carry bags. Which carry bag you will not suggest to buy and why?

Soln: (……….Contd)

$$A^{-1} = \frac{1}{|A|}\text{adj. }A$$

$$= \frac{1}{50}\begin{bmatrix} 0 & -5 & 10 \\ 30 & 0 & -20 \\ -20 & 10 & 10 \end{bmatrix}$$

Now, $AX = B \Rightarrow X = A^{1}B$

$$\Rightarrow \begin{bmatrix} x \\ y \\ z \end{bmatrix} = \frac{1}{50}\begin{bmatrix} 0 & -5 & 10 \\ 30 & 0 & -20 \\ -20 & -10 & 10 \end{bmatrix}\begin{bmatrix} 60 \\ 90 \\ 70 \end{bmatrix}$$

$$= \frac{1}{50}\begin{bmatrix} 0-450+700 \\ 1800+0-1400 \\ -1200+900+700 \end{bmatrix} = \frac{1}{50}\begin{bmatrix} 250 \\ 400 \\ 400 \end{bmatrix}$$

$$\Rightarrow \begin{bmatrix} x \\ y \\ z \end{bmatrix} = \begin{bmatrix} 5 \\ 8 \\ 8 \end{bmatrix};$$

$\therefore x = 5, y = 8$ and $z = 8$.

Cost of onion per kg. = Rs. 5
Cost of wheat per kg. = Rs. 8
Cost of rice per kg. = Rs. 8

b) Shopkeeper should not purchase polythene carry bags as it pollutes our environment. Also polythene carry bags contains toxic chemicals which are harmful to our health.

2. In a survey of 20 richest person of three residential society A, B, C it is found that in society A, 5 believes in honesty, 10 in hard work, 5 in unfair means while in B, 5 in honesty, 8 in hard in work , 7 in unfair means and in C, 6 in honesty, 8 in hard work, 6 in unfair means. If the per day income of 20 richest persons of society A, B, C are Rs. 32,500; 30,500; 31,000 respectively, then find the per day income of each type of people by matrix method.

(i) Which type of people has more per day income.

(ii) According to you, which type of person is better for country?

Soln:- Let x, y, z be the per day income of person believing in **honesty, hard work and unfair means**, respectively. The given situation can be written in matrix from as AX = B, where

$$A = \begin{bmatrix} 5 & 10 & 5 \\ 5 & 8 & 7 \\ 6 & 8 & 6 \end{bmatrix}, X = \begin{bmatrix} x \\ y \\ z \end{bmatrix}, B = \begin{bmatrix} 32500 \\ 30500 \\ 31000 \end{bmatrix}$$

$\therefore AX = B \Rightarrow X = A^{-1}B$ ....(i)

Now for A^{-1}

$$|A| = \begin{vmatrix} 5 & 10 & 5 \\ 5 & 8 & 7 \\ 6 & 8 & 6 \end{vmatrix}$$

$= 5(48-56) - 10(30-42) + 5(40-48)$

$= 40 \neq 0$

$\therefore A^{1}$ exists *i.e.* A is non-singular

Also, $C_{11} = (-1)^{1+1}\begin{vmatrix} 8 & 7 \\ 8 & 6 \end{vmatrix} = (48-56) = -8$

$C_{12} = (-1)^{1+2}\begin{vmatrix} 5 & 7 \\ 6 & 6 \end{vmatrix} = -(30-42) = 12$

$C_{13} = (-1)^{1+3}\begin{vmatrix} 5 & 8 \\ 6 & 8 \end{vmatrix} = (40-48) = -8$

$C_{21} = (-1)^{2+1}\begin{vmatrix} 10 & 5 \\ 8 & 6 \end{vmatrix} = -(60-40) = -20$

$C_{22} = (-1)^{2+2}\begin{vmatrix} 5 & 5 \\ 6 & 6 \end{vmatrix} = (30-30) = -0$

$C_{23} = (-1)^{2+3}\begin{vmatrix} 5 & 10 \\ 6 & 8 \end{vmatrix} = -(40-60) = 20$

$C_{31} = (-1)^{3+1}\begin{vmatrix} 10 & 5 \\ 8 & 7 \end{vmatrix} = (70-40) = 30$

$C_{32} = (-1)^{3+2}\begin{vmatrix} 5 & 5 \\ 5 & 7 \end{vmatrix} = -(35-25) = -10$

$C_{33} = (-1)^{3+3}\begin{vmatrix} 5 & 10 \\ 5 & 8 \end{vmatrix} = -(40-50) = 10$

$$\text{Adj.}(A) = \begin{bmatrix} -8 & -20 & 30 \\ 12 & 0 & -10 \\ -8 & 20 & -10 \end{bmatrix}$$

$$A^{-1} = \frac{\text{adj.}(A)}{|A|}$$

$$= \begin{bmatrix} \frac{-8}{40} & \frac{-20}{40} & \frac{30}{40} \\ \frac{12}{40} & 0 & \frac{-1}{4} \\ \frac{-8}{40} & \frac{20}{40} & \frac{-10}{40} \end{bmatrix} = \begin{bmatrix} \frac{-1}{5} & \frac{-1}{2} & \frac{3}{4} \\ \frac{3}{10} & 0 & \frac{-10}{40} \\ \frac{-1}{5} & \frac{1}{2} & \frac{-1}{4} \end{bmatrix}$$

Putting the value of X, A^{-1}, B in (1), we get

$$\begin{bmatrix} x \\ y \\ z \end{bmatrix} = \begin{bmatrix} \frac{-1}{5} & \frac{-1}{2} & \frac{3}{4} \\ \frac{3}{10} & 0 & \frac{-1}{4} \\ \frac{-1}{5} & \frac{1}{2} & \frac{-1}{4} \end{bmatrix} \cdot \begin{bmatrix} 32500 \\ 30500 \\ 31000 \end{bmatrix}$$

Contd / –

ಅಮಿಕಸ್ ಕ್ಯೂರಿಯ ನೇಮಕ

ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟ ಘಟನೆ • ಸುಶೀಲಾ ನೇಮಕ

ಪ್ರಜಾವಾಣಿ ವಾರ್ತೆ

ಎಸ್‌.ಸುಶೀಲಾ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್‌ ದಾಖಲಿಸಿಕೊಂಡಿರುವ ಪ್ರಕರಣದಲ್ಲಿ ಪದಾಂಕಿತ ಹಿರಿಯ ವಕೀಲೆ ಎಸ್‌.ಸುಶೀಲಾ ಅವರನ್ನು ಅಮಿಕಸ್‌ ಕ್ಯೂರಿಯನ್ನಾಗಿ ನೇಮಕ ಮಾಡಲಾಗಿದೆ.

ಕಾಲ್ತುಳಿತ ಘಟನೆಯ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್‌ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ಮುಂದುವರಿಸಿತು.

‘ರಾಜ್ಯ ಸರ್ಕಾರ ಮುಚ್ಚಿದ ಲಕೋಟೆಯಲ್ಲಿ ಈಗಾಗಲೇ ನ್ಯಾಯಾಲಯಕ್ಕೆ ಸಲ್ಲಿಸಿರುವ ವಸ್ತುಸ್ಥಿತಿ ವರದಿಗಳು, ರಿಟ್‌ ಅರ್ಜಿ, ಮಧ್ಯಪ್ರವೇಶ ಸೇರ್ಪಡೆ ಕೋರಿಕೆಯ ಅರ್ಜಿಗಳನ್ನು ಅಮಿಕಸ್‌ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲರು) ಸುಶೀಲಾ ಅವರಿಗೆ ರಿಜಿಸ್ಟ್ರಿಯು ಎರಡು ದಿನಗಳಲ್ಲಿ ಪೂರೈಸಬೇಕು’ ಎಂದು ನ್ಯಾಯಪೀಠ ಆದೇಶಿಸಿತು.

‘ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ವಸ್ತುಸ್ಥಿತಿ ವರದಿಗಳನ್ನು ಬಹಿರಂಗಗೊಳಿಸಬೇಕು ಎಂದು ಮಧ್ಯಪ್ರವೇಶ ಸೇರ್ಪಡೆ ಕೋರಿಕೆಯ ಅರ್ಜಿದಾರರು ಪ್ರತಿಪಾದಿಸಿದ್ದಾರೆ. ಈ ವಿಚಾರದಲ್ಲಿ ಅಮಿಕಸ್‌ ಕ್ಯೂರಿ ನೆರವು ನೀಡಬೇಕು. ಕಾಲ್ತುಳಿತದಲ್ಲಿ ಮೃತಪಟ್ಟವರಿಗೆ ಪರಿಹಾರ ನೀಡುವುದೂ ಸೇರಿದಂತೆ ಜೂನ್‌ 4ರಂದು ನ್ಯಾಯಪೀಠ ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸಲು ಸಹಕರಿಸಬೇಕು’ ಎಂದು ಅಮಿಕಸ್‌ ಕ್ಯೂರಿ ಅವರಿಗೆ ನಿರ್ದೇಶಿಸಿತು.

ಈ ಹಿಂದಿನ ವಿಚಾರಣೆ ವೇಳೆ ಕರ್ನಾಟಕ ರಾಜ್ಯ ಕ್ರಿಕೆಟ್‌ ಸಂಸ್ಥೆ (ಕೆಎಸ್‌ಸಿಎ), ಆರ್‌ಸಿಬಿ ಮತ್ತು ಈವೆಂಟ್‌ ಮ್ಯಾನೇಜ್‌ ಮೆಂಟ್‌ ಸಂಸ್ಥೆ ಡಿಎನ್‌ಎಗಳಿಗೆ ನೋಟಿಸ್‌ ಜಾರಿಗೆ ನ್ಯಾಯಪೀಠ ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಕೆಎಸ್‌ಸಿಎ ಪರ ಪದಾಂಕಿತ ಹಿರಿಯ ವಕೀಲ ಎಂ.ಎಸ್‌.ಶ್ಯಾಮ್‌ಸುಂದರ್‌, ಆರ್‌ಸಿಬಿ ಪರ ಪದಾಂಕಿತ ಹಿರಿಯ ವಕೀಲ ಸಿ.ಕೆ.ನಂದಕುಮಾರ್‌, ಡಿಎನ್‌ಎ ಪರ ಪದಾಂಕಿತ ಹಿರಿಯ ವಕೀಲ ಬಿ.ಕೆ.ಸಂಪತ್‌ ಕುಮಾರ್‌ ಹಾಜರಾಗಿದ್ದರು.

ಕಾಲ್ತುಳಿತದಲ್ಲಿ ಮೃತಪಟ್ಟ 19 ವರ್ಷದ ವಿದ್ಯಾರ್ಥಿ ಜಿ.ಪ್ರಜ್ವಲ್‌ ಅವರ ತಂದೆಯ ಪರವಾಗಿ ಪದಾಂಕಿತ ಹಿರಿಯ ವಕೀಲ ಎಸ್‌.ಎಸ್‌.ನಾಗಾನಂದ ಅವರು, ‘ಸಂತ್ರಸ್ತರಿಗೆ ಸರ್ಕಾರ ಘೋಷಿಸಿರುವ ಪರಿಹಾರವನ್ನು ತುರ್ತಾಗಿ ಬಿಡುಗಡೆ ಮಾಡಲು ಆದೇಶಿಸಬೇಕು’ ಎಂದು ಮನವಿ ಮಾಡಿದರು.

ಮತ್ತೊಬ್ಬ ವಕೀಲ ರಮೇಶ್‌ ನಾಯಕ್‌, ‘ಸಂತ್ರಸ್ತರಿಗೆ ನೀಡಲಾಗುವ ಪರಿಹಾರ ಮೊತ್ತದ ಕುರಿತಂತೆ ಮಾರ್ಗಸೂಚಿ ರೂಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿದರು. ಮಧ್ಯಂತರ ಅರ್ಜಿದಾರರಲ್ಲಿ, ಇಬ್ಬರು ಪತ್ರಕರ್ತರ ಪರವಾಗಿ ಪದಾಂಕಿತ ಹಿರಿಯ ವಕೀಲ ಎಂ.ಬಿ.ನರಗುಂದ, ಮಾಜಿ ಶಾಸಕ ಮೋಹನ ಕುಮಾರ್‌ ಕೊಂಡಜ್ಜಿ ಪರವಾಗಿ ಪದಾಂಕಿತ ಹಿರಿಯ ವಕೀಲ ಕೆ.ದಿವಾಕರ್‌ ಹಾಗೂ ಮಾರ್ಗಸೂಚಿ ರೂಪಿಸುವ ಮತ್ತು ಈ ಹಿಂದಿನ ಹೈಕೋರ್ಟ್‌ ಆದೇಶಗಳು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೋರಲಾದ ಅರ್ಜಿಗಳಲ್ಲಿ ಎನ್‌.ಪಿ.ಅಮೃತೇಶ್‌, ಜಿ.ಆರ್‌.ಮೋಹನ್‌ ಹಾಜರಿದ್ದರು.

‘ಮಧ್ಯಂತರ ಅರ್ಜಿದಾರರ ಮನವಿಗೆ ಸಂಬಂಧಿಸಿದಂತೆ ಸದ್ಯಕ್ಕೆ ಯಾವುದೇ ಆದೇಶ ಹೊರಡಿಸುವುದಿಲ್ಲ’ ಎಂದು ಮೌಖಿಕವಾಗಿ ನುಡಿದ ನ್ಯಾಯಪೀಠ ವಿಚಾರಣೆಯನ್ನು ಜುಲೈ 1ಕ್ಕೆ ಮುಂದೂಡಿತು.

ಪೊಲೀಸ್, ವೈದ್ಯರ ವಿಚಾರಣೆ

ಬೆಂಗಳೂರು ರಾಯಲ್‌ ಚಾಲೆಂಜರ್ಸ್‌ (ಆರ್‌ಸಿಬಿ) ತಂಡದ ವಿಜಯೋತ್ಸವದ ವೇಳೆ ಎಂ.ಚಿನ್ನಸ್ವಾಮಿ ಕ್ರೀಡಾಂಗದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್‌ ನೇತೃತ್ವದಲ್ಲಿ ನಡೆಯುತ್ತಿರುವ ಮ್ಯಾಜಿಸ್ಟೀರಿಯಲ್‌ ತನಿಖೆ ಚುರುಕುಗೊಂಡಿದ್ದು, ಪೊಲೀಸ್‌ ಅಧಿಕಾರಿಗಳು ಹಾಗೂ ವೈದ್ಯರನ್ನು ಸೋಮವಾರ ವಿಚಾರಣೆ ನಡೆಸಲಾಯಿತು.

ಕೇಂದ್ರ ವಲಯದ ಡಿಸಿಪಿಯಾಗಿದ್ದ ಶೇಖರ್‌ ಟೆಕ್ಕಣನವರ, ಕಬ್ಬನ್‌ ಪಾರ್ಕ್‌ ಠಾಣೆಯ ಇನ್‌ಸ್ಪೆಕ್ಟರ್‌ ಆಗಿದ್ದ ಗಿರೀಶ್‌, ಡಿಎನ್‌ಎ ಮ್ಯಾನೇಜ್‌ಮೆಂಟ್‌ (ಇ-ವೆಂಟ್‌) ಸಿಬ್ಬಂದಿ ಸುನಿಲ್‌ ಮ್ಯಾಥ್ಯು ಹಾಗೂ ಕಾಲ್ತುಳಿತದಿಂದ ಮೃತಪಟ್ಟ 11 ಮಂದಿಯ ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರು, ತನಿಖಾ ತಂಡದ ಎದುರು ವಿಚಾರಣೆಗೆ ಹಾಜರಾಗಿ ತಮ್ಮ ಹೇಳಿಕೆ ದಾಖಲಿಸಿದರು. ತನಿಖಾ ತಂಡವು ಹೇಳಿಕೆಯನ್ನು ವಿಡಿಯೊ ರೆಕಾರ್ಡ್‌ ಮಾಡಿಕೊಂಡಿತು ಎಂದು ಗೊತ್ತಾಗಿದೆ.

ಕಂದಾಯ ಭವನದಲ್ಲಿ ವಿಚಾರಣೆಗೆ ಪ್ರತ್ಯೇಕ ಕಚೇರಿ ತೆರೆಯಲಾಗಿದ್ದು, ಅಲ್ಲಿಗೆ ಬಂದ ಅಧಿಕಾರಿಗಳಿಗೆ ತನಿಖಾಧಿಕಾರಿ ಕೆಲವು ಪ್ರಶ್ನೆಗಳನ್ನು ಕೇಳಿದರು.

ವಿಜಯೋತ್ಸವಕ್ಕೆ ಪೊಲೀಸ್‌ ಇಲಾಖೆ ಅನುಮತಿ ನೀಡಿತ್ತೇ? ಅನುಮತಿ ನೀಡುವಂತೆ ಯಾರಾದರೂ ಒತ್ತಡ ಹೇರಿದ್ದರೆ? ಭದ್ರತೆಗೆ ಎಷ್ಟು ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿತ್ತು ಎಂಬ ಪ್ರಶ್ನೆಗಳನ್ನು ಕೇಳಿ ಹೇಳಿಕೆ ದಾಖಲು ಮಾಡಿಕೊಳ್ಳಲಾಯಿತು ಎಂದು ಮೂಲಗಳು ತಿಳಿಸಿವೆ.

ಕಾಲ್ತುಳಿತ ದುರಂತದಲ್ಲಿ 11 ಮಂದಿ ಉಸಿರುಗಟ್ಟಿಯೇ ಸಾವಿಗೀಡಾಗಿದ್ದರು. ಕೆಲವರ ದೇಹದಲ್ಲಿ ಮೂಳೆಗಳು ಮುರಿದ್ದವು ಎಂಬುದಾಗಿ ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರು ವರದಿ ಸಲ್ಲಿಸಿದ್ದರು. ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರೂ ಸೋಮವಾರ ವಿಚಾರಣೆಗೆ ಹಾಜರಾಗಿ ತಮ್ಮ ಹೇಳಿಕೆ ದಾಖಲಿಸಿದ್ದರು ಎಂದು ಗೊತ್ತಾಗಿದೆ.

ಅಗತ್ಯಬಿದ್ದರೆ ಮತ್ತೊಮ್ಮೆ ವಿಚಾರಣೆಗೆ ಕರೆಯಲಾಗುವುದು ಎಂದು ತನಿಖಾ ತಂಡವು ಎಲ್ಲರಿಗೂ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ನಗರ ಕಮಿಷನರ್‌ ಆಗಿದ್ದ ಬಿ.ದಯಾನಂದ ಸೇರಿದಂತೆ ಕೆಲವರು ವಿಚಾರಣೆಗೆ ಗೈರಾಗಿದ್ದರು.



ನಗರದಲ್ಲಿ ಸಮರ್ಥನಂ ಟ್ರಸ್ಟ್ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮವನ್ನು ಆದರ್ಶ್ ಶಾಸ್ತ್ರಿ ಉದ್ಘಾಟಿಸಿದರು. ಆರ್‌.ರವಿಚಂದರ್, ಅಶ್ವತ್ಥನಾರಾಯಣ್ ಇದ್ದಾರೆ

ಸಮರ್ಥನಂ ಟ್ರಸ್ಟ್: ಸಂಗೀತ ರಸ ಸಂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನದಲ್ಲಿ ಸಮರ್ಥನಂ ಟ್ರಸ್ಟ್ ಆಯೋಜಿಸಿದ್ದ ಸಹೋದರಿಯರ ಸಂಗೀತ ರಸ ಸಂಜೆಗೆ ಪ್ರೇಕ್ಷಕರು ತಲೆದೂಗಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಮೊಮ್ಮಗ, ಮಾಜಿ ಶಾಸಕ ಆದರ್ಶ್ ಶಾಸ್ತ್ರಿ ಮತ್ತು ಶಾಸಕ ಅಶ್ವತ್ಥನಾರಾಯಣ್ ಅವರು ಸಮರ್ಥನಂ ಟ್ರಸ್ಟ್‌ನ ಸಾಮಾಜಿಕ ಕಾರ್ಯಕ್ರಮದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್, ಸಂಗೀತ ನಿರ್ದೇಶಕ ವಿ. ಹರಿಕೃಷ್ಣ ಮತ್ತು ಆರ್. ಪಿ.ಪಟ್ನಾಯಕ್ ಭಾಗವಹಿಸಿದ್ದರು.

ನಂದನ ಪ್ಯಾಲೆಸ್ ಅಧ್ಯಕ್ಷ ಆರ್. ರವಿಚಂದರ್ ಮಾತನಾಡಿ, ಅಂಧ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಮಾಡುತ್ತಿರುವ ಈ ಕಾರ್ಯಕ್ರಮದಲ್ಲಿ ಸಾವಿರಾರು ಜನರು ಭಾಗವಹಿಸಿರುವುದು ಸಂತಸದ ವಿಚಾರ ಎಂದರು.

ಕಾಡುಗೋಡಿ: 120 ಎಕರೆ ಅರಣ್ಯ ಭೂಮಿ ಮರುವಶ

ಬೆಂಗಳೂರು: ಕಾಡುಗೋಡಿಯಲ್ಲಿ ಒತ್ತುವರಿಯಾಗಿದ್ದ 120 ಎಕರೆ ಅರಣ್ಯ ಭೂಮಿಯನ್ನು ಅರಣ್ಯ ಅಧಿಕಾರಿಗಳು ಪೊಲೀಸರ ನೆರವಿನೊಂದಿಗೆ ಸೋಮವಾರ ಮರುವಶಪಡಿಸಿಕೊಂಡಿದ್ದಾರೆ.

ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ, ಕಾಡುಗೋಡಿ ಪ್ಲಾಂಟೇಷನ್‌ನ ಸರ್ವೆ ನಂ.1ರಲ್ಲಿ 120 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವುಗೊಳಿಸಲಾಗಿದೆ. ಪೊಲೀಸ್ ಬಂದೋಬಸ್ತ್‌ನಲ್ಲಿ ಸೋಮವಾರ ಬೆಳಿಗ್ಗೆಯೇ ಜೆಸಿಬಿಯೊಂದಿಗೆ ಅರಣ್ಯ ಇಲಾಖೆ ಅಧಿಕಾರಿಗಳ ತಂಡ ಕಾರ್ಯಾಚರಣೆ ನಡೆಸಿತು. ಒತ್ತುವರಿ ತೆರವು ಮಾಡಿ, ಗಡಿ ಗುರುತಿಸಿ ಸ್ಥಳೀಯ ಪ್ರಭೇದದ ಸಸಿಗಳನ್ನು ನೆಡಲಾಗುತ್ತಿದೆ. ವಶಪಡಿಸಿಕೊಳ್ಳಲಾದ ಅರಣ್ಯ ಭೂಮಿಯ ಮಾರುಕಟ್ಟೆ ಮೌಲ್ಯ ₹4 ಸಾವಿರ ಕೋಟಿಗೂ ಅಧಿಕ ಎಂದು ಅಂದಾಜಿಸಲಾಗಿದೆ. ಕಾಡುಗೋಡಿ ಅರಣ್ಯ ಪ್ರದೇಶ ಕುರಿತಂತೆ ಇತ್ತೀಚೆಗೆ ನಡೆದ ಸಭೆಯಲ್ಲಿ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ, ನಿಯಮಾನುಸಾರ ಅರಣ್ಯ ಭೂಮಿ ಒತ್ತುವರಿ ತೆರವು ಮಾಡಬೇಕು ಎಂದು ಸ್ಪಷ್ಟ ಸೂಚನೆ ನೀಡಿದ್ದರು. ಅದರಂತೆ ಕಾರ್ಯಾಚರಣೆ ನಡೆಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

‘ಅರಣ್ಯ ಸಚಿವನಾಗಿ ಅಧಿಕಾರ ವಹಿಸಿಕೊಂಡ ಎರಡು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಒಟ್ಟು 248 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವುಗೊಳಿಸಲಾಗಿದೆ. ಇದರ ಮಾರುಕಟ್ಟೆ ಮೌಲ್ಯ ₹8 ಸಾವಿರ ಕೋಟಿಗೂ ಅಧಿಕ’ ಎಂದು ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ರಸ್ತೆ ಗುಂಡಿ ಸಮಸ್ಯೆಗೆ ಪರಿಹಾರ

ಪ್ರಮಾಣಪತ್ರ ಸಲ್ಲಿಸಲು ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳ ಸಮಸ್ಯೆಗೆ ಪರಿಹಾರ ಒದಗಿಸುವುದೂ ಸೇರಿದಂತೆ ಸುಗಮ ಪಾದಚಾರಿ ಮಾರ್ಗಗಳನ್ನು ರೂಪಿಸುವ ಹಾಗೂ ವಾಹನಗಳ ಸಂಚಾರಕ್ಕೆ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಅಳವಡಿಸಿಕೊಂಡಿ ರುವ ಕಾರ್ಯವಿಧಾನದ ಕುರಿತು ಸವಿವರವಾದ ಪ್ರಮಾಣಪತ್ರ ಸಲ್ಲಿಸಿ’ ಎಂದು ಹೈಕೋರ್ಟ್‌, ಬೃಹತ್‌ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ನಿರ್ದೇಶಿಸಿದೆ.

ರಸ್ತೆ ಗುಂಡಿಗಳ ಭರ್ತಿ ಮತ್ತು ರಾಜಕಾಲುವೆ ಒತ್ತುವರಿ ತೆರವಿಗೆ ನಿರ್ದೇಶನ ಕೋರಿ ವಿಜಯ್‌ ಮೆನನ್‌ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್‌ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

‘ಈ ಅರ್ಜಿಯನ್ನು 2015ರಲ್ಲೇ ಸಲ್ಲಿಸಲಾಗಿದೆ. ಅರ್ಜಿಗೆ ಸಂಬಂಧಿಸಿದಂತೆ ಸವಿವರವಾದ ಪ್ರಮಾಣಪತ್ರ ಸಲ್ಲಿಸಲು 2024ರ ಸೆಪ್ಟೆಂಬರ್‌ 21ರಲ್ಲಿ ಆದೇಶಿಸಲಾಗಿತ್ತು. ಅಂದಿನ ಆದೇಶದಂತೆ ಬಿಬಿಎಂಪಿ ಸಲ್ಲಿಸಿರುವ ವರದಿಯಲ್ಲಿ ರಸ್ತೆ ಗುಂಡಿಗಳ ಸಮಸ್ಯೆ ನಿಭಾಯಿಸಲು ಇತ್ತೀಚೆಗೆ ಕೈಗೊಂಡ ಕಾರ್ಯವಿಧಾನಗಳ ಕುರಿತು ವಿವರಣೆ ಒದಗಿಸಿಲ್ಲ. ಹೀಗಾಗಿ, ಇತ್ತೀಚಿನ ಕಾರ್ಯವಿಧಾನಗಳ ಕುರಿತಂತೆ ಪ್ರಮಾಣ ಪತ್ರದ ಮೂಲಕ ಸಲ್ಲಿಸಬೇಕು’ ಎಂದು ನ್ಯಾಯಪೀಠ ತಾಕೀತು ಮಾಡಿದೆ.

‘ಮಳೆಗಾಲದ ಸಂದರ್ಭಗಳಲ್ಲಿ ರಸ್ತೆಗಳು ಮತ್ತು ಗುಂಡಿಗಳನ್ನು ದುರಸ್ತಿಗೆ ಕೈಗೆತ್ತಿಕೊಂಡ ಕ್ರಮಗಳ ಕುರಿತಂತೆ ವಾಸ್ತವ ಅಂಶಗಳನ್ನು ಹೊಂದಿರಬೇಕು. ಅಂತೆಯೇ, ಗುಂಡಿಗಳಿಂದ ರಸ್ತೆ ಅಪಘಾತಕ್ಕೆ ಒಳಗಾಗುವ ಸಂತ್ರಸ್ತರಿಗೆ ಪರಿಹಾರ ವಿತರಿಸಿರುವುದು ಹಾಗೂ ಪರಿಹಾರ ಪಾವತಿಗೆ ಸಂಬಂಧಿಸಿದ ಕಾರ್ಯ ವಿಧಾನಗಳ ಕುರಿತು ಅರ್ಜಿಯಲ್ಲಿ ಒಂದು ಮನವಿ ಇದ್ದು, ಇದಕ್ಕೆ ಬಿಬಿಎಂಪಿ ಉತ್ತರಿಸಬೇಕು’ ಎಂದು ವಿವರಿಸಿದೆ. ವಿಚಾರಣೆಯನ್ನು ಜುಲೈ 24ಕ್ಕೆ ಮುಂದೂಡಲಾಗಿದೆ.

ಸಾರಿಗೆ ಸಚಿವರಿಗೆ ಭಾವುಕ ಪತ್ರ ಬರೆದ ಬೈಕ್ ಟ್ಯಾಕ್ಸಿ ಸದಸ್ಯರು

ಕೈಮುಗಿವೆವು... ನಮ್ಮ ಬದುಕು ಉಳಿಸಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೈಕ್ ಟ್ಯಾಕ್ಸಿ ನಮಗೆ ಕೇವಲ ಸಾರಿಗೆ ಸಾಧನವಲ್ಲ. ಅದು ನಮ್ಮ ಅನ್ನ. ಉತ್ತಮ ಭವಿಷ್ಯಕ್ಕಾಗಿ ನಮ್ಮ ಭರವಸೆ. ನಮ್ಮ ಕುಟುಂಬದ ಘನತೆಯನ್ನು ಉಳಿಸುವ ಏಕೈಕ ಮಾರ್ಗ. ಕೈಮುಗಿದು ಎದೆಯಾಳದಿಂದ ನಿಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ. ನಮ್ಮ ಬದುಕು ಉಳಿಸಿ..’

ಗಿಗ್ ಕಾರ್ಮಿಕರಾಗಿರುವ ಬೈಕ್ ಟ್ಯಾಕ್ಸಿ ವೆಲ್‌ಫೇರ್ ಅಸೋಸಿಯೇಷನ್ ಸದಸ್ಯರು ಸಾರಿಗೆ ಸಚಿವ ರಾಮಲಿಂಗಾರೆಡ್ಡಿಗೆ ಭಾವುಕರಾಗಿ ಬರೆದ ಬಹಿರಂಗ ಪತ್ರ ಇದು.

‘ಬೆಳಿಗ್ಗೆ ಮಳೆಯಲ್ಲಿ ನೆನೆಯುತ್ತಾ, ಮಧ್ಯಾಹ್ನ ಬಿಸಿಲಲ್ಲಿ ಬೆವರುತ್ತಾ, ಸಂಜೆ ಮಂದ ಬೆಳಕಿನಲ್ಲಿ ಜನರನ್ನು ಆಸ್ಪತ್ರೆ, ಶಾಲೆ, ಕಚೇರಿ, ಮನೆಗಳಿಗೆ ಕರೆದೊಯ್ಯುತ್ತೇವೆ. ನಮ್ಮಲ್ಲಿ ಹೆಚ್ಚಿನವರು ಸಣ್ಣ ಮನೆಗಳಿಂದ ಬಂದವರು. ಬೆಂಗಳೂರು, ಮೈಸೂರು, ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳಿಂದ ಬಂದ ಯುವಕ, ಯುವತಿಯರು ನಾವು. ಈ ಕೆಲಸದಲ್ಲಿ ನಾವು ಸ್ವಾತಂತ್ರ್ಯ, ವಿನಯ ಮತ್ತು ಗೌರವಗಳಂಥ ಅಮೂಲ್ಯವಾದುವುಗಳನ್ನು ಕಂಡುಕೊಂಡಿದ್ದೇವೆ’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

‘ಬೈಕ್ ಟ್ಯಾಕ್ಸಿ ಓಡಿಸುವ ಕೆಲಸ ನಮ್ಮನ್ನು ಸಬಲರನ್ನಾಗಿ ಮಾಡಿದೆ. ತಿಂಗಳಿಗೆ ₹30,000ದಿಂದ ₹35,000 ಆದಾಯದೊಂದಿಗೆ ನಾವು ನಮ್ಮ ಕಾಲ ಮೇಲೆ ನಿಲ್ಲಲು, ನಮ್ಮ ಮಕ್ಕಳ ಶಿಕ್ಷಣಕ್ಕಾಗಿ ಉಳಿಸಲು, ವೃದ್ಧ ಪೋಷಕರನ್ನು ನೋಡಿಕೊಳ್ಳಲು ಸಾಧ್ಯವಾಗಿದೆ. ನಮ್ಮಲ್ಲಿ ಹಲವರು ನಿರುದ್ಯೋಗಿಗಳಾಗಿದ್ದರು ಇಲ್ಲವೇ ಈ ಕೆಲಸಕ್ಕೆ ಬರುವ ಮೊದಲು ದಿನಗೂಲಿ ಮಾಡುತ್ತಿದ್ದರು. ಸಾರ್ವಜನಿಕರಿಗೆ ಸೇವೆ ನೀಡಲು ನಾವು ಹೆಮ್ಮೆ ಪಡುತ್ತಿದ್ದೇವೆ’ ಎಂದು ವಿವರಿಸಿದ್ದಾರೆ.

‘ನಮ್ಮಲ್ಲಿ ಶೇ 80ರಷ್ಟು ಜನರು ಕನ್ನಡಿಗರೇ ಆಗಿದ್ದಾರೆ. ಯಾರನ್ನೂ ಅವಲಂಬಿಸದೆ ಶ್ರಮಿಸುತ್ತಿರುವ ಈ ರಾಜ್ಯದ ಯುವಜನರ ಕಸುಬು ಇದು. ನಮ್ಮನ್ನು ಹೊರಗೆ ತಳ್ಳುವ ನಿಯಮಗಳನ್ನು ನೋಡಿದರೆ ಗೊಂದಲ ಮಾತ್ರವಲ್ಲ, ಆಘಾತವೂ ಆಗುತ್ತಿದೆ. ಆಹಾರ ಇನ್ನಿತರ ಪದಾರ್ಥಗಳನ್ನು ವಿತರಿಸುವ ಸೇವೆಗಳನ್ನು ನಮ್ಮಂತೆ ದ್ವಿಚಕ್ರ ವಾಹನಗಳಲ್ಲಿ ಅನೇಕರು ನಿರ್ವಹಿಸುತ್ತಿದ್ದಾರೆ. ಅವರಿಗೆ ಮುಕ್ತ ಅನುಮತಿ ಇದೆ. ಘನತೆಯಿಂದ ಗಳಿಸುವ ನಮ್ಮ ಹಕ್ಕನ್ನು ಮಾತ್ರ ಯಾಕೆ ವಿಭಿನ್ನವಾಗಿ ಪರಿಗಣಿಸುತ್ತಿದ್ದೀರಿ’ ಎಂದು ಪ್ರಶ್ನಿಸಿದ್ದಾರೆ.

‘ನಾವು ಯಾವುದೇ ಸಹಾಯವನ್ನು ಕೇಳುತ್ತಿಲ್ಲ. ನಮ್ಮ ಸ್ವಂತ ಜೀವನೋಪಾಯದ ಅವಕಾಶವನ್ನಷ್ಟೇ ಕೇಳುತ್ತಿದ್ದೇವೆ. ಕಾನೂನುಗಳು ಜೀವನೋಪಾಯವನ್ನು ಕಸಿದುಕೊಳ್ಳುವುದಿಲ್ಲ. ಕಾನೂನು ರೂಪಿಸಿ. ಕಾನೂನಿನ ಅಡಿಯಲ್ಲಿ ನ್ಯಾಯಯುತವಾಗಿ ಕೆಲಸ ಮಾಡುತ್ತೇವೆ. ನಂಬಿಕೆ, ಭರವಸೆ ಮತ್ತು ಗೌರವ ಇಟ್ಟುಕೊಂಡು ನಮ್ಮ ಭವಿಷ್ಯವನ್ನು ನಿಮ್ಮ ಕೈಯಲ್ಲಿ ಇಡುತ್ತಿದ್ದೇವೆ. ನಮ್ಮ ಜೀವನೋಪಾಯವನ್ನು ಕಸಿದುಕೊಳ್ಳುವ ಕೆಲಸ ಮಾತ್ರ ಮಾಡಬೇಡಿ’ ಎಂದು ಮನವಿ ಮಾಡಿಕೊಂಡಿದ್ದಾರೆ.

‘ಬೈಕ್–ಟ್ಯಾಕ್ಸಿ ನಿಷೇಧ ತೆರವುಗೊಳಿಸಿ’

ಬೈಕ್ ಟ್ಯಾಕ್ಸಿ ಸೇವೆಯ ಮೇಲೆ ವಿಧಿಸಿರುವ ನಿಷೇಧವನ್ನು ತೆರವುಗೊಳಿಸಬೇಕು ಎಂದು ಅಖಿಲ ಭಾರತ ಅಂಬೇಡ್ಕರ್ ಅಲ್ಪಸಂಖ್ಯಾತರ ವಾಲ್ಮೀಕಿ ಪ್ರಜಾ ಸಮಿತಿ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ಪ್ರಕಾಶ್ ಬಾಬು ಕೆ., ‘ವಿದ್ಯಾರ್ಥಿಗಳು, ದಿನಗೂಲಿ ಮಾಡುವವರು ಸೇರಿದಂತೆ ಸಾವಿರಾರು ಜನ ಜೀವನೋಪಾಯಕ್ಕಾಗಿ ಬೈಕ್ ಟ್ಯಾಕ್ಸಿ ಸೇವೆಯನ್ನು ಅವಲಂಬಿಸಿದ್ದರು. ಆದರೆ ರಾಜ್ಯ ಸರ್ಕಾರ ಬೈಕ್ ಟ್ಯಾಕ್ಸಿ ಸೇವೆಯನ್ನು ನಿಷೇಧಿಸಿದ ಪರಿಣಾಮ ಇವರಿಗೆ ಆರ್ಥಿಕ ಸಂಕಷ್ಟ ಎದುರಾಗಿದೆ’ ಎಂದು ದೂರಿದರು. ‘ರಾಜ್ಯ ಸರ್ಕಾರ ಮೋಟಾರು ವಾಹನ ಕಾಯ್ದೆ 1998ರ ಅಡಿಯಲ್ಲಿ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸಿ, ದ್ವಿಚಕ್ರ ವಾಹನಗಳನ್ನು ಸಾರಿಗೆ ವಾಹನಗಳಾಗಿ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕು. ಈಗಾಗಲೇ ದೇಶದ 18 ರಾಜ್ಯಗಳಲ್ಲಿ ಬೈಕ್ ಟ್ಯಾಕ್ಸಿ ಸೇವೆಗೆ ಅವಕಾಶ ನೀಡಲಾಗಿದೆ. ಅದರಂತೆ ನಮ್ಮ ರಾಜ್ಯದಲ್ಲೂ ಬೈಕ್ ಟ್ಯಾಕ್ಸಿ ಸೇವೆಗೆ ಅನುಮತಿ ನೀಡಬೇಕು’ ಎಂದರು.

ಎಚ್‌ಡಿಕೆ ವಿರುದ್ಧದ ಸರ್ಕಾರಿ ಜಮೀನು ಒತ್ತುವರಿ ಆರೋಪ

ಎಸ್‌ಐಟಿಗೆ ತಡೆ–ಏಕಪಕ್ಷೀಯ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಕೇತಗಾನಹಳ್ಳಿ ವ್ಯಾಪ್ತಿಯಲ್ಲಿನ ಸರ್ಕಾರಿ ಜಮೀನುಗಳ ಒತ್ತುವರಿ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ, ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿರುವ ರಾಜ್ಯ ಸರ್ಕಾರದ ಆದೇಶಕ್ಕೆ ನೀಡಲಾಗಿರುವ ಮಧ್ಯಂತರ ತಡೆ ಏಕಪಕ್ಷೀಯ ಆದೇಶವಾಗಿದೆ' ಎಂದು ಅಡ್ವೊಕೇಟ್ ಜನರಲ್ ಆಕ್ಷೇಪಿಸಿದ್ದಾರೆ.

ಎಸ್‌ಐಟಿ ರಚನೆಗೆ ತಡೆ ನೀಡಿರುವ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಸೋಮವಾರ ಹಾಜರಾದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, 'ಈ ಪ್ರಕರಣದಲ್ಲಿ ಸರ್ಕಾರದ ವಾದವನ್ನು ಆಲಿಸದೆ ಮಧ್ಯಂತರ ತಡೆ ನೀಡಲಾಗಿದೆ. ಆದ್ದರಿಂದ, ಸರ್ಕಾರದ ವಾದವನ್ನು ಆಲಿಸಿ ಸೂಕ್ತ ಆದೇಶ ಹೊರಡಿಸಬೇಕು' ಎಂದು ಮನವಿ ಮಾಡಿದರು.

ಹೈಕೋರ್ಟ್

'ಕರ್ನಾಟಕ ಭೂ ಕಂದಾಯ ಕಾಯ್ದೆ–1964ರ ಕಲಂ 195ರ ಅನುಸಾರ ರಾಜ್ಯ ಸರ್ಕಾರಕ್ಕೆ ಎಸ್‌ಐಟಿ ರಚಿಸುವ ಅಧಿಕಾರವಿದೆ. ಅಷ್ಟಕ್ಕೂ ಹೈಕೋರ್ಟ್ ಆದೇಶಕ್ಕೆ ಅನುಗುಣವಾಗಿಯೇ ಈ ಎಸ್‌ಐಟಿ ರಚಿಸಲಾಗಿದೆ' ಎಂದು ವಿವರಿಸಿದ ಅವರು, ಮಧ್ಯಂತರ ತಡೆ ಆದೇಶ ತೆರವುಗೊಳಿಸುವಂತೆ ಕೋರಿದ ಮತ್ತು ರಿಟ್ ಅರ್ಜಿಗೆ ಸಂಬಂಧಿಸಿದ ಆಕ್ಷೇಪಣೆಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನಿಮ್ಮ ಮನವಿಯನ್ನು ಪರಿಗಣಿಸಲಾಗುವುದು' ಎಂದು ತಿಳಿಸಿ ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು. ಮಧ್ಯಂತರ ತಡೆ ಆದೇಶ ಮುಂದುವರಿದಿದೆ.

ಏನಿತ್ತು?: 'ಎಸ್‌ಐಟಿ ರಚಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಇದೇ 19ರಂದು ವಿಚಾರಣೆ ನಡೆಸಿತ್ತು.

ಅಂದು ವಿಚಾರಣೆ ವೇಳೆ ಕುಮಾರಸ್ವಾಮಿ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಎಸ್‌ಐಟಿ ರಚಿಸಿದ ಬಳಿಕ ಸರ್ಕಾರ ಅಧಿಸೂಚನೆ ಹೊರಡಿಸಬೇಕು. ಆದರೆ, ಈ ಪ್ರಕ್ರಿಯೆ ನಡೆಸದೇ ಅರ್ಜಿದಾರ ಕುಮಾರಸ್ವಾಮಿ ಅವರಿಗೆ ಎಸ್‌ಐಟಿ ಸಮನ್ಸ್ ಜಾರಿ ಮಾಡಿದೆ. ಆದ್ದರಿಂದ, ಎಸ್‌ಐಟಿ ರಚನೆ ಕಾನೂನು ಬಾಹಿರವಾಗಿದ್ದು ಈ ಕುರಿತ ಆದೇಶ ವಜಾಗೊಳಿಸಬೇಕು' ಎಂದು ಕೋರಿದ್ದರು. ಪ್ರತಿವಾದಿಗಳಾದ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ರಾಮನಗರ ತಹಶೀಲ್ದಾರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತ್ತು. ಅಂತೆಯೇ, ಎಸ್‌ಐಟಿ ರಚನೆಗೆ ತಡೆ ನೀಡಿ ಮಧ್ಯಂತರ ಆದೇಶ ಹೊರಡಿಸಿತ್ತು.

ಕುದುರೆ ರೇಸ್ ಬೆಟ್ಟಿಂಗ್–ಇಬ್ಬರ ಬಂಧನ

ಬೆಂಗಳೂರು: ಕುದುರೆ ರೇಸ್ ಬೆಟ್ಟಿಂಗ್ ನಡೆಸುತ್ತಿದ್ದ ಸ್ಥಳದ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಇಬ್ಬರನ್ನು ಬಂಧಿಸಿದ್ದಾರೆ. ಆರೋಪಿಗಳಿಂದ ₹2 ಲಕ್ಷ ನಗದು ಜಪ್ತಿ ಮಾಡಿಕೊಂಡಿದ್ದಾರೆ.

ಕುದುರೆ ರೇಸ್‌ಗೆ ಸಂಬಂಧಿಸಿದಂತೆ ಆನ್‌ಲೈನ್‌ನಲ್ಲಿ ಹಣ ಪಾವತಿಸಿಕೊಂಡು ಬೆಟ್ಟಿಂಗ್ ದಂಧೆ ನಡೆಸುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ಆರೋಪಿಗಳನ್ನು ವಶಕ್ಕೆ ಪಡೆಯಲಾಯಿತು ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಬ್ಯಾಂಕ್ ಖಾತೆಗಳ ಮೂಲಕ ₹3.48 ಲಕ್ಷವನ್ನು ವರ್ಗಾವಣೆ ಮಾಡಿಕೊಂಡಿರುವುದು ಗೊತ್ತಾಗಿದೆ. ಖಾತೆಗಳನ್ನು ಪತ್ತೆಹಚ್ಚಿ ವಹಿವಾಟು ಸ್ಥಗಿತಗೊಳಿಸಲು ಬ್ಯಾಂಕ್ ಅಧಿಕಾರಿಗಳಲ್ಲಿ ಮನವಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಭಾರತೀಯ ಜನಸಂಘದ ಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿ ಅವರ ಸ್ಮೃತಿ ದಿನ ಮತ್ತು ಜಗನ್ನಾಥ್ ರಾವ್ ಜೋಶಿ ಅವರ ಜನ್ಮದಿನದ ಪ್ರಯುಕ್ತ ಅವರ ಭಾವಚಿತ್ರಗಳಿಗೆ ಬಿ.ಎಸ್. ಯಡಿಯೂರಪ್ಪ ಪುಷ್ಪಾರ್ಚನೆ ಮಾಡಿದರು. ಛಲವಾದಿ ನಾರಾಯಣಸ್ವಾಮಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ಚನ್ನರಾಯಪಟ್ಟಣ ಭೂಸ್ವಾಧೀನ ಕೈಬಿಡಿ'

ಮುಖ್ಯಮಂತ್ರಿಗಳಿಗೆ ಸಾಹಿತಿ, ವಿಜ್ಞಾನಿಗಳ ಬಹಿರಂಗ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣದಲ್ಲಿ ಕೈಗಾರಿಕೆಗಳಿಗಾಗಿ ಫಲವತ್ತಾದ ಕೃಷಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಆಗ್ರಹಿಸಿ ನಾಡಿನ ಹಲವು ಸಾಹಿತಿಗಳು, ವಿಜ್ಞಾನಿಗಳು ಮತ್ತು ಸಾಮಾಜಿಕ ಹೋರಾಟಗಾರರು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದಿದ್ದಾರೆ.

'ಮುಖ್ಯಮಂತ್ರಿಯವರೇ, ತುರ್ತು ವಿಚಾರವೊಂದನ್ನು ತಮ್ಮ ಗಮನಕ್ಕೆ ತರಲು ಈ ಬಹಿರಂಗ ಪತ್ರ ಬರೆಯುತ್ತಿದ್ದೇವೆ. ಚನ್ನರಾಯಪಟ್ಟಣದ ವಿಚಾರವು ರೈತರು ಹಾಗೂ ಸರ್ಕಾರದ ನಡುವೆ, ಜನಪರ ಸಂಘಟನೆಗಳು ಹಾಗೂ ಸರ್ಕಾರದ ನಡುವೆ ಸಂಘರ್ಷದ ವಿಚಾರವಾಗಿ ಪರಿವರ್ತನೆಯಾಗುತ್ತಿರುವುದು ಕಳವಳಕಾರಿ. ಸರ್ಕಾರ ಏಕೆ ಈ ರೀತಿ ಹಟ ಹಿಡಿದಿದೆ ಎಂಬುದು ನಮಗೆ ಅರ್ಥವಾಗದಾಗಿದೆ' ಎಂದು ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

'ಅಭಿವೃದ್ಧಿ ಯೋಜನೆಗಳಿಗೆ ಭೂಮಿ ಬೇಕಾಗುತ್ತದೆ ಎಂಬುದನ್ನು ನಾವೂ ಒಪ್ಪುತ್ತೇವೆ. ಆದರೆ ಅದಕ್ಕೊಂದು ರೀತಿನೀತಿ ಇರಬೇಕಲ್ಲವೇ? ಚನ್ನರಾಯಪಟ್ಟಣದ ಭೂಮಿ ಫಲವತ್ತಾದ ಕೃಷಿ ಭೂಮಿಯಾಗಿದ್ದು, ಸಾವಿರಾರು ಜನ ಅದನ್ನು ನಂಬಿ ಬದುಕುತ್ತಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಅವರು ಈ ಭೂಮಿಯನ್ನು ಕಂಪನಿಗಳಿಗೆ ಕೊಡಲು ತಮಗೆ ಒಪ್ಪಿಗೆ ಇಲ್ಲ ಎಂದು ಸ್ಪಷ್ಟವಾಗಿ ಸರ್ಕಾರದ ಗಮನಕ್ಕೆ ತಂದಿದ್ದಾರೆ' ಎಂದಿದ್ದಾರೆ.

'ರೈತರ ಕೂಗನ್ನು ಕೇಳಿಸಿಕೊಳ್ಳದೆ ಹಿಂದಿನ ಬಿಜೆಪಿ ಸರ್ಕಾರವು ಈ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿತ್ತು. ಆಗ ನಿಮ್ಮ ಪಕ್ಷವೂ ಇದನ್ನು ವಿರೋಧಿಸಿತ್ತು. ನೀವೇ ಖುದ್ದು ಹೋರಾಟ ಸ್ಥಳಕ್ಕೆ ಭೇಟಿ ನೀಡಿ, ರೈತರಿಗೆ ಬೆಂಬಲ ನೀಡಿದ್ದೀರಿ. ಈಗ ಏಕೆ ಆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲೇಬೇಕು ಎಂದು ನಿಮ್ಮ ಸರ್ಕಾರ ಪಟ್ಟುಹಿಡಿದಿದೆ' ಎಂದು ಪ್ರಶ್ನಿಸಿದ್ದಾರೆ.

'ರೈತರಿಗೀಗ ಅಂತಿಮ ಅಧಿಸೂಚನೆ ಹೋಗಿದೆ. ರೈತರು ಆತಂಕಗೊಂಡಿದ್ದಾರೆ. ಅವರ ಬೆಂಬಲಕ್ಕೆ ಕರ್ನಾಟಕದ ಸಮಸ್ತ ಸಂಘಟನೆಗಳೂ ನಿಂತಿವೆ. ಜೂನ್ 25ಕ್ಕೆ ದೇವನಹಳ್ಳಿ ಚಲೋಗೆ ಕರೆ ನೀಡಿವೆ. ನೀವು ಜನರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲವರು. ದಯವಿಟ್ಟು ಕೂಡಲೇ ಮಧ್ಯಪ್ರವೇಶ ಮಾಡಬೇಕು. ಈ ಸಮಸ್ಯೆಯನ್ನು ಬಗೆಹರಿಸಿ ರಾಜ್ಯಕ್ಕೆ ಉತ್ತಮ ಸಂದೇಶ ನೀಡಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ನೀವು ನಮ್ಮನ್ನು ನಿರಾಸೆಗೊಳಿಸುವುದಿಲ್ಲ ಎಂಬ ವಿಶ್ವಾಸ ಇಟ್ಟುಕೊಂಡಿದ್ದೇವೆ' ಎಂದಿದ್ದಾರೆ.

ಸಹಿ ಮಾಡಿದವರು

ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಕೆ. ಮರುಳಸಿದ್ದಪ್ಪ, ಬಾನು ಮುಷ್ತಾಕ್, ಎಸ್.ಜಿ.ಸಿದ್ದರಾಮಯ್ಯ, ವಿಜಯಮ್ಮ, ಬಂಜಗೆರೆ ಜಯಪ್ರಕಾಶ್, ಎಚ್.ಎಲ್.ಪುಷ್ಪ, ಜಾಣಗೆರೆ ವೆಂಕಟರಾಮಯ್ಯ, ಎಲ್.ಎನ್.ಮುಕುಂದರಾಜ್, ಬಿ.ಸುರೇಶ್, ಎನ್. ಗಾಯತ್ರಿ, ಕೆ.ನೀಲ, ಇಂದೂಧರ ಹೊನ್ನಾಪುರ, ಕೆ.ಷರೀಫಾ, ಸಾಣೆಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಜಿ, ವಿಜ್ಞಾನಿಗಳಾದ ಸವ್ಯಸಾಚಿ ಚಟರ್ಜಿ, ವಾಣಿ ಚಟರ್ಜಿ, ನಟ ಪ್ರಕಾಶ್ ರಾಜ್ ಪತ್ರಕ್ಕೆ ಸಹಿ ಮಾಡಿದ್ದಾರೆ.

ಮುಖ್ಯಾಂಶಗಳು

- ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭೂಸ್ವಾಧೀನ ಪ್ರಕ್ರಿಯೆ
- ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1,777 ಎಕರೆ ಸ್ವಾಧೀನಕ್ಕೆ ಗುರುತಿಸಲಾಗಿದೆ
- ವಿರೋಧದ ನಡುವೆಯೂ 1,289 ಎಕರೆ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ

ಭೋವಿ ಸಮಾಜಕ್ಕೆ ಎಂಎಲ್‌ಸಿ ಸ್ಥಾನ: ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಭೋವಿ ಸಮಾಜಕ್ಕೆ ಸೇರಿದವರೊಬ್ಬರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಬೇಕು' ಎಂದು ಕೆಪಿಸಿಸಿ ವಕ್ತಾರ ಜಿ.ವಿ. ಸೀತಾರಾಮು ಒತ್ತಾಯಿಸಿದರು.

ಇಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '45 ವರ್ಷಗಳಿಂದ ಭೋವಿ ಸಮುದಾಯದವರನ್ನು ಕಾಂಗ್ರೆಸ್‌ನಿಂದ ಎಂಎಲ್‌ಸಿ ಮಾಡಿಲ್ಲ. ಹೀಗಾಗಿ ಈ ಬಾರಿ ಅವಕಾಶ ಕಲ್ಪಿಸಬೇಕು' ಎಂದು ಕೋರಿದರು.

ಜಿ.ವಿ. ಸೀತಾರಾಮು

'ಪರಿಶಿಷ್ಟ ಜಾತಿಯಲ್ಲಿ ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ. ಪಕ್ಷದ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದು, ಕಳೆದ ಚುನಾವಣೆಯಲ್ಲಿ ಬೆಂಬಲಿಸಿದ್ದೇವೆ. ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿ ಆಗಿದ್ದಾಗ ನನ್ನನ್ನು ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರು. ಅವರು ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ನಮ್ಮ ಸಮುದಾಯದ ಬಗ್ಗೆ ಒಲವಿದ್ದು, ನಮಗೆ ರಾಜಕೀಯ ಶಕ್ತಿ ತುಂಬಬೇಕು' ಎಂದರು.

ಸಮಾಜದ ಮುಖಂಡರಾದ ಬಸವರಾಜು, ಪರಮೇಶ್, ರಾಮಸ್ವಾಮಿ, ದಾಸ್, ದೇವರಾಜ್ ಹಾಜರಿದ್ದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ವಲಯ ಆಯುಕ್ತರು, ಜಂಟಿ ಆಯುಕ್ತರಿಂದ ಮೇಲ್ವಿಚಾರಣೆ

ಪರಿಶಿಷ್ಟ ಜಾತಿ ಸಮೀಕ್ಷೆ: ಮನೆಗೆ ಸ್ಟಿಕ್ಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿಯವರ ಸಮಗ್ರ ಸಮೀಕ್ಷಾ ಕಾರ್ಯ ಖಾತರಿಪಡಿಸಿಕೊಳ್ಳಲು ಮನೆಗಳಿಗೆ ಸ್ಟಿಕರ್ ಅಂಟಿಸಲಾಗುತ್ತಿದೆ.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ 101 ಜಾತಿಗಳಿಗೆ ಸೇರಿದವರ ವೈಜ್ಞಾನಿಕ ದತ್ತಾಂಶವನ್ನು ಸಂಗ್ರಹಿಸಲಾಗುತ್ತಿದ್ದು, ಜೂನ್ 30ರವರೆಗೆ ಕಾಲಾವಕಾಶವಿದೆ. ನಗರದಾದ್ಯಂತ ಸಮೀಕ್ಷಾ ಕಾರ್ಯ ನಡೆಯುತ್ತಿದ್ದು, ಪ್ರತಿ ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಸಿರುವ ಕುರಿತು ಖಾತರಿಪಡಿಸಿಕೊಂಡು ಸ್ಟಿಕರ್ ಅಂಟಿಸಲಾಗುತ್ತದೆ.

ಸ್ಟಿಕ್ಕರ್ ಅಂಟಿಸುವ ಕಾರ್ಯಕ್ಕೆ ಕಾಲೇಜುಗಳ ಎನ್‌ಎಸ್‌ಎಸ್ ಹಾಗೂ ಎನ್‌ಸಿಸಿ ವಿದ್ಯಾರ್ಥಿಗಳ ಸ್ವಯಂಸೇವಕರ ತಂಡಗಳನ್ನು ರಚಿಸಲಾಗಿದೆ. ಯಾವುದಾದರೂ ಮನೆಯವರು ಸಮೀಕ್ಷೆಯಲ್ಲಿ ಪಾಲ್ಗೊಳ್ಳದಿದ್ದಲ್ಲಿ ಸ್ಟಿಕ್ಕರ್‌ನಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಸ್ವಯಂ ಪ್ರೇರಿತವಾಗಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಜಾಗೃತಿ ಮೂಡಿಸಲಿದ್ದಾರೆ. ಹತ್ತಿರದ ಬೆಂಗಳೂರು ಒನ್, ಬಿಬಿಎಂಪಿ ವಾರ್ಡ್ ಕಚೇರಿಗಳಲ್ಲೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಯಲಹಂಕ ವಲಯ ಆಯುಕ್ತ ಕರೀಗೌಡ ಅವರ ನೇತೃತ್ವದಲ್ಲಿ ಬಿಬಿಎಂಪಿ ಸಿಬ್ಬಂದಿ ಮನೆಗೆ ಸ್ಟಿಕರ್ ಅಂಟಿಸಿದರು

ಅಂಕಿ ಅಂಶಗಳು

- **6.72** ಲಕ್ಷ; ಪರಿಶಿಷ್ಟ ಜಾತಿಯವರ ಸಮೀಕ್ಷೆ
- **1.84** ಲಕ್ಷ; ಪರಿಶಿಷ್ಟ ಜಾತಿ ಕುಟುಂಬಗಳ ಗಣತಿ
- **32** ಲಕ್ಷ; ಇತರೆ ಜಾತಿ ಕುಟುಂಬಗಳ ಸಮೀಕ್ಷೆ
- **11** ಸಾವಿರ;ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಗಣತಿದಾರರು

ಶೈಕ್ಷಣಿಕ ಪಯಣವನ್ನು ಮೆಲುಕು ಹಾಕಿದ ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಒ ನಂದಿನಿ ಕೆ.ಆರ್

ಪ್ರೆಸಿಡೆನ್ಸಿ ವಿ.ವಿ: ಶೈಕ್ಷಣಿಕ ಕಾರ್ಯಕ್ರಮ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 2025–26ನೇ ಸಾಲಿನ ಪ್ರಥಮ ವರ್ಷದ ಪದವಿ ತರಗತಿಗಳ ಉದ್ಘಾಟನೆ ಹಾಗೂ ವಿದ್ಯಾರ್ಥಿಗಳ ಪುನರ್ಮನನ ಕಾರ್ಯಕ್ರಮವನ್ನು ಮಂಡ್ಯ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನಂದಿನಿ ಕೆ.ಆರ್. ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಉತ್ತಮ ಮೌಲ್ಯಗಳೊಂದಿಗೆ ಯುವ ಸಮೂಹವನ್ನು ಹೇಗೆ ಬೆಳೆಸಬೇಕೆಂದು ಪೋಷಕರಿಗೆ ಸಲಹೆ ನೀಡಿದರು. ತಮ್ಮ ಶೈಕ್ಷಣಿಕ ಪಯಣವನ್ನು ಮೆಲುಕು ಹಾಕಿದರು. ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಕನಸು ಕಂಡ ಸಮಯ ಮತ್ತು ಆ ಸಮಯದಲ್ಲಿ ಅಸಾಧ್ಯವೆಂದು ತೋರುತ್ತಿದ್ದ ಗುರಿಯನ್ನು ಸಾಧಿಸಲು ತಮ್ಮ ಪೋಷಕರು ಹೇಗೆ ಪ್ರೋತ್ಸಾಹಿಸಿದರು ಎಂಬುದನ್ನು ಅವರು ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ಸಮೀನಾ ಪನಾಲಿ, ವಿದ್ಯಾಶೆಟ್ಟಿ, ನಂದಿನಿ ಕೆ.ಆರ್. ವಿಜಯನ್ ಇಮ್ಯಾನುಯೆಲ್, ಸಂಜಯ್ ಮುಜೂ, ಶಿವ ಪೆರುಮಾಳ್ ಪಾಲ್ಗೊಂಡಿದ್ದರು

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಹ್ಯೂಲೆಟ್ ಪ್ಯಾಕರ್ಡ್ ಎಂಟರ್‌ಪ್ರೈಸ್‌ನ ಉಪಾಧ್ಯಕ್ಷ ಸಂಜಯ್ ಮುಜೂ ಅವರು, 'ಇಂದಿನ ಪೀಳಿಗೆಗೆ ವೃತ್ತಿಯಲ್ಲಿ ಉತ್ತಮ ಮತ್ತು ವೈವಿಧ್ಯಮಯ ಆಯ್ಕೆಗಳಿವೆ. ವಿದ್ಯಾರ್ಥಿಗಳು ಸೂಕ್ತವಾದುದನ್ನು ಆಯ್ಕೆ ಮಾಡಿಕೊಳ್ಳಬಹುದು' ಎಂದು ಸಲಹೆ ನೀಡಿದರು.

ಕುಲಪತಿ ವಿಜಯನ್ ಇಮ್ಯಾನುಯೆಲ್, ಸಮ ಕುಲಪತಿಗಳಾದ ವಿದ್ಯಾಶಂಕರ್ ಶೆಟ್ಟಿ, ಶಿವ ಪೆರುಮಾಳ್ ಮತ್ತು ಕುಲಸಚಿವರಾದ ಸಮೀನಾ ನೂರ್ ಅಹ್ಮದ್ ಪನಾಲಿ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಗಣಿ ಅಕ್ರಮ ಪ್ರಕರಣ ಇತ್ಯರ್ಥಕ್ಕೆ ವಿಶೇಷ ನ್ಯಾಯಾಲಯ: ಸಿ.ಎಂ

ಪ್ರಜಾವಾಣಿ ವಾರ್ತೆ

ರಾಯಚೂರು ತಾಲ್ಲೂಕಿನ ಯರಗೇರಾದಲ್ಲಿ ಸೋಮವಾರ ಆಯೋಜಿಸಿದ್ದ ಬುಡಕಟ್ಟು ಸಾಂಸ್ಕೃತಿಕ ಉತ್ಸವ ಹಾಗೂ 371(ಜೆ) ದಶಮಾನೋತ್ಸವ ಸಮಾರಂಭದಲ್ಲಿ ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆಳ್ಳಿ ಖಡ್ಗ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬೆಳ್ಳಿ ಗದೆ ನೀಡಿದರು. ಚಂದ್ರಶೇಖರ ಪಾಟೀಲ, ವಸಂತಕುಮಾರ, ಡಾ.ಶರಣಪ್ರಕಾಶ ಪಾಟೀಲ, ಶಿವರಾಜ ತಂಗಡಗಿ, ಬಸನಗೌಡ ತುರವಿಹಾಳ ಉಪಸ್ಥಿತರಿದ್ದರು

ರಾಯಚೂರು: 'ರಾಜ್ಯದಲ್ಲಿ ಬಾಕಿ ಉಳಿದಿರುವ ಗಣಿ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ವಿಶೇಷ ನ್ಯಾಯಾಲಯ ಸ್ಥಾಪಿಸಲು ಎಚ್.ಕೆ.ಪಾಟೀಲ ನೇತೃತ್ವದ ಸಮಿತಿ ಸರ್ಕಾರಕ್ಕೆ ಪತ್ರ ಸಲ್ಲಿಸಿದೆ. ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ವಿಶೇಷ ನ್ಯಾಯಾಲಯ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರಾಯಚೂರು ತಾಲ್ಲೂಕಿನ ಯರಗೇರಾ ಸಮೀಪದ ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಆವರಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಿಂದೆ ಅಕ್ರಮ ಗಣಿಗಾರಿಕೆ ವಿರುದ್ಧ ಸದನದಲ್ಲಿ ಧ್ವನಿ ಎತ್ತಿದಾಗ ಬಿಜೆಪಿಯ ಶಾಸಕರು ಬಳ್ಳಾರಿಗೆ ಬಂದು ನೋಡಿ ಎಂದು ಸವಾಲು ಹಾಕಿದ್ದರು. ಹೀಗಾಗಿ ಪಾದಯಾತ್ರೆಯ ಮೂಲಕ ಬಳ್ಳಾರಿಗೆ ತೆರಳಿ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಸಿದ್ದೆವು' ಎಂದು ಹೇಳಿದರು.

'ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಅವರು ಸರ್ಕಾರಕ್ಕೆ ಒಂದು ವರದಿ ಕೊಟ್ಟಿದ್ದರು. ಈ ಎಲ್ಲ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಅಕ್ರಮ ಗಣಿಗಾರಿಕೆಯಿಂದ ಸರ್ಕಾರಕ್ಕೆ ಆಗಿರುವ ನಷ್ಟ ತಪ್ಪಿಸಲು ಕ್ರಮ ಕೈಗೊಳ್ಳಲಾಗುವುದು. ವಿಶೇಷ ನ್ಯಾಯಾಲಯದ ಮೂಲಕ ಪ್ರಕರಣಗಳ ಇತ್ಯರ್ಥಕ್ಕೆ ಪ್ರಯತ್ನಿಸಲಾಗುವುದು' ಎಂದು ತಿಳಿಸಿದರು.

ಜೋಶಿ ಹೇಳಿಕೆಗೆ ಅಸಮಾಧಾನ: 'ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಬಹಳ ಹತ್ತಿರವಾಗಿದ್ದಾರೆ. ರಾಯಚೂರಿಗೆ ಏಮ್ಸ್ ಮಂಜೂರು ಮಾಡಲು ಪ್ರಯತ್ನಿಸಬಹುದು. ಅದನ್ನು ಬಿಟ್ಟು ಸಮಿತಿ ವರದಿ ಸಲ್ಲಿಸಬೇಕು ಎಂದು ಹೇಳಿ ಕಾಲಹರಣ ಮಾಡುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಅಸಮಾಧಾನ ವ್ಯಕ್ತಪಡಿಸಿದರು.

'ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ವಿಶೇಷ ಅನುದಾನ ಬಿಡುಗಡೆ ಮಾಡುವಂತೆ ಬಿಜೆಪಿಯ ಒಬ್ಬ ಸಂಸದ ಹಾಗೂ ಶಾಸಕರೂ ಒತ್ತಾಯಿಸಿಲ್ಲ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಪ್ರತಿ ವರ್ಷ ₹ 5 ಸಾವಿರ ಕೋಟಿ ಕೊಡುತ್ತಿದೆ. ಸಂವಿಧಾನ ಬದ್ಧವಾಗಿ ಕೇಂದ್ರ ಸರ್ಕಾರವೂ ಶೇ 50ರಷ್ಟು ಪಾಲು ಕೊಡಬೇಕು' ಎಂದು ಒತ್ತಾಯಿಸಿದರು.

ಸಾಲಗಾರನ ಮಗಳನ್ನು ಕರೆದೊಯ್ದವರ ಸೆರೆ

ಪ್ರಜಾವಾಣಿ ವಾರ್ತೆ

ಮಳವಳ್ಳಿ: ಸಾಲಗಾರನ 7 ವರ್ಷದ ಮಗಳನ್ನು ಕರೆದೊಯ್ದಿದ್ದ ಪ್ರಕರಣದಲ್ಲಿ, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಸಿಲ್ಕಲ್ ಪುರದ ನಿವಾಸಿ, ತಿ.ನರಸೀಪುರದ ಬಜಾಜ್ ಫಿನ್ ಸರ್ವ್ ಮೈಕ್ರೋ ಫೈನಾನ್ಸ್ ಕಂಪನಿಯ ಸೆಂಟರ್ ಮ್ಯಾನೇಜರ್ ಪಿ.ಅಜಿತ್ (32) ಎಂಬುವವರನ್ನು ತಾಲ್ಲೂಕಿನ ಬೆಳಕವಾಡಿ ಪೊಲೀಸರು ಸೋಮವಾರ ಬಂಧಿಸಿದರು.

ತಿ.ನರಸೀಪುರ ತಾಲ್ಲೂಕಿನ ಜಾಲಹಳ್ಳಿಯ ನವೀನ ಎಂಬುವವರು, ತಮ್ಮ ತಾಯಿ ಮಂಗಳಮ್ಮ ಹೆಸರಿನಲ್ಲಿ ಆಟೊ ಖರೀದಿಗೆ ಸಂಸ್ಥೆಯಿಂದ ₹40 ಸಾವಿರ ಸಾಲ ಪಡೆದಿದ್ದರು. ಮೇ ತಿಂಗಳ ಕಂತು ಕಟ್ಟಲು ತಡವಾಗಿತ್ತು. ಜೂನ್ 16ರಂದು ನವೀನ, ಪತ್ನಿ ಮತ್ತು ಮಗಳೊಂದಿಗೆ ತಾಲ್ಲೂಕಿನ ಪೂರಿಗಾಲಿಯ ಸಂಬಂಧಿಕರ ಮನೆಗೆ ಬಂದಿದ್ದರು.

ಅಲ್ಲಿಗೆ ತೆರಳಿದ್ದ ಆರೋಪಿಯು ನವೀನ ಅವರ ಮಗಳು ಹಾಗೂ ಪಕ್ಕದ ಮನೆಯ ಬಾಲಕನನ್ನು, ನವೀನ ಇದ್ದ ಸ್ಥಳ ತೋರಿಸುವಂತೆ ಬಲವಂತವಾಗಿ ಕರೆದೊಯ್ದಿದ್ದರು. ನಂತರ ವಾಪಸ್ ಕರೆತಂದು ಬಿಟ್ಟಿದ್ದರು. ಈ ಸಂಬಂಧ ನವೀನ ಪೊಲೀಸರಿಗೆ ದೂರು ನೀಡಿದ್ದರು.

ನಂತರ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಯನ್ನು ತಮಿಳುನಾಡಿನ ಬಣ್ಣಾರಿ ಅಮ್ಮ ದೇವಸ್ಥಾನದ ಬಳಿ ಬಂಧಿಸಿ, ಕೃತ್ಯ ಎಸಗಿದ ದಿನ ಬಳಸಿದ್ದ ಬೈಕ್ ಅನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಉಪನ್ಯಾಸಕಿ ಮೇಲೆ ಹಲ್ಲೆ: ಬಂಧನ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ಬಾಡಿಗೆ ಕೇಳುವ ನೆಪದಲ್ಲಿ ಬಂದು ಪದವಿ ಕಾಲೇಜಿನ ಉಪನ್ಯಾಸಕಿ ಸುಮಂಗಲಾ ಅಂಗಡಿ ಎಂಬುವರ ಮೇಲೆ ಹಲ್ಲೆ ಮಾಡಿದ ಆರೋಪದ ಮೇಲೆ ತೆಲಂಗಾಣದ ನಲಗೊಂಡ ಜಿಲ್ಲೆ ಹಜಾರಿಗುಡದ ನಿವಾಸಿ ಪೇರುಮಾಳ ಸೈದಯ್ಯ ಧನಂಜಯ ಎಂಬುವನನ್ನು ಮುದ್ದೇಬಿಹಾಳ ಪೊಲೀಸರು ಬಂಧಿಸಿದ್ದಾರೆ ಎಂದು ಪಿಎಸ್‌ಐ ಸಂಜಯ ತಿಪರೆಡ್ಡಿ ತಿಳಿಸಿದ್ದಾರೆ.

ಏಜೆಂಟ್ ಬಳಿ ₹ 5 ಲಕ್ಷ ಪತ್ತೆ

ಮಂಗಳೂರು: ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿದ್ದರಿಂದ ಕಂದಾಯ ಮತ್ತು ನಗರ ಯೋಜನಾ ವಿಭಾಗದ ಕಚೇರಿಗಳಲ್ಲಿ ಶನಿವಾರ ಪರಿಶೀಲನೆ ನಡೆಸಿದ್ದು, ಈ ವೇಳೆ ದಲ್ಲಾಳಿಯೊಬ್ಬರ ಬಳಿ ₹ 5 ಲಕ್ಷ ನಗದು ಪತ್ತೆಯಾಗಿದೆ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ (ಪ್ರಭಾರ) ಕುಮಾರಚಂದ್ರ ತಿಳಿಸಿದ್ದಾರೆ.

'ಪಾಲಿಕೆಯ ಕಂದಾಯ ವಿಭಾಗ, ಆರೋಗ್ಯ ವಿಭಾಗ, ಎಂಜಿನಿಯರಿಂಗ್ ವಿಭಾಗ, ಲೆಕ್ಕ ಪತ್ರ ವಿಭಾಗ, ನಗರ ಯೋಜನಾ ವಿಭಾಗ ಹಾಗೂ ಆಯುಕ್ತರ ಕಚೇರಿಯ ಕಡತಗಳ ವಿಲೇವಾರಿಯಲ್ಲಿ ಹಲವಾರು ನ್ಯೂನತೆಗಳು ಪರಿಶೀಲನೆ ವೇಳೆ ಕಂಡುಬಂದಿವೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಆಳ್ವಾಸ್ ಪ್ರಗತಿ' ಆ.1ರಿಂದ

300 ಕಂಪನಿಗಳು ಪಾಲ್ಗೊಳ್ಳುವ ನಿರೀಕ್ಷೆ: ಮೋಹನ ಆಳ್ವ

ಪ್ರಜಾವಾಣಿ ವಾರ್ತೆ

ಮೋಹನ ಆಳ್ವ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಆಯೋಜಿಸುವ 'ಆಳ್ವಾಸ್ ಪ್ರಗತಿ' ಉದ್ಯೋಗ ಮೇಳದ 15ನೇ ಆವೃತ್ತಿ ಆಗಸ್ಟ್ 1 ಮತ್ತು 2ರಂದು ಆಳ್ವಾಸ್ ಕಾಲೇಜಿನ ವಿದ್ಯಾಗಿರಿ ಕ್ಯಾಂಪಸ್‌ನಲ್ಲಿ ನಡೆಯಲಿದೆ.

ಮೇಳದಲ್ಲಿ ಪಾಲ್ಗೊಳ್ಳುವ ಕಂಪನಿಗಳ ವಿವರವನ್ನು www.alvaspragati.comನಲ್ಲಿ ಪ್ರಕಟಿಸಿದ್ದು ಅಭ್ಯರ್ಥಿಗಳು ಕಡ್ಡಾಯವಾಗಿ ನೋಂದಣಿ ಮಾಡಬೇಕು. ಈ ಬಾರಿ 300ರಷ್ಟು ಕಂಪನಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ ಮೋಹನ ಆಳ್ವ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹೊರ ಜಿಲ್ಲೆಗಳಿಂದ ಬರುವ ಅಭ್ಯರ್ಥಿಗಳಿಗೆ ಜುಲೈ 31ರಿಂದ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯ ಐಟಿಐ ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯವನ್ನೂ ಕಲ್ಪಿಸಲಾಗುವುದು ಎಂದು ಹೇಳಿದರು.

ಮಾಹಿತಿಗಾಗಿ ಅಭ್ಯರ್ಥಿಗಳು 9741440490, 9611750531, 7975223865 ಸಂಪರ್ಕಿಸಬಹುದು. ನೋಂದಣಿ ಮತ್ತು ಮಾಹಿತಿಗೆ ಕಂಪನಿಗಳು 9731953123ಕ್ಕೆ ಕರೆ ಮಾಡಬಹುದು ಎಂದರು.

ಅಭ್ಯರ್ಥಿಗಳು ಪಾಸ್‌ಪೋರ್ಟ್ ಅಳತೆಯ 5ರಿಂದ 10 ಭಾವಚಿತ್ರ, ಸಂಪೂರ್ಣ ಶೈಕ್ಷಣಿಕ ಮಾಹಿತಿ ಒಳಗೊಂಡ ರೆಸ್ಯೂಮ್‌ನ 8ರಿಂದ 10 ಪ್ರತಿಗಳು, ಅಂಕಪಟ್ಟಿಯ ಪ್ರತಿಗಳು, ಆನ್‌ಲೈನ್ ಮೂಲಕ ನೋಂದಣಿ ಮಾಡಿದ್ದರ ಸಂಖ್ಯೆ ಹೊಂದಿರಬೇಕು. ಉದ್ಯೋಗ ಮೇಳದ ದಿನ ಬೆಳಿಗ್ಗೆ 8 ಗಂಟೆಗೆ ಮೂಡುಬಿದಿರೆ ವಿದ್ಯಾಗಿರಿ ಕ್ಯಾಂಪಸ್‌ನಲ್ಲಿ ಹಾಜರಿರಬೇಕು ಎಂದು ಮೋಹನ ಆಳ್ವ ತಿಳಿಸಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ, ತರಬೇತಿ ಮತ್ತು ನೇಮಕಾತಿ ವಿಭಾಗದ ಮುಖ್ಯಸ್ಥೆ ರಂಜಿತಾ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರಸಾದ್ ಶೆಟ್ಟಿ ಭಾಗವಹಿಸಿದ್ದರು.

ಕೊಡಗಿನಾದ್ಯಂತ ಧಾರಾಕಾರ ಮಳೆ

ಹಾರಂಗಿಗೆ ಒಳಹರಿವು ಹೆಚ್ಚಳ; 'ಆರೆಂಜ್ ಅಲರ್ಟ್' ಘೋಷಣೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಚಿಕ್ಕಮಗಳೂರು: ರಾಜ್ಯದ ಕೆಲವೆಡೆ ಭಾನುವಾರ ರಾತ್ರಿ ಮತ್ತು ಸೋಮವಾರ ಮಳೆಯಾಗಿದೆ. ಕೊಡಗು ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಭಾನುವಾರ ಇಡೀ ರಾತ್ರಿ ಹಾಗೂ ಸೋಮವಾರ ಬಿರುಸಿನ ಗಾಳಿಯೊಂದಿಗೆ ಭಾರಿ ಮಳೆ ಸುರಿಯಿತು. ಇದರಿಂದ ಹಾರಂಗಿ ಜಲಾಶಯದ ಒಳ ಹರಿವು 5,266 ಕ್ಯೂಸೆಕ್‌ಗೆ ಏರಿಕೆಯಾಗಿದೆ. ನದಿಗೆ 3 ಸಾವಿರ ಕ್ಯುಸೆಕ್ ನೀರನ್ನು ಬಿಡಲಾಗುತ್ತಿದೆ.

ಮಂಗಳವಾರ ಬೆಳಿಗ್ಗೆ 8.30ರವರೆಗೂ ಭಾರಿ ಮಳೆ ಬೀಳುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ ಕೊಡಗು ಜಿಲ್ಲೆಗೆ 'ಆರೆಂಜ್ ಅಲರ್ಟ್' ಘೋಷಿಸಿದೆ. ಭಾರಿ ಪ್ರಮಾಣದಲ್ಲಿ ಸುರಿಯುತ್ತಿರುವ ಮಳೆಯಿಂದ ಕುಶಾಲನಗರ ತಾಲ್ಲೂಕಿನ ಕಾನ್ ಬೈಲು ಬೈಚನಹಳ್ಳಿಯಲ್ಲಿ ಹಾಗೂ ಮಡಿಕೇರಿ ತಾಲ್ಲೂಕಿನ ಕಾಟಕೇರಿ ಗ್ರಾಮದಲ್ಲಿ ತಲಾ ಒಂದು ಮನೆ ಕುಸಿದಿದೆ.

ಭಾಗಮಂಡಲದಲ್ಲಿ 14 ಸೆಂ.ಮೀ, ಕೊಡ್ಲಿಪೇಟೆ, 10 ಸೆಂ.ಮೀ. ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಅಲ್ಲಲ್ಲಿ ಮಳೆಯಾಗಿದೆ. ಶೃಂಗೇರಿ, ಕೊಪ್ಪ, ಎನ್.ಆರ್.ಪುರ, ಕಳಸ ಮತ್ತು ಮೂಡಿಗೆರೆ ತಾಲ್ಲೂಕಿನಲ್ಲಿ ಭಾನುವಾರ ರಾತ್ರಿಯಿಂದ ಮಳೆ ಸುರಿಯುತ್ತಿದೆ. ಕೊಪ್ಪ ತಾಲ್ಲೂಕಿನ ತಲಮಕ್ಕಿಯಲ್ಲಿ ಮಳೆಗೆ ಮನೆಯೊಂದರ ಗೋಡೆ ಕುಸಿದಿದೆ.

ಶಿವಮೊಗ್ಗ ವರದಿ: ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸೋಮವಾರ ಮಳೆ ಮುಂದುವರಿದಿದೆ. ಇಡೀ ದಿನ ಮೋಡ ಕವಿದ ವಾತಾವರಣ ಇತ್ತು. ಆಗಾಗ ರಭಸದಿಂದ ಹಾಗೂ ತುಂತುರು ಮಳೆ ಸುರಿಯಿತು.

ಕೋಣಂದೂರು, ಆನವಟ್ಟಿ, ಹೊಸನಗರಗಳಲ್ಲಿ ಸಾಧಾರಣ ಮಳೆ ಸುರಿದರೆ, ಶಿವಮೊಗ್ಗ, ಸಾಗರ, ಹೊಳೆಹೊನ್ನೂರು, ಶಿಕಾರಿಪುರ, ಸೊರಬದಲ್ಲಿ ಜಿಟಿಜಿಟಿ ಮಳೆ ಸುರಿದಿರುವ ವರದಿಯಾಗಿದೆ.

ದಾವಣಗೆರೆ ವರದಿ: ದಾವಣಗೆರೆ, ಹರಿಹರ ತಾಲ್ಲೂಕಿನ ವಿವಿಧೆಡೆ ಸೋಮವಾರ ಸಂಜೆ ಮಳೆ ಸುರಿದಿದ್ದು, ಕೆಲವೆಡೆ ತುಂತುರು ಮಳೆಯಾಗಿದೆ. ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರು ಸುತ್ತಮುತ್ತ ಹದ ಮಳೆಯಾಗಿದೆ.

ಕೊಡಗು ಜಿಲ್ಲೆಯಲ್ಲಿ ಭಾನುವಾರ ರಾತ್ರಿಯಿಡೀ ಸುರಿದ ಭಾರಿ ಮಳೆಗೆ ವಿರಾಜಪೇಟೆ ಸಮೀಪದ ಭೇತ್ರಿ ಬಳಿ ಕಾವೇರಿ ನದಿ ಸೋಮವಾರ ತುಂಬಿ ಹರಿಯಿತು –ಪ್ರಜಾವಾಣಿ ಚಿತ್ರ/ಎಂ.ಎಸ್.ಹೇಮಂತ್

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	120.20	13,856	1,965
ಹಾರಂಗಿ	2,859	2,851.68	5,266	3,000
ಕಬಿನಿ	2,284.00	2,278.07	16,102	12,000
ಹೇಮಾವತಿ	2,922	2,915	7,685	2,400
ಲಿಂಗನಮಕ್ಕಿ	1,819	1,775.30	24,229	5,885
ಸೂಪಾ (ಮೀ)	564	532.37	10,421.57	1,721.98
ಮಾಣಿ	595	581.08	3,556	335
ತುಂಗಭದ್ರಾ	1,633	1,614.09	21,612	194
ಮಲಪ್ರಭಾ	2,079.5	2,055.46	3,073	194
ಘಟಪ್ರಭಾ	2,175	2,122.85	12,216	132
ಭದ್ರಾ *	186	152.6	9,994	1,279
ಆಲಮಟ್ಟಿ (ಮೀ)	519.6	515.21	98,611	70,000
ನಾರಾಯಣಪುರ (ಮೀ)	492.25	490.53	51,570	42,820

* ನೆಲಮಟ್ಟದಿಂದ

ಸೇತುವೆ ಜಲಾವೃತ; ಕೊಚ್ಚಿ ಹೋದ ಯುವಕ

ಹುಬ್ಬಳ್ಳಿ: ಧಾರವಾಡ, ಉತ್ತರ ಕನ್ನಡ, ಬೆಳಗಾವಿ ಮತ್ತು ವಿಜಯನಗರ ಜಿಲ್ಲೆಯ ವಿವಿಧೆಡೆ ಸೋಮವಾರ ಮಳೆ ಮುಂದುವರಿಯಿತು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಮತ್ತಿಘಟ್ಟ ಬಳಿ ಜೋಗನಹಕ್ಕಲು ಜಲಪಾತ ನೋಡಲು ಸ್ನೇಹಿತ ಜೊತೆ ಹೋಗಿದ್ದ ಸೋಮನಳ್ಳಿ ಗ್ರಾಮದ ಉಂಬಳೆಕೊಪ್ಪದ ಪವನ ಜೋಗಿ (24) ಹಳ್ಳ ದಾಟುವಾಗ, ಕಾಲು ಜಾರಿ ಬಿದ್ದು ಹಳ್ಳದಲ್ಲಿ ಕೊಚ್ಚಿ ಹೋಗಿದ್ದಾರೆ.

ವಿಜಯನಗರ ಜಿಲ್ಲೆ ಹರಪನಹಳ್ಳಿ, ಹೂವಿನಹಡಗಲಿ ಮತ್ತು ಕೂಡ್ಲಿಗಿ ಭಾಗದಲ್ಲಿ ಮಳೆಯಾಗಿದೆ. ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ ತಗ್ಗಿದ್ದು, 21,612 ಕ್ಯೂಸೆಕ್‌ನಷ್ಟಿದೆ. ಸದ್ಯ 46.29 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ.

ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಪ್ರಮಾಣ ಕಡಿಮೆ ಆಗಿದ್ದರಿಂದ ಬೆಳಗಾವಿ ಜಿಲ್ಲೆ ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯಲ್ಲಿ ಕೃಷ್ಣಾ ಹಾಗೂ ಉಪನದಿಗಳ ನೀರಿನ ಹರಿಯುವ ಪ್ರಮಾಣದಲ್ಲಿ ಸೋಮವಾರ 1 ಅಡಿ ಇಳಿಕೆ ಆಗಿದೆ. ಕಾರದಗಾ–ಭೋಜ, ಮಲಿಕವಾಡ–ದತ್ತವಾಡ, ಕಲ್ಲೋಳ–ಯಡೂರ ಸೇತುವೆಗಳು ನಾಲ್ಕು ದಿನಗಳಿಂದ ಜಲಾವೃತಗೊಂಡ ಸ್ಥಿತಿಯಲ್ಲಿ ಇವೆ. ನದಿ ತಟದಲ್ಲಿರುವ ಹೊಲ ಗದ್ದೆಗಳಿಗೆ ನದಿ ನೀರು ನುಗ್ಗಿದೆ.

ಕೊಲ್ಹಾಪುರ ಜಿಲ್ಲೆಯ ರಾಜಾಪೂರೆ ಬ್ಯಾರೇಜ್‌ನಿಂದ ಕೃಷ್ಣಾ ನದಿಗೆ 65 ಸಾವಿರ ಕ್ಯೂಸೆಕ್ ಹೊರ ಹರಿವು ಇದ್ದು, ಕಲ್ಲೋಳ ಬಳಿ ದೂಧಗಂಗಾ ನದಿಗೆ 14,784 ಕ್ಯೂಸೆಕ್ ಒಳ ಹರಿವು ಇದೆ. ತಾಲ್ಲೂಕಿನ ಕಲ್ಲೋಳ–ಯಡೂರ ಸೇತುವೆ ಬಳಿ ಕೃಷ್ಣಾ ನದಿಗೆ 79,784 ಕ್ಯೂಸೆಕ್ ಹೊರ ಹರಿವು ಇದೆ.

ಚಿಟಿಕೆ ಸುದ್ದಿ

ಕತ್ತೆಕಲ್ಲು ಗುಡ್ಡದಲ್ಲಿ ಶಿಲಾಶಾಸನ ಪತ್ತೆ

ಕತ್ತೆಕಲ್ಲು ಗುಡ್ಡದಲ್ಲಿ ಪತ್ತೆಯಾಗಿರುವ ಶಿಲಾ ಶಾಸನದೊಂದಿಗೆ ಸಂಶೋಧಕರು

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಎಚ್.ಜಿ. ರಾಮುಲು ನಗರದ ಬಳಿಯ ಕತ್ತೆಕಲ್ಲು ಗುಡ್ಡದಲ್ಲಿ ಶಿಲಾಯುಗದ ಗವಿಚಿತ್ರಗಳ ಜೊತೆಗೆ ಶಿಲಾಶಾಸನವೊಂದು ಪತ್ತೆಯಾಗಿದೆ.

ಗಂಗಾವತಿಯ ಇತಿಹಾಸ ಸಂಶೋಧಕ ಶರಣಬಸಪ್ಪ ಕೋಲ್ಕಾರ ನೇತೃತ್ವದಲ್ಲಿ ಮಂಜುನಾಥ ದೊಡ್ಡಮನಿ, ಚಂದ್ರಶೇಖರ ಕುಂಬಾರ, ನಾಗರಾಜ ಶಿವಪುರ ಅವರ ತಂಡ ಶಿಲಾಶಾಸನ ಶೋಧಿಸಿದೆ.

ಕತ್ತೆಕಲ್ಲು ಗುಡ್ಡದ ಬುಡದ ಕಲ್ಲಾಸರೆಯಲ್ಲಿ 17ನೇ ಶತಮಾನದ ಕನ್ನಡ ಶಾಸನ ಪತ್ತೆಯಾಗಿದೆ. ಈ ಶಾಸನವು 5 ಸಾಲಿನಲ್ಲಿದೆ. ಸೂರ್ಯ, ಚಂದ್ರ, ದ್ವಿನಾಮ ಮತ್ತು ಬಿಲ್ಲು ಬಾಣದ ಚಿತ್ರಗಳ ಜೊತೆ ಬರೆಯಲಾಗಿದೆ. ಶಾಸನವು ರಾಮನಾಥ ದೇವರ ಆರಾಧನೆಗಾಗಿ ಚಿನ್ನಾಯಕನು 22 ಖಂಡುಗ ಹೊಲವನ್ನು ದಾನವಾಗಿ ನೀಡಿದ ಬಗ್ಗೆ ತಿಳಿಸುತ್ತದೆ. ಶಾಸನ 'ಜಯತು ಮಸ್ತು' ಎಂದು ಕೊನೆಗೊಳ್ಳುತ್ತದೆ. ರಾಮನಾಥ ದೇವರು ಮತ್ತು ಚಿನ್ನಾಯಕ ಯಾರು ಎನ್ನುವುದರ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಬೇಕಿದೆ ಎನ್ನುತ್ತಾರೆ ಸಂಶೋಧಕರು.

ಸುವರ್ಣಾಗೆ 'ಜಯದೇವಿ ತಾಯಿ ಲಿಗಾಡೆ ಪ್ರಶಸ್ತಿ'

ಸುವರ್ಣಾ ಚಿಮಕೋಡೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ವಿಶ್ವ ಬಸವಧರ್ಮ ವಿಶ್ವಸ್ಥ ಮಂಡಳಿ ಅನುಭವ ಮಂಟಪದ ಪ್ರಸಕ್ತ ಸಾಲಿನ 'ಡಾ. ಜಯದೇವಿತಾಯಿ ಲಿಗಾಡೆ ಪ್ರಶಸ್ತಿ'ಗೆ ಬೀದರ್‌ನ ಪ್ರವಚನಕಾರ್ತಿ ಸುವರ್ಣಾ ಚಿಮಕೋಡೆ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಸುವರ್ಣಾ ಬೀದರ್‌ನ ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯದ ಸಂಚಾಲಕಿ ಆಗಿದ್ದಾರೆ. ಶ್ರಾವಣ ಮಾಸ ಹಾಗೂ ಇತರೆ ಸಂದರ್ಭದಲ್ಲಿ ಶರಣತತ್ವದ ಪ್ರವಚನ ಹೇಳುತ್ತಾರೆ. ಜೂನ್ 28ರಂದು ನಗರದಲ್ಲಿ ನಡೆಯುವ ಜಯದೇವಿತಾಯಿ ಲಿಗಾಡೆ ಜಯಂತಿ ಕಾರ್ಯಕ್ರಮದಲ್ಲಿ ಸುವರ್ಣಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿಶ್ವಸ್ಥ ಮಂಡಳಿ ಅನುಭವ ಮಂಟಪದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ತಿಳಿಸಿದ್ದಾರೆ.

ಯುವತಿ ಅಂಗಾಂಗ ಸ್ಪರ್ಶಿಸಿ ಕಿರುಕುಳ

ಆನೇಕಲ್: ತಾಲ್ಲೂಕಿನ ಮೈಲಸಂದ್ರದಲ್ಲಿ ಭಾನುವಾರ ಸಂಜೆ ದಿನಸಿ ತರಲು ಅಂಗಡಿಗೆ ಹೊರಟಿದ್ದ ಯುವತಿಯನ್ನು ರಸ್ತೆಯಲ್ಲಿ ಅಡ್ಡಗಟ್ಟಿದ ಯುವಕರ ತಂಡವೊಂದು ಮೈ,ಕೈ ಮುಟ್ಟಿ ಅಸಭ್ಯವಾಗಿ ವರ್ತಿಸಿ, ಲೈಂಗಿಕ ಕಿರುಕುಳ ನೀಡಿದೆ.

ಯುವಕರಿಂದ ತಪ್ಪಿಸಿಕೊಂಡ ಯುವತಿ ಮನೆಗೆ ಮರಳಿದರೂ ಬಿಡದೆ ಬೈಕ್‌ನಲ್ಲಿ ಬೆನ್ನತ್ತಿ ಮನೆ ಬಳಿ ಹೋಗಿ ಗಲಾಟೆ ಮಾಡಿದ್ದಾರೆ. ಗಾಂಜಾ ನಶೆಯಲ್ಲಿದ್ದ ನಾಲ್ಕೈದು ಯುವಕರು ಮನೆಗೆ ನುಗ್ಗಲು ಯತ್ನಿಸಿದ್ದಾರೆ. ರಸ್ತೆಯಲ್ಲಿ ನಿಂತು ಯುವತಿಯನ್ನು ನಿಂದಿಸಿದ್ದಾರೆ. ಈ ಗಲಾಟೆಯನ್ನು ಕಂಡ ಸ್ಥಳೀಯರು ತರಾಟೆಗೆ ತೆಗೆದುಕೊಳ್ಳುತ್ತಲೇ ಎಲ್ಲರೂ ಅಲ್ಲಿಂದ ಕಾಲ್ಕಿತ್ತಿದ್ದಾರೆ.

ಲೈಂಗಿಕ ಕಿರುಕುಳಕ್ಕೆ ಒಳಗಾದ 26 ವರ್ಷದ ಯುವತಿ ಸೋಮವಾರ ಬೆಳಿಗ್ಗೆ ಬನ್ನೇರುಘಟ್ಟ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಪೊಲೀಸರು ತಕ್ಷಣ ಪ್ರಮುಖ ಆರೋಪಿ ರಿಚರ್ಡ್ ಎಂಬಾತನನ್ನು ಬಂಧಿಸಿದ್ದಾರೆ.

ಕಮ್ಮನಹಳ್ಳಿಯ ನಿವಾಸಿಯಾದ ಯುವತಿ ಚೆನ್ನೈನಲ್ಲಿ ನೆಲಸಿದ್ದರು. ವಾರದ ಹಿಂದೆಯಷ್ಟೇ ಬೆಂಗಳೂರಿಗೆ ಹಿಂದಿರುಗಿ ಮೈಲಸಂದ್ರದ ರೇಣುಕಾ ಯಲ್ಲಮ್ಮ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು.

ಯುವತಿಯ ಬೆಂಬಲಕ್ಕೆ ಬಂದ ಜಿಮ್ ಟ್ರೈನರ್‌ವೊಬ್ಬರು ಯುವಕರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಬನ್ನೇರುಘಟ್ಟ ಠಾಣೆಯಲ್ಲಿ ಮತ್ತೊಂದು ದೂರು ದಾಖಲಾಗಿದೆ.

ನಿಧನ ವಾರ್ತೆ

ಐಸಾ ಯಾಹ್ಯ

ಸುಂಟಿಕೊಪ್ಪ (ಕೊಡಗು ಜಿಲ್ಲೆ): ಸುಂಟಿಕೊಪ್ಪ ಸ್ಯಾಂಡಲ್‌ವುಡ್ ಸಮೂಹ ತೋಟದ ಮಾಲೀಕರು ಹಾಗೂ ಮಾಜಿ ಸಚಿವ, ದಿವಂಗತ ಎಸ್.ಎಂ.ಯಾಹ್ಯ ಅವರ ಪತ್ನಿ ಐಸಾ ಯಾಹ್ಯ (80) ಬೆಂಗಳೂರಿನಲ್ಲಿ ಸೋಮವಾರ ನಿಧನರಾದರು.

ಇವರಿಗೆ ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐಶ್ವರ್ಯಾ ಗೌಡ ವಂಚನೆ ಪ್ರಕರಣ; ಜುಲೈ 7ರಂದು ಮತ್ತೊಮ್ಮೆ ಇ.ಡಿ ವಿಚಾರಣೆ

6 ತಾಸು ವಿಚಾರಣೆ ಎದುರಿಸಿದ ಸುರೇಶ್

ಪ್ರಜಾವಾಣಿ ವಾರ್ತೆ

ಡಿ.ಕೆ.ಸುರೇಶ್

ಬೆಂಗಳೂರು: ಐಶ್ವರ್ಯಾ ಗೌಡ ವಿರುದ್ಧದ ವಂಚನೆ ಆರೋಪ ಸಂಬಂಧ ಮಾಜಿ ಸಂಸದ ಹಾಗೂ ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಸುಮಾರು ಆರು ತಾಸು ಸೋಮವಾರ ವಿಚಾರಣೆಗೆ ಒಳಪಡಿಸಿದರು.

ಶಾಂತಿನಗರ ಕಚೇರಿಯಲ್ಲಿ ಬೆಳಿಗ್ಗೆ 11.45 ರಿಂದ ಸಂಜೆ 5.45 ರವರೆಗೆ ವಿಚಾರಣೆಗೆ ನಡೆಸಿದ ಅಧಿಕಾರಿಗಳು, ಐಶ್ವರ್ಯಗೌಡ ಅವರು ನಿಮಗೆ ಹೇಗೆ ಪರಿಚಯ? ಅವರ ಜತೆ ನಿಮಗೆ ಹಣಕಾಸಿನ ವ್ಯವಹಾರವಿತ್ತಾ? ಎಷ್ಟು ದಿನಗಳಿಂದ ಪರಿಚಯ? ಆಕೆ ಈ ಪ್ರಕರಣದಲ್ಲಿ ನಿಮ್ಮ ಹೆಸರನ್ನು ಹೇಳಲು ಕಾರಣವೇನು' ಎಂಬ ಪ್ರಶ್ನೆಗಳನ್ನು ಕೇಳಿ ಸುರೇಶ್ ಅವರ ಹೇಳಿಕೆ ದಾಖಲಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಚಾರಣೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಡಿ.ಕೆ.ಸುರೇಶ್, 'ತನಿಖಾಧಿಕಾರಿಗಳು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ತನಿಖೆಗೆ ಸಂಪೂರ್ಣ ಸಹಕರಿಸಿದ್ದೇನೆ. ಐಶ್ವರ್ಯಾ ಗೌಡ ಅವರು ನನ್ನ ಹೆಸರು ದುರ್ಬಳಕೆ ಮಾಡಿಕೊಂಡಿದ್ದಾರೆ. ನನ್ನ ಜೊತೆ ಪರಿಚಯವಿದೆ ಎಂದು ನಂಬಿ ಕೆಲವರು ಹಣ ನೀಡಿ ವಂಚನೆಗೊಳಗಾಗಿದ್ದಾರೆ' ಎಂದು ಹೇಳಿದರು.

'ಒಮ್ಮೆ ಕನ್ನಡ ರಾಜ್ಯೋತ್ಸವಕ್ಕೆ ಮಾತ್ರ ಕರೆದಿದ್ದು, ನಾನು ಹೋಗಿದ್ದೆ. ಆದರೆ ಆಕೆಯೊಂದಿಗೆ ನೇರ ಮಾತಿನ ವ್ಯವಹಾರ ಆಗಿರಲಿಲ್ಲ. ಪ್ರಕರಣ ಸಂಬಂಧ ಜುಲೈ 7ರಂದು ಮತ್ತೆ ಕರೆದಿದ್ದು, ವಿಚಾರಣೆಗೆ ಹಾಜರಾಗುತ್ತೇನೆ' ಎಂದು ತಿಳಿಸಿದರು.

ಇದಕ್ಕೂ ಮುನ್ನ ಮಾಧ್ಯಮದವರ ಜತೆ ಮಾತನಾಡಿದ ಸುರೇಶ್, 'ಐಶ್ವರ್ಯಾ ಗೌಡ ಹಾಗೂ ನಮ್ಮ ನಡುವೆ ಯಾವುದೇ ಹಣಕಾಸು ಹಾಗೂ ಇತರೇ ವಹಿವಾಟು ನಡೆದಿಲ್ಲ. ಅವರು 3-4 ಬಾರಿ ಗೃಹ ಕಚೇರಿಯಲ್ಲಿ ಭೇಟಿ ಮಾಡಿ, ಕೆಲವೊಂದು ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ವಾಸ ಮಾಡುತ್ತಿದ್ದರು ಎನ್ನುವ ಕಾರಣಕ್ಕೆ ಅವರು ಆಯೋಜನೆ ಮಾಡಿದ್ದ ಕಾರ್ಯಕ್ರಮಗಳಿಗೆ ಹೋಗಿದ್ದೇನೆ. ಇದರ ಹೊರತಾಗಿ ಬೇರೇನೂ ಇಲ್ಲ' ಎಂದು ಹೇಳಿದರು.

ಅಸಮಾಧಾನ: ಸೋಮವಾರ ಬೆಳಿಗ್ಗೆ 11 ಗಂಟೆಗೆ ಇ.ಡಿ. ಕಚೇರಿಗೆ ವಿಚಾರಣೆಗೆ ಬರುವಂತೆ ಸೂಚಿಸಿತ್ತು. ಆದರೆ, 11.15ಕ್ಕೆ ವಿಚಾರಣೆಗೆ ಹಾಜರಾದರು. ತಡವಾಗಿ ಬಂದ ಕಾರಣ ಕಚೇರಿ ಹೊರಗಡೆಯೇ ಅವರನ್ನು ಕೂರಿಸಲಾಗಿತ್ತು. ನೋಂದಣಿ ಪುಸ್ತಕದಲ್ಲಿ ಸಹಿ ಮಾಡಿದ ಬಳಿಕವೂ ಸುರೇಶ್ ಅವರನ್ನು ಕಚೇರಿ ಒಳಗೆ ಬಿಡಲು ಇ.ಡಿ ಅಧಿಕಾರಿಗಳು ವಿಳಂಬ ಮಾಡಿದರು. ಆಗ ಸುರೇಶ್ ಅವರು, ಏರು ಧ್ವನಿಯಲ್ಲಿ ಅಧಿಕಾರಿಗಳನ್ನು ಪ್ರಶ್ನಿಸಿದರು.

ಮುನ್ನೆಚ್ಚರಿಕೆ ಕ್ರಮವಾಗಿ ಶಾಂತಿನಗರದ ಇ.ಡಿ ಕಚೇರಿ ಬಳಿ 50 ಜನ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

> ಇ.ಡಿ ವಿಚಾರಣೆ ಎದುರಿಸಲು ನಮ್ಮ ಕುಟುಂಬ ಸದಾ ಸಿದ್ಧ. ಯಾರದ್ದೋ ಹೇಳಿಕೆ ಮೇಲೆ ಡಿ.ಕೆ. ಸುರೇಶ್ ಅವರನ್ನು ವಿಚಾರಣೆಗೆ ಕರೆದಿದ್ದಾರೆ. ಇದನ್ನು ಮಾಧ್ಯಮಗಳು ವೈಭವೀಕರಿಸುವ ಅಗತ್ಯವಿಲ್ಲ
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

ಐಶ್ವರ್ಯಾ ಪ್ರಕರಣ: ₹ 3.98 ಕೋಟಿ ಮೌಲ್ಯದ ಆಸ್ತಿ ಜಪ್ತಿ



ಐಶ್ವರ್ಯಾ ಗೌಡ

ಬೆಂಗಳೂರು: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐಶ್ವರ್ಯಾ ಗೌಡ ಅವರ ಸುಮಾರು ₹3.98 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಬೆಂಗಳೂರು ವಲಯ ಸೋಮವಾರ ತಿಳಿಸಿದೆ.

ಅಂದಾಜು ₹ 2.01 ಕೋಟಿ ಮೌಲ್ಯದ ಫ್ಲ್ಯಾಟ್‌ಗಳು, ನಿರ್ಮಾಣ ಹಂತದ ಕಟ್ಟಡ, ಜಮೀನು ಹಾಗೂ ನಗದು ಸೇರಿ ₹ 1.97 ಕೋಟಿ ಮೌಲ್ಯದ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಮಾಜಿ ಸಂಸದ ಡಿ.ಕೆ.ಸುರೇಶ್ ಸಂಬಂಧಿ ಎಂಬುದಾಗಿ ಹೇಳಿಕೊಂಡು ಚಿನ್ನದ ವ್ಯಾಪಾರಿ, ಉದ್ಯಮಿ ಹಾಗೂ ವೈದ್ಯರಿಂದ ಕೋಟ್ಯಂತರ ರೂಪಾಯಿ ಪಡೆದು, ವಾಪಸ್ ನೀಡದೆ ವಂಚನೆ ಮಾಡಿರುವ ಸಂಬಂಧ ಐಶ್ವರ್ಯಾಗೌಡ ಹಾಗೂ ಅವರ ಪತಿ ಕೆ.ಎನ್.ಹರೀಶ್ ವಿರುದ್ಧ ಚಂದ್ರಾಲೇಔಟ್, ಆರ್.ಆರ್. ನಗರ ಪೊಲೀಸ್ ಠಾಣೆ ಹಾಗೂ ಮಂಡ್ಯದಲ್ಲಿ ಪ್ರಕರಣಗಳು ದಾಖಲಾಗಿವೆ.

ಆರೋಪಿಗಳು ಹೆಚ್ಚಿನ ಲಾಭ ನೀಡುವುದಾಗಿ ಚಿನ್ನ ಹಾಗೂ ನಗದು ಪಡೆದುಕೊಂಡಿದ್ದರು. ಅಲ್ಲದೇ ಬ್ಯಾಂಕ್ ಖಾತೆಗಳ ಮೂಲಕವು ಹಣ ವರ್ಗಾವಣೆ ಆಗಿರುವುದು ಪತ್ತೆಯಾಗಿತ್ತು. ಬಳಿಕ ಹಣ ನೀಡುವಂತೆ ದೂರುದಾರರು ಪ್ರಶ್ನಿಸಿದಾಗ ರಾಜಕೀಯ ನಾಯಕರ ಪ್ರಭಾವ ಬಳಸಿ ಐಶ್ವರ್ಯಾ ಗೌಡ ದಂಪತಿ ಧಮಕಿ ಹಾಕುತ್ತಿದ್ದರು ಎಂದು ತನಿಖೆಯಿಂದ ತಿಳಿದುಬಂದಿದೆ ಎಂದು ಇ.ಡಿ. ಹೇಳಿದೆ.

ಐಶ್ವರ್ಯಾ ಗೌಡ ಅವರ ನಿವಾಸ ಮತ್ತು ಗೊರಗುಂಟೆಪಾಳ್ಯದಲ್ಲಿರುವ ಫ್ಲ್ಯಾಟ್ ಮೇಲೆ ಏಪ್ರಿಲ್ 24 ರಂದು ದಾಳಿ ನಡೆಸಿದ್ದ ವೇಳೆ, ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ದಾಖಲೆಗಳು ಪತ್ತೆಯಾಗಿದ್ದವು. ಅಲ್ಲದೇ ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ಬಹುಕೋಟಿ ಹಣ ವರ್ಗಾವಣೆ ಆರೋಪ ಸಂಬಂಧ ಐಶ್ವರ್ಯಾ ವಿರುದ್ಧ ಇ.ಡಿ, ಸ್ವಯಂಪ್ರೇರಿತವಾಗಿ ಪಿಎಂಎಲ್ಎ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಏಪ್ರಿಲ್ 25ರಂದು ಬಂಧಿಸಿತ್ತು. ಐಶ್ವರ್ಯಾ ಗೌಡ ಅವರಿಗೆ ಜೂನ್ 18 ರಂದು ನ್ಯಾಯಾಲಯವು ಷರತ್ತುಬದ್ಧ ಜಾಮೀನು ನೀಡಿತ್ತು.

'ಆಲಿಬಾಬಾ ಮತ್ತು 34 ಕಳ್ಳರ ಸರ್ಕಾರ'

ಪ್ರಜಾವಾಣಿ ವಾರ್ತೆ

ಎಚ್‌.ಡಿ. ಕುಮಾರಸ್ವಾಮಿ

ನವದೆಹಲಿ: 'ರಾಜ್ಯದ ಪರಿಸ್ಥಿತಿ ಹೇಗಾಗಿದೆ ಎಂದರೆ ಆಲಿಬಾಬಾ ಮತ್ತು 34 ಕಳ್ಳರು ಎನ್ನುವಂಥ ರೀತಿ ಆಗಿದೆ. ಮುಖ್ಯಮಂತ್ರಿ ಮತ್ತು ಸಚಿವರು ಕಮಿಷನ್ ಉಡಾಯಿಸಿ ಮೋಜು ಮಾಡುತ್ತಿದ್ದರೆ ಶಾಸಕರು ತಮ್ಮ ಕ್ಷೇತ್ರಗಳಿಗೆ ಮುಖ ಹಾಕಲಾರದ ದುಸ್ಥಿತಿಯಲ್ಲಿ ಇದ್ದಾರೆ. ಇದಕ್ಕಿಂತ ನಾಚಿಕೆಗೇಡಿನ ವಿಷಯ ಬೇರೇನಿದೆ? ಇದನ್ನು ಪ್ರತಿಪಕ್ಷದವರು ಹೇಳುತ್ತಿಲ್ಲ. ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕರಾದ ಬಿ.ಆರ್. ಪಾಟೀಲ, ರಾಜು ಕಾಗೆ, ಬೇಳೂರು ಗೋಪಾಲಕೃಷ್ಣ ಅಂಥವರೇ ಹೇಳುತ್ತಿದ್ದಾರೆ. ಕಾಂಗ್ರೆಸ್ ಶಾಸಕರೇ ಈ ಸರ್ಕಾರಕ್ಕೆ ಭ್ರಷ್ಟಾಚಾರದ ಪ್ರಮಾಣಪತ್ರ ನೀಡಿದ್ದಾರೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಲೇವಡಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ದರ್ಬಾರಿನಲ್ಲಿ ಶಾಸಕರ ಪರಿಸ್ಥಿತಿ ತಬರನ ಕಥೆಯಂತೆ ಆಗಿದೆ' ಎಂದು ವ್ಯಂಗ್ಯವಾಡಿದರು. 'ಶಾಸಕರು ಅನುದಾನಕ್ಕಾಗಿ, ಸರ್ಕಾರದ ಯೋಜನೆಗಳಿಗಾಗಿ ಕಚೇರಿಗಳ ಸುತ್ತ, ಮಂತ್ರಿ ಮಹೋದಯರ ಸುತ್ತ ತಬರನಂತೆ ಸುತ್ತುತ್ತಿದ್ದಾರೆ. ಆಡಳಿತ ಪಕ್ಷದ ಸದಸ್ಯರಿಗೇ ಇಂಥ ದುರ್ಗತಿ ಬಂದರೆ ಇತರೆ ಪಕ್ಷಗಳ ಶಾಸಕರ ಪರಿಸ್ಥಿತಿ ಏನು' ಎಂದು ಪ್ರಶ್ನಿಸಿದರು.

'ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿ ಎನ್ನುವವರು ಇದ್ದಾರಾ? ಸರ್ಕಾರ ಎನ್ನುವುದು ಇದೆಯಾ? ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ. ಹೆಚ್ಚು ಪ್ರಶ್ನೆ ಕೇಳಿದರೆ ಅವರು ಕದ್ದು ಓಡುತ್ತಾರೆ' ಎಂದರು.

'ರಾಯಚೂರಿನಲ್ಲಿ ಶಾಸಕರ ಅನುದಾನದ ಬಗ್ಗೆ ಮುಖ್ಯಮಂತ್ರಿಯವರಿಗೆ ಮಾಧ್ಯಮದವರು ಪ್ರಶ್ನೆ ಕೇಳಿದರೆ, ಮುಖ್ಯಮಂತ್ರಿಗೆ ಅನುದಾನ ಇರುತ್ತದಾ? ಹ್ಹಾ.. ಹ್ಹಾ.. ಎಂದು ಉದ್ಗಾರ ತೆಗೆದರು. ಎಲ್ಲಿದೆ ವಿಶೇಷ ಅನುದಾನ ಎಂದು ಮಾಧ್ಯಮದವರಿಗೇ ಅವರು ಪ್ರಶ್ನೆ ಕೇಳಿದರು. ಅವರನ್ನು ಮುಖ್ಯಮಂತ್ರಿ ಅನ್ನಬೇಕಾ? ಈ ಭಾಗ್ಯಕ್ಕೆ ಅವರು ದೇವರಾಜ ಅರಸು ದಾಖಲೆ ಮುರಿಯಲು ಹೊರಟಿದ್ದಾರೆಯೇ' ಎಂದು ಪ್ರಶ್ನಿಸಿದರು.

'ಕುಂಭಕರ್ಣ ನಿದ್ದೆಯಲ್ಲಿದ್ದ ಪಾಟೀಲ'

ಅಕ್ರಮ ಗಣಿಗಾರಿಕೆಯಿಂದ ಬೊಕ್ಕಸಕ್ಕೆ ಆಗಿರುವ ₹ 1.50 ಲಕ್ಷ ಕೋಟಿ ನಷ್ಟವನ್ನು ಆರೋಪಿಗಳಿಂದ ವಸೂಲು ಮಾಡಲು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಒಬ್ಬ ವಸೂಲಾತಿ ಆಯುಕ್ತರನ್ನು ತಕ್ಷಣ ನೇಮಿಸಬೇಕು ಎಂದು ಆಗ್ರಹಿಸಿ ಕಾನೂನು ಸಚಿವ ಎಚ್‌.ಕೆ. ಪಾಟೀಲ ಪತ್ರ ಬರೆದಿದ್ದಾರೆ. ಅವರು ಇಷ್ಟು ದಿನ ಕುಂಭಕರ್ಣ ನಿದ್ರೆಯಲ್ಲಿದ್ದಾರಾ. ಏಳು ಪುಟಗಳ ಪತ್ರವನ್ನು ಕಾವ್ಯಮಯವಾಗಿ ಬರೆದಿದ್ದಾರೆ ಅಷ್ಟೇ. ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಈ ಪತ್ರದ ತಂತ್ರ ನಡೆಸಿದ್ದಾರೆ. ಈ ಪತ್ರವನ್ನು ಕಸದ ಬುಟ್ಟಿಗೆ ಎಸೆಯಬೇಕು. ಕಳೆದ ಬಾರಿ ಸಿದ್ದರಾಮಯ್ಯ ಅವರು ತಮ್ಮ ಅಧಿಕಾರಾವಧಿಯಲ್ಲಿ ಕಾನೂನುಬಾಹಿರವಾಗಿ ಏಳು ಗಣಿ ಕಂಪನಿಗಳಿಗೆ ಅನುಮತಿ ನೀಡಿದ್ದರು. ಅದರ ಬಗ್ಗೆ ಏನು ಹೇಳುತ್ತೀರಿ ಎಚ್‌.ಕೆ. ಪಾಟೀಲರೇ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಪಡಿತರ ಜೊತೆ 'ಇಂದಿರಾ ಕಿಟ್'?

ಒಂದನೇ ಪುಟದಿಂದ...

ರಾಜ್ಯ ಸರ್ಕಾರ ಇತ್ತೀಚೆಗೆ ನಡೆಸಿದ ಸಮೀಕ್ಷೆಯಲ್ಲಿ ಶೇ 90ಕ್ಕಿಂತಲೂ ಹೆಚ್ಚು ಫಲಾನುಭವಿಗಳು ಹೆಚ್ಚುವರಿ ಅಕ್ಕಿ ಅಥವಾ ನೇರ ನಗದು ವರ್ಗಾವಣೆಯ ಬದಲು ಬೇಳೆಕಾಳುಗಳು, ಎಣ್ಣೆ, ಸಕ್ಕರೆ ಒಳಗೊಂಡಿರುವ ಪೌಷ್ಟಿಕಾಂಶಗಳ ಕಿಟ್ ನೀಡುವಂತೆ ಒಲವು ವ್ಯಕ್ತಪಡಿಸಿದ್ದಾರೆ. ಈ ಕಾರಣಕ್ಕೆ ಹೆಚ್ಚುವರಿ ಅಕ್ಕಿಯ ಬದಲು ಕಿಟ್ ನೀಡುವ ಯೋಜನೆ ರೂಪಿಸಲಾಗಿದೆ ಎಂದು ಆಹಾರ ಇಲಾಖೆ ಮೂಲಗಳು ತಿಳಿಸಿವೆ

ಪ್ರಸ್ತಾವಿತ ಕಿಟ್‌ನಲ್ಲಿ ಗೋಧಿ, ಸಕ್ಕರೆ, ಉಪ್ಪು, ತೊಗರಿ ಬೇಳೆ, ಅಡುಗೆ ಎಣ್ಣೆ, ಚಹಾ ಪುಡಿ, ಕಾಫಿ ಪುಡಿ ನೀಡಲು ಉದ್ದೇಶಿಸಲಾಗಿದೆ. ರಾಜ್ಯದಲ್ಲಿ ಬಿಪಿಎಲ್ ಫಲಾನುಭವಿಗಳ 1.28 ಕೋಟಿ ಕುಟುಂಬಗಳಿವೆ. ಪ್ರತಿ ಕುಟುಂಬದಲ್ಲಿ ಸರಾಸರಿ 3.5 ಫಲಾನುಭವಿಗಳು ಇರಬಹುದೆಂದು ಅಂದಾಜಿಸಲಾಗಿದೆ. ಈ ಕಿಟ್ ನೀಡುವುದರಿಂದ ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳಿಗೆ ಅಂದಾಜು ₹400 ವೆಚ್ಚ ತಗಲಬಹುದು. ಆಗ, ₹573 ಕೋಟಿ ಆಗುತ್ತಿರುವ ವೆಚ್ಚ ತಿಂಗಳಿಗೆ ₹512 ಕೋಟಿಗೆ ಇಳಿಯಲಿದೆ. ವಾರ್ಷಿಕ ಒಟ್ಟು ₹6,144 ಕೋಟಿ ಆಗಬಹುದು ಎಂದು ಲೆಕ್ಕ ಹಾಕಲಾಗಿದೆ. ಹೀಗೆ ಅಕ್ಕಿಗೆ ಬದಲಿಯಾಗಿ ಕಿಟ್ ವಿತರಿಸಿದರೆ ಪ್ರತಿ ತಿಂಗಳು ₹60 ಕೋಟಿಯಂತೆ ವಾರ್ಷಿಕ ಅಂದಾಜು ₹720 ಕೋಟಿ ಉಳಿತಾಯ ಆಗಬಹುದು ಎಂದೂ ಇಲಾಖೆ ಲೆಕ್ಕಾಚಾರ ಮಾಡಿದೆ.

ನ್ಯಾಯಬೆಲೆ ಅಂಗಡಿಗಳ ಮೂಲಕ ಆಧಾರ್ ಲಿಂಕ್ ಆಗಿರುವ ಪಡಿತರ ಚೀಟಿಯ ಫಲಾನುಭವಿಯನ್ನು ದೃಢೀಕರಿಸಿಕೊಂಡು ಕಿಟ್‌ಗಳನ್ನು ವಿತರಿಸ ಬಹುದು. ರಾಜ್ಯ ಸರ್ಕಾರ ವಿತರಿಸುವುದರಿಂದ 'ಇಂದಿರಾ' ಮತ್ತು 'ಅನ್ನಭಾಗ್ಯ' ಅಡಿಯಲ್ಲಿ ಬ್ರ್ಯಾಂಡ್ ಮಾಡಬಹುದು ಎಂದೂ ಇಲಾಖೆ ಸಿದ್ಧಪಡಿಸಿರುವ ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ.

ಈ ಯೋಜನೆಯನ್ನು ಮೊದಲು ಆಯ್ದ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಬಹುದು. ನಂತರ ಯೋಜನೆ ಮೌಲ್ಯಮಾಪನ ನಡೆಸಿ, ಹಂತ ಹಂತವಾಗಿ ರಾಜ್ಯದಾದ್ಯಂತ ವಿಸ್ತರಿಸ ಬಹುದು. ಕಿಟ್‌ಗೆ ಅಗತ್ಯವಾದ ವಸ್ತುಗಳನ್ನು ರಾಜ್ಯ ನಾಗರಿಕ ಸರಬರಾಜು ನಿಗಮದಿಂದ ಅಥವಾ ಗೊತ್ತು ಪಡಿಸಿದ ಇತರ ಏಜೆನ್ಸಿಗಳ ಮೂಲಕ ಖರೀದಿಸಬಹುದು. ಯೋಜನೆಯ ಪರಿಣಾಮ ಮತ್ತು ಪಾರದರ್ಶಕತೆಯನ್ನು ಖಾತ್ರಿಪಡಿಸಿಕೊಳ್ಳಲು ಸ್ವತಂತ್ರ ಸಂಸ್ಥೆಯಿಂದ ತಪಾಸಣೆ ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆಗೆ ಒಳಪಡಿಸಬಹುದು ಎಂದೂ ಪ್ರಸ್ತಾವದಲ್ಲಿದೆ.

'ಇಂದಿರಾ ಕಿಟ್'ನಿಂದ ಆರ್ಥಿಕ ಪರಿಣಾಮ (ವೆಚ್ಚ ₹ ಕೋಟಿಗಳಲ್ಲಿ)

ಅವಧಿ	ಅಕ್ಕಿ ವೆಚ್ಚ	ಕಿಟ್ ವೆಚ್ಚ
ತಿಂಗಳಿಗೆ	573	512
ವಾರ್ಷಿಕ	6,876	6,144
ವಾರ್ಷಿಕ ಉಳಿತಾಯ 720 (ಅಂದಾಜು)		

ಗ್ರಾಮ ಪಂಚಾಯತಿ ಕಾರ್ಯದರ್ಶಿ ವರ್ಗಾವಣೆ ಪ್ರಕ್ರಿಯೆ ಆರಂಭ

ಬೆಂಗಳೂರು: ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ಮತ್ತು ಗ್ರೇಡ್-2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆಯ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಜೂನ್ 23 ರಿಂದ ಆರಂಭಿಸಿ, ಜುಲೈ 28ರ ಒಳಗೆ ಪೂರ್ಣಗೊಳಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಿಗೆ ಶೇ 9ರಷ್ಟು ಕಡ್ಡಾಯ ಸಾರ್ವಜನಿಕ ಹಿತಾಸಕ್ತಿ–ಸಾಮಾನ್ಯ ಕೋರಿಕೆ ವರ್ಗಾವಣೆ ಹಾಗೂ ಶೇಕಡಾ 6ರಷ್ಟು ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗಳನ್ನು ಕೌನ್ಸೆಲಿಂಗ್ ಮೂಲಕ ನಡೆಸಲಾಗುವುದು ಎಂದಿದ್ದಾರೆ.

ಜೂನ್ 23ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗುವುದು, ಕನಿಷ್ಠ 3 ವರ್ಷ ಸೇವೆ ಸಲ್ಲಿಸಿದವರು ವರ್ಗಾವಣೆಗೆ ಅರ್ಹರು. ಗರಿಷ್ಠ ಐದು ವರ್ಷ ಸೇವೆ ಸಲ್ಲಿಸಿರುವರನ್ನು ಕಡ್ಡಾಯ ವರ್ಗಾವಣೆಗೆ ಬರುತ್ತಾರೆ. ಜೂನ್ 24ರಂದು ಖಾಲಿ ಹುದ್ದೆಗಳ ಜಿಲ್ಲಾವಾರು ಪಟ್ಟಿ ಪ್ರಕಟಿಸಲಾಗುವುದು. ಆಯಾ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಆಕ್ಷೇಪಣೆ ಸಲ್ಲಿಸಲು ಜೂನ್ 26 ಕೊನೆಯ ದಿನವಾಗಿದೆ. 30ರಂದು ಅಂತಿಮ ಪಟ್ಟಿ ಪ್ರಕಟಿಸಲಾಗುವುದು. ವರ್ಗಾವಣೆ ಹಾಗೂ ವಿಸ್ತರಣೆ ಅರ್ಜಿಗಳನ್ನು ಜುಲೈ 2ರ ಒಳಗೆ ಸಲ್ಲಿಸಬೇಕು. ಜುಲೈ 14ರಂದು ಸಾರ್ವಜನಿಕ ಹಿತಾಸಕ್ತಿಯ ಅಂತಿಮ ವರ್ಗಾವಣೆ ಆದ್ಯತಾ ಪಟ್ಟಿ, 18ರಂದು ಪತಿ–ಪತ್ನಿ ಪ್ರಕರಣದಡಿ ಅಂತರ ಜಿಲ್ಲಾ ವರ್ಗಾವಣೆಗೆ ಆದ್ಯತಾ ಪಟ್ಟಿ ಪ್ರಕಟಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಜುಲೈ 22ರಂದು ಪತಿ–ಪತ್ನಿ ಪ್ರಕರಣದಡಿ ಅಂತರ ಜಿಲ್ಲಾ ವರ್ಗಾವಣೆಗೆ ಕೌನ್ಸೆಲಿಂಗ್, 24ರಂದು ವಿಶೇಷ ಪ್ರಕರಣಗಳ ಎರಡನೇ ಸುತ್ತಿನ ಕೌನ್ಸೆಲಿಂಗ್, 25ರಂದು ಮಾನ್ಯ ಕೋರಿಕೆ ವರ್ಗಾವಣೆ ಕೌನ್ಸೆಲಿಂಗ್, 28ರಂದು ಸ್ಥಳ ನಿರೀಕ್ಷಣೆಯಲ್ಲಿರುವ ಮತ್ತು ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್ ನಡೆಸಲಾಗುತ್ತದೆ ಎಂದಿದ್ದಾರೆ.

ಸ್ವಾಮೀಜಿ ಬೆಂಬಲಕ್ಕೆ ಜನ, ಮಠಕ್ಕೆ ಮರಳಲು ಪಟ್ಟು

ಮೂಡಲಗಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಶಿವಾಪುರ (ಹ) ಗ್ರಾಮದ ಅಡವಿಸಿದ್ಧೇಶ್ವರ ಶಾಖಾ ಮಠದಿಂದ ಅಡವಿಸಿದ್ದರಾಮ ಸ್ವಾಮೀಜಿ ಅವರನ್ನು ಬಹಿಷ್ಕಾರ ಹಾಕಿದ್ದನ್ನು ಗ್ರಾಮದ ಬಹುತೇಕ ಜನರು ಖಂಡಿಸಿದರು.

'ಮಠದಲ್ಲಿ ಮಹಿಳೆಯೊಬ್ಬರನ್ನು ಉಳಿಸಿಕೊಂಡಿದ್ದಾರೆ' ಎಂದು ಆರೋಪಿಸಿ ಗ್ರಾಮದ ಕೆಲವರು ಭಾನುವಾರ ಸ್ವಾಮೀಜಿಯವರನ್ನು ಮಠದಿಂದ ಹೊರಹಾಕಿದ್ದರು.

ಗೋಕಾಕದ ಶೂನ್ಯ ಸಂಪಾದನಾ ಮಠದಲ್ಲಿ ಆಶ್ರಯ ಪಡೆದಿರುವ ಸ್ವಾಮೀಜಿಯವರನ್ನು ಸೋಮವಾರ ಭೇಟಿಯಾದ ಗ್ರಾಮಸ್ಥರು, 'ಷಡ್ಯಂತ್ರ ನಡೆದಿದೆ. ನಾವು ನಿಮ್ಮೊಂದಿಗೆ ಇದ್ದೇವೆ. ನೀವು ಮಠಕ್ಕೆ ಬರಬೇಕು' ಎಂದು ಕೋರಿದರು.

ಈ ವಿಷಯವನ್ನು ಶಾಸಕ ಬಾಲಚಂದ್ರ ಜಾರಕಿಹೊಳಿ ಅವರ ಸಮ್ಮುಖದಲ್ಲಿಯೇ ಬಗೆಹರಿಸಬೇಕು ಎಂದು ನಿರ್ಧರಿಸಿದ ಗ್ರಾಮದ ಜನ, ಗೋಕಾಕದ ಎನ್‌ಎಸ್‌ಎಫ್ ಸಂಸ್ಥೆ ಆವರಣದಲ್ಲಿ ಬೀಡು ಬಿಟ್ಟರು.

'ಸರ್ಕಾರಿ ಜಮೀನು ಸಾಬ್ರುಗೆ ಬರೆದುಕೊಟ್ಟರೆ ನೇಣಿಗೆ ಹಾಕುತ್ತೇನೆ'

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಸರ್ಕಾರಿ ಜಮೀನು ಸಾಬ್ರುಗೆ ಬರೆದುಕೊಟ್ಟರೆ ನೇಣಿಗೆ ಹಾಕುತ್ತೇನೆ' ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಅವರು ಅಧಿಕಾರಿಗಳಿಗೆ ನೀಡಿರುವ ಎಚ್ಚರಿಕೆಯ ಮಾತು ಚರ್ಚೆಗೆ ಗ್ರಾಸವಾಗಿದೆ.

ತಾಲ್ಲೂಕಿನ ಮಹದೇವಪುರ ಗ್ರಾಮದಲ್ಲಿ ಜೂನ್ 19ರಂದು ನಾಲೆ ಅಭಿವೃದ್ಧಿ ಹಾಗೂ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡುವ ಸಂದರ್ಭದಲ್ಲಿ ಅವರು ಹೀಗೆ ಹೇಳಿದ್ದರು. ಈ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ದರಖಾಸ್ತು ಜಮೀನು ಉಳುಮೆ ಮಾಡುತ್ತಿರುವ ತಾಲ್ಲೂಕಿನ ಅರ್ಹ ರೈತರಿಗೆ ಸಾಗುವಳಿ ಪತ್ರ ಕೊಡುವವರೆಗೆ ಸರ್ಕಾರಿ ಜಮೀನಿಗೆ ಬೇಲಿ ಹಾಕಲು ಯಾರಿಗೂ ಅವಕಾಶ ನೀಡಬಾರದು' ಎಂದೂ ಹೇಳಿರುವುದು ಆ ವಿಡಿಯೊದಲ್ಲಿದೆ.

ಈ ಕುರಿತು ಸೋಮವಾರ ಸ್ಪಷ್ಟನೆ ನೀಡಿರುವ ರಮೇಶ ಬಂಡಿಸಿದ್ದೇಗೌಡ, 'ಮೈಸೂರಿನ ಕೆಲವು ಶ್ರೀಮಂತ ಮುಸಲ್ಮಾನರು ತಾಲ್ಲೂಕಿನ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನನ್ನು ಅತಿಕ್ರಮಿಸುತ್ತಿದ್ದಾರೆ ಎಂದು ವ್ಯಾಪಕ ದೂರುಗಳು ಬಂದಿವೆ. ಈ ಕುರಿತು ಸ್ಥಳೀಯರು ಪೊಲೀಸರಿಗೆ ದೂರುಗಳನ್ನೂ ನೀಡಿದ್ದಾರೆ. ಆ ಬಗ್ಗೆ ಎಚ್ಚರ ವಹಿಸುವಂತೆ ಅಧಿಕಾರಿಗಳಿಗೆ ಹೇಳಿದ್ದೇನೆ' ಎಂದು ಹೇಳಿದರು.

₹625 ಕೋಟಿ ಗೋಲ್‌ಮಾಲ್: ಎಚ್‌ಡಿಕೆ

ನವದೆಹಲಿ: 'ಅಲ್ಪಸಂಖ್ಯಾತರ ಹೆಸರಿನಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ₹625 ಕೋಟಿ ಗೋಲ್‌ಮಾಲ್ ನಡೆಸಿದೆ. ಅಲ್ಪಸಂಖ್ಯಾತರ ಕೊಳೆಗೇರಿ ಅಭಿವೃದ್ಧಿಯ ₹398 ಕೋಟಿ ಯೋಜನೆಗೆ ಹಣಕಾಸು ಇಲಾಖೆ ಆಕ್ಷೇಪ ವ್ಯಕ್ತಪಡಿಸಿದೆ' ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನುದಾನ ಬಿಡುಗಡೆಗೆ ಆಕ್ಷೇಪ ವ್ಯಕ್ತಪಡಿಸಿ ಇದೇ 20ರಂದು ಹಣಕಾಸು ಇಲಾಖೆಯ ಕಾರ್ಯದರ್ಶಿ (ವೆಚ್ಚ) ಅವರು ಬರೆದ ಪತ್ರವನ್ನು ಪ್ರದರ್ಶಿಸಿದರು.

'ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಎಲ್‌.ಕೆ. ಅತೀಕ್ ಅವರನ್ನು ಏಕೆ ತೆಗೆದರು? ಈ ವ್ಯಕ್ತಿ ಮುಂದಿನ ಮೂರು ವರ್ಷಕ್ಕೆ ₹1000 ಕೋಟಿ ಅನುದಾನದ ಕ್ರಿಯಾಯೋಜನೆಗೆ ಮಂಜೂರಾತಿ ನೀಡಿದ್ದರು. ಈ ಹಣದಲ್ಲಿ ಅಲ್ಪಸಂಖ್ಯಾತರ ಹೆಸರು ಹೇಳಿಕೊಂಡು ಎಷ್ಟು ಹಣ ತಿಂದಿದ್ದೀರಿ? ಈ ಅತೀಕ್ ಎಂಬ ವ್ಯಕ್ತಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಏನೆಲ್ಲಾ ಮಾಡಿದ್ದರು ಎಂಬುದು ನನಗೆ ಗೊತ್ತಿದೆ. ಕಾಂಗ್ರೆಸ್‌ನವರು ಅವರಿಂದ ಏನೇನು ಮಾಡಿಸಿದರು ಎನ್ನುವುದೂ ಗೊತ್ತಿದೆ. ಈ ಸರ್ಕಾರದಲ್ಲಿ ಸರ್ಕಾರಕ್ಕಿಂತಲೂ ದೊಡ್ಡವರು ಇದ್ದಾರೆ. ಅವರೆಲ್ಲ ಮುಖ್ಯಮಂತ್ರಿಯವರ ಸುತ್ತ ಇದ್ದಾರೆ. ಸರ್ಕಾರದ ಒಪ್ಪಿಗೆಯೇ ಇಲ್ಲದೆ ಹಾಗೂ ಹಣಕಾಸು ಇಲಾಖೆಯ ಒಪ್ಪಿಗೆಯನ್ನೂ ಪಡೆಯದೇ ₹625 ಕೋಟಿ ಹಣ ಬಿಡುಗಡೆ ಆಗಿದೆ' ಎಂದು ಅವರು ಆರೋಪಿಸಿದರು.

'ಲಂಚ': ಶಾಸಕರ ಸ್ವರ ಹೆಚ್ಚಳ

ಒಂದನೇ ಪುಟದಿಂದ...

ಅಲ್ಲಿಯೇ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ರಾಜು ಕಾಗೆ ಸೇರಿದಂತೆ ಕೆಲವು ಶಾಸಕರು ಸರ್ಕಾರದ ವಿರುದ್ಧ ಮಾಧ್ಯಮಗಳ ಮೂಲಕ ಅಸಮಾಧಾನ ವ್ಯಕ್ತಪಡಿಸಿರುವ ಬಗ್ಗೆ ಈಗಷ್ಟೇ ಗೊತ್ತಾಗಿದೆ. ಎಲ್ಲ ಶಾಸಕರ ಜತೆ ಚರ್ಚಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುವುದು' ಎಂದರು.

'ಅನಗತ್ಯ ಆರೋಪ ಗೌರವ ತರದು' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದ್ದಾರೆ.

'ರಾಜು ಕಾಗೆಯಂತೆ ಬಹಳ ಮಂದಿ ಮಾತನಾಡುವರು'

ಒಂದನೇ ಪುಟದಿಂದ...

'ಮನೆ ಹಂಚಿಕೆ ಸಂಬಂಧ ಅಫಜಲಪುರ, ಯಾದಗಿರಿ, ಹೊಸಪೇಟೆಯಿಂದ ನೂರಾರು ಫೋನ್ ಕರೆಗಳು ಬರುತ್ತಿವೆ. ಇನ್ನು ಈ ಕಥೆ ಎಲ್ಲಿಗೆ ಹೋಗಿ ಮುಟ್ಟುತ್ತದೆ ನೋಡಿ' ಎಂದು ಹೇಳಿದರು.

ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡಿ, 'ನನ್ನ ಕ್ಷೇತ್ರದ ಕೆಲವೆಡೆ ಕೆಆರ್‌ಐಡಿಬಿಎಲ್ (ಲ್ಯಾಂಡ್ ಆರ್ಮಿ) ಅಧಿಕಾರಿಗಳು ನನಗೆ ಗೊತ್ತಿಲ್ಲದೆಯೇ ಭೂಮಿಪೂಜೆ ಮಾಡಿ ಕಾಮಗಾರಿಗಳನ್ನು ಆರಂಭಿಸಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿಇಟಿ: ಪರಿಶೀಲನಾ ಚೀಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸುಗಳ ಪ್ರವೇಶಕ್ಕೆ ಸೀಟು ಹಂಚಿಕೆ ಭಾಗವಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪರಿಶೀಲನಾ ಚೀಟಿ (ವೆರಿಫಿಕೇಷನ್ ಸ್ಲಿಪ್) ಬಿಡುಗಡೆ ಮಾಡಿದೆ.

ಅಭ್ಯರ್ಥಿಗಳು ತಮ್ಮ ಅರ್ಜಿ ಭರ್ತಿ ಮಾಡುವಾಗ ನಮೂದಿಸಿದ ಮೀಸಲಾತಿ ಮತ್ತಿತರ ಕೋರಿಕೆಗಳು ಈ ಚೀಟಿಯಲ್ಲಿ ಉಲ್ಲೇಖವಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. ವಿವಿಧ ಪ್ರಕಾರದ ಮೀಸಲು ಕೋರಿಕೆ ಪ್ರಕಾರವೇ ಸೀಟು ಹಂಚಿಕೆ ಮಾಡಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌. ಪ್ರಸನ್ನ ಹೇಳಿದ್ದಾರೆ.

ನಮೂದಿಸಿದ ಮೀಸಲು ಕೋರಿಕೆಗಳು ಪರಿಶೀಲನಾ ಚೀಟಿಯಲ್ಲಿ ತಪ್ಪಾಗಿದ್ದರೆ ಸರಿ ಮಾಡಿಕೊಳ್ಳಲು ಶೀಘ್ರದಲ್ಲೇ ದಿನಾಂಕ ನಿಗದಿ ಮಾಡಲಾಗುವುದು. ಕೆಇಎ ಕಚೇರಿಗೆ ಭೇಟಿ ನೀಡಿ ಸರಿಪಡಿಸಿಕೊಳ್ಳಬಹುದು ಎಂದು ಮಾಹಿತಿ ನೀಡಿದ್ದಾರೆ.

ಕರ್ನಾಟಕ ಸಿಇಟಿಗೆ ಮಹಾರಾಷ್ಟ್ರ ಮೆಚ್ಚುಗೆ

ಬೆಂಗಳೂರು: ಮಹಾರಾಷ್ಟ್ರ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷ ಸಮೀರ್ ಕುಮಾರ್ ಬಿಸ್ವಾಸ್ ನೇತೃತ್ವದ ನಿಯೋಗ ಸೋಮವಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಭೇಟಿ ನೀಡಿ ಪರೀಕ್ಷಾ ವ್ಯವಸ್ಥೆ, ಸುಧಾರಣಾ ಕ್ರಮಗಳ ಬಗ್ಗೆ ಮಾಹಿತಿ ಕಲೆಹಾಕಿ ಮೆಚ್ಚುಗೆ ವ್ಯಕ್ತಪಡಿಸಿತು.

ಎರಡರಲ್ಲಿ ಎಎಪಿ ಗೆಲುವು

ಉಪ ಚುನಾವಣೆ: ನಿಲಂಬೂರಲ್ಲಿ ಕಾಂಗ್ರೆಸ್, ತಲಾ ಒಂದರಲ್ಲಿ ಬಿಜೆಪಿ, ಟಿಎಂಸಿಗೆ ಜಯ

ಪ್ರಜಾವಾಣಿ ವಾರ್ತೆ

ನವದೆಹಲಿ: ನಾಲ್ಕು ರಾಜ್ಯಗಳ ಐದು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿ, ಎಎಪಿ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ತಮ್ಮ ನಾಲ್ಕು ಹಾಲಿ ಸ್ಥಾನಗಳನ್ನು ಉಳಿಸಿಕೊಂಡವು. ಕೇರಳದಲ್ಲಿ ಎಡಪಂಥೀಯ ಬೆಂಬಲಿತ ಪಕ್ಷೇತರ ಅಭ್ಯರ್ಥಿ ಹೊಂದಿದ್ದ ಕ್ಷೇತ್ರವನ್ನು ಕಾಂಗ್ರೆಸ್ ಕಸಿದುಕೊಂಡಿತು. ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡಿದ್ದ ಎಎಪಿಗೆ ಈ ಫಲಿತಾಂಶ ಅಲ್ಪ ಸಮಾಧಾನ ತಂದಿದೆ.

ಲೂಧಿಯಾನ ಪಶ್ಚಿಮ ಕ್ಷೇತ್ರ ಮತ್ತು ಗುಜರಾತ್‌ನ ವಿಸವದಾರ್‌ನಲ್ಲಿ ಆಮ್ ಆದ್ಮಿ ಪಕ್ಷ ಗೆಲುವು ಸಾಧಿಸಿತು. ಕೇರಳದ ನಿಲಂಬೂರು ಕ್ಷೇತ್ರದಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ 'ಯುಡಿಎಫ್' ಜಯ ಗಳಿಸಿತು. ಪಶ್ಚಿಮ ಬಂಗಾಳದ ಕಾಲಿಗಂಜ್‌ನಲ್ಲಿ ಟಿಎಂಸಿ ಗೆದ್ದಿತು. ಗುಜರಾತ್‌ನ ಕಡಿ ಕ್ಷೇತ್ರವನ್ನು ಬಿಜೆಪಿ ಉಳಿಸಿಕೊಂಡಿತು.

ಕಡಿ ಕ್ಷೇತ್ರದಲ್ಲಿ ಶಾಸಕರಾಗಿದ್ದ ಬಿಜೆಪಿಯ ಕರ್ಸನ್‌ಭಾಯ್ ಸೋಲಂಕಿ ನಿಧನರಾಗಿದ್ದರಿಂದ ಉಪಚುನಾವಣೆ ನಡೆಯಿತು. ಬಿಜೆಪಿಯ ರಾಜೇಂದ್ರ ಕುಮಾರ್ ಚಾವ್ಡಾ ಅವರು ಕಾಂಗ್ರೆಸ್‌ನ ರಮೇಶ್‌ಭಾಯ್ ಚಾವ್ಡಾ ಅವರನ್ನು 39,452 ಮತಗಳಿಂದ ಸೋಲಿಸಿದರು. ಎಎಪಿಯ ಜಗದೀಶ್‌ಭಾಯ್ ಚಾವ್ಡಾ 3,090 ಮತಗಳೊಂದಿಗೆ ಮೂರನೇ ಸ್ಥಾನ ಪಡೆದರು.

ವಿಸವದಾರ್‌ನಲ್ಲಿ ಹಾಲಿ ಎಎಪಿ ಶಾಸಕ ಭಯಾನಿ ಭೂಪೇಂದ್ರಭಾಯಿ ಗಂಡುಭಾಯಿ ಅವರನ್ನು ಬಿಜೆಪಿ ಸೆಳೆದು ಕೊಂಡಿತ್ತು. ಈ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ. ಎಎಪಿಯ ಗೋಪಾಲ್ ಇಟಾಲಿಯಾ ಅವರು ಬಿಜೆಪಿಯ ಕೀರ್ತಿ ಪಟೇಲ್ ಅವರನ್ನು ಮಣಿಸಿದರು. 2022ರಲ್ಲಿ ಎಎಪಿಯ ಗೆಲುವಿನ ಅಂತರ 6,904 ಮತಗಳಾಗಿದ್ದರೆ, ಈ ಸಲ 17,544ಕ್ಕೆ ಏರಿತು.

ಲೂಧಿಯಾನ ಪಶ್ಚಿಮ ಕ್ಷೇತ್ರದಲ್ಲಿ ಎಎಪಿಯ ಶಾಸಕರಾಗಿದ್ದ ಗುರುಪ್ರೀತ್ ಬಸ್ಸಿ ಗೋಗಿ ನಿಧನರಾಗಿದ್ದರು. ರಾಜ್ಯಸಭಾ ಸದಸ್ಯ ಸಂಜೀವ್ ಅರೋರಾ ಅವರನ್ನು ಪಕ್ಷ ಕಣಕ್ಕೆ ಇಳಿಸಿತ್ತು. ಅರೋರಾ ಅವರು ಕಾಂಗ್ರೆಸ್‌ನ ಭರತ್ ಭೂಷಣ್ ಅಶು ಅವರನ್ನು 10,637 ಮತಗಳಿಂದ ಸೋಲಿಸಿದರು. ಅರೋರಾ ರಾಜೀನಾಮೆಯಿಂದ ತೆರವಾಗುವ ರಾಜ್ಯಸಭಾ ಸ್ಥಾನಕ್ಕೆ ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅಭ್ಯರ್ಥಿಯಾಗುವ ಸಾಧ್ಯತೆ ಇದೆ.

ಒಂಬತ್ತು ವರ್ಷಗಳ ಅಂತರದ ನಂತರ ಕಾಂಗ್ರೆಸ್ ಪಕ್ಷವು ನಿಲಂಬೂರು ಕ್ಷೇತ್ರವನ್ನು ಗೆದ್ದುಕೊಂಡಿತು. ಪಕ್ಷದ ಅಭ್ಯರ್ಥಿ ಆರ್ಯಾಡನ್ ಶೌಕತ್ ಅವರು ಸಿಪಿಎಂನ ಎಂ. ಸ್ವರಾಜ್ ಅವರನ್ನು 11,077 ಮತಗಳ ಅಂತರದಿಂದ ಮಣಿಸಿದರು. ಸಿಪಿಐಎಂ ಜೊತೆಗಿನ ಭಿನ್ನಾಭಿಪ್ರಾಯದ ನಂತರ ಸ್ವತಂತ್ರ ಶಾಸಕ ಪಿ.ವಿ. ಅನ್ವರ್ ರಾಜೀನಾಮೆ ನೀಡಿದ್ದರು. ಕಾಳಿಗಂಜ್‌ನಲ್ಲಿ ಟಿಎಂಸಿ ಅಲಿಫಾ ಅಹ್ಮದ್ ಬಿಜೆಪಿಯ ಆಶಿಶ್ ಘೋಷ್ ಅವರನ್ನು 50,049 ಮತಗಳಿಂದ ಸೋಲಿಸಿದರು. ಕಾಂಗ್ರೆಸ್‌ನ ಕಬಿಲುದ್ದೀನ್ ಶೇಖ್ 28,348 ಮತ ಪಡೆದು ಮೂರನೇ ಸ್ಥಾನ ಪಡೆದರು.

ಗುಜರಾತ್‌ನ ಜುನಾಗಢ ಜಿಲ್ಲೆಯ ವಿಸಾವದರ್ ಕ್ಷೇತ್ರದ ಉಪ ಚುನಾವಣೆಯಲ್ಲಿ ಆಮ್‌ಆದ್ಮಿ ಪಕ್ಷದ ಅಭ್ಯರ್ಥಿ ಗೋಪಾಲ್ ಇಟಾಲಿಯಾ ಗೆಲುವು ಸಾಧಿಸಿದ ಬಳಿಕ ಅಹಮದಾಬಾದ್‌ನಲ್ಲಿ ಪಕ್ಷದ ಕಾರ್ಯಕರ್ತರ ಸಂಭ್ರಮಾಚರಣೆ ಪಿಟಿಐ ಚಿತ್ರ

ರಾಜ್ಯಸಭೆಗೆ ಹೋಗಲ್ಲ: ಕೇಜ್ರಿವಾಲ್

ನವದೆಹಲಿ (ಪಿಟಿಐ): 'ರಾಜ್ಯಸಭೆಗೆ ಹೋಗುವ ಯಾವುದೇ ಇಚ್ಛೆ ಹೊಂದಿಲ್ಲ' ಎಂದು ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ತಿಳಿಸಿದ್ದಾರೆ. ಪಶ್ಚಿಮ ಲೂಧಿಯಾನ ಕ್ಷೇತ್ರದ ಉಪಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದಿಂದ ಸ್ಪರ್ಧಿಸಿದ್ದ ರಾಜ್ಯಸಭಾ ಸದಸ್ಯ ಸಂಜೀವ್ ಅರೋರಾ ಜಯ ಸಾಧಿಸಿದ್ದಾರೆ. ಹೀಗಾಗಿ, ಅರೋರಾ ರಾಜ್ಯಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಲಿದ್ದಾರೆ. 'ರಾಜ್ಯಸಭಾ ಸ್ಥಾನಕ್ಕೆ ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿಯು ಅಭ್ಯರ್ಥಿಯ ಹೆಸರು ಸೂಚಿಸಲಿದೆ' ಎಂದು ಕೇಜ್ರಿವಾಲ್ ತಿಳಿಸಿದರು.

ಸೆಮಿಫೈನಲ್ ಇದ್ದಂತೆ: ಉಪಚುನಾವಣೆಯಲ್ಲಿನ ಗೆಲುವು 2027ರ ಚುನಾವಣೆಯ ಸೆಮಿಫೈನಲ್. ಈ ಫಲಿತಾಂಶದಿಂದ ಬಿಜೆಪಿ, ಕಾಂಗ್ರೆಸ್ ಪಕ್ಷವನ್ನು ಜನರು ಸ್ಪಷ್ಟವಾಗಿ ತಿರಸ್ಕರಿಸಿರುವ ಸೂಚನೆ ನೀಡಿದ್ದಾರೆ ಎಂದರು.

ಅಮೆರಿಕ ವೀಸಾ: ಸಾಮಾಜಿಕ ಮಾಧ್ಯಮ ಖಾತೆ ತಕ್ಷಣ ಸಾರ್ವಜನಿಕಗೊಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕ ವೀಸಾ ಪಡೆಯಲು ಅರ್ಜಿ ಸಲ್ಲಿಸುವವರು ತಕ್ಷಣ ದಿಂದಲೇ ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳನ್ನು 'ಅನ್‌ಲಾಕ್' ಮಾಡುವ ಮೂಲಕ ಸಾರ್ವಜನಿಕ ಪರಿಶೀಲನೆಗೆ ಮುಕ್ತಗೊಳಿಸಬೇಕು ಎಂದು ಭಾರತ ದಲ್ಲಿರುವ ಅಮೆರಿಕ ರಾಯಭಾರ ಕಚೇರಿ ಸೋಮವಾರ ತಿಳಿಸಿದೆ.

ವಲಸೆಯೇತರ 'ಎಫ್', 'ಎಂ' ಅಥವಾ 'ಜೆ' ವೀಸಾಗಳಿಗೆ ಅರ್ಜಿ ಸಲ್ಲಿಸಿರುವ ಎಲ್ಲರೂ ಅಮೆರಿಕದ ಕಾನೂನಿನಡಿ ತಮ್ಮ ಗುರುತುಗಳನ್ನು ಬಹಿರಂಗಪಡಿಸಬೇಕು. ತಮ್ಮ ಎಲ್ಲ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿನ ಗೋಪ್ಯತೆಯ ಸೆಟ್ಟಿಂಗ್‌ಗಳನ್ನು ತಕ್ಷಣದಿಂದ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕು ಎಂದು ರಾಯಭಾರ ಕಚೇರಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ವಿದೇಶಿ ವಿದ್ಯಾರ್ಥಿಗಳಿಗೆ ವೀಸಾ ನೀಡುವ ಪ್ರಕ್ರಿಯೆಯನ್ನು ಪುನರಾರಂಭಿಸುವುದಾಗಿ ಇತ್ತೀಚೆಗೆ ಘೋಷಿಸಿದ್ದ ಅಮೆರಿಕ, ಅರ್ಜಿದಾರರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳನ್ನು 'ಅನ್‌ಲಾಕ್' ಮಾಡಬೇಕು ಎಂದು ಹೇಳಿತ್ತು.

'ವೀಸಾ ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಸಾಮಾಜಿಕ ಮಾಧ್ಯಮ ಖಾತೆಗಳ ಪರಿಶೀಲನೆಯೂ ಒಳಗೊಳ್ಳಲಿದೆ. ಅರ್ಜಿದಾರರ ಖಾತೆಗಳನ್ನು ಸಚಿವಾಲಯದ ಅಧಿಕಾರಿಗಳು ಪರಿಶೀಲಿಸುತ್ತಾರೆ. ಅಮೆರಿಕದ ಮೂಲ ತತ್ವಗಳು,ಸರ್ಕಾರ, ಸಂಸ್ಕೃತಿ, ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅರ್ಜಿದಾರರ ಸಂದೇಶಗಳ ಬಗ್ಗೆ ನಿಗಾ ವಹಿಸುತ್ತಾರೆ' ಎಂದು ಅಮೆರಿಕದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿತ್ತು.

ಬಾಂಬ್ ಸ್ಫೋಟ: ಬಾಲಕಿ ಸಾವು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ಕಾಳಿಗಂಜ್ ಪಟ್ಟಣದ ಬರಾಚಂದಗರ್‌ನಲ್ಲಿ ಸೋಮವಾರ ಮಧ್ಯಾಹ್ನ ಬಾಂಬ್ ಸ್ಫೋಟಗೊಂಡು ಒಂಬತ್ತು ವರ್ಷದ ಬಾಲಕಿ ಮೃತಪಟ್ಟಿದ್ದಾಳೆ.

ಮಗುವಿಗೆ ಒಬಿಸಿ ಪ್ರಮಾಣ ಪತ್ರ ಕೋರಿದ್ದ ಪ್ರಕರಣ

'ಒಂಟಿ ತಾಯಿ' ಅರ್ಜಿ ವಿಚಾರಣೆ: 'ಸುಪ್ರೀಂ'ಒಪ್ಪಿಗೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಇತರ ಹಿಂದುಳಿದ ವರ್ಗಕ್ಕೆ (ಒಬಿಸಿ) ಸೇರಿದ 'ಒಂಟಿ ತಾಯಂದಿರ' ಮಕ್ಕಳಿಗೆ, ಅವರ ತಾಯಿಯ ಒಬಿಸಿ ಪ್ರಮಾಣ ಪತ್ರ ಆಧರಿಸಿ ಜಾತಿ ಪ್ರಮಾಣ ಪತ್ರ ನೀಡಲು ನಿಯಮಗಳಲ್ಲಿ ತಿದ್ದುಪಡಿ ತರಬೇಕು ಎಂದು ಕೋರಿರುವ ಅರ್ಜಿಯ ವಿಚಾರಣೆ ಮಹತ್ವದ್ದಾಗಿದೆ, ಅದನ್ನು ವಿಸ್ತೃತ ವಿಚಾರಣೆಗೆ ಪರಿಗಣಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಕೆ.ವಿ. ವಿಶ್ವನಾಥನ್ ಮತ್ತು ಎನ್. ಕೋಟೇಶ್ವರ ಸಿಂಗ್ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸಿತು.

ದೆಹಲಿಯ ಮೂಲದ ಮಹಿಳೆಯೊಬ್ಬರು ಸಲ್ಲಿಸಿರುವ ಅರ್ಜಿಯ ಕುರಿತು ಕೇಂದ್ರ ಮತ್ತು ದೆಹಲಿ ಸರ್ಕಾರ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಪೀಠ ಜನವರಿ 31ರಂದು ನಿರ್ದೇಶಿಸಿತ್ತು. ಈ ಸಂಬಂಧ ಪ್ರಮಾಣ ಪತ್ರ ಸಲ್ಲಿಸಿರುವುದಾಗಿ ಕೇಂದ್ರವನ್ನು ಪ್ರತಿನಿಧಿಸುವ ವಕೀಲರು ತಿಳಿಸಿದರು. ಅಲ್ಲದೆ ಈ ಬಗ್ಗೆ ವ್ಯಾಪಕ ಚರ್ಚೆ ನಡೆಯಬೇಕಿದ್ದು, ಎಲ್ಲ ರಾಜ್ಯಗಳನ್ನು ಈ ವಿಷಯದಲ್ಲಿ ಪ್ರತಿವಾದಿಗಳನ್ನಾಗಿ ಮಾಡಬೇಕು ಎಂದು ಅವರು ಕೋರಿದರು.

ಈ ಕುರಿತು ಜುಲೈ 22ರಂದು ವಿಚಾರಣೆ ನಡೆಸಲಾಗುವುದು ಎಂದ ಪೀಠವು, ಪ್ರತಿವಾದಿಗಳಿಗೆ ತಮ್ಮ ಲಿಖಿತ ಹೇಳಿಕೆಗಳನ್ನು ಸಲ್ಲಿಸುವಂತೆ ಸೂಚಿಸಿತು. ಅಲ್ಲದೆ 'ಒಂಟಿ ತಾಯಿ'ಯ ಅಂತರ್ಜಾತಿ ವಿವಾಹದಲ್ಲಿದ್ದ ಸನ್ನಿವೇಶವನ್ನೂ ಪರಿಶೀಲಿಸುವಂತೆ ತಿಳಿಸಿತು.

ದೆಹಲಿ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ, 'ಒಂಟಿ ತಾಯಿ'ಯ ಒಬಿಸಿ ಪ್ರಮಾಣ ಪತ್ರ ಆಧರಿಸಿ ಅವರ ಮಕ್ಕಳಿಗೆ ಒಬಿಸಿ ಪ್ರಮಾಣ ಪತ್ರ ನೀಡಲು ಸಾಧ್ಯವಿಲ್ಲ. ಬದಲಿಗೆ ಮಗು ತಮ್ಮ ತಂದೆ ಅಥವಾ ತಂದೆಯ ರಕ್ತ ಸಂಬಂಧಿಗಳ ಒಬಿಸಿ ಪ್ರಮಾಣ ಪತ್ರವನ್ನು ಆಧರಿಸಿ, ಅಂಥ ಪ್ರಮಾಣ ಪತ್ರ ಪಡೆಯಬಹುದಾಗಿದೆ. ಇದು ಸಂವಿಧಾನದ ನಿಬಂಧನೆಗಳಿಗೆ ವಿರುದ್ಧವಾಗಿದೆ ಮತ್ತು ಒಬಿಸಿ ಮಕ್ಕಳ ಹಕ್ಕುಗಳ ಉಲ್ಲಂಘನೆಯೂ ಆಗಿದೆ ಎಂದು ಅರ್ಜಿದಾರರು ಮನವಿಯಲ್ಲಿ ಪ್ರತಿಪಾದಿಸಿದ್ದಾರೆ.

ಒಬಿಸಿ ಪ್ರವರ್ಗಕ್ಕೆ ಸೇರಿದ ಒಂಟಿ ತಾಯಿಯು ದತ್ತು ಮಗುವಿಗೆ ತನ್ನ ಒಬಿಸಿ ಪ್ರಮಾಣ ಪತ್ರ ಪಡೆಯಲು ಅನುಕೂಲ ಕಲ್ಪಿಸಿಕೊಡುವಂತೆಯೂ ಅರ್ಜಿದಾರರು ಕೋರಿದ್ದಾರೆ.

ಡ್ರಗ್ಸ್ ಸೇವನೆ: ತಮಿಳು ನಟ ಶ್ರೀಕಾಂತ್ ಬಂಧನ

ಚೆನ್ನೈ: ಮಾದಕ ವಸ್ತು ಖರೀದಿ ಮತ್ತು ಸೇವನೆ ಆರೋಪದ ಮೇಲೆ ತಮಿಳು ಮತ್ತು ತೆಲುಗು ನಟ ಶ್ರೀಕಾಂತ್ ಅವರನ್ನು ಮಾದಕವಸ್ತು ನಿಗ್ರಹ ಗುಪ್ತಚರ ಘಟಕವು ಸೋಮವಾರ ಬಂಧಿಸಿದೆ.

ಡ್ರಗ್ಸ್ ಪ್ರಕರಣದಲ್ಲಿ ಬಂಧನದಲ್ಲಿ ಇರುವ ಎಐಎಡಿಎಂಕೆ ಐಟಿ ವಿಭಾಗದ ಪದಾಧಿಕಾರಿಯಾಗಿದ್ದ ಪ್ರಸಾದ್ ವಿಚಾರಣೆ ವೇಳೆ ಶ್ರೀಕಾಂತ್ ಹೆಸರು ಪ್ರಸ್ತಾವವಾಗಿತ್ತು. ಈ ಬೆನ್ನಲ್ಲೇ ಚೆನ್ನೈ ಪೊಲೀಸರು ಶ್ರೀಕಾಂತ್ ಅವರನ್ನು ಬಂಧಿಸಿದ್ದಾರೆ. ಬೆಂಗಳೂರಿನಲ್ಲಿ ನೆಲಸಿರುವ ನೈಜೀರಿಯಾ ಪ್ರಜೆ ಜೀರಿಕ್‌ನಿಂದ ಕೊಕೇನ್ ಸಂಗ್ರಹಿಸಿ, ಶ್ರೀಕಾಂತ್ ಅವರಿಗೆ ಪ್ರಸಾದ್ ಅದನ್ನು ಮಾರಾಟ ಮಾಡಿದ್ದರು. ಶ್ರೀಕಾಂತ್ ಈ ಡ್ರಗ್ಸ್ ಅನ್ನು ಹಲವು ಸಂದರ್ಭದಲ್ಲಿ ಸೇವಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಶ್ರೀಕಾಂತ್ ಅವರು ಒಂದು ಗ್ರಾಂ ಕೊಕೇನ್‌ಗೆ ₹12,000 ಪಾವತಿ ಮಾಡಿದ್ದರು ಎಂದೂ ತಿಳಿಸಿವೆ.

ಶ್ರೀಕಾಂತ್ 2002ರಲ್ಲಿ 'ರಾಜಾ ಕೂಟಂ' ಚಿತ್ರದಲ್ಲಿ ನಟಿಸುವ ಮೂಲಕ ತಮಿಳು ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದರು. ಅನಂತರ ತೆಲುಗು ಚಿತ್ರರಂಗದಲ್ಲೂ ಛಾಪು ಮೂಡಿಸಿದ್ದರು.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–1&3/ಇ–ಟೆಂಡರ್ ಪ್ರಕಟಣೆ/2025–26/ 619, ದಿನಾಂಕ:23.06.2025

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1,2,3 & 4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 5054 & 4059 ಅಪೆಂಡಿಕ್ಸ್–ಇ ಮತ್ತು 8443 ಠೇವಣಿ ವಂತಿಕೆ ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಯಾದಗಿರಿ ತಾಲೂಕಿನ (1)19627, ಶಹಾಪೂರ ತಾಲೂಕಿನ (1)20425, (2)20409, (3)21720 ಮತ್ತು ಸುರಪೂರ ತಾಲೂಕಿನ (1)17606, (2)22003, (3)20710/ 2ನೇ ಕರೆ, (4)21851 ಹಾಗೂ (5)22322 ಒಟ್ಟಾರೆ 09 (ಒಂಬತ್ತು) ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 2) **ಟೆಂಡರಿಗಿಟ್ಟ ಅಂದಾಜು ಮೊತ್ತ** : ಕನಿಷ್ಠ ರೂ.14.50 ಲಕ್ಷಗಳು ಹಾಗೂ ಗರಿಷ್ಠ ರೂ:500.00 ಲಕ್ಷಗಳು 3) **ಗುತ್ತಿಗೆದಾರರ ಅರ್ಹತೆ ವಿವರ:**ಸಿವಿಲ್ 4ನೇ ದರ್ಜೆ ಹಾಗೂ ಮೇಲ್ಪಟ್ಟು ಮತ್ತು ಇಂಡೆಂಟ್ ಸಂಖ್ಯೆ:22322 ಗೆ ಎಂಎಸ್‌ಎಂಇ(MSME), ಇಂಡೆಂಟ್ ಸಂಖ್ಯೆ:19627 ಗೆ ಕನ್ಸಲ್ಟೆನ್ಸಿ (Consultancy Registration) 4) **ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) **ಪ್ರೀ ಬಿಡ್ ಮೀಟಿಂಗ್ ದಿನಾಂಕ:** 27.06.2025 (11.30 ಗಂಟೆ ನಂತರ) 6) **ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 30.06.2025 (17.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 03.07.2025 (16.00 ಗಂಟೆವರೆಗೆ) 8) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 05.07.2025 (11.30 ಗಂಟೆ ನಂತರ) 9) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 08.07.2025 (11.30 ಗಂಟೆ ನಂತರ) 10) **ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) **ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ವಾ.ಸಾ.ಸಂ.ಇ/ಯಾದಗಿರಿ/115/ಕೆ.ಎಸ್.ಎಂ.ಸಿ.&ಎ/2025–26 ಲೋಕೋಪಯೋಗಿ ಇಲಾಖೆ, ವಿಭಾಗ: ಯಾದಗಿರಿ.

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ), ಬೆಂಗಳೂರು–560025.
ದೂರವಾಣಿ ಸಂ:080–25584102/25594893 ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com

ಸಂ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿವಿಲ್/ಟಿಎನ್‌ಡಿ/05/2025–26/81
ದಿನಾಂಕ: 23.06.2025

ಟೆಂಡರ್ ಪ್ರಕಟಣೆ

ಕೆಎಸ್‌ಪಿಹೆಚ್ & ಐಡಿಸಿಎಲ್ ಕೆಟಿಪಿಪಿ 2000 ಕಾಯ್ದೆಯ ಪ್ರಕಾರ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಪ್ರಕಾರ ಕೆ.ಪಿ.ಪಿ ಪೋರ್ಟಲ್ https://kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗಾಗಿ ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿಗಳ ಹೆಸರು: ಕೆ–ಸೇಫ್–2 ಯೋಜನೆಯಡಿಯಲ್ಲಿ 1) ರಾಯಚೂರು ಜಿಲ್ಲೆಯ ಸಿರವಾರದಲ್ಲಿ (WI-234). 2) ಯಾದಗಿರಿ ಜಿಲ್ಲೆಯ ವಡಗೇರಾದಲ್ಲಿ (WI-235). 3) ಬಾಗಲಕೋಟೆ ಜಿಲ್ಲೆಯ ತೇರದಾಳದಲ್ಲಿ (WI-237). 3–ಬೇ ಅಗ್ನಿಶಾಮಕ ಠಾಣೆಗಳ ನಿರ್ಮಾಣ ಕಾಮಗಾರಿ.

ಇಚ್ಛೆಯುಳ್ಳ ಮತ್ತು ಅರ್ಹತೆವುಳ್ಳ ಗುತ್ತಿಗೆದಾರರು ಇ–ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇ.ಎಂ.ಡಿ, ಟೆಂಡರ್ ದಾಖಲೆಗಳು ಮತ್ತು ಇತ್ಯಾದಿ ವಿವರಗಳು ದಿನಾಂಕ: **24–06–2025** ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆ.ಪಿ.ಪಿ.ಪಿ) ನಲ್ಲಿ ಲಭ್ಯವಿರುತ್ತದೆ.

"ಕೆಎಸ್‌ಪಿಹೆಚ್ & ಐಡಿಸಿಎಲ್ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ."

ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು. ಸಹಿ/–

DIPR/CP/1417/SPAN/2025-26 ಕಾರ್ಯಪಾಲಕ ಅಭಿಯಂತರರು–ಗುತ್ತಿಗೆ

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
ಪಿಲಿಕುಳ PILIKULA
ಮೂಡುಶೆಡ್ಡೆ ಅಂಚೆ, ಮಂಗಳೂರು 575 028, ದೂ : 0824 – 2263300

ನಂ.ಪಿಡಿಎ(1).ಸಿಆರ್:120/ಪಿಬಿಪಿ/2025–26 ದಿನಾಂಕ: 23.06.2025

ಟೆಂಡರ್ ಪ್ರಕಟಣೆ
(through https://kppp.karnataka.gov.in)

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಜೈವಿಕ ಉದ್ಯಾನವನದ ಪ್ರಾಣಿ, ಪಕ್ಷಿ, ಉರಗಗಳಿಗೆ ಅಗತ್ಯವಿರುವ ಆಹಾರ ಸಾಮಾಗ್ರಿಗಳ ಸರಬರಾಜಿನ ಕುರಿತು ಆಸಕ್ತರಿಂದ ದ್ವಿಲೋಕೋಟೆಯಲ್ಲಿ ದಿನಸಿಗಳು ಮತ್ತು ತರ್ಕಾರಿ ಹಾಗೂ ಹಸಿರು ಹುಲ್ಲುಗಳನ್ನ ಸರಬರಾಜು ಮಾಡಲು ಎರಡು ಪ್ರತ್ಯೇಕ ಟೆಂಡರ್ಗಳನ್ನ ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 07.07.2025 ಸಂಜೆ 5.30 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಮೇಲಿನ ದೂರವಾಣಿ ಮೂಲಕ ಪಡೆಯಬಹುದು.

ಸಹಿ/–
ಆಯುಕ್ತರು
DIPR/MNG/368/MPL/25-26

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ದಾವಣಗೆರೆ–06

ನಂ:ದಾಹನಪ್ರಾ:ಯೋವಿ:ಮಹಾಯೋಜನೆ(ಪರಿಷ್ಕೃತ–III): 2025–26/915 ದಿನಾಂಕ:21.06.2025

ಸಾರ್ವಜನಿಕ ಪ್ರಕಟಣೆ

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ದಾವಣಗೆರೆ–ಹರಿಹರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ–III) 2041 ರ ತಾತ್ಕಾಲಿಕ ಅನುಮೋದನೆಗಾಗಿ ನಕ್ಷೆ ಮತ್ತು ವರದಿಗಳೊಂದಿಗೆ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಅದರಂತೆ ಸರ್ಕಾರದ ಆದೇಶ ಸಂಖ್ಯೆ:ನಅಇ:157: ಬೆಂರೂಪ್ರಾ:2025, ಬೆಂಗಳೂರು ದಿನಾಂಕ:12–06–2025ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1) ರನ್ವಯ ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮಹಾಯೋಜನೆ (ಪರಿಷ್ಕೃತ–III)2041 ರ ನಕ್ಷೆ ಹಾಗೂ ವರದಿಯನ್ನು ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಕಛೇರಿಯಲ್ಲಿ ಸಾರ್ವಜನಿಕರ ವೀಕ್ಷಣೆಗಾಗಿ ಇಡಲಾಗಿದ್ದು, ಸಾರ್ವಜನಿಕರು ತಮ್ಮ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 60 ದಿನಗಳ ಒಳಗಾಗಿ ಖುದ್ದಾಗಿ ಅಥವಾ ನೊಂದಣಿ ಅಂಚೆಯ ಮೂಲಕ ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ರವರಿಗೆ ಸಲ್ಲಿಸುವಂತೆ ಹಾಗೂ 60 ದಿನಗಳ ನಂತರ ಬಂದ ಯಾವುದೇ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ವಾಸಾಇ/ದಾವಣಗೆರೆ/156/ ಕೆಎಸ್‌ಎಂಸಿಎ/2025–26
ಸಹಿ/– ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ರಾಷ್ಟ್ರೀಯ ಪ್ರಾಮುಖ್ಯತೆ ಸಂಸ್ಥೆ), ಬೆಂಗಳೂರು–29
राष्ट्रीय मानसिका स्वास्थ्य एवं तंत्रिकाविज्ञान संस्थान (राष्ट्रीयप्रमुख्याथासंस्थ) बेंगलूरू – 29
NATIONAL INSTITUTE OF MENTAL HEALTH AND NEURO SCIENCES
(Institute of National Importance, under Ministry of Health and Family Welfare, Govt. of India, Hosur Road, Bengaluru – 29.

No. NIMH/PER(5)/RECT-DEPT/2025-26 Date: 20.06.2025

NOTIFICATION

NIMHANS,Bengaluru invites applications in the prescribed Pro-Forma from suitable/eligible Officers working in Indian Audit & Accounts Department or Organised Accounts Services under the Ministry of Finance/Defence/Railways/Department of Posts/Tele-Communication etc. for filling up of the following **Group "A" Posts on Deputation Basis.**

Sl. No	Name of the Posts	Number of posts	Pay Level as per 7th CPC	Mode	Important point for consideration of the candidates
1	Financial Advisor & Chief Accounts Officer	1	Level-13 (Rs.1,23,100 – 2,15,900/-)	Deputation for 3 - 5 years	Applications are to be duly forwarded by the Cadre Controlling Authority with NOC, Vigilance clearance and enclosing minimum 5 years latest APARs. Officials / Candidates are advised to send an advance copy of the application with relevant enclosures, for intimation purposes only, on the following email on or before the closing date of receipt of applications: director@nimhans.net dirstaff@nimhans.ac.in
2	Deputy Financial Advisor & Chief Accounts Officer	1	Level-11 (Rs.67,700 – 2,08,700/-)	Deputation for 3 - 5 years	

Eligibility and other Criteria:

Sl. No	Name of the Posts	Essential Eligibility Criteria for deputation
1	Financial Advisor & Chief Accounts Officer	Officers among the members of the Indian Audit and Accounts Services in the rank of Senior Deputy Accountant General OR From among the Officer of the `equivalent rank of Senior Deputy Accountant General from the Organised Accounts Services under the Ministry of Finance/Defence/Railways/Department of Posts/Tele-Communicationetc.
2	Deputy Financial Advisor & Chief Accounts Officer	Senior Audit Officers/ Accounts Officers who are qualified in S.O.G (Civil) or (Commercial) Examination of Indian Audit and Accounts Department or Similar Examination of any other Organised Accounts Departments of Government of India.

The Notification and further details including proforma & application is also available at this Institute's website www.nimhans.ac.in.
The duly filled application with its necessary enclosures, NOC, Vigilance Clearance and previous 5 years APARs should reach the Director, NIMHANS, Post Box No: 2900, Hosur Road, Bengaluru-560011, Karnataka, India, on or before 04/08/2025.

Sd/-
DIRECTOR

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಸಂಶೋಧನಾ ಉಪ ವಿಭಾಗ, 1ನೇ ಅಡ್ಡರಸ್ತೆ, ಅರಕೆರೆ ಮೈಕೊ ಬಡಾವಣೆ,
ದೊರೆಸಾನಿಪಾಳ್ಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076.

ಸಂಖ್ಯೆ: ಎಸ್‌ಎಎಸ್/ಹರಾಜು/ಸಿಆರ್–03/2025–26 ದಿನಾಂಕ: 23.06.2025

ಸಂಕ್ಷಿಪ್ತ ಟೆಂಡರ್ ಹಾಗೂ ಹರಾಜು ಪ್ರಕಟಣೆ

ವಿಷಯ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ ಬೆಂಗಳೂರು ಘಟಕಕ್ಕೆ ಸಂಬಂಧಿಸಿದ ಕಿರು ಅರಣ್ಯ ಉತ್ಪನ್ನಗಳನ್ನು 2025–26 ಮತ್ತು 2026–27ನೇ ಸಾಲಿಗೆ ಟೆಂಡರ್–ಕಂ– ಹರಾಜಿನ ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ವೃತ್ತಕ್ಕೆ ಸಂಬಂಧಿಸಿದ ಸಂಶೋಧನಾ ವಲಯಗಳಲ್ಲಿನ ಸಂಶೋಧನಾ ಕೇಂದ್ರಗಳಲ್ಲಿನ ಕಿರು ಅರಣ್ಯ ಉತ್ಪನ್ನಗಳ ಫಸಲುಗಳನ್ನು 2025–26 ಮತ್ತು 2026–27ನೇ ಸಾಲಿಗೆ ಅಂದರೆ ಟೆಂಡರ್–ಕಂ–ಹರಾಜು ಒಪ್ಪಿಗೆಯಾಗಿ ಕರಾರು ಮಾಡಿಕೊಂಡ ದಿನದಿಂದ 2 ವರ್ಷಗಳ ಅವಧಿಯವರೆಗೆ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ, ಬೆಂಗಳೂರು ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಛೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗಿನ ತಪಶೀಲಿನಲ್ಲಿ ಸೂಚಿರುವ ಪ್ರಕಾರ ಟೆಂಡರ್–ಕಂ–ಹರಾಜಿನ ಮೂಲಕ ದಿನಾಂಕ: 30–06–2025 ರಂದು ಅಪರಾಹ್ನ 12.00 ಗಂಟೆಗೆ ಮಾರಾಟ ಮಾಡುವರು. ಸದರಿ ದಿನಾಂಕದಂದು ಕಾರಣಾಂತರದಿಂದ ಟೆಂಡರ್–ಕಂ–ಹರಾಜು ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ದಿನಾಂಕ: 08–07–2025 ರಂದು ಅಪರಾಹ್ನ 12.00 ಗಂಟೆಗೆ ಎರಡನೇ ಬಾರಿಗೆ ಮಾರಾಟ ಮಾಡುವರು. ಅರಣ್ಯ ಗುತ್ತಿಗೆದಾರರು ಇದರಲ್ಲಿ ಭಾಗವಹಿಸಬಹುದು. ಇದರಲ್ಲಿ ಪ್ರಕಟಿಸಿರುವ ಅರಣ್ಯ ಉತ್ಪನ್ನವು ತಪಶೀಲಿನಲ್ಲಿ ಸೂಚಿಸಿರುವ ಸಂಶೋಧನಾ ಕೇಂದ್ರಗಳಿಗೆ ಮಾತ್ರ ಸಂಬಂಧಿಸಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ವಾಸಾಸಂಇ/ವಾಪ್ರ/1414/ ಆಕಾರ್/2024–25
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನಾ ಉಪ ವಿಭಾಗ, ಬೆಂಗಳೂರು.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು.

ಸಂಖ್ಯೆ : 09/2025–26 ದಿನಾಂಕ: 23.06.2025

ಟೆಂಡರ್ ಅಧಿಸೂಚನೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು–570010 ರವರು ಕೆ.ಡಬ್ಲ್ಯು–4 ರೀತ್ಯ ಟೆಂಡರ್ ಆಹ್ವಾನಿಸಲಾಗಿದ್ದು, ಇದರಲ್ಲಿ ಒಟ್ಟು 07 ಕಾಮಗಾರಿಗಳು ಇದ್ದು, ಇವುಗಳ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ **ರೂ.11.00 ಕೋಟಿಗಳು,** ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ **ರೂ.50.00 ಕೋಟಿಗಳಾಗಿದ್ದು,** ಕನಿಷ್ಠ ಇ.ಎಂ.ಡಿ ಮೊತ್ತ **ರೂ.11.00 ಲಕ್ಷಗಳು, ಗರಿಷ್ಠ 50.00 ಲಕ್ಷಗಳಾಗಿರುತ್ತದೆ.** (ಜಿಎಸ್‌ಟಿ ಹೊರತುಪಡಿಸಿ). ಈ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, "ಕೆ.ಪಿ.ಪಿ." ಪೋರ್ಟಲ್ ಮೂಲಕ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ. (1) ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ: **ದಿನಾಂಕ 01.07.2025, ಸಂಜೆ 5.00 ಗಂಟೆ** (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ: **02.07.2025, ಸಂಜೆ 5.30 ಗಂಟೆಯವರೆಗೆ** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **04.07.2025 ರ ಬೆಳಿಗ್ಗೆ 11.00 ಗಂಟೆ** (4) **ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.07.2025ರ ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್ ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್
ವಾಸಾಸಂಇ/ಮೈಸೂರು/501/ಎಸ್‌ಎಸ್‌ಸಿ/2025–26 ಸನೀ ಮತ್ತು ಅಂ.ಅ ವಿಭಾಗ, ಮೈಸೂರು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿಪಿ ಮೂಲಕ ಮಾತ್ರ)

ಮುಖ್ಯ ಇಂಜಿನಿಯರ್ (ವಿದ್ಯುತ್), ಚಿತ್ರದುರ್ಗ ವಲಯ, ಬೆಸ್ಕಾಂ, ಚಿತ್ರದುರ್ಗರವರು ದ್ವಿ ಲಕೋಟೆ ವ್ಯವಸ್ಥೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಈ ಕೆಳಗಿನವುಗಳಿಗೆ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ.

1) ವಿಚಾರಣೆ ಸಂಖ್ಯೆ: ಮುಇಂ(ವಿ)/ಅಇಂ(ಕ)/ಸಕಾಇಂ–1/001/ಜಿಎಂ/ 2025–26 ದಿನಾಂಕ: 13–05–2025. **ವಿವರಗಳು: ಬೆವಿಕಂ, ದಾವಣಗೆರೆ ವೃತ್ತ ವ್ಯಾಪ್ತಿಯ ಕಾ ಮತ್ತು ಪಾ ಉಪ–ವಿಭಾಗಗಳಿಗೆ 218 ಸಂಖ್ಯೆಯ ತಾತ್ಕಾಲಿಕ ಗ್ಯಾಂಗ್‌ಮೆನ್ ಸೇವೆಯನ್ನು 06 ತಿಂಗಳ ಅವಧಿಗೆ ಹೊರಗುತ್ತಿಗೆ ಏಜೆನ್ಸಿ ಮೂಲಕ ಒದಗಿಸುವುದು.** ಟೆಂಡರ್‌ನ ಅಂದಾಜು ಮೊತ್ತ: **ರೂ.2,72,19,298/–** ಇಎಂಡಿ ಮೊತ್ತ **ರೂ.4,08,289/–** ಗುತ್ತಿಗೆ ಅವಧಿ: **06 ತಿಂಗಳು**

2) ವಿಚಾರಣೆ ಸಂಖ್ಯೆ: ಮುಇಂ(ವಿ)/ಅಇಂ(ಕ)/ಸಕಾಇಂ–1/002/ಜಿಎಂ/ 2025–26 ದಿನಾಂಕ: 13–05–2025. **ವಿವರಗಳು: ಬೆವಿಕಂ, ತುಮಕೂರು ವೃತ್ತ ವ್ಯಾಪ್ತಿಯ ಕಾ ಮತ್ತು ಪಾ ಉಪ ವಿಭಾಗಗಳಿಗೆ 333 ಸಂಖ್ಯೆಯ ತಾತ್ಕಾಲಿಕ ಗ್ಯಾಂಗ್‌ಮೆನ್ ಸೇವೆಯನ್ನು 06 ತಿಂಗಳ ಅವಧಿಗೆ ಹೊರಗುತ್ತಿಗೆ ಏಜೆನ್ಸಿ ಮೂಲಕ ಒದಗಿಸುವುದು.** ಟೆಂಡರ್‌ನ ಅಂದಾಜು ಮೊತ್ತ: **ರೂ.4,13,71,623/–,** ಇಎಂಡಿ ಮೊತ್ತ: **ರೂ.6,20,574/–,** ಗುತ್ತಿಗೆ ಅವಧಿ: **06 ತಿಂಗಳು.**

ಎ) ಬಿಡ್ ದಾಖಲಾತಿಗಳ ಲಭ್ಯತೆ ದಿನಾಂಕ ಮತ್ತು ಸಮಯ: **25.06.2025ರ ಬೆಳಗ್ಗೆ 11.00 ಗಂಟೆಗೆ.** ಬಿ) ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: **04.07.2025ರ ಬೆಳಗ್ಗೆ 11.00 ಗಂಟೆಗೆ.** ಸಿ) ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **16.07.2025, 16:00 ಗಂಟೆಗಳವರೆಗೆ.** ಡಿ) ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **25.07.2025, 17:00 ಗಂಟೆಗಳವರೆಗೆ.** ಇ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **28.07.2025 ಬೆಳಗ್ಗೆ 11:00 ಗಂಟೆಗೆ.**

ಬಿಡ್‌ಗಳಲ್ಲಿ ಭಾಗವಹಿಸಲು ಟೆಂಡರ್ ವಿವರಗಳನ್ನು ಕೆಪಿಪಿ ಪೋರ್ಟಲ್ : **https://kppp.karnataka.gov.in, Dtd: 25–06–2025ರ** ನಂತರ ಪಡೆಯಬಹುದು. ಇಚ್ಛೆಯುಳ್ಳ ಬಿಡ್ಡರ್ ಗಳು ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬೇಕು. ಟೆಂಡರ್ ಸಂಸ್ಕರಣಾ ಶುಲ್ಕ, ಇಎಂಡಿ ಗಳನ್ನು ಇ–ಪೇಮೆಂಟ್ ಮುಖಾಂತರವೇ ಮಾಡತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ,: **080–68948777** ಮತ್ತು **080–46010000** ಅಥವಾ **E-mail: hphelpdesk.blr@rteservices.com** ಗೆ ಸಂಪರ್ಕಿಸಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿ)
ಕಾ ಮತ್ತು ಪಾ ವಲಯ, ಬೆವಿಕಂ, ಚಿತ್ರದುರ್ಗ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: **1912**
ಬೆಸ್ಕಾಂ ಮಿತ್ರಾ **Mobile APP** ಡೌನ್‌ಲೋಡ್ ಮಾಡಿಕೊಳ್ಳಿ.

ಕರಾಸಕೈಅನಿನಿ
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು –560 010
ಫೋನ್/ಫ್ಯಾಕ್ಸ್ : 91–080–23143566 / 23389070 ಇ–ಮೇಲ್:kssidcho@karnataka.gov.in ವೆಬ್‌ಸೈಟ್ : www.kssidc.co.in

ಸಂಖ್ಯೆ:ಸಮನ್ವಯ:ಬೆಂ.ವಿ:ಮಳಿಗೆ:ನಿವೇಶನ:ಹಂಚಿಕೆ:ಪ್ರಕಟಣೆ:2025/01 ದಿನಾಂಕ: 23.06.2025

ಕೈಗಾರಿಕಾ ಮಳಿಗೆ/ನಿವೇಶನ/ವಾಣಿಜ್ಯ ಸಂಕೀರ್ಣಗಳ ಹಂಚಿಕೆಗಾಗಿ ಪ್ರಕಟಣೆ

ನಿಗಮದ ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ಕೈಗಾರಿಕಾ ಮಳಿಗೆ/ನಿವೇಶನಗಳನ್ನು ಯಥಾಸ್ಥಿತಿಯಲ್ಲಿ ಹಂಚಿಕೆ ಮಾಡಲು ಆಸಕ್ತ ಉದ್ದಿಮೆದಾರರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

ಜಿಲ್ಲೆ ಮತ್ತು ಕೈಗಾರಿಕಾ ವಸಾಹತು ಹೆಸರು	ಮಳಿಗೆ/ನಿವೇಶನ/ ಗೋದಾಮು/ ಸಂಕೀರ್ಣ ವಿಸ್ತೀರ್ಣ ಚ.ಮೀ.ಗಳಲ್ಲಿ	ಪ್ರವರ್ಗ	ಪ್ಲಾಟ್/ನಿವೇಶನ ಸಂಖ್ಯೆ: ಪ್ಲಾಟ್	ಪ್ಲಾಟ್/ನಿವೇಶನ ಸಂಖ್ಯೆ: ನಿವೇಶನ	ಮಳಿಗೆ/ನಿವೇಶನ/ ಗೋದಾಮು/ಪ್ಲಾಟ್‌ಗಳ ಮೌಲ್ಯ: ದರ ಚ.ಮೀ.ಗೆ (ರೂ.ಗಳಲ್ಲಿ)	ಮಳಿಗೆ/ನಿವೇಶನ/ ಗೋದಾಮು/ಪ್ಲಾಟ್‌ಗಳ ಮೌಲ್ಯ: ಒಟ್ಟು ಮೌಲ್ಯ (ರೂ.ಗಳಲ್ಲಿ)	ಅರ್ಜಿ ಜೊತೆ ಪಾವತಿಸಬೇಕಾದ ಇಎಂಡಿ/ಭದ್ರತಾ ಠೇವಣಿ: ಸಾಮಾನ್ಯ ಪ್ರವರ್ಗ ದವರಿಗೆ ಶೇ.10 ರಂತೆ (ರೂ.ಗಳಲ್ಲಿ)	ಅರ್ಜಿ ಜೊತೆ ಪಾವತಿಸಬೇಕಾದ ಇಎಂಡಿ/ಭದ್ರತಾ ಠೇವಣಿ: ಪ.ಜಾ./ಪ.ಪಂ ಪ್ರವರ್ಗ ದವರಿಗೆ ಶೇ.5 ರಂತೆ (ರೂ.ಗಳಲ್ಲಿ)
1	2	3	4		5	6	7	8
ಬೆಂಗಳೂರು ನಗರ ಜಿಲ್ಲೆ								
ಮುತ್ತುಗದಹಳ್ಳಿ	500.00	ಅಲ್ಪಸಂಖ್ಯಾತ	-	C-26	15600	85,80,000	8,58,000	-
	568.00	ಪ್ರವರ್ಗ–1	-	SPL-8	15600	97,46,880	9,74,688	-
	638.40	ಪ್ರವರ್ಗ–2	-	SPL-23	15600	1,19,50,848	11,95,085	-
ಪೀಣ್ಯಾ 2ನೇ ಹಂತ	346.33	ಸಾಮಾನ್ಯ	-	S.F-9	72000	2,78,72,900	27,87,290	13,93,645
	346.33	ಸಾಮಾನ್ಯ	-	S.F-10	72000	2,78,72,900	27,87,290	13,93,645
ರಾಮನಗರ ಜಿಲ್ಲೆ								
ರಾಮನಗರ	157.50	ಸಾಮಾನ್ಯ	-	SPL-1	43000	67,72,500	6,77,250	3,38,625

E&OE
ನಿಗದಿತ ಅರ್ಜಿ ನಮೂನೆಗಳನ್ನು ನಿಗಮದ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವಿವಿಧ ಸ್ಥಳಗಳಲ್ಲಿ ಇರುವ ಮಳಿಗೆ/ನಿವೇಶನಗಳ ವಿವರಗಳಾದ ವಿಸ್ತೀರ್ಣ, ಮೌಲ್ಯ, ಮುಂಗಡ ಠೇವಣಿ ಮೊಬಲಗು, ಪರಿಶೀಲನಾ ಶುಲ್ಕ, ನೀಡಲಾಗುವ ಸಹಾಯಧನ, ಪ್ರವರ್ಗವಾರು ವಿವರ, ಹಂಚಿಕೆಯ ಷರತ್ತು ಮತ್ತು ನಿಬಂಧನೆಗಳು ಹಾಗೂ ಇತರೆ ಸಮಗ್ರ ವಿವರಗಳನ್ನು ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈವ) / ವ್ಯವಸ್ಥಾಪಕರು(ಕೈವ) (ಮೊಬೈಲ್ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದೆ) ರವರಿಂದ ಪಡೆಯಬಹುದಾಗಿರುತ್ತದೆ ಹಾಗೂ ಸದರಿ ವಿವರಗಳನ್ನು ನಿಗಮದ ವೆಬ್‌ಸೈಟ್ www.kssidc.co.in ನಲ್ಲಿಯೂ ವೀಕ್ಷಿಸಬಹುದಾಗಿರುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ಅರ್ಜಿ ಶುಲ್ಕ, ಮುಂಗಡ ಠೇವಣಿ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ **ದಿನಾಂಕ: 31.07.2025 ರ ಸಾಯಂಕಾಲ 5–00 ಗಂಟೆಯವರೆವಿಗೆ** ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ವಿಭಾಗೀಯ/ಶಾಖಾ ಕಛೇರಿಗಳಲ್ಲಿ ಸಲ್ಲಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/1422/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, 1ನೇ ಮಹಡಿ,
ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 080 22220227
E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 05/2025–26
ದಿನಾಂಕ: 21–06–2025

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ–2000ರನ್ವಯ ಕೆಡಬ್ಲ್ಯೂ–1 & ಕೆಡಬ್ಲ್ಯೂ–2 ನಿಯಮಗಳಂತೆ ಕ್ರಮ ಸಂಖ್ಯೆ 1 ರಿಂದ 5ನೇ ಕಾಮಗಾರಿಗಳಿಗೆ ಬೆಂಗಳೂರಿನ ಕೋರಮಂಗಲದ ವಸತಿಗೃಹಗಳು ಜೀವನ್‌ಭೀಮಾನಗರದ ವಸತಿಗೃಹಗಳಿಗೆ ಹಾಗೂ ಕನ್ನಡ ಭವನಕ್ಕೆ ಸಂಬಂಧಿಸಿದ ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.

1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 21.06.2025 ರಿಂದ 30.06.2025 ಸಂಜೆ 4.30 ಗಂಟೆಯವರೆಗೆ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 02.07.2025 ಸಂಜೆ 4.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : 04.07.2025 ರಂದು ಸಂಜೆ 4.30 ಕ್ಕೆ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
DIPR/CP/1412/Zen/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಆದರ್ಶವೊಂದನ್ನು ಬೆನ್ನು ಹತ್ತುವುದು ಮನುಷ್ಯನಿಗೆ ಕ್ರಿಯಾಶೀಲತೆಯನ್ನು ಹಾಗೂ ಸೊಗಸಾದ ನೈತಿಕ ಧೈರ್ಯವನ್ನು ನೀಡುತ್ತದೆ.

–ಬಿ.ಆರ್. ಅಂಬೇಡ್ಕರ್

ಸಂಪಾದಕೀಯ

ಇಸ್ರೇಲ್–ಇರಾನ್ ಸಮರಾಂಗಣ ಅಮೆರಿಕದ ಮಧ್ಯಪ್ರವೇಶ ಅನಪೇಕ್ಷಿತ

ಇರಾನ್‌ನ ಪರಮಾಣು ಘಟಕಗಳ ಮೇಲೆ ದಾಳಿ ನಡೆಸುವ ಮೂಲಕ ಇಸ್ರೇಲ್–ಇರಾನ್ ಯುದ್ಧರಂಗವನ್ನು ಅಮೆರಿಕ ಕೂಡ ಪ್ರವೇಶಿಸಿದೆ. ಈ ದಾಳಿಯ ಮೂಲಕ ಅಮೆರಿಕವು ಜಾಗತಿಕ ಮಟ್ಟದಲ್ಲಿ ಪರಿಣಾಮ ಉಂಟುಮಾಡುವ ಪ್ರಾದೇಶಿಕ ಅಸ್ಥಿರತೆಗೆ ಪಶ್ಚಿಮ ಏಷ್ಯಾವನ್ನು ನೂಕಿದೆ. ಇರಾನ್ ಮೇಲಿನ ದಾಳಿಗೆ ಅಮೆರಿಕವು 'ಆಪರೇಷನ್ ಮಿಡ್‌ನೈಟ್ ಹ್ಯಾಮರ್' ಎಂಬ ಹೆಸರು ಇತ್ತಿದೆ. ಈ ಕಾರ್ಯಾಚರಣೆಯ ಭಾಗವಾಗಿ ಅಮೆರಿಕವು ಇರಾನ್‌ನ ಫೋರ್ಡೊ, ನತಾನ್ಜ್ ಮತ್ತು ಇಸ್ಫಹಾನ್ ಪರಮಾಣು ಘಟಕಗಳ ಮೇಲೆ ತನ್ನ ಬಿ–2 ಯುದ್ಧವಿಮಾನ ಬಳಸಿ ಬಾಂಬ್ ದಾಳಿ ನಡೆಸಿದೆ. ಇರಾನ್‌ನ ಎಸ್ಫಹಾನ್ ಪರಮಾಣು ಕೇಂದ್ರದ ಮೇಲೆ ಅಮೆರಿಕವು ಜಲಾಂತರ್ಗಾಮಿಯೊಂದರಿಂದ ಟಾಮಹಾಕ್ ಕ್ಷಿಪಣಿ ಬಳಸಿ ದಾಳಿ ಮಾಡಿದೆ. ಈ ದಾಳಿಗಳು ಇರಾನ್‌ನ ಮೂರೂ ಘಟಕಗಳ ಮೇಲೆ ತೀವ್ರ ಪ್ರಮಾಣದ ಹಾನಿಯನ್ನು ಉಂಟುಮಾಡಿವೆ ಎಂದು ಅಮೆರಿಕದ ಹಿರಿಯ ಮಿಲಿಟರಿ ಅಧಿಕಾರಿಗಳು ಹೇಳಿದ್ದಾರೆ. ಇರಾನ್ ದೇಶವು ಅಣು ಬಾಂಬ್ ಸಿದ್ಧಪಡಿಸುವ ಮಟ್ಟದ ಯುರೇನಿಯಂ ಸಂಗ್ರಹಿಸಿ ಇಟ್ಟುಕೊಂಡಿದೆ ಎಂದು ವರದಿಗಳನ್ನು ಉಲ್ಲೇಖಿಸಿ ಅಮೆರಿಕ ಮತ್ತು ಇಸ್ರೇಲ್ ಈ ದಾಳಿಯನ್ನು 'ಮುನ್ನೆಚ್ಚರಿಕೆಯ ಕ್ರಮ' ಎಂದು ಬಣ್ಣಿಸಿವೆ. ಆದರೆ, ಅಮೆರಿಕದ ರಾಷ್ಟ್ರೀಯ ಗುಪ್ತಚರ ವಿಭಾಗದ ನಿರ್ದೇಶಕಿ ತುಳಸಿ ಗಬಾರ್ಡ್ ಅವರು, ಇರಾನ್ ದೇಶವು ಅಣ್ವಸ್ತ್ರ ಯೋಜನೆಯಲ್ಲಿ ತೊಡಗಿಲ್ಲ ಎಂದು ಹೇಳಿದ ಮೂರು ತಿಂಗಳ ನಂತರ ಅಮೆರಿಕವು ಈ ದಾಳಿ ನಡೆಸಿದೆ ಎಂಬುದು ಗಮನಾರ್ಹ.

ಇರಾನ್ ಮೇಲೆ ನಡೆದಿರುವ ದಾಳಿಯನ್ನು ಕೆಲವು ದೇಶಗಳು ಖಂಡಿಸಿರುವುದನ್ನು ಹೊರತುಪಡಿಸಿದರೆ, ಆ ದೇಶಕ್ಕೆ ಬೇರೆ ಯಾವುದೇ ಬಗೆಯ ಬೆಂಬಲ ಸಿಕ್ಕಿಲ್ಲ. ಆದರೆ ಇರಾನ್ ಮಿಲಿಟರಿಯು ಇಸ್ರೇಲ್ ಮೇಲೆ ಪ್ರತಿದಾಳಿ ನಡೆಸುತ್ತಿದೆ, ಅಮೆರಿಕದ ನೆಲೆಗಳ ಮೇಲೆ ದಾಳಿ ನಡೆಸುವುದಾಗಿ ಇರಾನ್ ಹೇಳಿದೆ ಎಂದು ವರದಿಯಾಗಿದೆ. ಇಸ್ರೇಲ್ ನಡೆಸುತ್ತಿರುವ ನಿರಂತರ ದಾಳಿಗಳು ಇರಾನ್‌ನ ಪ್ರಾದೇಶಿಕ ಪಾಲುದಾರರಾದ ಹಿಜ್ಬುಲ್ಲಾದಂತಹ ಸಂಘಟನೆಗಳನ್ನು ದುರ್ಬಲಗೊಳಿಸಿವೆ. ಹೊರ್ಮುಜ್ ಜಲಸಂಧಿಯನ್ನು ಮುಚ್ಚಲಾಗುವುದು ಎಂದು ಇರಾನ್ ಹೇಳಿದೆ. ಅದನ್ನು ಕಾರ್ಯರೂಪಕ್ಕೆ ತಂದರೆ, ಕಚ್ಚಾ ತೈಲ ಹಾಗೂ ನೈಸರ್ಗಿಕ ಅನಿಲ ಪೂರೈಕೆಗೆ ಅಡ್ಡಿ ಸೃಷ್ಟಿಯಾಗಿ ಇರಾನ್ ದೇಶದ ಅರ್ಥ ವ್ಯವಸ್ಥೆಗೆ ದೊಡ್ಡ ಮಟ್ಟದಲ್ಲಿ ಪೆಟ್ಟು ಬೀಳಲಿದೆ. ತನ್ನ ಮೇಲಿನ ದಾಳಿಗಳಿಗೆ ಪ್ರತಿದಾಳಿ ನಡೆಸುವ ಬಗ್ಗೆ ಇರಾನ್ ಆಲೋಚನೆ ನಡೆಸಿರುವ ಹೊತ್ತಿನಲ್ಲಿ ಇಸ್ರೇಲ್ ದೇಶವು ಹೊಸ ಸಂಕಥನವೊಂದನ್ನು ಹುಟ್ಟುಹಾಕುತ್ತಿದೆ, 'ಇರಾನ್‌ನ ಆಡಳಿತದ ಚುಕ್ಕಾಣಿ ಹಿಡಿದವರು ಬದಲಾಗಬೇಕು' ಎಂದು ಅದು ಹೇಳುತ್ತಿದೆ. ಇಸ್ರೇಲ್ ದೇಶದ ಪ್ರಧಾನಿ ಬೆಂಜಮಿನ್ ನೆತನ್ಯಾಹು ನಾಯಕತ್ವದಲ್ಲಿ ನಡೆಸುತ್ತಿರುವ ಅಪಾಯಕಾರಿ ದಾಳಿಗಳಿಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬೆಂಬಲ ಇದೆ. ಈ ಹಿಂದೆ ಆಗಿರುವಂತೆಯೇ, ಪಶ್ಚಿಮ ಏಷ್ಯಾ ಪ್ರದೇಶವು ದೀರ್ಘಾವಧಿಗೆ ಅಶಾಂತಿಗೆ ಸಿಲುಕುವ ಅಪಾಯ ಎದುರಾಗಿದೆ. 'ಇರಾಕ್ ದೇಶವು ಸಮೂಹನಾಶಕ ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸುತ್ತಿದೆ' ಎಂದು ಅಮೆರಿಕವು ಆ ದೇಶದ ಮೇಲೆ ದಾಳಿ ನಡೆಸಿತ್ತು, ಸಂಘರ್ಷಕ್ಕೆ ಸಿಲುಕಿದ ಕೆಲವು ದೇಶಗಳಲ್ಲಿ ಪ್ರಜಾತಂತ್ರ ಮರುಸ್ಥಾಪಿಸುವುದಾಗಿ ಹೇಳಿಕೊಂಡು ಅಮೆರಿಕವು ಅಲ್ಲಿ ಬಂಡುಕೋರರ ಜೊತೆ ಕೈಜೋಡಿಸಿದ ನಿದರ್ಶನ ಕೂಡ ಇದೆ.

> ಇಸ್ರೇಲ್ ಮತ್ತು ಇರಾನ್ ನಡುವಣ ಯುದ್ಧದಲ್ಲಿ ಅಮೆರಿಕದ ಮಧ್ಯಪ್ರವೇಶದಿಂದಾಗಿ ಪಶ್ಚಿಮ ಏಷ್ಯಾ ಪ್ರದೇಶವು ದೀರ್ಘಾವಧಿಗೆ ಅಶಾಂತಿಗೆ ಸಿಲುಕುವ ಅಪಾಯ ಎದುರಾಗಿದೆ

ಇರಾನ್‌ನ ಪರಮಾಣು ಘಟಕಗಳನ್ನು ಪೂರ್ತಿಯಾಗಿ ನಾಶಪಡಿಸಲಾಗಿದೆ ಎಂದು ಟ್ರಂಪ್ ಅವರು ಪುನರುಚ್ಚರಿಸಿದ್ದಾರೆ. ಮುಂದೆಯೂ ವೈಮಾನಿಕ ದಾಳಿ ನಡೆಸಲಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಆದರೆ, ಇರಾನ್ ದೇಶಕ್ಕೆ ಅಣ್ವಸ್ತ್ರಗಳನ್ನು ಹೊಂದುವ ಮಹತ್ವಾಕಾಂಕ್ಷೆ ಇದೆ ಎನ್ನಲು ಗಟ್ಟಿಯಾದ ಸಾಕ್ಷ್ಯಗಳು ಇಲ್ಲದಿರುವಾಗ ಈ ಬಗೆಯಲ್ಲಿ ಆಕ್ರಮಣ ನಡೆಸುವುದು ಅಂತರರಾಷ್ಟ್ರೀಯ ಕಾನೂನುಗಳಿಗೆ ಅನುಗುಣವಾದ ನಡೆ ಅಲ್ಲ. ವಿಶ್ವಸಂಸ್ಥೆಯ ಸನ್ನದಿನ 51ನೇ ವಿಧಿಯ ಪ್ರಕಾರ, ಸಶಸ್ತ್ರ ದಾಳಿ ನಡೆದಲ್ಲಿ ಅದಕ್ಕೆ ಪ್ರತಿಯಾಗಿ ರಕ್ಷಣೆಯ ಉದ್ದೇಶದಿಂದ ದಾಳಿ ನಡೆಸುವ ಹಕ್ಕು ಇರುತ್ತದೆ. ಆದರೆ ಇರಾನ್ ಮೇಲಿನ ದಾಳಿಯನ್ನು 'ಮುಂದೆ ಆಗಬಹುದಾದ ದಾಳಿ'ಯನ್ನು ತಡೆಯುವ ಉದ್ದೇಶದಿಂದ ನಡೆಸಲಾಗಿದೆ. ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯ (ಐಎಇಎ) ಮಹಾನಿರ್ದೇಶಕ ರಫೇಲ್ ಗ್ರಾಸ್ಸಿ ಅವರು ಈಚೆಗೆ ನೀಡಿರುವ ಹೇಳಿಕೆ ಪ್ರಕಾರ, ಇರಾನ್‌ನಲ್ಲಿ ಯುರೇನಿಯಂ ಶಕ್ತಿವರ್ಧನೆಯು ಕಳವಳಕಾರಿ ಹೌದಾದರೂ ಅಲ್ಲಿ ಅಣ್ವಸ್ತ್ರ ಸಾಧನವೊಂದನ್ನು ಅಭಿವೃದ್ಧಿಪಡಿಸುವ ವ್ಯವಸ್ಥಿತ ಯೋಜನೆ ನಡೆದಿದೆ ಎನ್ನುವುದಕ್ಕೆ ಸಾಕ್ಷ್ಯಗಳಿಲ್ಲ. ಮಿಲಿಟರಿ ಬಲಪ್ರಯೋಗದ ಮೂಲಕ ಪರಿಸ್ಥಿತಿಯು ಬಿಗಡಾಯಿಸುವಂತೆ ಮಾಡುವ ಕ್ರಮಗಳ ವಿರುದ್ಧ ಎಚ್ಚರಿಕೆ ನೀಡಿರುವ ಈ ಸಂಸ್ಥೆಯು ಇಂತಹ ಪ್ರಯತ್ನಗಳು ಸಮಸ್ಯೆಗೆ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳುವ ಕೆಲಸಗಳಿಗೆ ಅಡ್ಡಿಯಾಗಬಹುದು ಎಂದು ಹೇಳಿದೆ. ಆದರೆ ನೆತನ್ಯಾಹು ಮತ್ತು ಟ್ರಂಪ್ ಅವರ ಹೇಳಿಕೆಗಳನ್ನು ಗಮನಿಸಿದರೆ, ಸಂಯಮಕ್ಕಿಂತ ಆರ್ಭಟವೇ ಹೆಚ್ಚು ಬಲ ಪಡೆದಿರುವಂತೆ ಕಾಣುತ್ತಿದೆ.

ಎ.ಐ. ಮೋಡಿ...

ಭಾರತದ ಸಿನಿಮಾಗಳು ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಏಕೆ ತಲುಪುವುದಿಲ್ಲ ಎಂಬ ಪ್ರಶ್ನೆ ನನಗೆ ಯಾವಾಗಲೂ ಎದುರಾಗುತ್ತದೆ. ಇದಕ್ಕೆ ನೀವು ಇನ್ನು ಹೆಚ್ಚು ಕಾಲ ಕಾಯಬೇಕಿಲ್ಲ. ಎ.ಐ. ಎಂಬ ಹೆಸರಿನ ವಿಸ್ಮಯಕಾರಿ ತಂತ್ರಜ್ಞಾನ ಬಳಸಿ ಮಾಡಿದ ಸಿನಿಮಾಗಳು ಎಲ್ಲೆಡೆ ಹೆಚ್ಚು ಹೆಚ್ಚು ತಯಾರಾಗುತ್ತಿವೆ. ಭಾರತದ ಮಕ್ಕಳು ಮುಂದಿನ 'ಅವತಾರ್' ಅನ್ನು ಸಿದ್ಧಪಡಿಸಲಿದ್ದಾರೆ. ಅದೂ ಹಾಲಿವುಡ್‌ನಲ್ಲಿ ಆಗುವ ವೆಚ್ಚಕ್ಕೆ ಹೋಲಿಸಿದರೆ ತೀರಾ ಕಡಿಮೆ ಖರ್ಚಿನಲ್ಲಿ...

ಶೇಖರ್ ಕಪೂರ್, ಚಲನಚಿತ್ರ ನಿರ್ದೇಶಕ, 'ಎಕ್ಸ್'ನಿಂದ

ಕಿಡಿನುಡಿ

ಕಾಂಗ್ರೆಸ್‌ನ ಅನೇಕ ಶಾಸಕರು ಬಿಜೆಪಿಗೆ ಬರಲು ಸಿದ್ಧರಿದ್ದಾರೆ. ಕಾಂಗ್ರೆಸ್‌ನಲ್ಲಿ ಆಂತರಿಕ ಕಲಹ ಹೆಚ್ಚಿದ್ದು, ಅದು ಯಾವಾಗ ಸ್ಫೋಟವಾಗುತ್ತದೋ ಗೊತ್ತಿಲ್ಲ. ರಾಜ್ಯದಲ್ಲಿ ಯಾವುದೇ ಕ್ಷಣದಲ್ಲಿ ರಾಜಕೀಯ ಧ್ರುವೀಕರಣ ಆಗಲಿದ್ದು, ಸರ್ಕಾರ ಪತನವಾಗುತ್ತದೆ. ಈಗ 'ಆಪರೇಷನ್ ಕಮಲ'ದ ಅಗತ್ಯವೇ ಇಲ್ಲ...

ಜಗದೀಶ ಶೆಟ್ಟರ್, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಶನಿವಾರ, 24-6-2000

• ಘಟಪ್ರಭಾ ದಂಡೆಯಲ್ಲಿ ಇಂದಿನಿಂದ ಸಾಹಿತ್ಯ ಸಮ್ಮೇಳನ

ಬಾಗಲಕೋಟೆ, ಜೂನ್ 23– 12ನೇ ಶತಮಾನದ ಕ್ರಾಂತಿಕಾರಿ ಕವಿ– ಸಮಾಜ ಸುಧಾರಕ ಬಸವಣ್ಣನವರಿದ್ದ ನೆಲ, ಘಟಪ್ರಭಾ ನದಿ ದಂಡೆಯಲ್ಲಿರುವ ಬಾಗಲಕೋಟೆ ನಗರದಲ್ಲಿ 68ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಾಳೆಯಿಂದ 3 ದಿನಗಳವರೆಗೆ ನಡೆಯಲಿದೆ.

ಎರಡು ಬಾರಿ ಮುಂದೂಡಿ 3ನೇ ಬಾರಿಗೆ ವಾಟರ್‌ಪ್ರೂಫ್ ಸಭಾಂಗಣದಡಿ ನಡೆಯುತ್ತಿರುವ ಈ ಸಮ್ಮೇಳನಕ್ಕಾಗಿ ಬಾಗಲಕೋಟೆ ನಗರ ಸಿಂಗಾರಗೊಂಡಿದ್ದು ಕೊನೆ ಕ್ಷಣದ ಸಿದ್ಧತೆಗಳು ಭರದಿಂದ ಸಾಗಿವೆ.

75 ವರ್ಷಗಳ ಹಿಂದೆ

ಶನಿವಾರ, 24-6-1950

• ಸ್ಥಾನಬದ್ಧತಾ ಶಾಸನದ 14ನೇ ವಿಧಿ ರದ್ದು

ನವದೆಹಲಿ, ಜೂನ್ 23– ಮುನ್ನೆಚ್ಚರಿಕೆಯ ಸ್ಥಾನಬದ್ಧತಾ ಶಾಸನದ 14ನೇ ವಿಧಿ ರದ್ದುಗೊಳಿಸಿ ರಾಷ್ಟ್ರಪತಿಯವರು ವಿಶೇಷಾಜ್ಞೆ ಹೊರಡಿಸಿದ್ದಾರೆ. ಈ ಆರ್ಡಿನೆನ್ಸ್ ಶಾಸನದ 3ನೇ ಪ್ರಕರಣಕ್ಕೂ ಸಣ್ಣವೆರಡು ತಿದ್ದುಪಡಿ ಆಗಿವೆ. ಈ ತಿದ್ದುಪಡಿಗಳ ರೀತ್ಯಾ ಹೈದರಾಬಾದ್ ಸಂಸ್ಥಾನದ ಸಿವಿಲ್ ಆಡಳಿತಗಾರರಿಗೂ ಸಂಸ್ಥಾನ ಸರ್ಕಾರಗಳಿಂದ ವಿಶೇಷ ಅಧಿಕಾರ ಪಡೆದ ಅಡಿಷನಲ್ ಮ್ಯಾಜಿಸ್ಟ್ರೇಟರುಗಳಿಗೂ ಸ್ಥಾನ ಬದ್ಧತೆಯ ಅಧಿಕಾರ ದೊರೆಯುತ್ತದೆ. ಈ ಸಾಲಿನ ಫೆಬ್ರುವರಿ 24ರಂದು ಪಾರ್ಲಿಮೆಂಟ್‌ನಲ್ಲಿ ಅನುಮೋದನೆ ಪಡೆದಿದೆ.

ಕರಾಳ ಅಧ್ಯಾಯದ ಆ ದಿನಗಳು...

ವಿಶ್ಲೇಷಣೆ

ಎಸ್. ಸುರೇಶ್ ಕುಮಾರ್

ಐವತ್ತು ವರ್ಷ ಕಳೆದುಹೋದವು. 1975ರ ಜೂನ್ 25ರಂದು ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ದೇಶದ ಮೇಲೆ ಮಧ್ಯರಾತ್ರಿಯಲ್ಲಿ ಹೇರಿದ ಆಂತರಿಕ ತುರ್ತು ಪರಿಸ್ಥಿತಿಯು 50 ವರ್ಷಗಳ ನಂತರವೂ ಮನದಲ್ಲಿ ಹಚ್ಚ ಹಸಿರು. ಆಂತರಿಕ ಭದ್ರತೆ ನಿರ್ವಹಣಾ ಕಾಯ್ದೆಯಡಿ (ಮೀಸಾ) 15 ತಿಂಗಳು ಬಂದಿಯಾಗಿ ಸೆರೆವಾಸ, ಆ ಅವಧಿಯಲ್ಲಿ ಅತಿರಥ ಮಹಾರಥರ ಸಹವಾಸ, ಅವೆಲ್ಲವೂ ಮರೆಯಲಾಗದ ನೆನಪುಗಳು.

ದೇಶದ ಇತಿಹಾಸದಲ್ಲಿ 19 ತಿಂಗಳ ತುರ್ತು ಪರಿಸ್ಥಿತಿಯ ಸಮಯ, ಸಂವಿಧಾನದ ದೃಷ್ಟಿಯಿಂದ ಕರಾಳ ಅವಧಿ. ಓರ್ವ ವ್ಯಕ್ತಿಯ ಸರ್ವಾಧಿಕಾರಿ ಮನಃಸ್ಥಿತಿ ಹಾಗೂ ಅಭದ್ರತೆ ದೇಶವನ್ನು ಪತನದ ದಿಕ್ಕಿಗೆ ಕರೆದೊಯ್ಯಬಹುದು ಎಂಬುದಕ್ಕೆ ತುರ್ತು ಪರಿಸ್ಥಿತಿಯು ಜ್ವಲಂತ ಉದಾಹರಣೆ.

1974ರಲ್ಲಿಯೇ ಇಂದಿರಾ ಗಾಂಧಿ ಅವರ ಸರ್ವಾಧಿಕಾರಿ ನಡವಳಿಕೆಯ ಅನಾವರಣವಾಗಿತ್ತು. ಕಾಲೇಜು ಹಾಸ್ಟೆಲ್‌ಗಳಲ್ಲಿ ಸರಬರಾಜಾಗುತ್ತಿದ್ದ ಕಳಪೆ ಆಹಾರ ವಿರೋಧಿಸಿ ಗುಜರಾತ್‌ನಲ್ಲಿ ಆರಂಭವಾದ ಚಳವಳಿಗೆ ಆ ರಾಜ್ಯದ ಮುಖ್ಯಮಂತ್ರಿಯ ತಲೆದಂಡ ಆಗಿದ್ದು ಇತಿಹಾಸ. ತದನಂತರ, ಜಯಪ್ರಕಾಶ ನಾರಾಯಣ್ ನಾಯಕತ್ವದಲ್ಲಿ ಬಿಹಾರದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನ ಪ್ರಾರಂಭಗೊಂಡಿದ್ದು, ಬಿಹಾರದ ಮುಖ್ಯಮಂತ್ರಿ ಅಬ್ದುಲ್ ಗಫೂರ್ ಪದಚ್ಯುತಿಗೆ ಕಾರಣವಾಯಿತು. ಆ ವಿದ್ಯಮಾನಗಳು ದೇಶದಲ್ಲಿ ಜೆ.ಪಿ. ಆಂದೋಲನ ವ್ಯಾಪಕವಾಗಲು ಬೀಜವಾದವು. ಚುನಾವಣೆಗಳ ಸುಧಾರಣೆ ಸೇರಿದಂತೆ ವಂಶಪಾರಂಪರ್ಯ ಆಡಳಿತ ಹಾಗೂ ಭ್ರಷ್ಟಾಚಾರದ ವಿರುದ್ಧ ಜನಜಾಗೃತಿ ಮೂಡಿಸುವಲ್ಲಿ ಹಾಗೂ ದೆಹಲಿಯ ಸಿಂಹಾಸನ ಅಲುಗಾಡಲು ಚಳವಳಿ ನಾಂದಿಯಾಯಿತು.

1975ರ ಜೂನ್ 12ರಂದು ಉತ್ತರ ಪ್ರದೇಶದ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಜೆ.ಎಂ.ಎಲ್. ಸಿನ್ಹಾ ನೀಡಿದ ತೀರ್ಪು ದೇಶದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿತು. 1971ರಲ್ಲಿ ಉತ್ತರ ಪ್ರದೇಶದ ರಾಯ್‌ಬರೇಲಿ ಲೋಕಸಭಾ ಕ್ಷೇತ್ರದಿಂದ ಇಂದಿರಾ ಗಾಂಧಿ ಆಯ್ಕೆಯಾಗಿದ್ದರು. ಚುನಾವಣೆಯಲ್ಲಿ ಅವರು ಪ್ರಧಾನ ಮಂತ್ರಿ ಸ್ಥಾನವನ್ನು ದುರುಪಯೋಗಪಡಿಸಿಕೊಂಡು, ರಾಜಕೀಯ ಭ್ರಷ್ಟಾಚಾರ ಹಾಗೂ ಅಧಿಕಾರದ ದುರುಪಯೋಗ ಎಸಗಿದ್ದಾರೆ ಎಂದು ಪರಾಜಿತ ಅಭ್ಯರ್ಥಿ ರಾಜ್‌ನಾರಾಯಣ್ ಸಲ್ಲಿಸಿದ ಅರ್ಜಿಯನ್ನು ನ್ಯಾಯಮೂರ್ತಿ ಪುರಸ್ಕರಿಸಿದ್ದರು; ಇಂದಿರಾ ಅವರ ಆಯ್ಕೆಯನ್ನು ರದ್ದುಗೊಳಿಸಿ, ಪ್ರಧಾನ ಮಂತ್ರಿ ಸ್ಥಾನದಲ್ಲಿ ಮುಂದುವರಿಯಲು ಅನರ್ಹರು ಹಾಗೂ ಮುಂದಿನ ಆರು ವರ್ಷಗಳ ಕಾಲ ಚುನಾವಣೆಯಲ್ಲಿ ನಿಲ್ಲಬಾರದು ಎಂದು ತೀರ್ಪು ನೀಡಿದ್ದರು.

ಅದೇ ದಿನ ಸಂಜೆ ಗುಜರಾತ್‌ನಲ್ಲಿ ನಡೆದಿದ್ದ ಮಧ್ಯಂತರ ಚುನಾವಣೆಯ ಫಲಿತಾಂಶ ಹೊರಬಿದ್ದು, ಕಾಂಗ್ರೆಸ್ ಸೋಲು ಅನುಭವಿಸಿತು. ಜನಸಂಘದ ಭಾಗವಾಗಿದ್ದ ಜನತಾ ಮೋರ್ಚಾ ಅಧಿಕಾರಕ್ಕೆ ಬಂದಿತು.

ಒಂದೇ ದಿನ ಘಟಿಸಿದ ಎರಡು ಘಟನೆಗಳು ಇಂದಿರಾ ಅವರನ್ನು ಕಂಗೆಡಿಸಿದ್ದವು. ಪ್ರಧಾನ ಮಂತ್ರಿ ಸ್ಥಾನ ಬಿಟ್ಟುಕೊಡುವ ಮನಃಸ್ಥಿತಿಯಲ್ಲಿರದ ಅವರು, 'ಇಂದಿರಾ ಹಟಾವೊ' ಘೋಷಣೆಗಳ ನಡುವೆಯೂ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದರು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಆಗ ನೀಡಿದ ತೀರ್ಪು ವಿಚಿತ್ರವೆಂದೇ ಹೇಳಬೇಕು. ಇಂದಿರಾ ಅವರು ಪ್ರಧಾನ ಮಂತ್ರಿಯಾಗಿ ಮುಂದುವರಿಯಬಹುದು; ಆದರೆ, ಪ್ರಕರಣ ಮುಗಿಯುವವರೆಗೂ ಲೋಕಸಭೆಯಲ್ಲಿ ಅವರಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ ಎನ್ನುವುದು ತೀರ್ಪಿನ ಸಾರಾಂಶವಾಗಿತ್ತು.

ದೇಶದಲ್ಲಿ ಇಂದಿರಾ ವಿರುದ್ಧದ ವಾತಾವರಣ ಬಲಗೊಳ್ಳುತ್ತಿತ್ತು. ಆದರೂ ಇಂದಿರಾ ಗಾಂಧಿ ಅವರು ಸಚಿವ ಸಂಪುಟದ ಅನುಮೋದನೆ ಇಲ್ಲದೆ, 'ತುರ್ತು ಪರಿಸ್ಥಿತಿ ಹೇರಿಕೆ'ಗೆ ಮುಂದಾದರು. ಅಂದಿನ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್ ಅವರನ್ನು ಮಧ್ಯರಾತ್ರಿ ನಿದ್ದೆಯಿಂದ ಎಬ್ಬಿಸಿ ಅನುಮೋದನೆ ಪಡೆದು, ತುರ್ತು ಪರಿಸ್ಥಿತಿಯನ್ನು ಜಾರಿಗೆ ತಂದೇಬಿಟ್ಟರು.

ತುರ್ತು ಪರಿಸ್ಥಿತಿ ಜಾರಿಯಿಂದಾಗಿ ಜಯಪ್ರಕಾಶ ನಾರಾಯಣ್, ಮೊರಾರ್ಜಿ ದೇಸಾಯಿ, ಅಟಲ್ ಬಿಹಾರಿ ವಾಜಪೇಯಿ, ಮಧು ದಂಡವತೆ, ಶಾಮ್ ನಂದನ್ ಮಿಶ್ರಾ, ಪೀಲೂ ಮೋದಿ ಮುಂತಾದ ರಾಜಕೀಯ ನೇತಾರರನ್ನು ಸೆರೆಮನೆಗೆ ದೂಡಲಾಯಿತು. ಪತ್ರಕರ್ತ ಕುಲದೀಪ್ ನಯ್ಯರ್ ಅವರನ್ನು ಬಂಧಿಸಲಾಯಿತು. ತುರ್ತು ಪರಿಸ್ಥಿತಿ ಘೋಷಣೆ ನಂತರ ದೇಶದಲ್ಲಿ ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯಕ್ಕೂ ಧಕ್ಕೆಯಾಯಿತು. ಪ್ರಮುಖ ನಾಯಕರ ಬಂಧನದ ವಿಚಾರಗಳು ಪತ್ರಿಕೆಗಳಲ್ಲಿ ಪ್ರಕಟವಾಗದಂತೆ ದೆಹಲಿಯಲ್ಲಿನ ಪತ್ರಿಕಾ ಕಾರ್ಯಾಲಯಗಳಿಗೆ ವಿದ್ಯುತ್ ಕಡಿತಗೊಳಿಸಲಾಯಿತು.

ಜೂನ್ 26ರಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯವಾಹರಾಗಿದ್ದ ಕೃ. ನರಹರಿ, ತುರ್ತು ಪರಿಸ್ಥಿತಿ ವಿರುದ್ಧ ಪ್ರತಿಭಟನೆ ಯೋಜಿಸಲು ನನಗೆ ಸೂಚಿಸಿದರು. ನಾನು, ಆಗ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ನಾಯಕರಾಗಿದ್ದ ಪಿ.ಜಿ.ಆರ್. ಸಿಂಧ್ಯ ಅವರನ್ನು ಭೇಟಿಯಾದೆ. ತುರ್ತು ಪರಿಸ್ಥಿತಿ ವಿರುದ್ಧ ಅಂದು ನಡೆದದ್ದು ರಾಜ್ಯದ ಪ್ರಥಮ ಪ್ರತಿಭಟನೆ. ಆ ಪ್ರತಿಭಟನೆಯಲ್ಲಿ ಎಂ. ಚಂದ್ರಶೇಖರ್, ಎಸ್. ವೆಂಕಟರಾಮ್, ವಿ.ಎಸ್. ಕೃಷ್ಣಅಯ್ಯರ್, ಪ್ರಮೀಳಾ ನೇಸರ್ಗಿ, ಎ. ಲಕ್ಷ್ಮೀಸಾಗರ್ ಮುಂತಾದ ನಾಯಕರು ಸೇರಿದಂತೆ 120ರಿಂದ 150 ಜನ ಭಾಗವಹಿಸಿದ್ದರು.

> ಸಂವಿಧಾನವನ್ನು ಅಣಕ ಮಾಡಿದ ತುರ್ತು ಪರಿಸ್ಥಿತಿ ಜಾರಿಗೊಂಡು ಐವತ್ತು ವರ್ಷಗಳು ತುಂಬಿವೆ. ಐದು ದಶಕಗಳ ನಂತರವೂ ತುರ್ತು ಪರಿಸ್ಥಿತಿ ಸಂದರ್ಭದ ದೌರ್ಜನ್ಯ ಹಾಗೂ ನೋವು, ಸಂಕಟದ ನೆನಪುಗಳು ಕಣ್ಣಿಗೆ ಕಟ್ಟಿದಂತಿವೆ

ಆಶ್ಚರ್ಯವೆಂದರೆ ಅಂದು ನಮ್ಮನ್ನು ಬಂಧಿಸಲಿಲ್ಲ. ಅಂದು ಮುಂಜಾನೆಯೇ ಸಂಸದೀಯ ನಿಯೋಗದೊಂದಿಗೆ ಬಂದಿದ್ದ ಅಟಲ್ ಬಿಹಾರಿ ವಾಜಪೇಯಿ, ಲಾಲ್‌ಕೃಷ್ಣ ಅಡ್ವಾಣಿ, ಮಧು ದಂಡವತೆ ಹಾಗೂ ಶಾಮ್ ನಂದನ್ ಮಿಶ್ರಾ ಅವರನ್ನು ಬೆಂಗಳೂರಿನ ಶಾಸಕರ ಭವನದಲ್ಲಿ ಬಂಧಿಸಲಾಗಿತ್ತು.

ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಸತ್ಯ ಸುದ್ದಿ ಪ್ರಕಟವಾಗಲು ಸರ್ಕಾರದ ಸೆನ್ಸಾರ್ ವಿಭಾಗ ಬಿಡುತ್ತಿರಲಿಲ್ಲ. 'ಕಹಳೆ' ಎಂಬ ಪತ್ರಿಕೆಯನ್ನು ನಾವೇ ರೂಪಿಸಿ, ಹಂಚಲು ಪ್ರಾರಂಭಿಸಿದೆವು. ಅದೆಷ್ಟೋ ಬಾರಿ ಯಶವಂತಪುರದಲ್ಲಿದ್ದ ಮುದ್ರಣಾಲಯದಲ್ಲಿ ಸಿದ್ಧಗೊಳ್ಳುತ್ತಿದ್ದ ಕಹಳೆಯ ಪ್ರತಿಗಳನ್ನು ತೆಗೆದುಕೊಂಡು, ಮೈಸೂರು, ಮಂಡ್ಯ, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರಿನ ಹಲವೆಡೆ ಹಂಚಿರುವೆ.

1975ರ ಜುಲೈ 4ರಂದು ಆರ್‌ಎಸ್‌ಎಸ್ ಸೇರಿದಂತೆ ಹಲವಾರು ಸಂಘಟನೆಗಳ ಮೇಲೆ ನಿಷೇಧ ಹೇರಲಾಯಿತು. ಆದರೆ, ವಾಲಿಬಾಲ್, ಕಬಡ್ಡಿ ಆಟದ ನೆಪದಲ್ಲಿ ನಾವು ಒಟ್ಟಿಗೆ ಸೇರುತ್ತಿದ್ದೆವು. ತುರ್ತು ಪರಿಸ್ಥಿತಿಯ ಹೋರಾಟಗಾರರ ಮೇಲಿನ ಪೊಲೀಸರ ದೌರ್ಜನ್ಯಗಳು ಆಗಾಗ ತಿಳಿಯುತ್ತಿದ್ದವು. ಅನೇಕರು ಪೊಲೀಸರ ಹಿಟ್ ಲಿಸ್ಟ್‌ನಲ್ಲಿದ್ದರು. ಆದರೂ, ಪೊಲೀಸರಿಗೆ ಚಳ್ಳೆಹಣ್ಣನ್ನು ತಿನ್ನಿಸಿ, 19 ತಿಂಗಳು ಭೂಗತ ಚಟುವಟಿಕೆಗಳನ್ನು ಮುಂದುವರೆಸುವಲ್ಲಿ ಹಲವರು ಯಶಸ್ವಿಯಾದರು.

ಸಂವಿಧಾನ ನಮಗೆ ನೀಡಿರುವ ಮೂಲಭೂತ ಹಕ್ಕುಗಳನ್ನು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ನಿರಾಕರಿಸಲಾಗಿತ್ತು. 'ಭಾರತ್ ಮಾತಾ ಕಿ ಜೈ' ಎನ್ನುವುದೂ ಅಪರಾಧವಾಗಿದ್ದುದು ಪ್ರಜಾಸತ್ತೆಯ ಕ್ರೂರ ಅಣಕ. ನಾಯಕರ ಬಂಧನ ಹಾಗೂ ತುರ್ತು ಪರಿಸ್ಥಿತಿ ಹೇರಿಕೆ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದಾಗ ಕೇಳಿ ಬಂದ ಜನಪರ ಧ್ವನಿ ನ್ಯಾಯಮೂರ್ತಿ ಎಚ್.ಆರ್. ಖನ್ನಾ ಅವರದ್ದು.

'ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಪೊಲೀಸರು ಯಾವುದೇ ಕಾರಣವಿಲ್ಲದೆ ಗುಂಡು ಹಾರಿಸಿ ನಿರಪರಾಧಿಯನ್ನು ಸಾಯಿಸಿದರೆ ಅದು ಅಪರಾಧ ಆಗುವುದಿಲ್ಲವೇ?' ಎಂಬ ನ್ಯಾಯಮೂರ್ತಿ ಅವರ ಪ್ರಶ್ನೆಗೆ, ಅಟಾರ್ನಿ ಜನರಲ್ ನೀರೇನ್ ಡೇ ಕೊಟ್ಟ ಉತ್ತರ: 'ಕ್ಷಮಿಸಿ, ಈ ಅವಧಿಯಲ್ಲಿ ಯಾವುದೇ ವ್ಯಕ್ತಿಯ ಪ್ರಾಣಹರಣವಾದರೂ ಅದು ಅಪರಾಧ ಆಗುವುದಿಲ್ಲ'. ದುರದೃಷ್ಟಕರ ಸಂಗತಿಯೆಂದರೆ, ಎಚ್.ಆರ್. ಖನ್ನಾ ಅವರ ಭಿನ್ನಮತದ ನಡುವೆಯೂ ತುರ್ತು ಪರಿಸ್ಥಿತಿಯ ಹೇರಿಕೆಯನ್ನು ಸಮರ್ಥಿಸುವ ಬಹುಮತದ ತೀರ್ಪನ್ನು ಸುಪ್ರೀಂ ಕೋರ್ಟ್ ಕೊಟ್ಟಿತು. ಭಾರತೀಯ ನ್ಯಾಯಾಂಗದ ನೈತಿಕ ಪ್ರಜ್ಞೆ ಅಂದು ಕಾಣೆಯಾಗಿತ್ತು.

1975ರ ನವೆಂಬರ್ 7ರಂದು ಬೆಂಗಳೂರಿನ ಅಶೋಕ ಹೋಟೆಲ್‌ಗೆ ಆಗಮಿಸಿದ್ದ ಕಾಮನ್‌ವೆಲ್ತ್ ರಾಷ್ಟ್ರಗಳ ನಿಯೋಗದ ಸದಸ್ಯರನ್ನು ಸಂಪರ್ಕಿಸಿದ ನಾನು, ತುರ್ತು ಪರಿಸ್ಥಿತಿಯ ಅತಿರೇಕಗಳನ್ನು ವಿವರಿಸುವ ಕಿರು ಹೊತ್ತಿಗೆಗಳನ್ನು ಹಂಚುವಾಗ, ಗೆಳೆಯರೊಂದಿಗೆ ಬಂಧನಕ್ಕೊಳಗಾದೆ.

ನವೆಂಬರ್ 7ರಿಂದ 10ರವರೆಗಿನ ದಿನಗಳು ನನ್ನ ಪಾಲಿಗೆ ನರಕಸದೃಶವಾಗಿದ್ದವು. ಆಗ ವಿಧಾನಸೌಧದ ಸನಿಹದಲ್ಲಿಯೇ ಇದ್ದ ಹೈ ಗ್ರೌಂಡ್ಸ್ ಪೊಲೀಸ್ ಸ್ಟೇಷನ್ ಕಟ್ಟಡದಲ್ಲಿ ನಾವು ಅನುಭವಿಸಿದ ಚಿತ್ರಹಿಂಸೆ ವರ್ಣಿಸಲು ಪದಗಳಿಲ್ಲ. ಪೊಲೀಸರು ಅಕ್ಷರಶಃ ರುಬ್ಬಿಬಿಟ್ಟರು. ನಾನು ಆಗಾಗ್ಗೆ, 'ಜೀವನದಲ್ಲಿ ನಾನು ಮೊದಲ ಬಾರಿ ಏರೋಪ್ಲೇನ್ ಹತ್ತಿದ್ದು ಹೈ ಗ್ರೌಂಡ್ಸ್ ಪೊಲೀಸ್ ಸ್ಟೇಷನ್‌ನಲ್ಲಿ' ಎಂದು ತಮಾಷೆಯಾಗಿ ಹೇಳುವುದಿದೆ.

ನನ್ನ ತಾಯಿ ನನ್ನನ್ನು ಹುಡುಕಿ ಅನೇಕ ಪೊಲೀಸ್ ಠಾಣೆಗಳಿಗೆ ಅಲೆದಾಡಿ, ಕೊನೆಗೆ ರಾಮಾ ಜೋಯಿಸ್ (ಮುಂದೆ, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯಾಗಿ, ಪಂಜಾಬ್, ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸಿದ್ದರು) ಮತ್ತು ಮುಂದೆ ಲೋಕಾಯುಕ್ತರಾದ ಸಂತೋಷ್ ಹೆಗ್ಡೆ ಅವರನ್ನು ಸಂಪರ್ಕಿಸಿದರು.

'ನನ್ನ ಮಗನನ್ನು ಹುಡುಕಿಕೊಡಿ' ಎಂದು ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್‌ನಲ್ಲಿ ಸಲ್ಲಿಸಿದರು. ಆದರೆ, ನಮ್ಮನ್ನು ಕೋರ್ಟಿಗೆ ಹಾಜರುಪಡಿಸದೆ 'ಮೀಸಾ' ಬಂದಿಗಳನ್ನಾಗಿ ಮಾಡಿ, 1975ರ ನವೆಂಬರ್ 10ರಂದು ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ತಳ್ಳಿದರು. ನಾನು ಬಿಡುಗಡೆಯಾಗಿ ಹೊರಬಂದದ್ದು 1977ರ ಜನವರಿ 22ರಂದು.

ಸೆರೆಮನೆಯಲ್ಲಿ ಅತಿರಥ ಮಹಾರಥರ ಸಹವಾಸದ ಸೌಭಾಗ್ಯ ನನಗೆ ಸಿಕ್ಕಿತ್ತು. ಧೀಮಂತ ನಾಯಕರ ವಿಚಾರಗಳನ್ನು ಆಲಿಸುವ, ಅವರ ನಡವಳಿಕೆಯನ್ನು ಗಮನಿಸುವ ಅವಕಾಶ ಸಿಕ್ಕಿತ್ತು. ಒಂದರ್ಥದಲ್ಲಿ ನಾನು ತುರ್ತು ಪರಿಸ್ಥಿತಿಯಲ್ಲಿ ಜನಿಸಿದ ರಾಜಕೀಯ ಶಿಶು.

ಐವತ್ತು ವರ್ಷಗಳ ನಂತರ ಹಿಂತಿರುಗಿ ನೋಡಿದರೆ, ತುರ್ತು ಪರಿಸ್ಥಿತಿ ಹೆಸರಿನಲ್ಲಿ ಸಂವಿಧಾನದ ಮೇಲೆ ನಡೆದ ಅಪಚಾರ, ವ್ಯಕ್ತಿ ಸ್ವಾತಂತ್ರ್ಯದ ಹರಣ, ಹೋರಾಟಗಾರರ ಮೇಲಿನ ಪೈಶಾಚಿಕ ಕೃತ್ಯಗಳು ಕಾಡುತ್ತವೆ. ಕಠಿಣ ಪರಿಸ್ಥಿತಿಯಲ್ಲೂ ಸತ್ಯಾಗ್ರಹ ಮಾಡಿದ ಸಾಮಾನ್ಯ ಸ್ವಯಂಸೇವಕರು ಮತ್ತು ಕಾರ್ಯಕರ್ತರು ನೆನಪಾಗುತ್ತಾರೆ.

ಇಂದಿರಾ ಗಾಂಧಿ ಅವರಿಗೆ ಗುಪ್ತಚರ ವಿಭಾಗ ಕೊಟ್ಟ 'ನಿಮ್ಮ ವಿಜಯ ಖಚಿತ' ಎಂಬ ಮಾಹಿತಿ ಚುನಾವಣೆ ನಡೆಸುವಂತೆ ಮಾಡಿತು. ಆ ಚುನಾವಣೆಯಲ್ಲಿ ಜನತೆ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಿತು. ಇಂದಿರಾ ಅವರ ಪುತ್ರ ಸಂಜಯ್ ಗಾಂಧಿ ಸೇರಿದಂತೆ ಅನೇಕ ಕಾಂಗ್ರೆಸ್ ಮುಖಂಡರು ಸೋಲುಂಡರು. ಮೊರಾರ್ಜಿ ದೇಸಾಯಿ ನೇತೃತ್ವದಲ್ಲಿ ಜನತಾ ಪಕ್ಷ ಆಡಳಿತಕ್ಕೆ ಬಂದಿತು. ಇನ್ನೆಂದೂ ಯಾವುದೇ ಸರ್ವಾಧಿಕಾರಿಯು ತುರ್ತು ಪರಿಸ್ಥಿತಿಯನ್ನು ಮತ್ತೆ ಹೇರದಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡಲಾಯಿತು. ದೇಶದ ಪ್ರತಿಯೊಬ್ಬ ರಾಜಕೀಯ ವಿದ್ಯಾರ್ಥಿಯು ಅಧ್ಯಯನ ಮಾಡಲೇಬೇಕಾದುದು, 19 ತಿಂಗಳ ಅವಧಿಯ 'ತುರ್ತು ಪರಿಸ್ಥಿತಿ' ಎಂಬ ಕರಾಳ ಅಧ್ಯಾಯ.

ವಾಚಕರ ವಾಣಿ

ಗ್ರಾಮ ಗ್ರಂಥಾಲಯ ಸ್ವಾಗತಾರ್ಹ

ಕೇಂದ್ರ ಸರ್ಕಾರದ ನೆರವಿನೊಂದಿಗೆ ರಾಜ್ಯದಲ್ಲಿ ಹೊಸದಾಗಿ 6,599 ಗ್ರಾಮ ಗ್ರಂಥಾಲಯಗಳ ಸ್ಥಾಪನೆಗೆ ಮುಂದಾಗಿರುವುದು ಉತ್ತಮ ನಿರ್ಧಾರ (ಪ್ರ.ವಾ., ಜೂನ್ 23). ಗ್ರಂಥಾಲಯಗಳು ದೇವಾಲಯ ಇದ್ದಂತೆ. ಈ ಯೋಜನೆಯ ಸಮರ್ಪಕ ಅನುಷ್ಠಾನದಲ್ಲಿ ರಾಜ್ಯ ಸರ್ಕಾರ ಹಲವು ಕ್ರಮ ವಹಿಸಬೇಕಿದೆ. ಗ್ರಂಥಾಲಯ ತೆರೆಯುವ ಕಟ್ಟಡವು ಸುಸಜ್ಜಿತವಾಗಿರಬೇಕು. ಇದರ ನಿರ್ವಹಣೆಗೆ ಪೂರ್ಣಾವಧಿಯ ಸಿಬ್ಬಂದಿ ನೇಮಿಸಬೇಕು. ಸಮಕಾಲೀನ, ವೈಜ್ಞಾನಿಕ, ವೈಚಾರಿಕ, ನಾಡು, ನುಡಿ, ಸಂಸ್ಕೃತಿಯನ್ನು ಬಿಂಬಿಸುವ ಪುಸ್ತಕಗಳ ಸಂಖ್ಯೆ ಹೆಚ್ಚಿರಬೇಕು. ಗ್ರಂಥಾಲಯವು ಅಲಂಕಾರದ ಕೋಣೆಯಂತಿರಬಾರದು. ಆಗಷ್ಟೇ ಅದು ಜನಸ್ನೇಹಿಯಾಗಲಿದೆ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಹಿರಿಯ ಜೀವಗಳಿಗೆ ಆಸರೆ ಬೇಕು

ಆಸ್ತಿಗಾಗಿ ಜಗಳವಾಡಿದ ಇಬ್ಬರು ಪುತ್ರರು ತಂದೆ, ತಾಯಿಯನ್ನು ಮನೆಯಿಂದ ಹೊರಹಾಕಿರುವುದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ವರದಿಯಾಗಿದೆ. ಈಗೀಗ ಎಲ್ಲವೂ ವ್ಯಾಪಾರಿ ಧೋರಣೆಯ ಸಂಬಂಧಗಳೇ ಆಗಿವೆ. ದಯೆ, ಕರುಣೆ, ಮಾನವೀಯತೆ, ಪ್ರೀತಿ, ನಂಬಿಕೆ ಮರೆಯಾಗಿವೆ.

ಹೆತ್ತವರನ್ನು ಕಾಳಜಿಯಿಂದ ನೋಡಿಕೊಳ್ಳುವ ಮಕ್ಕಳೂ ಇದ್ದಾರೆ. ಅಂತಹವರ ಸಂಖ್ಯೆ ವಿರಳ. ಹೊಂದಾಣಿಕೆ ಕೊರತೆ ಹಾಗೂ ಸೋಲದ ಮನಃಸ್ಥಿತಿ ಇರದೇ ಇರುವುದರಿಂದ ಬಾಳಿನ ಮುಸ್ಸಂಜೆಯಲ್ಲಿ ಹಿರಿಯ ನಾಗರಿಕರು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ. ಕನಿಕರಕ್ಕಿಂತ ಅವರಿಗೆ ಆಸರೆ ಮತ್ತು ಆರೈಕೆ ಬೇಕಿದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಮಹಿಳೆಯರಿಗೆ ಪ್ರತ್ಯೇಕ ಬಸ್ ಓಡಿಸಿ

'ಶಕ್ತಿ' ಯೋಜನೆ ಬಳಸಿಕೊಂಡು ಮಹಿಳೆಯರು ರಾಜ್ಯದ ಎಲ್ಲ ಭಾಗದಲ್ಲೂ ಓಡಾಡುತ್ತಿದ್ದಾರೆ. ಗಂಡುಮಕ್ಕಳಿಗೆ ಬಸ್‌ನಲ್ಲಿ ಹತ್ತಲು ಸಾಧ್ಯವಾಗುತ್ತಿಲ್ಲ ಎಂಬ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ಅವರ ಹೇಳಿಕೆಯು ಸಮಂಜಸವಾಗಿದೆ (ಪ್ರ.ವಾ., ಜೂನ್ 23). ಮಹಿಳೆಯರಿಗೆ ಸರ್ಕಾರವು ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸಿರುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಹಣ ಪಾವತಿಸಿಯೂ ಆಸನ ದೊರೆಯದೆ ನಿಂತೇ ಪಯಣಿಸಬೇಕಾದ ಸ್ಥಿತಿಯಿದೆ. 'ಶಕ್ತಿ' ಯೋಜನೆ ಬಗ್ಗೆ ಸರ್ಕಾರ ಪುನರ್ ವಿಮರ್ಶೆ ಮಾಡಬೇಕಿದೆ ಅಥವಾ ಮಹಿಳೆಯರಿಗೇ ಪ್ರತ್ಯೇಕವಾಗಿ ಬಸ್ ಓಡಿಸುವತ್ತ ಚಿಂತನೆ ನಡೆಸಲಿ.

ಎಂ.ಎ. ಸುರೇಶ್, ಬೆಂಗಳೂರು

ಉದ್ಯೋಗ: ವಯೋಮಿತಿ ಹೆಚ್ಚಿಸಿ

ಐದಾರು ವರ್ಷಗಳಿಂದ ರಾಜ್ಯದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಸರ್ಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಹೀಗಾಗಿ, ಅಭ್ಯರ್ಥಿಗಳಿಗೆ ಉದ್ಯೋಗ ವಯೋಮಿತಿ ಮೀರಿ ಸಂಕಷ್ಟ ಎದುರಾಗಿದೆ. ಪ್ರಸ್ತುತ ಪರಿಶಿಷ್ಟ ಜಾತಿಯ ಒಳಮೀಸಲಾತಿ ಸಮೀಕ್ಷೆ ನಡೆಯುತ್ತಿದೆ. ಮತ್ತೆ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಒಳಗೊಂಡ ಜಾತಿ ಜನಗಣತಿ ನಡೆಸುವುದಾಗಿ ಸರ್ಕಾರ ಪ್ರಕಟಿಸಿದೆ. ಇದರಿಂದ ನೇಮಕಾತಿಗೆ ಮತ್ತಷ್ಟು ಗ್ರಹಣ ಹಿಡಿಯುವುದರಲ್ಲಿ ಅನುಮಾನವಿಲ್ಲ. ಸರ್ಕಾರಿ ಉದ್ಯೋಗ ಪಡೆಯಲು ಹಲವು ವರ್ಷಗಳಿಂದ ಅಧ್ಯಯನದಲ್ಲಿ ತೊಡಗಿರುವ ಅಭ್ಯರ್ಥಿಗಳ ಗೋಳು ಹೇಳತೀರದಾಗಿದೆ.

ಸದ್ಯ ಕರ್ನಾಟಕದಲ್ಲಿ ಸರ್ಕಾರಿ ಉದ್ಯೋಗ ಪಡೆಯಲು ಸಾಮಾನ್ಯ ವರ್ಗ 35 ವರ್ಷ, ಹಿಂದುಳಿದ ವರ್ಗ 38 ವರ್ಷ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ 40 ವರ್ಷ ವಯೋಮಿತಿ ನಿಗದಿಪಡಿಸಲಾಗಿದೆ. ದೇಶದ ಇತರ ರಾಜ್ಯಗಳಲ್ಲಿ ಸದರಿ ವಯೋಮಿತಿಯು ಇದಕ್ಕಿಂತ ಹೆಚ್ಚಿದೆ. ವಯೋಮಿತಿ ಹೆಚ್ಚಿಸಲು ಸರ್ಕಾರ ಚಿಂತನೆ ನಡೆಸಬೇಕಿದೆ.

ಅನಿಲ್ ಕುಮಾರ್, ನಂಜನಗೂಡು

ಜನರ ತೆರಿಗೆ ಹಣ ವ್ಯಯ ಬೇಡ

ಉಕ್ರೇನ್, ಇಸ್ರೇಲ್, ಇರಾನ್‌ನಲ್ಲಿ ಸಂಘರ್ಷ ತಲೆದೋರಿದೆ. ಅಲ್ಲಿಗೆ ಉನ್ನತ ವ್ಯಾಸಂಗಕ್ಕೆ ತೆರಳಿದ್ದ ಭಾರತೀಯ ವಿದ್ಯಾರ್ಥಿಗಳು ಹಾಗೂ ಉದ್ಯೋಗಕ್ಕೆ ತೆರಳಿದವರನ್ನು ಮಾನವೀಯತೆ ದೃಷ್ಟಿಯಿಂದ ಸ್ವದೇಶಕ್ಕೆ ಕರೆತರಲಾಗುತ್ತಿದೆ.

ವಿದೇಶಗಳಿಗೆ ವಿದ್ಯಾಭ್ಯಾಸಕ್ಕೆ ತೆರಳುವವರು ಲಕ್ಷಾಂತರ ರೂಪಾಯಿ ಖರ್ಚು ಮಾಡುವ ಸ್ಥಿತಿವಂತರೇ ಆಗಿರುತ್ತಾರೆ. ಭವಿಷ್ಯದಲ್ಲಿ ಹೆಚ್ಚಿನ ಸಂಬಳ ಪಡೆಯುವ ಗುರಿ ಹೊಂದಿರುತ್ತಾರೆ. ಬಡವರು ಹಾಗೂ ಮಧ್ಯಮ ವರ್ಗದವರು ಸರ್ಕಾರಕ್ಕೆ ಕಟ್ಟುವ ತೆರಿಗೆ ಹಣವು ಇಂತಹ ಕಾರ್ಯಾಚರಣೆಗಳಿಗೆ ಬಳಕೆಯಾಗುತ್ತದೆ.

ವಿದೇಶಗಳಲ್ಲಿ ಸಿಲುಕಿದ ಭಾರತೀಯರನ್ನು ಇನ್ನು ಮುಂದೆಯೂ ಕರೆತರೋಣ. ಆದರೆ, ಅದಕ್ಕಾಗಿ ಬಡವರ ತೆರಿಗೆ ಹಣ ವ್ಯಯವಾಗುವುದು ಸರಿಯೇ? ಅಂತಹವರಿಂದ ವಿದೇಶಕ್ಕೆ ತೆರಳಲು ಅನುಮತಿ ನೀಡುವ ವೇಳೆಯೇ ಭದ್ರತಾ ಠೇವಣಿ ಸಂಗ್ರಹಿಸಬೇಕಿದೆ. ಅವರು ಅಲ್ಲಿ ಸಂಕಷ್ಟಕ್ಕೆ ಸಿಲುಕಿದಾಗ ಕರೆತರಲು ಈ ಹಣ ಬಳಸಬಹುದು. ಕೇಂದ್ರವು ಈ ದಿಸೆಯಲ್ಲಿ ಗಮನ ಹರಿಸುವುದು ಉತ್ತಮ.

ಬಿ.ಎನ್. ಭರತ್, ಬೆಂಗಳೂರು

ಯುದ್ಧದಿಂದ ಮನುಕುಲಕ್ಕೆ ಆಪತ್ತು

ಯುದ್ಧ ಇಬ್ಬಾಯ ಕತ್ತಿ ಇದ್ದಂತೆ. ಎರಡೂ ಕಡೆಯವರನ್ನು ಕೊಲ್ಲುತ್ತದೆ. ಯುದ್ಧವು ದೇಶವೊಂದಕ್ಕೆ ಪ್ರತಿಷ್ಠೆಯಾದರೆ ಮನುಕುಲ ನಾಶವಾಗಲಿದೆ. ಪ್ರಾಕೃತಿಕ ವಿಕೋಪ, ಮಾರಣಾಂತಿಕ ಕಾಯಿಲೆ, ಬಡತನ, ನಿರುದ್ಯೋಗದ ವಿರುದ್ಧ ಹೋರಾಡಬೇಕಿರುವುದು ಇಂದಿನ ತುರ್ತು. ಆದರೆ, ಮನುಷ್ಯ ತನ್ನ ನಿಜವಾದ 'ಹೋರಾಟ' ಯಾರ ಮೇಲೆ ಮಾಡಬೇಕಾಗಿದೆ ಎನ್ನುವುದನ್ನೇ ಮರೆತಿರುವುದು ವಿಪರ್ಯಾಸ.

ಸುಶ್ಮಿತಾ ವೈ., ಹೊಸನಗರ

ಚುರುಮುರಿ

ಚೇರು ಬಂಡವಾಳ

• ಡಿ.ಎಸ್.ಲಿಂಗರಾಜು

'ಸಾ ಆರ್‌ಸಿಬಿ ಅವಘಡ, ಬಿಆರ್‌ಪಿ ಸತ್ಯವಾಕ್ಕಿನ ಹಂಗಾಮ ಆದಮ್ಯಾಲೆ ಸಿಎಂ- ಡಿಸಿಎಂಗೆ ಸನಿಕಾಟ ಸುರುವಾದಂಗದಲ್ಲಾ?' ತುರೇಮಣೆಗೆ ಕೇಳಿದೆ.

'ಹಂಗೇನಿಲ್ಲ ಕಲಾ... ಪತಿವ್ರತೆಯರಿಗೆ ಕಷ್ಟಗಳು ಬಂದೇ ಬತ್ತವೆ. ಈಗ ಬಿಜೆಪಿಯೋರು ಶಸ್ತ್ರ ತ್ಯಾಗ ಮಾಡಿ ಕುಂತಿರದು ಕೆಲವರಿಗೆ ಅನುಕೂಲಾಗ್ಯದೆ. ದೇವರು ಪರೀಕ್ಸೆ ಕೊಡ್ತನೆ. ಸಮಾಜಾನ, ತಾಳ್ಮೆಯಿಂದ ಗೆದ್ದು ಬರಬಕು' ತುರೇಮಣೆ ಉತ್ತರಿಸಿದರು.

'ಎಲ್ಲಿ ಸಮಾಜಾನ ಸಾ. ಇವರಿಬ್ಬರೂ ಏಟೊತ್ತಿಗೆ ಇಳಿದು ಮನೆಗೆ ಹೋದಾರೋ. ನಾವೇಟು ಹೊತ್ತಿಗೆ ಚೇರಿಗೆ ಅಮರಿಕ್ಯಂದೇವೋ ಅಂತ ಲಾಟುಗಟ್ಟಲೇ ಜನ ಬಾಯಿಗೆ ಲಕ್ಕಿಕಾಳು ಹಾಕ್ಯಂದು ಕೂತವ್ರೆ' ಅಂತಂದೆ.

'ಅದೀಯೆ. ಮನ್ನೆ ಹುಟ್ಟಬ್ಬ ಮಾಡಿಕ್ಯಂದು ಕಾಲೇಜು ಹುಡ್ಲಾದಂಗೆ ಕಾಣ್ತಾವ್ರೆ ಅಣ್ಣಾರು. ಸಾವ್ಕರ್ರು ಹೊಸಬಟ್ಟೆ ಇಕ್ಕ್ಯಂದು ರೆಡಿಯಾತಾವ್ರಂತೆ. ಇಕ್ಕಡೆ ಪರಮಣ್ಣಗೆ, ಮುನಿಯಣ್ಣಂಗೆ, ಎಂ.ಬಿ. ಪಾಟಿಲಣ್ಣಗೆ ಕುರ್ಚಿ ಜ್ವರ ಬಂದು ಹೋಯ್ತಾ ಅದಂತೆ. ಮುಂದೆಂಗೆ? ಶಾಣಕ್ಯರು ಬ್ಯಾರೆ ಬಂದೋಗ್ಯವರೆ' ಯಂಟಪ್ಪಣ್ಣ ಕುಟುಕಿತು.

'ನೋಡಿರ್ಲಾ ಸಿಎಂ, ಮಂತ್ರಿ, ನಿಗಮ- ಮಂಡಳಿ ಸ್ಥಾನಕ್ಕೆ ಕುರಿ ಯಾಪಾರದ ಥರ ಅದರದ್ದೇ ಆದ ರೇಟಿರತದೆ. ಯಾವೋನು ಏಟು ಬೆಳ್ಳು ಹಿಡೀತನೋ ಅವನಿಗೇ ಸೀಟು' ತುರೇಮಣೆ ಸುದ್ದಿ ಸಿಡಿಸಿದರು.

'ಹಸುಮಗೀಗೆ ಹೇಳ್ದಂಗೆ ಹೇಳ್ತಿದ್ದೀರಲ್ಲ ಸಾ. ದೇಸಾದ ದೇಸಕೆ ಗೊತ್ತದೆ ಇದು. ಕಮಲದೋರೆ ಅಂದಿರಲಿಲ್ಲವಾ ಸಿಎಂ ಚೇರಿಗೆ ಏಡೂವರೆ ಸಾವಿರ ಕೋಟಿ ರೇಟದೆ ಅಂತವಾ' ನಾನು ಹೇಳಿದೆ.

'ಅದುನ್ನೇ ಕಲಾ ಚೇರು ಬಂಡವಾಳ ಅನ್ನದು. ಹೈಕಮಾಂಡಿನ ಇಎಂಐ, ಕೆವೈಸಿ ತಿಳುಕಂದಿರಬಕು. ಚೇರು ಬಂಡವಾಳದ ವ್ಯಾಕರಣ ತಿಳಿದೋರು ಬ್ಯಾರೇರಿಂದ ದುಡ್ಡಿಕ್ಸಿ ಚೇರು ತಕ್ಕತರೆ. ಆ ಮೇಲೆ ಅದೇ ದುಡಿಯುವ ಬಂಡವಾಳಾತದೆ' ತುರೇಮಣೆ ಚೇರು ಭಾರತದ ದುಷ್ಟರೂಪ ದರ್ಶನ ಮಾಡಿಸಿದರು.

ಸಂಗತ

ಯುವಜನ: ಜನಪ್ರಿಯತೆಯ ವಿಷಗಾಳಿ

ಜೂಜಿನ ಸ್ವರೂಪ ಪಡೆದಿರುವ ಆಟವನ್ನು ಯುವಜನ ವ್ಯಸನದ ರೂಪದಲ್ಲಿ ಹಚ್ಚಿಕೊಂಡಾಗ ದುರಂತ ಸಂಭವಿಸುತ್ತದೆ. ಈ ಬಗ್ಗೆ ಎಚ್ಚರಿಕೆ ಅಗತ್ಯ

• ಎಂ.ಎಸ್. ಮೂರ್ತಿ

ಆಧುನಿಕವಾಗಿ ಬಹಳ ಮುಂದುವರಿದಿರುವ ಇಂದಿನ ಸಮಾಜವನ್ನು ಜನಪ್ರಿಯತೆಯ ವ್ಯಸನ ಬಾಧಿಸುತ್ತಿರುವಂತಿದೆ. ಜನಪ್ರಿಯತೆಯ ಈ ವ್ಯಸನ ಶ್ರೀಸಾಮಾನ್ಯರನ್ನೂ ಜಾಡ್ಯದ ರೂಪದಲ್ಲಿ ಕಾಡುತ್ತಿದೆ. ದುಡಿದು ಬದುಕುವ ಶ್ರಮಿಕ ವರ್ಗದ ಸಂಖ್ಯೆ ಕಡಿಮೆಯಾಗುತ್ತಿದೆ. ತ್ವರಿತವಾಗಿ ಎಲ್ಲವನ್ನೂ ಪಡೆಯುವ ಧಾವಂತ ಮನುಷ್ಯನನ್ನು ವಿಚಲಿತಗೊಳಿಸುತ್ತಿದೆ. ಪ್ರಜ್ಞಾವಂತರಾಗಿ, ವಿವೇಕಿಗಳಾಗಿ ಬಾಳಬೇಕಿದ್ದ ಮಕ್ಕಳು ಲಾಲಸೆ, ವ್ಯಸನ, ಅತಿ ಆಸೆಯ ಉನ್ಮಾದಗಳಿಗೆ ಒಳಗಾಗಿದ್ದಾರೆ. ಈ ದುಃಸ್ಥಿತಿಗೆ ಅನೇಕ ಕಾರಣಗಳು ಇವೆಯಾದರೂ, ಬಹಳ ಮುಖ್ಯವಾದ ಪ್ರಶ್ನೆ– 'ಜೀವನ ಇಷ್ಟು ಸುಲಭವಾದದ್ದು ಹೇಗೆ?' ಎನ್ನುವುದು.

ಒಂದೆರಡು ದಶಕಗಳ ಹಿಂದಷ್ಟೇ ಇದ್ದ ಕಷ್ಟಗಳು, ಸಾಮಾಜಿಕ ಸಮಸ್ಯೆಗಳು ಈಗಿಲ್ಲ. ಈಗ ಎಲ್ಲವೂ ಸುಲಭವೇ. ಅಂದಿನ ಆರ್ಥಿಕ, ಆಹಾರ, ಸಾಮಾಜಿಕ ಸಮಸ್ಯೆಗಳು ಹಿಂದೆ ಸರಿದು ಈಗ ಎಲ್ಲವೂ ಕೈಗೆಟಕುವ ಸ್ಥಿತಿ ನಿರ್ಮಾಣವಾಗಿದೆ. ಹಣ, ಆಹಾರ, ಸಂವಹನ ಎಲ್ಲವೂ ಹೇಗೋ ನಮಗೆ ದಕ್ಕುತ್ತಿವೆ. ಹೊರ ದೇಶದ ಅವಕಾಶಗಳು, ಸ್ವದೇಶದ ವ್ಯವಹಾರ, ಮನೆಯಲ್ಲೇ ಕುಳಿತು ಹೆಚ್ಚು ಹಣ ಗಳಿಸುವ ಮಾರ್ಗಗಳು ಆಧುನಿಕ ಕಾಲದ ಜನರ ಬದುಕನ್ನು ವರ್ಣಮಯವಾಗಿಸಿವೆ.

ಅಂದಿನ ಬಡತನದ ಸಂಕೋಚ, ಸ್ವಾಭಿಮಾನ, ಸರಳ ಜೀವನದೃಷ್ಟಿ, ಸೌಜನ್ಯ, ಸೌಹಾರ್ದ, ಸಮಷ್ಟಿಯ ಬಗ್ಗೆ ಇದ್ದ ಜನಪದ ಪ್ರಜ್ಞೆ ಇಂದು ಹೆಚ್ಚಿನಂಶ ಮರೆಯಾಗಿವೆ. ಹಣ, ಅವಕಾಶ ಹಾಗೂ ಸವಲತ್ತುಗಳು, ಜೀವನ ಪಯಣವನ್ನು ಹಳಿ ತಪ್ಪಿದ ರೈಲಿನಂತೆ ಓಡಿಸುವ ಯುವಜನರ ಉಮೇದಿಗೆ ಕಾರಣವಾಗಿವೆ.

ಬಹುಬೇಗ ಜನಪ್ರಿಯತೆಯ ಎತ್ತರಕ್ಕೆ ಏರುವ, ವಿಜೃಂಭಿಸುವ ನಟ... ದಶಕಗಳಿಂದ ನಮ್ಮ ಸಂಸ್ಕೃತಿಯನ್ನು ಕಾಡುತ್ತಿದೆ. ಹಿಂದೆ, ಕೀಲು ಸಿನಿಮಾ ಜನಪ್ರಿಯತೆ ಅಂದಿನ ಯುವಜನತೆಯನ್ನು ಪ್ರಭಾವಿಸಿತು. ಅದರ ಪರಿಣಾಮ, ಅಂದಿನ ದುಡಿಮೆಯನ್ನೇ ನೆಚ್ಚಿದ ಅನೇಕ ಕಾರ್ಮಿಕರು ಸಿನಿಮಾ ಕನಸುಗಳಲ್ಲಿ ತಮ್ಮ ಜೀವನವನ್ನು ಹಾಳು ಮಾಡಿಕೊಂಡಿದ್ದಿದೆ. ನೆಚ್ಚಿನ ನಟರ ಹುಟ್ಟುಹಬ್ಬ, ಸಿನಿಮಾ ಬಿಡುಗಡೆಯ ಸಂಭ್ರಮದಲ್ಲಿ ವೈಯಕ್ತಿಕ ಹಿತವನ್ನು ನಿರ್ಲಕ್ಷಿಸಿದವರು ತಾವು ಏನೂ ಆಗದೆ ಉಳಿದರು. ಜನಪ್ರಿಯ ನಟರು ತೀರಿಕೊಂಡಾಗ ನೂಕು ನುಗ್ಗಲಿನಲ್ಲಿ ಸಿಲುಕಿ ಪ್ರಾಣ ಕಳೆದುಕೊಂಡವರೂ ಇದ್ದಾರೆ.

ಈಗ ಸಿನಿಮಾದ ಜನಪ್ರಿಯತೆ ಕಳೆಗುಂದಿದೆ. ಅದರ ಜಾಗವನ್ನು ಕ್ರಿಕೆಟ್ ಆಕ್ರಮಿಸಿಕೊಂಡಿದೆ. ಕ್ರಿಕೆಟ್ ಆಟ ಸಹಜ, ಸುಂದರವಾಗಿದ್ದ ದಿನಗಳೂ ಇದ್ದವು. ಪಂದ್ಯಗಳು ಜೀವನೋತ್ಸಾಹ ಹೆಚ್ಚಿಸುತ್ತಿದ್ದವು. ಬಲಾಢ್ಯರು ಸೋಲುವ, ಅಶಕ್ತ ತಂಡ ಗೆಲುವಿನತ್ತ ಸಾಗುವ ಬೆಳವಣಿಗೆಗೆ ಅಂದಿನ ಹೆಚ್ಚಿನ ಕ್ರಿಕೆಟ್ ಪ್ರೇಮಿಗಳು ತುಡಿಯುತ್ತಿದ್ದುದು ನಮ್ಮ ಅಂದಿನ ಯುವ ಆರೋಗ್ಯ ಮನಸ್ಸಿನ ಸಕಾರಾತ್ಮಕ ನಡೆಗೆ ಸಾಕ್ಷಿಯಾಗಿತ್ತು. ಆದರೆ, ಈಗ?

ಉತ್ತಮ ಸಮಾಜ ನಿರ್ಮಾಣಕ್ಕಾಗಿ ಯುವಜನ ಸರಿಯಾದ ದಾರಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕಾದುದು ಸಾಮಾಜಿಕ ವ್ಯವಸ್ಥೆಯ ಕರ್ತವ್ಯವಾಗಿದೆ. ಆದರೆ, ಬದಲಾದ ಸಂದರ್ಭದಲ್ಲಿ ಸಾಮಾಜಿಕ ಕೇಂದ್ರಗಳೆಲ್ಲ ನೈತಿಕ ಮೌಲ್ಯಗಳಿಂದ ದೂರವಾಗುತ್ತಿವೆ. ಯಾವುದೇ ಬಗೆಯ ದುರಂತ ಘಟಿಸಿದರೂ ಪರಸ್ಪರ ದೂಷಿಸುವುದು ಹಾಗೂ ಪರಿಹಾರದ ಹಣ ಕೊಟ್ಟು ಜನರ ಕಹಿ ನೆನಪನ್ನು ಮರೆಸುವ ರಾಜಕೀಯ ತಂತ್ರಗಳು ಹೆಚ್ಚಾಗಿವೆ. ಈ ಬೆಳವಣಿಗೆ, ಮಧ್ಯಮ ವರ್ಗದ ಜನರ ಬಾಳನ್ನು ಅಪಾಯದ ಅಂಚಿಗೆ ತಂದು ನಿಲ್ಲಿಸಿದೆ.

ನಾವೀಗ ಅತೀವ ತಾಳ್ಮೆಯಿಂದ ನಮ್ಮನ್ನು ನಾವು ನಿಕಷಕ್ಕೊಡ್ಡಿಕೊಂಡು, ನಮ್ಮ ಆತ್ಮಸಾಕ್ಷಿಯನ್ನು ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ಒಂದು ಜೂಜಿನ ಆಟಕ್ಕೆ ದೇಶದ ಕೋಟ್ಯಂತರ ಜನ ಮುಗಿಬೀಳುವುದು, ಅದರ ಉನ್ಮಾದಕ್ಕೆ ಜನರು ಬಲಿಯಾಗುವುದು ಏನನ್ನು ಸೂಚಿಸುತ್ತಿದೆ ಎನ್ನುವ ಪ್ರಶ್ನೆ ನಮ್ಮನ್ನು ಕಾಡಬೇಕಾಗಿದೆ.

ಆಟದ ಗೆಲುವಿನಲ್ಲಿ ಒಂದಷ್ಟು ಜನರು ಸಾವಿಗೀಡಾಗುವ ದುರಂತ ಒಂದು ಸಂಕೇತವಷ್ಟೇ. ಈ ದೈಹಿಕ ಸಾವುಗಳ ಇನ್ನೊಂದು ತುದಿಯಲ್ಲಿ ಲಕ್ಷ ಲಕ್ಷ ಜನ ಮಾನಸಿಕವಾಗಿ ತಮ್ಮನ್ನು ತಾವು ಕೊಂದುಕೊಳ್ಳುವ ದುರಂತವನ್ನು ಗಮನಿಸಬೇಕಾಗಿದೆ. ಈ ದೈಹಿಕ ಹಾಗೂ ಮಾನಸಿಕ ಅಂತ್ಯದ ದುರಂತಗಳು, ಜನಪ್ರಿಯತೆಯ ಅಫೀಮಿನ ವ್ಯಸನದ ಬಗ್ಗೆ ನಮ್ಮನ್ನು ಎಚ್ಚರಗೊಳಿಸಬೇಕಾಗಿದೆ, ಅರಿವು ಮೂಡಿಸಬೇಕಾಗಿದೆ.

ಸರ್ಕಾರ, ರಾಜಕಾರಣಿ ಹಾಗೂ ಸೆಲೆಬ್ರಿಟಿಗಳಿಗೆ ಜನರು ಸರಕಿನ ರೂಪದಲ್ಲಿ ಬೇಕು. ಚಪ್ಪಾಳೆಗಳ ಮೇಲೆ ಅವರು ತಮ್ಮ ಅಸ್ತಿತ್ವ ಕಂಡುಕೊಳ್ಳುತ್ತಾರೆ. ಇನ್ನು ವಿದ್ಯುನ್ಮಾನ ಮಾಧ್ಯಮಗಳಿಗೆ ಟಿಆರ್‌ಪಿ ಚಿಂತೆ. ಆದರೆ, ಇವೆಲ್ಲಕ್ಕಿಂತಲೂ ತಮ್ಮ 'ಬದುಕು' ಅಮೂಲ್ಯವಾದುದು ಎನ್ನುವುದನ್ನು ಜನಸಾಮಾನ್ಯರು ಅರಿಯಬೇಕು. ಆ ಬದುಕನ್ನು ನಾವೇ ಹೋರಾಟದಿಂದ ದಕ್ಕಿಸಿಕೊಳ್ಳಬೇಕೇ ಹೊರತು, ಬೇರೆ ಯಾರೂ ನಮ್ಮ ಜೀವನವನ್ನು ಕಟ್ಟಿಕೊಡುವುದಿಲ್ಲ.

ಜೀವನದ ಪಯಣವನ್ನು ಯಾವ ದಾರಿಯಲ್ಲಿ ನಡೆಸಬೇಕು, ಹೇಗೆ ಸಾರ್ಥಕ್ಯ ಪಡೆಯಬೇಕು ಎನ್ನುವ ಬಗ್ಗೆ ಯೋಚಿಸಲು ಇದು ಸಕಾಲ. ಪ್ರಸ್ತುತ, ನಡೆ–ನುಡಿಯಿಂದ ನಮ್ಮನ್ನು ತಿದ್ದಬಲ್ಲವರು ತೀರಾ ವಿರಳ. ಹಾಗೆ ತಿದ್ದಬಹುದಾಗಿದ್ದವರು ಬಿಟ್ಟುಹೋಗಿರುವ ಸತ್ಯದ ಮೆಲುದನಿಗಳಷ್ಟೇ ಈಗ ಉಳಿದಿವೆ. ಆ ಪಿಸುದನಿಗಳು ನಮ್ಮ ಹೃದಯ ಸಂವಾದಕ್ಕೆ ಕಾರಣವಾಗಬೇಕು. ಆ ಸಂವಾದದಲ್ಲೇ ಸಾಗಬೇಕಾದ ದಾರಿ ನಿಚ್ಚಳವಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡಿಎನ್‌ಎ ಪರೀಕ್ಷೆ ಎಂಬ ಪತ್ತೇ'ದಾರಿ'

ಜನರ ಜೈವಿಕ ಮಾದರಿಗಳ ಮೂಲಕ ಅವರ ಗುರುತು, ಸಂಬಂಧ ಪತ್ತೆ ಹಚ್ಚುವ ಡಿಎನ್‌ಎ ಪರೀಕ್ಷೆ ಒಂದು ಸಂಕೀರ್ಣವಾದ ಪ್ರಕ್ರಿಯೆ. ಅಪರಾಧಗಳನ್ನು ಬಯಲಿಗೆಳೆಯುವುದು, ಮೃತದೇಹಗಳನ್ನು ಪತ್ತೆ ಹಚ್ಚುವುದು ಸೇರಿದಂತೆ ಹಲವು ಸಂದರ್ಭಗಳಲ್ಲಿ ಡಿಎನ್‌ಎ ಪರೀಕ್ಷಾ ವಿಧಾನ ಬಳಸಲಾಗುತ್ತಿದೆ. ಪೊಲೀಸ್ ಇಲಾಖೆ, ಕೋರ್ಟ್‌ಗಳಿಗೆ ಇದು ಅತ್ಯಂತ ಉಪಯುಕ್ತವಾಗಿದೆ. ಅಹಮದಾಬಾದ್ ವಿಮಾನ ದುರಂತದಲ್ಲಿ ಮೃತಪಟ್ಟವರ ಗುರುತು ಪತ್ತೆಗೂ ಇದು ನೆರವಾಗಿದೆ. ಡಿಎನ್‌ಎ ಪರೀಕ್ಷೆ, ಮಾದರಿ ಸಂಗ್ರಹದಿಂದ ವ್ಯಕ್ತಿಗಳ ಖಾಸಗಿತನಕ್ಕೆ ಧಕ್ಕೆ ಉಂಟಾಗುತ್ತಿದ್ದು, ಈ ಸಂಬಂಧ ಮಾರ್ಗಸೂಚಿ ರೂಪಿಸಬೇಕಿದೆ ಎನ್ನುವ ಒತ್ತಾಯವೂ ಇದೆ

ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ ಮೃತಪಟ್ಟವರ ಶವಗಳನ್ನು ರಕ್ಷಣಾ ಕಾರ್ಯಕರ್ತರು ಹೊತ್ತೊಯ್ದರು — ಎಎಫ್‌ಪಿ ಚಿತ್ರ

270 ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟವರು

259 ಡಿಎನ್‌ಎ ಪರೀಕ್ಷೆ ಮೂಲಕ ಈವರೆಗೆ ಗುರುತು ಪತ್ತೆ ಮಾಡಲಾದವರ ಸಂಖ್ಯೆ

256 ಕುಟುಂಬದವರಿಗೆ ಹಸ್ತಾಂತರಿಸಿದ ಮೃತದೇಹಗಳು

250ಕ್ಕೂ ಹೆಚ್ಚು ಡಿಎನ್‌ಎ ಪರೀಕ್ಷೆಗಾಗಿ ಸಂಗ್ರಹಿಸಲಾದ ತಲಾ ಮಾದರಿಗಳು (ಮೃತದೇಹಗಳಿಂದ ಮತ್ತು ಕುಟುಂಬದ ಸದ್ಯಸರಿಂದ)

3 ಡಿಎನ್‌ಎ ಪರೀಕ್ಷೆ ನಡೆಸಿದ ಪ್ರಯೋಗಾಲಯಗಳು

250ಕ್ಕೂ ಹೆಚ್ಚು ಡಿಎನ್‌ಎ ಪರೀಕ್ಷೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವ ವಿಜ್ಞಾನಿಗಳು, ವೈದ್ಯರು ಹಾಗೂ ಇತರ ಸಿಬ್ಬಂದಿ

72-96 ಗಂಟೆಗಳು ಡಿಎನ್‌ಎ ಪರೀಕ್ಷೆ ಫಲಿತಾಂಶ ಬರಲು ಬೇಕಾಗುವ ಸರಾಸರಿ ಸಮಯ

ಪ್ರಜಾವಾಣಿ ವಾರ್ತೆ

ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಪತನಗೊಂಡ ಸಂದರ್ಭದಲ್ಲಿಯೇ ಗುಜರಾತಿ ಸಿನಿಮಾ, ಮ್ಯೂಸಿಕ್ ವಿಡಿಯೊಗಳ ನಿರ್ದೇಶಕರಾಗಿದ್ದ ಮಹೇಶ್ ಜಿರಾವಾಲಾ ಎನ್ನುವ ವ್ಯಕ್ತಿ ಕಾಣೆಯಾದರು. ವಿಮಾನದಲ್ಲಿದ್ದ ಪ್ರಯಾಣಿಕರ ಗುರುತು ಪತ್ತೆಗಾಗಿ ಡಿಎನ್‌ಎ ಪರೀಕ್ಷೆ ನಡೆಯುತ್ತಿದ್ದುದನ್ನು ಅರಿತಿದ್ದ ಜಿರಾವಾಲಾ ಅವರ ಪತ್ನಿ, ತಮ್ಮ ಗಂಡನ ಪತ್ತೆಗಾಗಿ ಕುಟುಂಬದ ಸದಸ್ಯರ ಡಿಎನ್‌ಎ ಮಾದರಿಗಳನ್ನು ಪೊಲೀಸರಿಗೆ ಒದಗಿಸಿದರು. ಅಪಘಾತಕ್ಕೀಡಾದ ವಿಮಾನದಲ್ಲಿ ಜಿರಾವಾಲಾ ಪ್ರಯಾಣಿಸಿರಲಿಲ್ಲವಾದರೂ ಪೊಲೀಸರು ಡಿಎನ್‌ಎ ಪರೀಕ್ಷೆಗೆ ಒಳಪಡಿಸಿದರು. ಅದರಲ್ಲಿ ಅಚ್ಚರಿಯ ಫಲಿತಾಂಶ ಬಂತು. ವಿಮಾನ ದುರಂತದಲ್ಲಿ ಸತ್ತವರ ಪೈಕಿ ಜಿರಾವಾಲಾ ಕೂಡ ಒಬ್ಬರಾಗಿದ್ದರು. ವಿಮಾನ ನೆಲಕ್ಕೆ ಅಪ್ಪಳಿಸಿದ ನಂತರ ಉಂಟಾದ 800ರಿಂದ 1,000 ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖದಿಂದ ಸನಿಹದ ರಸ್ತೆಯಲ್ಲಿ ಸ್ಕೂಟರ್‌ನಲ್ಲಿ ಸಾಗುತ್ತಿದ್ದ ಜಿರಾವಾಲಾ ಮೃತಪಟ್ಟರೆ, ಸ್ಕೂಟರ್ ಸುಟ್ಟು ಕರಕಲಾಗಿತ್ತು.

ಡಿಎನ್‌ಎ ಪರೀಕ್ಷೆ ಎನ್ನುವುದು ಒಂದು ಆಪದ್ಬಾಂಧವ ತಂತ್ರಜ್ಞಾನ. ಯಾವುದಾದರೂ ಅವಘಡ ಸಂಭವಿಸಿ ವ್ಯಕ್ತಿಗಳು ಮೃತಪಟ್ಟು, ಅವರ ದೇಹ ಗುರುತು ಸಿಗದಿದ್ದರೆ, ಡಿಎನ್‌ಎ ಪರೀಕ್ಷೆ ಮಾಡಬೇಕು. ಇದೇ ರೀತಿ ಅಪರಾಧಗಳನ್ನು ಪತ್ತೆ ಮಾಡುವುದು, ಅಪ್ಪ–ಅಮ್ಮ, ಮಕ್ಕಳ ನಡುವಿನ ರಕ್ತಸಂಬಂಧ ಖಾತರಿಪಡಿಸುವುದು ಸೇರಿದಂತೆ ಅನೇಕ ಸಂದರ್ಭಗಳಲ್ಲಿ ಡಿಎನ್‌ಎ ಪರೀಕ್ಷೆಯು ಪೊಲೀಸ್ ಇಲಾಖೆ, ನ್ಯಾಯಾಂಗಕ್ಕೆ ಸತ್ಯಾನ್ವೇಷಣೆಯ ಸಾಧನವಾಗಿ ಬಳಕೆಯಾಗುತ್ತಿದೆ.

ಅಪರಾಧ ತನಿಖೆಯ ವೇಳೆ, ಅಪರಾಧ ನಡೆದ ಸ್ಥಳದಲ್ಲಿ ದೊರಕಿದ ಮಾದರಿಗಳಲ್ಲಿನ ಡಿಎನ್‌ಎ ವಿವರಗಳನ್ನು ಶಂಕಿತರ ಡಿಎನ್‌ಎ ಜತೆ ಹೋಲಿಸಿ ನೋಡಲಾಗುತ್ತದೆ. ಅಪರಿಚಿತ, ಗುರುತು ಪತ್ತೆ ಮಾಡಲು ಸಾಧ್ಯವಾಗದ ರೀತಿಯಲ್ಲಿ ವಿರೂಪಗೊಂಡ ಮೃತದೇಹಗಳ ಜೈವಿಕ ಮಾದರಿಗಳನ್ನು ಸಂಭವನೀಯ ಸಂಬಂಧಿಗಳ ಡಿಎನ್‌ಎ ಜತೆ ಹೋಲಿಕೆ ಮಾಡಲಾಗುತ್ತದೆ. ಅದೇ ರೀತಿ ತಂದೆ/ತಾಯಿಯ ಜೈವಿಕ ಮಾದರಿ ಮತ್ತು ಮಕ್ಕಳ ಮಾದರಿ ಸಂಗ್ರಹಿಸಿ, ಅವುಗಳ ಡಿಎನ್‌ಎ ವಿಶ್ಲೇಷಿಸಿ, ಪಿತೃತ್ವ ಅಥವಾ ಮಾತೃತ್ವ ನಿರ್ಧರಿಸಲಾಗುತ್ತದೆ. ಭೂಕಂಪ, ವಿಮಾನ ಪತನದಂಥ ದುರಂತಗಳು ನಡೆದಾಗ, ಸಂತ್ರಸ್ತರ ಪತ್ತೆಗೂ ಇದೇ ಮಾದರಿ ಬಳಸಲಾಗುತ್ತದೆ. ಮನುಷ್ಯರಲ್ಲಷ್ಟೇ ಅಲ್ಲ, ಪ್ರಾಣಿಗಳ ಬೇಟೆ, ಕಳ್ಳಸಾಗಣೆ ಪತ್ತೆ ಹಚ್ಚುವಲ್ಲಿಯೂ ಈ ಪರೀಕ್ಷಾ ವಿಧಾನ ಬಳಸಲಾಗುತ್ತದೆ.

ಡಿಎನ್‌ಎ ಪರೀಕ್ಷೆಗೆ ಅತ್ಯಾಧುನಿಕ ಯಂತ್ರಗಳು, ಅಪಾರ ಹಣ ಬೇಕಾಗುತ್ತವೆ. ಆದರೆ, ಪರೀಕ್ಷೆಗೊಳಪಡಿಸಿದ ಜೈವಿಕ/ಅಂಗಾಂಗಗಳ ಮಾದರಿಯು ಹಾಳಾದರೆ, ಫಲಿತಾಂಶ ನಿಖರವಾಗಿರುವುದಿಲ್ಲ. ಮಾದರಿಗೆ ಬೆಂಕಿ ಹೊತ್ತಿಕೊಂಡರೆ, ಅದು ಕೊಳೆತಿದ್ದರೆ, ರಾಸಾಯನಿಕಗಳ ಜತೆ ಸಂಯೋಜನೆಗೊಂಡಿದ್ದರೆ, ಡಿಎನ್‌ಎ ಪರೀಕ್ಷೆ ವಿಫಲವಾಗುತ್ತದೆ. ಕಡಿಮೆ ಗುಣಮಟ್ಟದ ಅಥವಾ ಕಲುಷಿತ ಮಾದರಿಗಳನ್ನು ಬಳಸಿದರೂ ಉತ್ತಮ ಫಲಿತಾಂಶ ಸಿಗುವುದಿಲ್ಲ.

ಭಾರತದಲ್ಲಿ ವ್ಯಕ್ತಿಗಳ ಅಂಗಾಂಗಗಳ ಮಾದರಿ ಸಂಗ್ರಹಿಸುವುದಕ್ಕೆ, ಡಿಎನ್‌ಎ ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸೂಕ್ತ ಕಾನೂನು ಇಲ್ಲ; ಡಿಎನ್‌ಎ ಪರೀಕ್ಷಾ ವಿಧಾನವು ದುರುಪಯೋಗ ಆಗುತ್ತಿದೆ ಎನ್ನುವ ಆರೋಪಗಳೂ ಇವೆ. ಪಿತೃತ್ವ ವಿವಾದಕ್ಕೆ ಸಂಬಂಧಿಸಿದ ಪ್ರಕರಣವೊಂದರ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಒಬ್ಬ ವ್ಯಕ್ತಿಗೆ ಮತ್ತೊಬ್ಬ ವ್ಯಕ್ತಿಯ ಮೇಲೆ ಡಿಎನ್‌ಎ ಪರೀಕ್ಷೆ ನಡೆಸುವ ಹಕ್ಕು ಇಲ್ಲ ಎಂದು ಇದೇ ಜನವರಿಯಲ್ಲಿ ತೀರ್ಪು ನೀಡಿತ್ತು. ಅದು ವ್ಯಕ್ತಿಯ ಖಾಸಗಿತನದ ಉಲ್ಲಂಘನೆ ಎಂದಿತ್ತು.

ಡಿಎನ್‌ಎ ಪರೀಕ್ಷೆಗೆ ಜೈವಿಕ ಮಾದರಿ ಸಂಗ್ರಹಿಸುವುದು ಮತ್ತು ರಾಷ್ಟ್ರೀಯ ಡೇಟಾಬೇಸ್ ರೂಪಿಸುವುದಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ರೂಪಿಸಲು ದೇಶದಲ್ಲಿ ಡಿಎನ್‌ಎ ಪ್ರೊಫೈಲಿಂಗ್ ಮಸೂದೆ ತರುವ ಪ್ರಯತ್ನಗಳು 2007ರಿಂದಲೂ ನಡೆಯುತ್ತಿವೆ. ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಜೈವಿಕ ತಂತ್ರಜ್ಞಾನ ವಿಭಾಗವು ಈ ದಿಸೆಯಲ್ಲಿ ಕರಡು ರೂಪಿಸಿದೆ. ಮಸೂದೆ ಮಂಡನೆಗೂ ಮುಂಚೆಯೇ ಅದನ್ನು ಹಲವು ಬಾರಿ ಬದಲಾವಣೆ ಮಾಡಲಾಗಿದೆಯಾದರೂ ಅದು ಇನ್ನೂ ಸಂಸತ್‌ನಲ್ಲಿ ಮಂಡನೆಯಾಗಿಲ್ಲ.

ಆಧಾರ: ಪಿಟಿಐ, ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್, ಮಾಧ್ಯಮ ವರದಿಗಳು

ಡಿಎನ್‌ಎ...

ಡೀಆಕ್ಸಿರೈಬೊ ನ್ಯೂಕ್ಲಿಯಿಕ್ ಆ್ಯಸಿಡ್ ಎಂಬುದರ ಸಂಕ್ಷಿಪ್ತ ರೂಪ ಡಿಎನ್‌ಎ. ಜೀವಿಗಳ ವರ್ಣತಂತುಗಳಲ್ಲಿರುವ ಅತ್ಯಂತ ಸಂಕೀರ್ಣವಾದಂತಹ ಆನುವಂಶೀಯ ರಾಸಾಯನಿಕ ಗುಣಲಕ್ಷಣಗಳನ್ನು ಹೊಂದಿರುವ ಅಣು ಇದು. ವಂಶವಾಹಿಯ ಮುಖ್ಯಭಾಗವಾಗಿರುವ ಡಿಎನ್‌ಎ, ಸುರುಳಿ ಸುತ್ತಿದ ಏಣಿಯ ರೂಪದಲ್ಲಿ ಜೀವಕೋಶದ ಕೇಂದ್ರ ಭಾಗದಲ್ಲಿರುತ್ತದೆ. ವ್ಯಕ್ತಿ ಅಥವಾ ಜೀವಿಗಳ ವಂಶಾವಳಿಯ ಮಾಹಿತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಇದು ಒಯ್ಯುತ್ತದೆ.

ರಕ್ತ, ವೀರ್ಯ, ಎಂಜಲು, ಮಲ, ಮೂತ್ರ, ಕೂದಲು, ಹಲ್ಲು, ಮೂಳೆ, ಅಂಗಾಂಶ, ಜೀವಕೋಶ, ಬೆರಳಚ್ಚು–ಇವುಗಳ ಪೈಕಿ ಯಾವುದಾದರೊಂದು ಮಾದರಿ ದೊರೆತರೂ ಡಿಎನ್‌ಎ ಪರೀಕ್ಷೆ ನಡೆಸಬಹುದು. ಇವುಗಳ ಜತೆಗೆ, ವ್ಯಕ್ತಿ ಸ್ಪರ್ಶಿಸಿದ ವಸ್ತು, ಸೇದಿದ ಸಿಗರೇಟ್, ಧರಿಸಿದ ಬಟ್ಟೆ, ಕನ್ನಡಕ ಸೇರಿ ಬಳಸಿದ ವಸ್ತುಗಳ ಮೂಲಕವೂ ಕಂಡುಹಿಡಿಯಬಹುದು. ಅತಿ ಸಣ್ಣ ಜೈವಿಕ ಮಾದರಿಯನ್ನು ಸಂಗ್ರಹಿಸಿ ಡಿಎನ್‌ಎ ಪರೀಕ್ಷೆ ಮಾಡಬಹುದು.

ವಿಮಾನ ದುರಂತ: ಡಿಎನ್‌ಎ ಪರೀಕ್ಷೆ ನಡೆದಿದ್ದು ಹೇಗೆ?

- ವಿಮಾನ ಪತನಗೊಂಡ ಸ್ಥಳದಲ್ಲಿ ಸುಟ್ಟು ಕರಕಲಾದ ಮೃತದೇಹಗಳನ್ನು ಸಂಗ್ರಹಿಸಿ ಅಹಮದಾಬಾದ್‌ನ ಸಿವಿಲ್ ಆಸ್ಪತ್ರೆಗೆ ರವಾನೆ. ಅಲ್ಲಿ ಮೃತದೇಹಗಳಿಂದ ಡಿಎನ್‌ಎ ಪರೀಕ್ಷೆಗಾಗಿ ಮಾದರಿಗಳ ಸಂಗ್ರಹ
- ಮೃತಪಟ್ಟವರ ಡಿಎನ್‌ಎ ವಿವರಗಳನ್ನು ಕುಟುಂಬದವರ ಡಿಎನ್‌ಎ ವಿವರಗಳೊಂದಿಗೆ ಹೋಲಿಸಿ ನೋಡುವುದಕ್ಕಾಗಿ ಬಿ.ಜೆ.ವೈದ್ಯಕೀಯ ಕಾಲೇಜಿನಲ್ಲಿ ಮೃತಪಟ್ಟವರ ಸಂಬಂಧಿಕರ ರಕ್ತದ ಮಾದರಿಗಳ ಸಂಗ್ರಹ
- ಅಹಮದಾಬಾದ್‌ನಲ್ಲಿರುವ ವಿಧಿ ವಿಜ್ಞಾನ ನಿರ್ದೇಶನಾಲಯ (ಡಿಎಫ್‌ಎಸ್) ಮತ್ತು ರಾಷ್ಟ್ರೀಯ ವಿಧಿ ವಿಜ್ಞಾನಗಳ ವಿಶ್ವವಿದ್ಯಾಲಯದ (ಎನ್‌ಎಫ್‌ಎಸ್‌ಯು) ಡಿಎನ್‌ಎ ವಿಶ್ಲೇಷಣೆ ಕೇಂದ್ರದಲ್ಲಿ ಡಿಎನ್‌ಎ ಗುರುತಿಸುವಿಕೆ (ಪ್ರೊಫೈಲಿಂಗ್) ಮತ್ತು ಡಿಎನ್‌ಎ ಹೊಂದಾಣಿಕೆ ಪರಿಶೀಲನೆ ಪ್ರಕ್ರಿಯೆ
- ಮೃತಪಟ್ಟವರ ಹಲ್ಲು, ಅಸ್ಥಿ ಮಜ್ಜೆ ಹಾಗೂ ಇನ್ನಿತರ ಅಂಗಾಂಗಗಳಿಂದ ಡಿಎನ್‌ಎಯನ್ನು ಪ್ರತ್ಯೇಕಿಸಿ, ಆರ್‌ಟಿ–ಪಿಸಿಆರ್ ವಿಧಾನದ ಮೂಲಕ ಡಿಎನ್‌ಎಯ ಹಲವು ಪ್ರತಿಗಳನ್ನು ಸೃಷ್ಟಿಸಿ ಡಿಎನ್‌ಎ ಪ್ರೊಫೈಲ್‌ಗಳನ್ನು ವಿಧಿ ವಿಜ್ಞಾನ ನಿರ್ದೇಶನಾಲಯದಲ್ಲಿ ಸಿದ್ಧಪಡಿಸಿದ ತಜ್ಞರು
- ಮೃತಪಟ್ಟವರ ದೇಹಗಳು ಸುಟ್ಟು ಕರಕಲಾಗಿದ್ದರಿಂದ ಬಹುತೇಕ ಪ್ರಕರಣಗಳಲ್ಲಿ ಮಾದರಿ ಸಂಗ್ರಹಕ್ಕಾಗಿ ಸಂತ್ರಸ್ತರ ಹಲ್ಲು ಮತ್ತು ಮೂಳೆಗಳನ್ನೇ ಅವಲಂಬಿಸಿದ ತಜ್ಞರು
- ಎನ್‌ಎಫ್‌ಎಸ್‌ಯುನಲ್ಲಿ ಮೃತಪಟ್ಟವರ ಡಿಎನ್‌ಎ ವಿವರಗಳನ್ನು, ಅವರ ಸಂಬಂಧಿಕರ ಡಿಎನ್‌ಎ ವಿವರಗಳೊಂದಿಗೆ ಹೋಲಿಸಿ ಮೃತಪಟ್ಟವರ ಗುರುತನ್ನು ಪತ್ತೆ ಹಚ್ಚಿದ ವಿಜ್ಞಾನಿಗಳು
- ಒಂದು ವೇಳೆ ಡಿಎನ್‌ಎ ಹೊಂದಾಣಿಕೆಯಾಗದಿದ್ದರೆ, ಹೆಚ್ಚುವರಿ ಪರೀಕ್ಷೆಗಳನ್ನು ನಡೆಸುವುದು ಅಥವಾ ಪರೀಕ್ಷಾ ಪ್ರಕ್ರಿಯೆ ಪುನರಾವರ್ತನೆ. ಮೃತಪಟ್ಟ ಎಂಟು ಮಂದಿಯ ಡಿಎನ್‌ಎ, ಸಂಬಂಧಿಕರ ಡಿಎನ್‌ಎ ಜೊತೆಗೆ ಹೋಲಿಕೆ ಆಗದಿರುವುದಕ್ಕೆ, ಕುಟುಂಬಗಳ ಬೇರೆ ಸದಸ್ಯರ ಮಾದರಿಗಳನ್ನು ಸಂಗ್ರಹಕ್ಕೆ ವೈದ್ಯರು ಸೂಚಿಸಿದ್ದರು
- ಡಿಎನ್‌ಎ ವಿವರಗಳು ಹೊಂದಾಣಿಕೆಯಾಗಿ ಮೃತಪಟ್ಟವರ ಗುರುತು ಪತ್ತೆಯಾದ ನಂತರ ಸಿವಿಲ್ ಆಸ್ಪತ್ರೆಯಲ್ಲಿದ್ದ ಮೃತದೇಹಗಳು ಕುಟುಂಬಗಳಿಗೆ ಹಸ್ತಾಂತರ
- ಅಧಿಕಾರಿಗಳ ಪ್ರಕಾರ, ವಿಕೋಪದಲ್ಲಿ ಸಂತ್ರಸ್ತರಾದವರ ಗುರುತು ಪತ್ತೆ ಹಚ್ಚುವಿಕೆಗೆ ಸಂಬಂಧಿಸಿದಂತೆ ಇಂಟರ್‌ಪೋಲ್ ರೂಪಿಸಿರುವ ಮಾನದಂಡದಂತೆ ಡಿಎನ್‌ಎ ಪರೀಕ್ಷೆಗಳನ್ನು ಕೈಗೊಳ್ಳಲಾಗಿದೆ

ರಾಷ್ಟ್ರೀಯ

ಇಂಡಿಗೊ: ಹಿರಿಯ ಸಿಬ್ಬಂದಿ ವಿರುದ್ಧ ಜಾತಿ ನಿಂದನೆ ಆರೋಪ

ಗುರುಗ್ರಾಮ (ಪಿಟಿಐ): ಇಂಡಿಗೊ ವಿಮಾನಯಾನ ಸಂಸ್ಥೆಯ ಸಿಬ್ಬಂದಿಯೊಬ್ಬರು ತನ್ನ ಮೂವರು ಹಿರಿಯ ಸಹೋದ್ಯೋಗಿಗಳ ವಿರುದ್ಧ ಜಾತಿ ನಿಂದನೆ ಆರೋಪ ಮಾಡಿದ್ದು, ಪೊಲೀಸರಿಗೆ ದೂರು ನೀಡಿದ್ದಾರೆ. ಆದರೆ, ಈ ಆರೋಪಗಳನ್ನು ವಿಮಾನಯಾನ ಸಂಸ್ಥೆ ಅಲ್ಲಗಳೆದಿದೆ.

ಸಿಬ್ಬಂದಿ ಎ. ಶರಣ್ (35) ಎಂಬುವರು ಈ ಸಂಬಂಧ ಬೆಂಗಳೂರು ಪೊಲೀಸರಿಗೆ ದೂರು ನೀಡಿದ್ದಾರೆ. ಈ ಕುರಿತು 'ಶೂನ್ಯ ಎಫ್‌ಐಆರ್' ದಾಖಲಿಸಿರುವ ಬೆಂಗಳೂರು ಪೊಲೀಸರು, ಘಟನೆ ನಡೆದಿರುವ ಪ್ರದೇಶವಾದ ಗುರುಗ್ರಾಮಕ್ಕೆ ಪ್ರಕರಣವನ್ನು ವರ್ಗಾಯಿಸಿದ್ದಾರೆ. ಅದನ್ನು ಆಧರಿಸಿ ಗುರುಗ್ರಾಮದ ಪೊಲೀಸರು ಭಾನುವಾರ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದಾರೆ.

ಪ್ರಕರಣದ ವಿವರ: 'ಏಪ್ರಿಲ್ 28ರಂದು ನಡೆದ ಸಭೆಯಲ್ಲಿ ಹಿರಿಯ ಸಿಬ್ಬಂದಿಗಳಾದ ತಪಸ್ ದೆ, ಮನಿಶ್ ಸಾಹ್ನಿ ಮತ್ತು ಕ್ಯಾಪ್ಟನ್ ರಾಹುಲ್ ಪಾಟಿಲ್ ಅವರು ನನ್ನ ವಿರುದ್ಧ ಕೆಟ್ಟ ಪದಗಳನ್ನು ಬಳಸಿ ಜಾತಿ ನಿಂದನೆ ಮಾಡಿದ್ದಾರೆ. ಅಲ್ಲದೆ ದೌರ್ಜನ್ಯ ಎಸಗಿ, ಬೆದರಿಸಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಸಂಸ್ಥೆಯಲ್ಲಿ ಹಿಂದೆಯೂ ನಾನು ಈ ರೀತಿಯ ಶೋಷಣೆ ಮತ್ತು ತಾರತಮ್ಯವನ್ನು ಎದುರಿಸಿದ್ದೇನೆ. ಯಾವುದೇ ತಪ್ಪು ಮಾಡದೇ ಇದ್ದರೂ, ಆಧಾರವಿಲ್ಲದೆ ನನಗೆ ಹಲವು ಬಾರಿ ಎಚ್ಚರಿಕೆಯ ಪತ್ರಗಳನ್ನು ನೀಡಲಾಗಿದೆ. ಕಾರಣವಿಲ್ಲದೆ ನನ್ನ 'ಅನಾರೋಗ್ಯ ರಜೆಗಳನ್ನು ಮೊಟಕುಗೊಳಿಸಿ, ವೇತನ ಕಡಿತಗೊಳಿಸಲಾಗಿದೆ. ಕೆಲ ಸೌಲಭ್ಯಗಳನ್ನು ಸಹ ಕಡಿತಗೊಳಿಸಲಾಗಿದೆ' ಎಂದು ಅವರು ಆರೋಪಿಸಿದ್ದಾರೆ.

'ಅಷ್ಟೇ ಅಲ್ಲದೆ ರಾಜೀನಾಮೆ ನೀಡುವಂತೆಯೂ ಈ ಮೂವರು ಹಿರಿಯ ಸಿಬ್ಬಂದಿ ನನ್ನ ಮೇಲೆ ಒತ್ತಡ ಹೇರಿದ್ದಾರೆ' ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಏಪ್ರಿಲ್ 28ರಂದು ನಡೆದ ಸಭೆಯಲ್ಲಿ ಏನೇನಾಯಿತು ಎಂಬುದರ ಕುರಿತು ಇಂಡಿಗೊ ಸಿಇಒ ಮತ್ತು ಸಂಸ್ಥೆಯ ನೈತಿಕ ಸಮಿತಿಗೂ ದೂರು ನೀಡಿದ್ದೇನೆ. ಆದರೆ ಇಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಅವರು ಪೊಲೀಸರಿಗೆ ಸಲ್ಲಿಸಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆರೋಪ ನಿರಾಕರಣೆ: ತನ್ನ ಸಿಬ್ಬಂದಿ ಮಾಡಿರುವ ಆರೋಪಗಳು ತಳ್ಳಿಹಾಕಿರುವ ಇಂಡಿಗೊ ವಿಮಾನಯಾನ ಸಂಸ್ಥೆಯು, ಇವು ಆಧಾರರಹಿತ ಆರೋಪ ಎಂದು ಹೇಳಿದೆ. ಅಲ್ಲದೆ ಪ್ರಕರಣದ ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಅದು ತಿಳಿಸಿದೆ.

ಇಂಡಿಗೊ ಸಂಸ್ಥೆಯು 'ಶೂನ್ಯ ಸಹಿಷ್ಣುನೀತಿ' ಅಳವಡಿಸಿಕೊಂಡಿದ್ದು, ತಾರತಮ್ಯ, ಶೋಷಣೆ ಅಥವಾ ಪಕ್ಷಪಾತಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದೆ.

ಜಮ್ಮುವಿನಲ್ಲಿ ಇಳಿಯಬೇಕಿದ್ದ ವಿಮಾನ ದೆಹಲಿಗೆ ವಾಪಸ್

ಜಮ್ಮು (ಪಿಟಿಐ): ಶ್ರೀನಗರಕ್ಕೆ ಸೋಮವಾರ ತೆರಳುತ್ತಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನವೊಂದು ಜಮ್ಮುವಿನಲ್ಲಿ ಇಳಿಯುವ ಬದಲು ದೆಹಲಿಗೆ ಮರಳಿದೆ.

ಜಮ್ಮುವಿನಲ್ಲಿ ವಿಮಾನವನ್ನು ಇಳಿಸಲು ತಾಂತ್ರಿಕ ಅಡಚಣೆ ಉಂಟಾದ ಕಾರಣ ದೆಹಲಿ ಕಡೆ ತಿರುಗಿಸಲಾಯಿತು ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ.

ಐಎಕ್ಸ್–2564 ವಿಮಾನವು ಶ್ರೀನಗರಕ್ಕೆ ಹೋಗುವ ಮುನ್ನ ಜಮ್ಮುವಿನಲ್ಲಿ ಇಳಿಯಬೇಕಾಗಿತ್ತು. ಆದರೆ, ಜಮ್ಮು ವಿಮಾನ ನಿಲ್ದಾಣದ ಬಳಿ ಸ್ವಲ್ಪ ಸಮಯ ಹಾರಾಡಿದ ವಿಮಾನವು ದೆಹಲಿಯತ್ತ ತೆರಳಿತು. ಹವಾಮಾನ ಮತ್ತು ರನ್‌ವೇಯಲ್ಲಿ ಸಮಸ್ಯೆ ಇರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಯಾಣಿಕರು ಬೇರೆ ವಿಮಾನದಲ್ಲಿ ನಿಗದಿತ ಸ್ಥಳಕ್ಕೆ ಕಳುಹಿಸಲಾಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಹಮದಾಬಾದ್‌ನಲ್ಲಿ ಇದೇ 12ರಂದು ಸಂಭವಿಸಿದ ಏರ್ ಇಂಡಿಯಾ ವಿಮಾನ ದುರಂತದಲ್ಲಿ ಬದುಕುಳಿದ ಏಕೈಕ ಪ್ರಯಾಣಿಕ ವಿಶ್ವಾಸ್ ರಮೇಶ್ ಕುಮಾರ್ ಅವರು ತಾನು ಆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದುದಾಗಿ ಸುಳ್ಳು ಹೇಳಿದ್ದು, ಪೊಲೀಸರು ಅವರನ್ನು ಬಂಧಿಸಿದ್ದಾರೆ ಎಂದು ಪ್ರತಿಪಾದಿಸುತ್ತಿರುವ ವಿಡಿಯೊ ಸಹಿತ ಪೋಸ್ಟ್ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ವಿಧಾನದ ಮೂಲಕ ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಾಡಿದಾಗ ಹಲವರು ಇದೇ ಪ್ರತಿಪಾದನೆಯೊಂದಿಗೆ ಪೋಸ್ಟ್ ಮಾಡಿರುವುದು ಕಂಡು ಬಂತು. ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ವಿಶ್ವಾಸ್ ಬಂಧನಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಸಿಗಲಿಲ್ಲ. ಆದರೆ, ವಿಶ್ವಾಸ್ ಕುಮಾರ್ ಅವರು ಆ ವಿಮಾನದಲ್ಲಿದ್ದ ಬಗ್ಗೆ ಬೋರ್ಡಿಂಗ್ ಪಾಸ್‌ನಲ್ಲಿ ಅವರ ಹೆಸರು ಮತ್ತು ಸೀಟಿನ ಸಂಖ್ಯೆ 11ಎ ಉಲ್ಲೇಖಿಸಿರುವುದರ ಕುರಿತು ಹಿಂದೂಸ್ತಾನ್ ಟೈಮ್ಸ್‌ನಲ್ಲಿ ಪ್ರಕಟವಾದ ವರದಿ ಸಿಕ್ಕಿತು. ಮುಂದುವರಿದು, 12ರಂದು ಪತನಗೊಂಡ ವಿಮಾನದಲ್ಲಿದ್ದ ಪ್ರಯಾಣಿಕರ ಪಟ್ಟಿಯನ್ನು ಪರಿಶೀಲಿಸಿದಾಗ ಅದರಲ್ಲಿ ವಿಶ್ವಾಸ್ ಹೆಸರು ಇತ್ತು. ಅಹಮದಾಬಾದ್ ನಗರದ ವಲಯ–2ರ ಹೆಚ್ಚುವರಿ ಪೊಲೀಸ್ ಕಮಿಷನರ್ ಜೈಪಾಲ್ ಸಿಂಗ್ ರಾಥೋಡ್ ಅವರನ್ನು ಸಂಪರ್ಕಿಸಿದಾಗ, ವಿಶ್ವಾಸ್ ಅವರನ್ನು ಬಂಧಿಸಲಾಗಿದೆ ಎಂಬುದು ಸುಳ್ಳು ಎಂದು ದೃಢಪಡಿಸಿದರು. ಈ ಬಗ್ಗೆ ಪಿಟಿಐ ಫ್ಯಾಕ್ಟ್‌ಚೆಕ್ ವರದಿ ಮಾಡಿದೆ.

ನುಡಿ ಬೆಳಗು

ಅಸಾಧ್ಯವಾದುದು ಯಾವುದೂ ಇಲ್ಲ

ದೀಪಾ ಹಿರೇಗುತ್ತಿ

ಬೌದ್ಧ ವಿಹಾರವೊಂದರಲ್ಲಿ ಗುರು ಮತ್ತು ವಿಭಿನ್ನ ಹಿನ್ನೆಲೆಯಿಂದ ಬಂದ ಶಿಷ್ಯರು ಬುದ್ಧನ ಬೋಧನೆಗಳನ್ನು ಪಾಲಿಸುತ್ತ ಜನರಿಗೆ ಅವನ್ನು ಬೋಧಿಸುತ್ತ ವಾಸವಾಗಿದ್ದರು. ಅಲ್ಲೊಬ್ಬ ಬಹಳ ಮಾತಾಡುವ ಶಿಷ್ಯನಿದ್ದ. ತಾನು ಬುದ್ಧಿವಂತನೆಂದು ಸಾಬೀತುಪಡಿಸಲು ಸದಾ ಹೆಣಗುತ್ತಿದ್ದ. ತಾನು ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಸುಖಭೋಗಗಳನ್ನು ತ್ಯಾಗ ಮಾಡಿ ಬಂದಿರುವುದರಿಂದ ಉಳಿದೆಲ್ಲ ಶಿಷ್ಯರಿಗಿಂತ ತಾನೇ ಉತ್ತಮನೆಂದು ಬೀಗುತ್ತಿದ್ದ.

ಒಂದು ದಿನ ಗುರುಗಳು ಆಶ್ರಮದ ಎಲ್ಲ ಶಿಷ್ಯರಿಗೂ ಒಂದು ಸವಾಲನ್ನೊಡ್ಡಿದರು. ಅದೆಂದರೆ ಪ್ರತಿಯೊಬ್ಬರೂ ಒಂದು ಗುರಿಯನ್ನು ಇಟ್ಟುಕೊಳ್ಳಬೇಕು, ಒಂದು ತಿಂಗಳು ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂಬುದು. ಎಲ್ಲ ಶಿಷ್ಯರೂ ಶಕ್ತ್ಯಾನುಸಾರ ನಿರ್ಧಾರಗಳನ್ನು ಕೈಗೊಂಡು ಗುರುವಿಗೆ ತಿಳಿಸಿದರು. ಈ ಜಂಭದ ಶಿಷ್ಯನಿಗೆ ತಾನು ಇತರರಿಗಿಂತ ಭಿನ್ನ ಎಂದು ತೋರಿಸಿಕೊಳ್ಳುವ ಹಂಬಲವಿತ್ತಲ್ಲ, ಆತ ಸೀದಾ ಗುರುವಿನ ಬಳಿಗೇ ಹೋದ. 'ನನಗೆ ಈ ಚಿಕ್ಕ ಪುಟ್ಟ ಗುರಿಗಳನ್ನು ಇಟ್ಟುಕೊಳ್ಳಲು ಇಷ್ಟವಿಲ್ಲ. ನನ್ನ ಅರ್ಹತೆಗೆ ಯಾವುದಾದರೂ ದೊಡ್ಡ ಗುರಿಯನ್ನು ನೀವೇ ಹೇಳಿ' ಎಂದ. ಗುರುಗಳು ಬೇಡವೆಂದರೂ ಈತ ಪಟ್ಟು ಬಿಡಲಿಲ್ಲ. 'ಹಾಗಾದರೆ ಮುಂದಿನ ಒಂದು ತಿಂಗಳು ಮಾತಾಡಬೇಡ, ಒಂದೇ ಒಂದು ಪದವನ್ನೂ ಉಸುರಬೇಡ' ಎಂದರು ಗುರುಗಳು.

ಶಿಷ್ಯ ಒಂದು ದಿನ ಮೌನವಾಗಿದ್ದ. ಎರಡನೇ ದಿನ ಕಸಿವಿಸಿಯಾಗತೊಡಗಿತು. ಸ್ನೇಹಿತರೆಲ್ಲ ಮಾತಾಡುವುದನ್ನು ನೋಡಿ ಆ ಕಸಿವಿಸಿ ಹಿಂಸೆಯಾಗತೊಡಗಿತು. ನಾಲ್ಕನೇ ದಿನ ಆ ಹಿಂಸೆ ಸಹಿಸಲಾಗದ ಭಾರವಾಯಿತು. ಒಂದು ವಾರ ಕಳೆಯುವಷ್ಟರಲ್ಲಿ ಮಾತನಾಡದಿದ್ದರೆ ತಲೆಯೇ ಸಿಡಿದುಹೋಗುತ್ತದೆನ್ನಿಸಿ ಆತ ಗುರುಗಳ ಹತ್ತಿರ ಹೋಗಿ ಬರೆದು ತೋರಿಸಿದ, 'ಗುರುಗಳೇ ಮಾತಾಡದಿದ್ದರೆ ಸಾಧ್ಯವೇ ಇಲ್ಲ, ನಾನು ಮಾತಾಡುತ್ತೇನೆ'. ಆಗ ಗುರುಗಳು, 'ಮಾಡಿದ ತೀರ್ಮಾನವನ್ನು ಪೂರ್ಣಗೊಳಿಸುವವನು ಅರಿವಿನ ದಾರಿಯಲ್ಲಿ ಸಾಗುತ್ತಾನೆ. ಈ ತೀರ್ಮಾನವನ್ನು ಮುರಿಯುವುದು ನಿನ್ನಿಷ್ಟ. ಆದರೆ ಇಷ್ಟು ಸಣ್ಣ ವಿಷಯವನ್ನೇ ಪೂರ್ಣಗೊಳಿಸಲಾಗದ ನೀನು ಮುಂದೆ ನಿನ್ನ ಬದುಕನ್ನು ಹೇಗೆ ನಿಭಾಯಿಸುತ್ತೀ' ಎಂದರು. ಶಿಷ್ಯ ಕುಟೀರದೊಳಗೆ ಏಕಾಂಗಿಯಾಗಿ ಧ್ಯಾನಮಗ್ನನಾದ. ತಿಂಗಳುರುಳಿ ಮತ್ತೆ ಮೂರು ತಿಂಗಳು ಕಳೆಯಿತು. ಶಿಷ್ಯ ಹೊಸಮನುಷ್ಯನಾಗಿದ್ದ. 'ಆರಂಭದಲ್ಲಿ ಬಹಳ ಒದ್ದಾಡಿ ಹೊರಗಿನ ಮೌನ ಸಾಧಿಸಿದೆ, ಆದರೆ ನನ್ನೊಳಗೆ ದನಿಗಳು ನೂರು ಪ್ರಶ್ನೆ ಕೇಳುತ್ತಿದ್ದವು. ಮತ್ತೆ ಮೂರು ತಿಂಗಳು ಅವುಗಳಿಗೆ ಉತ್ತರ ಹುಡುಕುತ್ತ ಕಳೆದೆ. ಈಗ ಒಳಗೂ ಹೊರಗೂ ಶಾಂತಿಯಿಂದ ಇದ್ದೇನೆ, ಧನ್ಯವಾದಗಳು ಗುರುಗಳೇ' ಎಂದ.

ಸಾಧನೆಯ ದಾರಿಯಲ್ಲಿ ಸಾಗುವುದು ಕಷ್ಟವೇ. ಆರಾಮಾಗಿರಲು ಬಯಸುವ ದೇಹ ಮನಸ್ಸುಗಳು ಪರಿಶ್ರಮವನ್ನು ಮೊದಮೊದಲು ತಿರಸ್ಕರಿಸುತ್ತವೆ. ಪ್ರಯತ್ನ ಪಡುವುದನ್ನೇ ನಿಲ್ಲಿಸಿಬಿಡುವಷ್ಟು ಒತ್ತಡ ಹೇರುತ್ತವೆ. ಆದರೆ ಛಲದಿಂದ, ದೃಢ ಮನೋಭಾವದಿಂದ ಅಭ್ಯಾಸ ಮಾಡಿದರೆ ಒಗ್ಗಿಕೊಳ್ಳುತ್ತವೆ. ಅದು ಓದು ಬರಹ ಇರಬಹುದು, ದೈಹಿಕ ಚಟುವಟಿಕೆ ಇರಬಹುದು ಅಥವಾ ಇನ್ನಾವುದೇ ಸಾಧನೆ ಇರಬಹುದು. ಪ್ರಯತ್ನಿಸಿದರೆ ಯಾವುದೂ ಕಷ್ಟವಲ್ಲ. ಅಸಾಧ್ಯವೆನ್ನುವುದು ಏನೂ ಇಲ್ಲ. ❖

ಪದಬಂಧ 6083

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಗಲು ಆರಂಭವಾದಾಗ ಕೈಗೂಡದ ಆಸೆ ಕಂಡೀತೆ? (6)
4.ತಮದಲ್ಲಿ ಮೇಲುಕೀಳು (4)
6.ಗಲ್ಲಿಯಲ್ಲಿರುವಾಗ ದಿಕ್ಕು ತೋಚದಿರುವುದು (4)
8.ತುಂಬಿದ ಮೈಕಟ್ಟು (4)
10.ಇನ್ನೂ ಬಲಿಯದಿರುವ ಕಾಯಿ (4)
12.ದಂತಚೂರ್ಣ ಇಲ್ಲಿದೆ (4)
13.ಉಪಾಯದಿಂದ ಹಾಕಿದ ನೆಲೆಗಟ್ಟು (4)
15.ಇದು ಹಣೆ ಬರಹ (6)

ಮೇಲಿಂದ ಕೆಳಕ್ಕೆ

1.ಹಣ್ಣುತಂದಾಗ ನೆಟ್ಟಿರುವ ತೀಕ್ಷ್ಣದೃಷ್ಟಿ! (4)
2.ಸುನೀತಳ ಮಗನಿವನು (2)
3.ಹೊಗೆ ಇಲ್ಲಿ ಕಾಣುತ್ತಿದೆ (2)
5.ಹಾಗೆ ಆಗಲಿ ಎಂದು ಹೀಗೆ ಹೇಳಬಹುದು (3)
7.ಗಾಡಿಯಲ್ಲಿಟ್ಟಿರುವ ಚಿಲ್ಲರೆ ಹಣವಿದು (4)
8.ಅಗಲವಾದ ದುಂಡನೆಯ ಪಾತ್ರೆ (3)
9.ಒಂದು ಬಗೆಯ ನಯವಾದ ಬಟ್ಟೆ (4)
10.ಕನ್ನಡಿಗನು ಹಿಡಿದಿರುವ ದರ್ಪಣ (3)
11.ಈತ ಸಂಪ್ರದಾಯವನ್ನು ಅನುಸರಿಸುವವನು (4)
13.ಬೆಂದಕ್ಕಿ ಕಾಳು `(2)
14.ಸಂಗೀತ ಮತ್ತು ನೃತ್ಯದಲ್ಲಿನ ಗತಿ ತಲೆಕೆಳಗಾಗಿದೆ (2)



6082ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಲಾಯನ 3.ವರ್ಣಮಾಲೆ 5.ಕಕವ 7.ಸಮಗಾರ 9.ಶೋಕ 10.ಕ್ಷಭ 11.ರವಿ ಚಂದ್ರ 14.ಭವನ 17.ದಿಗಂಬರ 18.ಹಸುಗೂಸು

ಮೇಲಿಂದ ಕೆಳಕ್ಕೆ: 1.ಪದಕ 2.ನನ್ನಿ 3.ವನಸುಮ 4.ಲೆಕ್ಕಿಗ 6.ಕನಿಕರ 7.ಸಮುದ್ರ 8.ರಕ್ತಸ್ರಾವ 12.ಚಂದಾದಾರ 13.ಬುನಾದಿ 15.ನನಸು 16. ದೇಹ

ಸುಡೊಕು 6467

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	9			3		8	
	4			8			5	9
8			2	6		7		4
	8			2		1		5
		2	8		5		6	
5				3			2	
9		7	5					6
						9	4	
4	3		6		1		7	2

6466 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಜೂನ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಚತುರ್ದಶಿ ಗಂ. 19-00 ನಕ್ಷತ್ರ: ರೋಹಿಣಿ ಗಂ. 12-54 ಯೋಗ: ಶೂಲ ಗಂ. 9-36 ಕರಣ: ವಿಷ್ಟಿ ಗಂ. 8-34, ಮಿಥುನ ಮಾಸದ 10 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 – 04-30, ಸೂರ್ಯೋದಯ : 06-09 ಸೂರ್ಯಾಸ್ತ : 06-57, ಮುಸ್ಲಿಂ ದಿನಾಂಕ : 27 ಜುಲ್‌ಹಿಜಾ, ಅದೃಷ್ಟ ಸಂಖ್ಯೆ : 2, 10

ಮೇಷ: ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ನೆಮ್ಮದಿ ಸಿಗಲಿದೆ. ಗುಪ್ತಚರ ಇಲಾಖೆ ಉದ್ಯೋಗಿಗಳಿಗೆ ಸರ್ಕಾರದಿಂದ ಒತ್ತಡ ಉಂಟಾಗಲಿದೆ. ಖಾದಿ ಉದ್ಯಮದವರು ಬಂಡವಾಳದ ಮೇಲೆ ಗಮನವಿರಿಸಿ.

ವೃಷಭ: ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯ ಪ್ರಾಪ್ತಿ. ಮಕ್ಕಳಿಂದ ಸುಖ, ನೆಮ್ಮದಿ ದೊರೆಯಲಿದೆ. ವಿದೇಶದಲ್ಲಿ ವಾಸ ಮಾಡುವ ಸಂಬಂಧಿಗಳಿಂದ ಒಳ್ಳೆಯ ಸುದ್ದಿ ಕೇಳುವಿರಿ.

ಮಿಥುನ: ವಿದ್ಯಾರ್ಥಿಗಳು ಉತ್ಸಾಹದಿಂದ ಮುಂದಿನ ಹೆಜ್ಜೆಗಳನ್ನಿರಿಸುವಿರಿ. ಬಟ್ಟೆ ವ್ಯಾಪಾರಿಗಳಿಗೆ ಉತ್ತಮ ಮಾರಾಟ ಮತ್ತು ಲಾಭವಾಗುವುದು. ಸೋದರನ ಆಗಮನದಿಂದ ಮನೆಯಲ್ಲಿ ಸಂಭ್ರಮವಿರುವುದು.

ಕರ್ಕಾಟಕ: ಕೆಲಸ ಬದಲಿಸುವ ಯೋಚನೆ ಮಾಡುವವರಿಗೆ ಸಕಾಲ.ಗಳಿಕೆಯ ವಿಚಾರವಾಗಿ ಒದಗಿಬರುವ ಅವಕಾಶದ ಬಗ್ಗೆ ಚಿಂತಿಸುವಿರಿ. ಗುತ್ತಿಗೆ ಕೆಲಸದ ಬಾಕಿ ಹಣವು ಸಂದಾಯವಾಗುವುದು.

ಸಿಂಹ: ಅಗ್ನಿಯಲ್ಲಿ ಅಥವಾ ಶಸ್ತ್ರಗಳಿಂದ ಆಪತ್ತು ಎದುರಾಗುವ ಸಂಭವವಿರುವುದರಿಂದ ಅವುಗಳ ಉಪಯೋಗದಲ್ಲಿ ಜಾಗ್ರತರಾಗಿರಿ. ಭೂ ವ್ಯವಹಾರದಲ್ಲಿ ಹಿಂದಿನಿಂದ ನಡೆದ ಕೌಟುಂಬಿಕ ಕಲಹಕ್ಕೆ ಪೂರ್ಣವಿರಾಮ ಸಿಗಲಿದೆ.

ಕನ್ಯಾ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭವೊಂದು ಬರಲಿದೆ. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣದಲ್ಲಿ ಇರುವುದು.

ತುಲಾ: ಪಾಲುದಾರಿಕೆ ವ್ಯವಹಾರದಲ್ಲಿ ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ–ಸಂಬಂಧ ಮುಂದುವರಿಯಲಿದೆ. ಮನೆಯ ಪರಿಸ್ಥಿತಿಯು ಸುಧಾರಿಸುವುದು. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ವೃಶ್ಚಿಕ: ಮಕ್ಕಳ ಆಲಸ್ಯತನ ಪೋಷಕರಲ್ಲಿ ದೊಡ್ಡ ಸಮಸ್ಯೆಯಾಗುವುದು. ವ್ಯಾವಹಾರಿಕ ವಿಷಯದಲ್ಲಿ ಚರ್ಚೆ ಮಾಡುವುದು ಲಾಭ ಉಂಟುಮಾಡುತ್ತದೆ. ಇನ್ನೊಬ್ಬರಿಗೆ ಸಾಲ ಕೊಡುವಾಗ ಸರಿಯಾಗಿ ಯೋಚಿಸಿ, ನಿರ್ಧರಿಸಿ.

ಧನು: ಇತರರಿಗಿಂತ ಭಿನ್ನವಾದ ಹಾಗೂ ಧನಾತ್ಮಕವಾದ ನಿರ್ಧಾರವನ್ನು ತೆಗೆದುಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಸಾಧನೆಗೆ ಪೂರಕವಾದ ದಿನವಾಗಿದೆ. ಧೈರ್ಯ–ಸಾಮರ್ಥ್ಯದಿಂದ ಸಹೋದ್ಯೋಗಿಗಳ ಮನ ಗೆಲ್ಲುವಿರಿ. \

ಮಕರ: ಹಿಂದುರುಗಿ ಬರಬೇಕಾಗಿರುವ ಹಣ ಸಂಜೆಯ ವೇಳೆಗೆ ಕೈ ಸೇರುವುದು. ಕೆಲಸಗಳ ಬಗ್ಗೆ ಅನುಭವಸ್ಥರೊಂದಿಗೆ ಮಾತುಕತೆ ನಡೆಸುವುದರಿಂದ ತಿಳಿವಳಿಕೆ ವೃದ್ಧಿ. ಮಗನಿಗಾಗಿ ವೈದ್ಯಕೀಯ ಖರ್ಚು ಹೆಚ್ಚುವುದು.

ಕುಂಭ: ವ್ಯವಹಾರದ ವಿಚಾರದಲ್ಲಿ ಇನ್ನೂ ಅನುಭವ ಬೇಕಾಗುವುದು. ವೃತ್ತಿಯನ್ನು ಸವಾಲೆಂಬಂತೆ ಸ್ವೀಕರಿಸುವ ಸನ್ನಿವೇಶಗಳು ಎದುರಾಗುತ್ತದೆ. ದಕ್ಷಿಣಾಮೂರ್ತಿಯ ಆರಾಧನೆ ಯಶಸ್ಸಿನ ದಾರಿ ತೋರಿಸಲಿದೆ.

ಮೀನ: ಮಿತ್ರನೊಬ್ಬನ ಭೇಟಿ ಮನಸ್ಸಿಗೆ ಮುದ ತರುವುದು. ಭರವಸೆಯ ಮಾತುಗಳು ಸಹೋದ್ಯೋಗಿಯೊಬ್ಬರಿಗೆ ಆತ್ಮಸ್ಥೈರ್ಯ ತಂದು ಕೊಡುವುದು. ನಯವಾದ ಮಾತುಗಳಿಂದ ಮಕ್ಕಳನ್ನು ತಿದ್ದುವ ಪ್ರಯತ್ನ ಮಾಡಿ.

ಗುಂಡಣ್ಣ

ಚಿಟಿಕೆ ಸುದ್ದಿ

‘ಇರಾನ್ ಮೇಲೆ ಅಮೆರಿಕ ದಾಳಿ ಮಾಡಿದ್ದು ತಪ್ಪು’

ಕಲಬುರಗಿ: ‘ಅಮೆರಿಕವು ಇರಾನ್ ಮೇಲೆ ದಾಳಿ ಮಾಡಿದ್ದು ತಪ್ಪು ನಿರ್ಧಾರ. ಜಗತ್ತಿನಲ್ಲಿ ಯಾವ ದೇಶಗಳ ಮಧ್ಯೆಯೂ ಯುದ್ಧ ಒಳ್ಳೆಯದಲ್ಲ. ಎಂಥದ್ದೇ ಸಮಸ್ಯೆ ಇರಲಿ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಯುದ್ಧ ಮಾಡಿ ಎಲ್ಲಾ ನಾಶವಾದರೆ ಎಲ್ಲಿ ಬದುಕುತ್ತೀರಿ? ಈ ಹಿಂದಿನಿಂದಲೂ ನಮ್ಮ ಜೊತೆ ಇರಾನ್ ಒಳ್ಳೆಯ ಸಂಬಂಧ ಹೊಂದಿದೆ. ಅಲ್ಲಿಂದ ತೈಲ ಆಮದು ಮಾಡಿಕೊಳ್ಳುತ್ತಿದ್ದೇವೆ. ಇಡೀ ವಿಶ್ವಕ್ಕೆ ಬುದ್ಧನ ಶಾಂತಿ ಬೇಕಾಗಿದೆಯೇ ಹೊರತು ಯುದ್ಧ ಬೇಕಾಗಿಲ್ಲ’ ಎಂದರು.

‘ಇಸ್ರೇಲ್–ಇರಾನ್ ಮಧ್ಯೆ ನಡೆಯುತ್ತಿರುವ ಯುದ್ಧದ ವೇಳೆ ಇನ್ನೊಬ್ಬರು ಮಧ್ಯಪ್ರವೇಶ ಮಾಡುವುದು ಒಳ್ಳೆಯ ಸಂದೇಶ ಕೊಡುವುದಿಲ್ಲ’ ಎಂದು ಅವರು ಅಮೆರಿಕದ ನಡೆಯನ್ನು ಟೀಕಿಸಿದರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಚಿರಸ್ಮರಣೆ

ಶ್ರೀ ಡಾ|| ಹೆಚ್.ಚೌಡಯ್ಯನವರು

ಮರಣ: 24–06–2021

ಸದಾ ಸ್ಮರಿಸುವ: ಪತ್ನಿ ಮತ್ತು ಕುಟುಂಬ ವರ್ಗದವರು

ಮೊದಲನೇ ವರ್ಷದ ಪುಣ್ಯಸ್ಮರಣೆ

ಬಿ.ಪಿ.ಗೌತಮ್ ಬಿ.ಇ.

ಜನನ: 24.10.1984 ಮರಣ: 24.06.2024

ಲೇಟ್ ಕಾವೇರಮ್ಮ ಹಾಗು ಲೇಟ್‌ನಾರಾಯಣ್ ದಾಸ್‌ರವರ ಮೊಮ್ಮಗ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಪ್ರತಿದಿನವೂ ನಿಮ್ಮದೇ ನೆನಪು. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ

ತಂದೆ ಪ್ರಭಾಕರ್, ತಾಯಿ ಜಯಂತಿ ದೇವಿ, ಚಿಕಪ್ಪ ಗೋಪಾಲ್, ಚಿಕಮ್ಮ ಶಕುಂತಲ, ತಮ್ಮಂದಿರು ಪ್ರೀತಂ, ವಿಕ್ರಂ, ಸಾತ್ವಿಕ್, ಋತ್ವಿಕ್ ಹಾಗು ಕುಟುಂಬವರ್ಗದವರು

Mob: 9845466617

ಇರಾನ್–ಇಸ್ರೇಲ್ ಸಂಘರ್ಷ ತೀವ್ರ

ಟೆಹರಾನ್/ ಜೆರುಸಲೇಂ/ ಮಾಸ್ಕೊ: ಇಸ್ರೇಲ್–ಇರಾನ್ ಯುದ್ಧವು ಹನ್ನೊಂದನೇ ದಿನಕ್ಕೆ ಕಾಲಿಟ್ಟಿದೆ. ತನ್ನ ಮೂರು ಪರಮಾಣು ಘಟಕಗಳ ಮೇಲೆ ಅಮೆರಿಕವು ಭಾನುವಾರ ದಾಳಿ ನಡೆಸಿದ್ದಕ್ಕಾಗಿ ಹೊರ್ಮುಜ್ ಜಲಸಂಧಿಯನ್ನು ಬಂದ್ ಮಾಡುವುದಾಗಿ ಇರಾನ್ ಹೇಳಿದೆ. ಅಮೆರಿಕದ ದಾಳಿ ಬಳಿಕ ಇಸ್ರೇಲ್ ಮತ್ತು ಇರಾನ್ ಪರಸ್ಪರರ ಮೇಲೆ ಸೋಮವಾರ ದಾಳಿ ತೀವ್ರಗೊಳಿಸಿವೆ. ಜಲಸಂಧಿಯನ್ನು ಬಂದ್ ಮಾಡಿದರೆ ಕಚ್ಚಾ ತೈಲ ಸಾಗಾಟಕ್ಕೆ ಭಾರಿ ಹೊಡೆತ ಬೀಳಲಿದೆ. ಇದರಿಂದ ಆರ್ಥಿಕತೆಗೆ ಆಗುವ ನಷ್ಟದ ಬಗ್ಗೆ ಚೀನಾ ಮತ್ತು ಐರೋಪ್ಯ ದೇಶಗಳ ಒಕ್ಕೂಟ ಕಳವಳ ವ್ಯಕ್ತಪಡಿಸಿವೆ.

ದಾಳಿ ತೀವ್ರಗೊಳಿಸಿದ ಎರಡೂ ದೇಶಗಳು

ಇರಾನ್ ರಾಜಧಾನಿ ಟೆಹರಾನ್ ಹಾಗೂ ಇಸ್ರೇಲ್ ರಾಜಧಾನಿ ಟೆಲ್ ಅವೀವ್‌ನಲ್ಲಿ ಸೋಮವಾರ ಬಹಳ ಹೊತ್ತಿನವರೆಗೆ ಸೈರನ್ ಸದ್ದು ಮೊಳಗಿದೆ. ಎರಡೂ ದೇಶಗಳ ರಾಜಧಾನಿಗಳಲ್ಲಿ ಭಾರಿ ಸ್ಫೋಟದ ಸದ್ದು ಕೇಳಿಸಿದೆ. ತಕ್ಷಣವೇ ಬಂಕರ್‌ಗಳಲ್ಲಿ ಅಡಗಿಕೊಳ್ಳುವಂತೆ ಈ ಎರಡೂ ಪ್ರದೇಶಗಳ ಜನರಿಗೆ ಅಲ್ಲಿನ ಸರ್ಕಾರಗಳು ಮನವಿ ಮಾಡಿದವು.

ಇಸ್ರೇಲ್‌ನ ಸಮುದ್ರ ತೀರದಲ್ಲಿ ಆಟವಾಡುತ್ತಿದ್ದ ಜನರು ತಮ್ಮ ಈಜುಡುಗೆಯಲ್ಲಿಯೇ ಬಂಕರ್‌ಗಳಿಗೆ ಓಡಿದರು. ಈ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ‘ಅಮೆರಿಕವು ಇರಾನ್‌ನ ಪರಮಾಣು ಘಟಕಗಳ ಮೇಲೆ ದಾಳಿ ನಡೆಸಿದ ಬಳಿಕ, ಇಲ್ಲಿನ ಜನರು ಭಯಭೀತರಾಗಿದ್ದಾರೆ’ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಇರಾನ್‌ನ ಸರ್ಕಾರಿ ಕಚೇರಿ ಹಾಗೂ ಇರಾನ್‌ನ ಸರ್ವೋಚ್ಚ ನಾಯಕ ಖಮೇನಿ ಅವರ ರೆವಲ್ಯೂಷನರಿ ಗಾರ್ಡ್‌ನ (ಅರೆ ಸೇನಾ ಪಡೆ ಇದ್ದಂತೆ) ಕೇಂದ್ರ ಕಚೇರಿ ಹಾಗೂ ಸೇನಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ಸೋಮವಾರ ದಾಳಿ ನಡೆಸಿದೆ. ಟೆಹರಾನ್‌ನ ವಿದ್ಯುತ್ ಸಂಪರ್ಕದ ಕೇಂದ್ರ ಮೂಲಸೌಕರ್ಯದ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿದೆ. ಇದು ಯಾವ ಪ್ರದೇಶ ಎನ್ನುವ ಬಗ್ಗೆ ಇರಾನ್ ಸ್ಪಷ್ಟ ಮಾಹಿತಿ ಹಂಚಿಕೊಂಡಿಲ್ಲ.

ಹೈಫಾ ಮತ್ತು ಟೆಲ್ ಅವೀವ್ ಮೇಲೆ ಇರಾನ್ ಭಾರಿ ಕ್ಷಿಪಣಿ ದಾಳಿ ನಡೆಸಿದೆ. ರಸ್ತೆಯ ಪಕ್ಕವೇ ಕ್ಷಿಪಣಿಯೊಂದು ಬಿದ್ದು, ಕಲ್ಲುಗಳು ಕಾರಿನ ಮೇಲೆ ಬಿದ್ದ ದೃಶ್ಯ ಇರುವ ವಿಡಿಯೊವೊಂದು ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಜೆರುಸಲೇಂ ಮೇಲೆ ಕೂಡ ಇರಾನ್ ದಾಳಿ ನಡೆಸಿದೆ ಎನ್ನಲಾಗುತ್ತಿದೆ. ಆದರೆ, ಈ ಬಗ್ಗೆ ಇಸ್ರೇಲ್ ಮಾಹಿತಿ ನೀಡಿಲ್ಲ.

ಇರಾನ್ ಮೇಲಿನ ಅಮೆರಿಕದ ದಾಳಿಯನ್ನು ಖಂಡಿಸಿ ಲಾಸ್ ಏಂಜಲೀಸ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಯಿತು –ಎಎಫ್‌ಪಿ ಚಿತ್ರ

ಟೆಹರಾನ್ ಮೇಲೆ ಸೋಮವಾರ ಇಸ್ರೇಲ್ ನಡೆಸಿದ ದಾಳಿಯಿಂದ ದಟ್ಟ ಹೊಗೆ ಎದ್ದಿತ್ತು –ಎಎಫ್‌ಪಿ ಚಿತ್ರ

ಎವಿನ್ ಕಾರಾಗೃಹದ ಮೇಲೆ ದಾಳಿ

ಟೆಹರಾನ್‌ನಲ್ಲಿರುವ ಎವಿನ್ ಕಾರಾಗೃಹದ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ಖಮೇನಿ ಮತ್ತು ಇಲ್ಲಿನ ಸರ್ಕಾರದ ವಿರುದ್ಧ ಇರುವ ರಾಜಕೀಯ ಕೈದಿಗಳನ್ನು ಇರಿಸಿರುವ ಕಾರಾಗೃಹ ಇದಾಗಿದೆ. ‘ಕಾರಾಗೃಹದ ಗೇಟ್ ಬಳಿ ದಾಳಿ ನಡೆಸಲಾಗಿದೆ. ಈಗ ಪರಿಸ್ಥಿತಿ ನಿಯಂತ್ರಣದಲ್ಲಿ ಇದೆ’ ಎಂದು ಇರಾನ್ ಹೇಳಿದೆ. ‘ನಾವು ಹೇರಿರುವ ನಿರ್ಬಂಧ ಸಂಬಂಧ ನಮ್ಮನ್ನು ಬ್ಲ್ಯಾಕ್‌ಮೇಲ್ ಮಾಡಲು ನಮ್ಮ ದೇಶದ ಜನರನ್ನು ಇರಾನ್ ಈ ಕಾರಾಗೃಹದಲ್ಲಿ ಇರಿಸಿಕೊಳ್ಳುತ್ತದೆ’ ಎಂದು ಅಮೆರಿಕ ಮತ್ತು ಐರೋಪ್ಯ ದೇಶಗಳು ಆರೋಪಿಸುತ್ತವೆ.

‘ದಾಳಿಯ ಮೂಲಕ ಕೈದಿಗಳ ಮನೋಸ್ಥೈರ್ಯವನ್ನು ಕುಗ್ಗಿಸಲಾಗುತ್ತಿದೆ’ ಎಂದು ಫ್ರಾನ್ಸ್‌ನ ಕೈದಿಯೊಬ್ಬರ ಸಹೋದರಿಯೊಬ್ಬರು ದಾಳಿ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಐರೋಪ್ಯ ದೇಶಗಳ ಸುಮಾರು 20 ಜನರು ಈ ಕಾರಾಗೃಹದಲ್ಲಿ ಇದ್ದಾರೆ ಎಂದು ‘ಇರಾನ್‌ವೈರ್’ ಎನ್ನುವ ಪತ್ರಿಕೆ ವರದಿ ಮಾಡಿದೆ.





ಆಧಾರ: ಎಪಿ, ಎಎಫ್‌ಪಿ, ರಾಯಿಟರ್ಸ್
ಚಿತ್ರ ಕೃಪೆ: ಗೂಗಲ್ ಅರ್ಥ್

ಟ್ರಂಪ್ ಅವರ ‘ಮಿಗಾ’ ಘೋಷಣೆ

‘ಆಡಳಿತದಲ್ಲಿ ತಲ್ಲಣ ಸೃಷ್ಟಿಸಲು ಆಡಳಿತಕಾರರಲ್ಲಿ ನಡುಕ ಹುಟ್ಟಿಸಲು ನಮ್ಮ ಆಡಳಿತಕ್ಕೆ ಸಂಬಂಧಿಸಿದ ಕಚೇರಿಗಳ ಮೇಲೆಯೇ ದಾಳಿ ನಡೆಸಲಾಗಿದೆ’ ಎಂದು ಇರಾನ್‌ನ ಕೆಲವು ಅಧಿಕಾರಿಗಳು ಹೇಳುತ್ತಿದ್ದಾರೆ. ಇದಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪೋಸ್ಟ್ ಕೂಡ ಕಾರಣ ಎನ್ನಲಾಗಿದೆ.

‘ಇರಾನ್ ಅನ್ನು ಮತ್ತೊಮ್ಮೆ ಶ್ರೇಷ್ಠವಾಗಿಸಲು (ಮೇಕ್ ಇರಾನ್ ಗ್ರೇಟ್ ಅಗೇನ್–ಎಂಐಜಿಎ (ಮಿಗಾ) ಇರಾನ್ ಸರ್ಕಾರಕ್ಕೆ ಸಾಧ್ಯವಾಗದೇ ಇದ್ದರೆ, ಯಾಕಾಗಿ ನಾವು ಇರಾನ್ ಸರ್ಕಾರವನ್ನು ಬದಲು ಮಾಡಬಾರದು?’ ಎಂದು ಟ್ರಂಪ್ ತಮ್ಮ ‘ಟ್ರುತ್ ಸೋಷಿಯಲ್’ ವೇದಿಕೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದರು.

ಪದೇ ಪದೇ ಬೆದರಿಕೆ ಒಡ್ಡುವ ಇರಾನ್

ಹೊರ್ಮುಜ್ ಜಲಸಂಧಿಯನ್ನು ಬಂದ್ ಮಾಡುತ್ತೇವೆ ಎನ್ನುವ ಬೆದರಿಕೆಯನ್ನು ತನ್ನ ದಾಳವಾಗಿ ಇರಾನ್ ಹಿಂದಿನಿಂದಲೂ ಬಳಸಿಕೊಳ್ಳುತ್ತಲೇ ಬಂದಿದೆ. ಈಗ ಅಮೆರಿಕ ತನ್ನ ಮೇಲೆ ನಡೆಸಿದ ದಾಳಿಗೆ ಪ್ರತೀಕಾರವಾಗಿ ಜಲಸಂಧಿಯನ್ನು ಬಂದ್ ಮಾಡುತ್ತೇವೆ ಎಂದು ಮತ್ತೊಮ್ಮೆ ಇರಾನ್ ಗುಡುಗಿದೆ. ಈ ವಿಚಾರವಾಗಿ ಮತ್ತೊಮ್ಮೆ ಯೋಚಿಸುವಂತೆ ಇರಾನ್‌ಗೆ ಹೇಳಬೇಕು. ಈ ಬಗ್ಗೆ ಸಹಾಯ ಮಾಡಬೇಕು ಎಂದು ಅಮೆರಿಕವು ಚೀನಾಕ್ಕೆ ಮನವಿ ಮಾಡಿದೆ.

ಯುದ್ಧವು ತೀವ್ರಗೊಳ್ಳುತ್ತಿದೆ. ಹೊರ್ಮುಜ್ ಜಲಸಂಧಿಯನ್ನು ಬಂದ್ ಮಾಡುವ ಇರಾನ್‌ನ ನಿರ್ಧಾರವು ತೀವ್ರ ಭಯಾನಕವಾಗಿ ಪರಿಣಮಿಸಬಹುದು. ಇದು ಯಾರಿಗೂ ಒಳ್ಳೆಯದಲ್ಲ
ಕಾಜಾ ಕಲ್ಲಾಸ್, ಐರೋಪ್ಯ ಒಕ್ಕೂಟದ ಹಿರಿಯ ಅಧಿಕಾರಿ

ಇರಾನ್ ಮತ್ತು ಇಸ್ರೇಲ್‌ನ ಯುದ್ಧದ ಪರಿಣಾಮವು ಆಯಾ ದೇಶಗಳಿಗೆ ಅಷ್ಟೇ ಅಲ್ಲದೇ, ಇತರೆ ದೇಶಗಳಿಗೂ ಹರಡದಂತೆ ಆಗಬೇಕು. ತಕ್ಷಣವೇ ಕದನ ವಿರಾಮ ಘೋಷಿಸಬೇಕು. ಅಂತರರಾಷ್ಟ್ರೀಯ ಸಮುದಾಯವು ಈ ಬಗ್ಗೆ ಹೆಚ್ಚಿನ ಯತ್ನ ಮಾಡಬೇಕು
ಚೀನಾ

ಇರಾನ್ ಜೊತೆಗಿನ ಸಂಘರ್ಷದಲ್ಲಿ ಪಶ್ಚಿಮ ಏಷ್ಯಾದ ಹೊರಗಿನ ಶಕ್ತಿಗಳ ಪಾಲ್ಗೊಳ್ಳುವಿಕೆಯು ಜಗತ್ತನ್ನು ಅಪಾಯದತ್ತ ತಳ್ಳಬಹುದು
ವ್ಲಾದಿಮಿರ್ ಪುಟಿನ್, ರಷ್ಯಾ ಅಧ್ಯಕ್ಷ

‘ದಾಳಿ ಒಪ್ಪಲಾಗದು’

ಇರಾನ್‌ನ ಪರಮಾಣು ಘಟಕಗಳ ಮೇಲೆ ಅಮೆರಿಕ ನಡೆಸಿದ ದಾಳಿಯನ್ನು ರಷ್ಯಾ ಖಂಡಿಸಿದ್ದು, ಇದು ‘ಅಪ್ರಚೋದಿತ ಆಕ್ರಮಣ’ ಎಂದು ಹೇಳಿದೆ. ‘ಇರಾನ್ ಮೇಲೆ ನಡೆದಿರುವ ಅಪ್ರಚೋದಿತ ದಾಳಿಗೆ ಯಾವುದೇ ಸಮರ್ಥನೆ ಇಲ್ಲ. ದಾಳಿಯನ್ನು ಒಪ್ಪಲಾಗದು’ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹೇಳಿದರು. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರು ಸೋಮವಾರ ಮಾಸ್ಕೊದಲ್ಲಿ ರಷ್ಯಾ ಅಧ್ಯಕ್ಷರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಇದರ ಬೆನ್ನಲ್ಲೇ ಪುಟಿನ್ ಹೇಳಿಕೆ ಹೊರಬಿದ್ದಿದ್ದು, ಇರಾನ್‌ಗೆ ರಷ್ಯಾದ ಬೆಂಬಲವನ್ನು ಪುನರುಚ್ಚರಿಸಿದ್ದಾರೆ.

ಇರಾನ್ ಜತೆಗಿನ ದೀರ್ಘಕಾಲದ ವಿಶ್ವಾಸಾರ್ಹ ಸಂಬಂಧವನ್ನು ಉಲ್ಲೇಖಿಸಿದ ಅವರು, ‘ಇರಾನ್ ಜನರಿಗೆ ಸಹಾಯ ಮಾಡಲು ಎಲ್ಲ ರೀತಿಯಿಂದಲೂ ಪ್ರಯತ್ನಿಸುತ್ತಿದ್ದೇವೆ’ ಎಂದರು. ಆದರೆ, ಇರಾನ್‌ಗೆ ಸೇನಾ ನೆರವು ಒದಗಿಸುವ ಕುರಿತು ಪುಟಿನ್ ಯಾವುದೇ ಹೇಳಿಕೆ ನೀಡಲಿಲ್ಲ.

ಕತಾರ್ ವಾಯು ಪ್ರದೇಶ ಬಂದ್: ವಿಮಾನ ಸಂಚಾರ ವ್ಯತ್ಯಯ

ಕೊಚ್ಚಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಆತಂಕದಿಂದಾಗಿ ಕತಾರ್‌ನ ವಾಯುಪ್ರದೇಶ ಮುಚ್ಚಲಾಗಿದೆ. ಇದರಿಂದ ಸೋಮವಾರ ಮಧ್ಯರಾತ್ರಿ ಕೇರಳದ ಕೊಚಿನ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹಲವು ವಿಮಾನಗಳು ವಿಳಂಬವಾದವು. ಕೆಲ ವಿಮಾನಗಳ ಸಂಚಾರ ರದ್ದು ಅಥವಾ ಮಾರ್ಗ ಬದಲಾವಣೆ ಮಾಡಲಾಯಿತು.

ಅಮೆರಿಕದ ಮೇಲೆ ಇರಾನ್ ಪ್ರತಿ ದಾಳಿಗೆ ಸಜ್ಜಾಗಿರುವ ಮಾಹಿತಿ ಹಿನ್ನೆಲೆಯಲ್ಲಿ ಕತಾರ್ ತನ್ನ ವಾಯುಪ್ರದೇಶ ಮುಚ್ಚಿದೆ.

ಸೋಮವಾರ ಸಂಜೆ 6.30ಕ್ಕೆ ದೋಹಾಕ್ಕೆ ಹೊರಟಿದ್ದ ಏರ್‌ಇಂಡಿಯಾ ಎಕ್ಸ್‌ಪ್ರೆಸ್ ವಿಮಾನವನ್ನು ಮಸ್ಕತ್‌ಗೆ ಕಡೆಗೆ ತಿರುಗಿಸಲಾಯಿತು. ಮಧ್ಯರಾತ್ರಿ 12.53ಕ್ಕೆ ನಿಗದಿಯಾಗಿದ್ದ ಏರ್ ಇಂಡಿಯಾದ ದೋಹಾ ವಿಮಾನ ಸಂಚಾರ ರದ್ದಾಯಿತು. ಅಬುದಾಬಿಗೆ ತೆರಳುತ್ತಿದ್ದ ಇತಿಹಾದ್ ವಿಮಾನ ವಾಪಸಾಯಿತು.

‘ಪರಿಸ್ಥಿತಿಯ ಮೇಲೆ ನಿಗಾ ಇಟ್ಟಿದ್ದೇವೆ. ಕತಾರ್‌ಗೆ ಯಾವುದೇ ವಿಮಾನ ಸಂಚರಿಸುತ್ತಿಲ್ಲ. ಕತಾರ್‌ನಲ್ಲಿ ಏರ್ ಇಂಡಿಯಾದ ವಿಮಾನ ಇಳಿದಿಲ್ಲ’ ಎಂದು ಸಂಸ್ಥೆ ತಿಳಿಸಿದೆ.

ಇರಾನ್‌ನಿಂದ 290 ಭಾರತೀಯರು ವಾಪಸ್: ನವದೆಹಲಿ (ಪಿಟಿಐ): ಸಂಘರ್ಷಪೀಡಿತ ಇರಾನ್‌ನಿಂದ 290 ಭಾರತೀಯ ಪ್ರಜೆಗಳು ಮತ್ತು ಒಬ್ಬ ಶ್ರೀಲಂಕಾ ಪ್ರಜೆಯನ್ನು ಸೋಮವಾರ ವಿಶೇಷ ವಿಮಾನದ ಮೂಲಕ ನವದೆಹಲಿಗೆ ಕರೆತರಲಾಯಿತು.

ಅಮೆರಿಕ ನೆಲೆಗಳ ಮೇಲೆ ದಾಳಿ

ಒಂದನೇ ಪುಟದಿಂದ...

ಸೌದಿ ಅರೇಬಿಯಾ ಖಂಡನೆ–ಕತಾರ್‌ಗೆ ಬೆಂಬಲ: ‘ಕತಾರ್ ಮೇಲೆ ಇರಾನ್ ದಾಳಿ ನಡೆಸಿರುವುದು ಸಮರ್ಥನೀಯವಲ್ಲ. ಈಗಿನ ಸ್ಥಿತಿ ಎದುರಿಸಲು ತನ್ನ ಎಲ್ಲ ಸಾಮರ್ಥ್ಯಗಳನ್ನು ಬಳಸಿಕೊಂಡು, ನೆರವು ನೀಡಲಾಗುವುದು’ ಎಂದು ಸೌದಿ ಅರೇಬಿಯಾ ಪ್ರತಿಕ್ರಿಯಿಸಿದೆ. ‘ಈ ದಾಳಿಯು ಸಮರ್ಥನೀಯವಲ್ಲ. ಯಾವುದೇ ನೆರವು ನೀಡಲು ಸಿದ್ಧರಿದ್ದೇವೆ’ ಎಂದು ಸೌದಿ ಅರೇಬಿಯಾ ವಿದೇಶಾಂಗ ಇಲಾಖೆಯು ಪ್ರಕಟಣೆಯಲ್ಲಿ ಹೇಳಿದೆ.

‘ಘಟಕದ ಭೇಟಿಗೆ ಅವಕಾಶ ನೀಡಿ’

‘ನಿಮ್ಮ ಪರಮಾಣು ಘಟಕಗಳ ಭೇಟಿಗೆ ಅವಕಾಶ ನೀಡಿ’ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ (ಐಎಇಎ) ನಿರ್ದೇಶಕ ರಾಫೆಲ್ ಗ್ರೋಸಿ ಅವರು ಇರಾನ್ ಅನ್ನು ಆಗ್ರಹಿಸಿದ್ದಾರೆ. ಸಂಸ್ಥೆಯ ವ್ಯವಸ್ಥಾಪಕ ಮಂಡಳಿಯ ತುರ್ತು ಸಭೆಯು ವಿಯೆನ್ನಾದಲ್ಲಿ ಸೋಮವಾರ ನಡೆಯಿತು.

‘ಫೋರ್ಡೊ ಘಟಕದ ಬಳಿ ದೊಡ್ಡ ದೊಡ್ಡ ಕುಳಿಗಳು ಬಿದ್ದಿವೆ. ಭೂಮಿ ಆಳಕ್ಕೆ ಹೋಗಿ ಸ್ಫೋಟಗೊಳ್ಳುವ ಭಾರಿ ಗಾತ್ರದ ಬಾಂಬ್‌ಗಳಿಂದಲೇ ಈ ಕುಳಿಗಳು ಬಿದ್ದಿವೆ ಎನ್ನುವುದು ಖಚಿತ. ಅಮೆರಿಕದ ದಾಳಿಯಿಂದ ಘಟಕಕ್ಕೆ ದೊಡ್ಡ ಮಟ್ಟದ ಹಾನಿಯಂತೂ ಆಗಿದೆ. ಏನೇ ಆದರೂ, ಆ ಸ್ಥಳಕ್ಕೆ ಭೇಟಿ ನೀಡದ ಹೊರತು ಹಾನಿಯ ಅಂದಾಜು ಅಸಾಧ್ಯ’ ಎಂದರು.

‘ನೀರು ಬಿಡದಿದ್ದರೆ ಭಾರತದ ಜತೆ ಯುದ್ಧ’

ಇಸ್ಲಾಮಾಬಾದ್ (ಪಿಟಿಐ): ‘ಸಿಂಧೂ ಜಲ ಒಪ್ಪಂದದ (ಐಡಬ್ಲ್ಯುಟಿ) ಅಡಿಯಲ್ಲಿ ಪಾಕಿಸ್ತಾನಕ್ಕೆ ಲಭಿಸಬೇಕಾದ ನೀರಿನ ಪಾಲನ್ನು ಭಾರತ ನಿರಾಕರಿಸಿದರೆ ನಮ್ಮ ದೇಶ ಯುದ್ಧಕ್ಕೆ ಇಳಿಯುತ್ತದೆ’ ಎಂದು ಪಾಕಿಸ್ತಾನದ ಮಾಜಿ ವಿದೇಶಾಂಗ ಸಚಿವ, ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಅಧ್ಯಕ್ಷ ಬಿಲಾವಲ್ ಭುಟ್ಟೊ ಜರ್ದಾರಿ ಸೋಮವಾರ ಎಚ್ಚರಿಸಿದ್ದಾರೆ.

ಬಿಲಾವಲ್ ಭುಟ್ಟೊ

‘ಭಾರತದ ಮುಂದೆ ಎರಡು ಆಯ್ಕೆಗಳಿವೆ: ನೀರನ್ನು ನ್ಯಾಯಯುತವಾಗಿ ಹಂಚಿಕೊಳ್ಳಿ ಅಥವಾ ಆರು ನದಿಗಳ ನೀರು ಪಾಕ್‌ಗೆ ಹರಿಸುವ ಕೆಲಸವನ್ನು ನಾವೇ ಮಾಡುತ್ತೇವೆ’ ಎಂದು ಸಿಂಧೂ ಜಲಾನಯನ ಪ್ರದೇಶದ ಆರು ನದಿಗಳನ್ನು ಉಲ್ಲೇಖಿಸಿ ಅವರು ಹೇಳಿದ್ದಾರೆ.

‘ಸಿಂಧೂ ಜಲ ಒಪ್ಪಂದ ಅಮಾನತಿನಲ್ಲಿರಿಸುವ ಭಾರತದ ನಿರ್ಧಾರ ಕಾನೂನುಬಾಹಿರವಾಗಿದೆ. ನೀರು ಹರಿಸುವುದನ್ನು ನಿಲ್ಲಿಸುವ ಬೆದರಿಕೆಯು ವಿಶ್ವಸಂಸ್ಥೆಯ ನಿಯಮಗಳಿಗೆ ವಿರುದ್ಧವಾಗಿದೆ’ ಎಂದಿದ್ದಾರೆ.

ಏಪ್ರಿಲ್ 22ರ ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬೆನ್ನಲ್ಲೇ ಭಾರತವು ಸಿಂಧೂ ಜಲ ಒಪ್ಪಂದವನ್ನು ಅಮಾನತಿನಲ್ಲಿರಿಸುವ ನಿರ್ಧಾರ ತೆಗೆದುಕೊಂಡಿತ್ತು. ಸಿಂಧೂ ನದಿ ಜಲಾನಯನ ಪ್ರದೇಶದ ಆರು ನದಿಗಳ ನೀರನ್ನು ಹಂಚಿಕೊಳ್ಳಲು ಎರಡೂ ದೇಶಗಳು 1960ರಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ್ದವು.

ವಾಯುಪ್ರದೇಶ ನಿರ್ಬಂಧ ಮುಂದುವರಿಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನವು ತನ್ನ ವಾಯುಪ್ರದೇಶದಲ್ಲಿ ಭಾರತದ ವಿಮಾನಗಳ ಹಾರಾಟಕ್ಕೆ ವಿಧಿಸಿರುವ ನಿರ್ಬಂಧವನ್ನು ಇನ್ನೊಂದು ತಿಂಗಳು ವಿಸ್ತರಿಸಿದೆ.

ಭಾರತದ ಜತೆಗಿನ ಸಂಘರ್ಷದ ಬೆನ್ನಲ್ಲೇ ಪಾಕಿಸ್ತಾನವು ಈ ನಿರ್ಬಂಧ ಹೇರಿತ್ತು. ಮೇ 23ರವರೆಗೆ ವಿಧಿಸಿದ್ದ ನಿರ್ಬಂಧವನ್ನು ಮೊದಲು ಜೂನ್ 23ರವರೆಗೆ ವಿಸ್ತರಿಸಿತ್ತು. ಇದೀಗ ಇನ್ನೊಂದು ತಿಂಗಳು ವಿಸ್ತರಿಸಿದ್ದು, ನಿರ್ಬಂಧವು ಜುಲೈ 23ರ ವರೆಗೆ ಮುಂದುವರಿಯಲಿದೆ ಎಂದು ಪಾಕ್ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,112
ಇಂದಿನ ಅಂತ್ಯ:	24,971
ದಿನದ ಗರಿಷ್ಠ:	24,824
	▼ 140

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹595
	12 ಕ್ಕೆ	₹80
ಮೈಸೂರು:	100 ಕ್ಕೆ	₹600

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹277-515
ದ್ವಿತಳಿ (ಬಿ.ವಿ)	₹335-675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹196
ಆರ್‌ಎಸ್‌ಎಸ್-5	₹190
ಗುಡ್ ಲಾಟ್	₹179

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹12000-20200
ದಾವಣಗೆರೆ	₹18500-18500
ತಿಪಟೂರು	₹23000-26167

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1400 (1390)
ಸೋಯಾ (ರಿಫೈನ್ಡ್)	₹1215 (1205)
ಸೂರ್ಯಕಾಂತಿ (ರಿಫೈನ್ಡ್)	₹1360 (1350)
ಪಾಮೋಲಿನ್	₹1210 (1190)

ಮುಂಬೈ ಧಾರಣೆ (ಶೇಂಗಾ)

23-06-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1410 (1400)
ಒಂದು ವಾರದ ಡೆಲಿವರಿ	1405 (1395)
ಪಾಮ್ ವಾರದ ಡೆಲಿವರಿ	1208 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1270)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,800 (98,650)
ಬೆಳ್ಳಿ ಕೆ.ಜಿಗೆ	1,06,300 (1,06,650)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560

ಉದ್ದಿಮೆ ಚಟುವಟಿಕೆ ಚುರುಕು

ಮಾರುಕಟ್ಟೆಗಳಲ್ಲಿ ಬೇಡಿಕೆ ಹೆಚ್ಚಿದ ಪರಿಣಾಮ ಜೂನ್‌ನಲ್ಲಿ ಸೂಚ್ಯಂಕ ಏರಿಕೆ

ಬೆಂಗಳೂರು (ರಾಯಿಟರ್ಸ್): ದೇಶದ ಖಾಸಗಿ ವಲಯದ ಉದ್ದಿಮೆಗಳ ಚಟುವಟಿಕೆಗಳು ಜೂನ್ ತಿಂಗಳಲ್ಲಿ ಚುರುಕು ಪಡೆದುಕೊಂಡಿವೆ. ದೇಶದ ಹಾಗೂ ವಿದೇಶಗಳ ಮಾರುಕಟ್ಟೆಗಳಲ್ಲಿನ ಬೇಡಿಕೆಗಳಿಗೆ ಸ್ಪಂದಿಸಲು ಕಂಪನಿಗಳು ಉತ್ಪಾದನೆಯನ್ನು ಹೆಚ್ಚಿಸಿದ ಪರಿಣಾಮವಾಗಿ ಚಟುವಟಿಕೆ ಹೆಚ್ಚಾಗಿದೆ ಎಂದು ಸಮೀಕ್ಷೆಯೊಂದು ಹೇಳಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ನಿರ್ವಹಿಸುವ ‘ಎಚ್‌ಎಸ್‌ಬಿಸಿ ಫ್ಲ್ಯಾಶ್ ಇಂಡಿಯಾ ಕಾಂಪೊಸಿಟ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ’ವು ಜೂನ್ ತಿಂಗಳಲ್ಲಿ 14 ತಿಂಗಳುಗಳ ಗರಿಷ್ಠ ಮಟ್ಟವಾದ 61ಕ್ಕೆ ತಲುಪಿದೆ. ಇದು ಮೇ ತಿಂಗಳಿನಲ್ಲಿ 59.3ರಲ್ಲಿ ಇತ್ತು.

ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಗುರುತಿಸಲಾಗುತ್ತದೆ.

ಸೇವಾ ವಲಯದ ಚಟುವಟಿಕೆಗಳು ಜೂನ್‌ನಲ್ಲಿ ಹೆಚ್ಚಳ ಕಂಡಿವೆ. ಸೇವಾ ವಲಯದ ಬೆಳವಣಿಗೆಯನ್ನು ತೋರಿಸುವ ಸೂಚ್ಯಂಕವು ಜೂನ್‌ನಲ್ಲಿ 60.7ಕ್ಕೆ ಏರಿಕೆ ಕಂಡಿದೆ. ತಯಾರಿಕಾ ವಲಯದ ಬೆಳವಣಿಗೆಯನ್ನು ಬಿಂಬಿಸುವ ಸೂಚ್ಯಂಕವು ಜೂನ್‌ನಲ್ಲಿ 58.4ಕ್ಕೆ ಏರಿಕೆ ಆಗಿದೆ.

‘ರಫ್ತು ಬೇಡಿಕೆ ಹೆಚ್ಚಿರುವುದು ಖಾಸಗಿ ವಲಯದ ಚಟುವಟಿಕೆಗಳು ಹೆಚ್ಚಿನ ಮಟ್ಟದಲ್ಲಿ ಇರುವುದಕ್ಕೆ ನೆರವಾಗಿದೆ, ಅದರಲ್ಲೂ ಮುಖ್ಯವಾಗಿ ತಯಾರಿಕಾ ವಲಯದಲ್ಲಿ ಬೇಡಿಕೆ ಹೆಚ್ಚು ಬಂದಿದೆ’ ಎಂದು ಎಚ್‌ಎಸ್‌ಬಿಸಿ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಮಾರಾಟ ಚಟುವಟಿಕೆಗಳಲ್ಲಿ ಏರಿಕೆ ಕಂಡುಬಂದಿದೆ. ಹೊಸ ರಫ್ತು ವಹಿವಾಟುಗಳು 2014ರ ನಂತರದ ಅತ್ಯಂತ ಹೆಚ್ಚಿನ ಮಟ್ಟದಲ್ಲಿವೆ.

ಮುಖ್ಯಾಂಶಗಳು

- 14 ತಿಂಗಳ ಗರಿಷ್ಠ ಮಟ್ಟಕ್ಕೆ ಸೂಚ್ಯಂಕ ಏರಿಕೆ
- ಕಂಪನಿಗಳಿಂದ ನೇಮಕಾತಿ ಹೆಚ್ಚಳ
- ಚುರುಕು ಪಡೆದ ರಫ್ತು ವಹಿವಾಟು

ಆದರೆ ಸೇವಾ ವಲಯದ ಕಂಪನಿಗಳ ರಫ್ತು ವಹಿವಾಟುಗಳ ಏರಿಕೆಯು ಮಂದಗತಿಯಲ್ಲಿ ಇತ್ತು.

‘ಜಾಗತಿಕ ಮಾರುಕಟ್ಟೆಗಳಲ್ಲಿ ಬೇಡಿಕೆ ಹೆಚ್ಚಾಗಿರುವ ಕಾರಣದಿಂದಾಗಿ ತಯಾರಿಕಾ ವಲಯದ ಕಂಪನಿಗಳು ದೇಶದಲ್ಲಿ ನೇಮಕಾತಿಯನ್ನು ಹೆಚ್ಚು ಮಾಡಿವೆ’ ಎಂದು ಭಂಡಾರಿ ಹೇಳಿದ್ದಾರೆ.

ಪಶ್ಚಿಮ ಏಷ್ಯಾದ ಬಿಕ್ಕಟ್ಟು ಷೇರು ಸೂಚ್ಯಂಕಗಳ ಇಳಿಕೆ

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಬಿಕ್ಕಟ್ಟು ಮತ್ತು ಇರಾನ್‌ನ ಮೂರು ಪ್ರಮುಖ ಪರಮಾಣು ಸ್ಥಾವರಗಳ ಮೇಲೆ ಅಮೆರಿಕ ನಡೆಸಿದ ಬಾಂಬ್ ದಾಳಿಯು ಹೂಡಿಕೆದಾರರು ಭೀತಿಗೆ ನೂಕಿದೆ. ಹೀಗಾಗಿ, ಸೋಮವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆ ಆಗಿದೆ. ಇದರ ಜೊತೆಗೆ, ಐ.ಟಿ, ತಂತ್ರಜ್ಞಾನ ಮತ್ತು ಆಟೊ ವಲಯದ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ ಕಾರಣದಿಂದಾಗಿ ಸೂಚ್ಯಂಕಗಳು ಇಳಿಕೆ ದಾಖಲಿಸಿದವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 511 ಅಂಶ ಇಳಿಕೆಯಾಗಿ, 81,896ಕ್ಕೆ ವಹಿವಾಟು ಅಂತ್ಯಗೊಂಡಿದೆ. ದಿನದ ವಹಿವಾಟಿನ ವೇಳೆ ಸೆನ್ಸೆಕ್ಸ್ 931 ಅಂಶಗಳವರೆಗೂ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 140 ಅಂಶ ಕಡಿಮೆಯಾಗಿ, 24,971ಕ್ಕೆ ಕೊನೆಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.49ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರೆಲ್‌ಗೆ ದರವು 77.39 ಡಾಲರ್ ಆಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಶುಕ್ರವಾರದ ವಹಿವಾಟಿನಲ್ಲಿ ₹7,940 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 23 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹86.78 ಆಗಿದೆ. ಇದು ಐದು ತಿಂಗಳ ಕನಿಷ್ಠ ಮಟ್ಟವಾಗಿದೆ. ಇರಾನ್‌ನ ಪರಮಾಣು ಸ್ಥಾವರಗಳ ಮೇಲೆ ಅಮೆರಿಕದ ದಾಳಿಯಿಂದ ಡಾಲರ್ ಮೌಲ್ಯದಲ್ಲಿ ಏರಿಕೆಯಾಗಿದೆ ಮತ್ತು ಕಚ್ಚಾ ತೈಲದ ಬೆಲೆ ಚಂಚಲವಾಗಿದೆ. ದೇಶದ ಷೇರು ಸೂಚ್ಯಂಕ ಇಳಿಕೆ ಸಹ ರೂಪಾಯಿ ಮೌಲ್ಯ ಕಡಿಮೆಯಾಗಲು ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

₹13 ಸಾವಿರ ಕೋಟಿ ಸಂಗ್ರಹಿಸಲು ಫೋನ್‌ಪೇ ಸಿದ್ಧತೆ?

ಬೆಂಗಳೂರು/ ನವದೆಹಲಿ (ರಾಯಿಟರ್ಸ್ /ಪಿಟಿಐ): ವಾಲ್‌ಮಾರ್ಟ್ ಮಾಲೀಕತ್ವದ ಭಾರತದ ಹಣಕಾಸು ತಂತ್ರಜ್ಞಾನ ಕಂಪನಿ ‘ಫೋನ್‌ಪೇ’ ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ₹13 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಸಿದ್ಧತೆ ನಡೆಸಿದೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ಆಗಸ್ಟ್ ತಿಂಗಳಿನಲ್ಲಿ ಐಪಿಒ ಅರ್ಜಿಯನ್ನು ಸಲ್ಲಿಸಲು ಕಂಪನಿ ಯೋಜಿಸಿದೆ ಎಂದು ತಿಳಿಸಿವೆ.

ಕೋಟಕ್ ಮಹೀಂದ್ರ ಕ್ಯಾಪಿಟಲ್, ಜೆಪಿಮಾರ್ಗನ್ ಚೇಸ್, ಸಿಟಿಗ್ರೂಪ್ ಮತ್ತು ಮಾರ್ಗನ್ ಸ್ಟ್ಯಾನ್ಲಿಯನ್ನು ಐಪಿಒ ಪ್ರಕ್ರಿಯೆಗಾಗಿ ನೇಮಕ ಮಾಡಿಕೊಂಡಿದೆ. ಐಪಿಒ ವಿವರ ಇದುವರೆಗೆ ಅಂತಿಮಗೊಂಡಿಲ್ಲ ಎಂದು ತಿಳಿಸಿವೆ.

ಈ ಕುರಿತು ಫೋನ್‌ಪೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ. ವಾಲ್‌ಮಾರ್ಟ್ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ ಎಂದು ರಾಯಿಟರ್ಸ್ ತಿಳಿಸಿದೆ.

2016ರಲ್ಲಿ ಆರಂಭವಾದ ಫೋನ್‌ಪೇ ಇದುವರೆಗೆ ₹18 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿದೆ.

61 ಕೋಟಿಗೂ ಹೆಚ್ಚು ನೋಂದಾಯಿತ ಬಳಕೆದಾರರು ಮತ್ತು 4 ಕೋಟಿಗೂ ಅಧಿಕ ವ್ಯಾಪಾರಿಗಳು ಫೋನ್‌ಪೇ ಬಳಸುತ್ತಿದ್ದಾರೆ.

ಇಸ್ರೇಲ್–ಇರಾನ್ ಬಿಕ್ಕಟ್ಟು ಬಂದರಿನಲ್ಲಿ 1 ಲಕ್ಷ ಟನ್ ಬಾಸ್ಮತಿ ಅಕ್ಕಿ

ನವದೆಹಲಿ (ಪಿಟಿಐ): ಇರಾನ್‌ಗೆ ರಫ್ತಾಗಬೇಕಿದ್ದ ಅಂದಾಜು 1 ಲಕ್ಷ ಟನ್ ಬಾಸ್ಮತಿ ಅಕ್ಕಿ ಇಸ್ರೇಲ್–ಇರಾನ್ ಸಂಘರ್ಷದಿಂದಾಗಿ ದೇಶದ ಬಂದರುಗಳಲ್ಲಿ ಉಳಿದುಕೊಂಡಿದೆ ಎಂದು ಅಖಿಲ ಭಾರತ ಅಕ್ಕಿ ರಫ್ತುದಾರರ ಸಂಘದ (ಎಐಆರ್‌ಇಎ) ಅಧ್ಯಕ್ಷ ಸತೀಶ್ ಗೋಯೆಲ್ ಸೋಮವಾರ ಹೇಳಿದ್ದಾರೆ.



ದೇಶದ ಒಟ್ಟು ಬಾಸ್ಮತಿ ಅಕ್ಕಿ ರಫ್ತಿನಲ್ಲಿ ಇರಾನ್ ಶೇ 18ರಿಂದ ಶೇ 20ರಷ್ಟು ಪಾಲನ್ನು ಹೊಂದಿದೆ. ಗುಜರಾತ್‌ನ ಕಾಂಡ್ಲಾ ಮತ್ತು ಮುಂದ್ರಾ ಬಂದರಿನ ಮೂಲಕ ಈ ಸಾಗಣೆ ನಡೆಯುತ್ತದೆ ಎಂದು ಹೇಳಿದ್ದಾರೆ.

ನೌಕೆಗಳ ವಿಮಾ ಮಾನದಂಡದ ಪ್ರಕಾರ, ಅಂತರರಾಷ್ಟ್ರೀಯ ಬಿಕ್ಕಟ್ಟು ವಿಮೆ ವ್ಯಾಪ್ತಿಗೆ ಒಳಪಡುವುದಿಲ್ಲ. ಹೀಗಾಗಿ ರಫ್ತುದಾರರಿಗೆ ಸರಕು ಸಾಗಣೆ ಮಾಡಲು ಸಾಧ್ಯವಾಗುತ್ತಿಲ್ಲ. ಸಾಗಣೆಯಲ್ಲಿನ ವಿಳಂಬ ಮತ್ತು ಪಾವತಿ ವಿಚಾರವಾಗಿನ ಅನಿಶ್ಚಿತತೆಯು ಹಣಕಾಸಿನ ಸಮಸ್ಯೆಗಳನ್ನು ಸೃಷ್ಟಿಸಬಹುದು. ದೇಶದ ಮಾರುಕಟ್ಟೆಯಲ್ಲಿ ಬಾಸ್ಮತಿ ಅಕ್ಕಿ ದರ ಕೆ.ಜಿಗೆ ₹4ರಿಂದ ₹5 ಇಳಿಕೆ ಆಗಿದೆ ಎಂದು ತಿಳಿಸಿದ್ದಾರೆ.

ಸಾಗಣೆಯಲ್ಲಿ ಅಡಚಣೆ ಉಂಟಾದರೆ ಪಾವತಿಯಲ್ಲಿ ವಿಳಂಬವಾಗುವುದು ಮತ್ತು ಅಂತರರಾಷ್ಟ್ರೀಯ ನಿರ್ಬಂಧದಿಂದಾಗಿ ಇರಾನ್ ಮಾರುಕಟ್ಟೆಯಲ್ಲಿ ಕರೆನ್ಸಿ ಸಮಸ್ಯೆಯನ್ನು ಈ ಹಿಂದೆ ಭಾರತದ ಅಕ್ಕಿ ರಫ್ತುಗಾರರು ಎದುರಿಸಿದ್ದಾರೆ ಎಂದು ತಿಳಿಸಿದ್ದಾರೆ.

₹26 ಸಾವಿರ ದಾಟಿದ ಕೊಬ್ಬರಿ ಬೆಲೆ

ಪ್ರಜಾವಾಣಿ ವಾರ್ತೆ

ತುಮಕೂರು: ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಕ್ವಿಂಟಲ್ ಉಂಡೆ ಕೊಬ್ಬರಿ ಧಾರಣೆ ₹26 ಸಾವಿರದ ಗಡಿ ದಾಟುವ ಮೂಲಕ ಹೊಸ ದಾಖಲೆ ಬರೆದಿದೆ.

ಉಂಡೆ ಕೊಬ್ಬರಿ ಕ್ವಿಂಟಲ್‌ಗೆ ಗರಿಷ್ಠ ₹26,167ಕ್ಕೆ ಮಾರಾಟವಾಗಿದ್ದು, ಮಾದರಿ ₹25,300, ಕನಿಷ್ಠ ₹23 ಸಾವಿರ ಬೆಲೆ ಸಿಕ್ಕಿದೆ. ತಿಪಟೂರು ಎಪಿಎಂಸಿಯಲ್ಲಿ 3,351 ಕ್ವಿಂಟಲ್ (7795 ಚೀಲ) ಆವಕವಾಗಿತ್ತು.

ಮಾರ್ಚ್‌ನಿಂದ ಕೊಬ್ಬರಿಗೆ ಉತ್ತಮ ಧಾರಣೆ ಸಿಗುತ್ತಿದ್ದರೂ ರೈತರ ಬಳಿ ಹೆಚ್ಚಿನ ಪ್ರಮಾಣದಲ್ಲಿ ಕೊಬ್ಬರಿ ದಾಸ್ತಾನು ಇಲ್ಲ. ಹಾಗಾಗಿ ಬೆಲೆ ಏರಿಕೆಯ ಲಾಭ ರೈತರಿಗೆ ಸಿಗುತ್ತಿಲ್ಲ. ಮುಂದಿನ ದಿನಗಳಲ್ಲಿ ಧಾರಣೆ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ವರ್ತಕರು ಹೇಳುತ್ತಾರೆ.

ಮೇ ಅಂತ್ಯದಲ್ಲಿ ₹20 ಸಾವಿರ ದಾಟಿದ್ದ ಕ್ವಿಂಟಲ್ ಕೊಬ್ಬರಿ ಜೂನ್ ಮೊದಲ ವಾರ ₹22 ಸಾವಿರ, ಜೂನ್ ಮಧ್ಯದಲ್ಲಿ ₹24 ಸಾವಿರಕ್ಕೆ ಏರಿಕೆಯಾಗಿತ್ತು. ಒಂದು ತಿಂಗಳ ಅಂತರದಲ್ಲಿ ಕ್ವಿಂಟಲ್‌ಗೆ ₹5 ಸಾವಿರ ಹೆಚ್ಚಳವಾದಂತಾಗಿದೆ.

ಮಾರುಕಟ್ಟೆಯಲ್ಲಿ ಕಡಿಮೆಯಾಗುತ್ತಿರುವ ಆವಕ, ಬೇಡಿಕೆಗೆ ತಕ್ಕಂತೆ ಪೂರೈಕೆಯಾಗದ ಕೊಬ್ಬರಿ, ಉತ್ತರ ಭಾರತದಲ್ಲಿ ಬೇಡಿಕೆ ಹೆಚ್ಚಳ, ತೆಂಗು ಬೆಳೆಯುವ ಕೇರಳ, ತಮಿಳುನಾಡಿನಲ್ಲೂ ಇಳುವರಿ ಕುಸಿತ ಹಾಗೂ ಹರಾಜು ಪ್ರಕ್ರಿಯೆಯಲ್ಲಿ ತಂದ ಬದಲಾವಣೆ ಬೆಲೆ ಹೆಚ್ಚಳಕ್ಕೆ ಕಾರಣ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

ಅಡಿಕೆ ಧಾರಣೆ

ಮಾರುಕಟ್ಟೆ	ವಿಧ	ಧಾರಣೆ
ಕಾರ್ಕಳ	ಹೊಸತು	25000-47500
ಕುಮಟಾ	ಚಾಲಿ	38569-42719
	ಚಿಪ್ಪು	23869-30109
	ಕೋಕ	7089-20129
	ಫ್ಯಾಕ್ಟರಿ	5099-24300
	ಹೊಸಚಾಲಿ	35500-42603
ಪುತ್ತೂರು	ಕೋಕ	20000-30500
	ಹೊಸತು	26000-47500
ಸಾಗರ	ಬಿಳಿಗೋಟು	7666-24170
	ಚಾಲಿ	13214-36219
	ಕೋಕ	8100-21822
	ಕೆಂಪುಗೋಟು	21419-28399
	ರಾಶಿ	23099-56799
	ಸಿಪ್ಪೆಗೋಟು	6899-17811
ಶಿವಮೊಗ್ಗ	ಬೆಟ್ಟೆ	50009-59719
	ಗೊರಬಲು	19116-30199
	ರಾಶಿ	40009-57011
	ಸರಕು	55169-96596
ಸಿದ್ದಾಪುರ	ಬಿಳಿಗೋಟು	24900-30899
	ಚಾಲಿ	33869-40099
	ಕೋಕ	16699-22699
	ಕೆಂಪುಗೋಟು	21800-23119
	ರಾಶಿ	42099-45099
	ತಟ್ಟಿಬೆಟ್ಟೆ	28119-42099
ಶಿರಸಿ	ಬೆಟ್ಟೆ	22899-37499
	ಬಿಳಿಗೋಟು	21899-31699
	ಚಾಲಿ	35039-42399
	ರಾಶಿ	41196-46899
ಯಲ್ಲಾಪುರ	ಬಿಳಿಗೋಟು	16099-32400
	ಚಾಲಿ	30290-40777
	ಕೋಕ	8899-18299
	ಕೆಂಪುಗೋಟು	16809-25299
	ರಾಶಿ	39199-51419
	ತಟ್ಟಿಬೆಟ್ಟೆ	27701-38100

CASAGRAND building aspirations Presents
ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ
Powered by TRENDS
Special Partner
SHREE SAI GOLD PALACE

ಚೊಚ್ಚಲ ನಿರ್ದೇಶನದಲ್ಲಿ ಗೆಲ್ಲುವವರಾರು?

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಮೂರನೇ ಆವೃತ್ತಿಯ ಸಮಾರಂಭ ಜೂನ್ 27ರಂದು ನಡೆಯಲಿದೆ. 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ 'ಅತ್ಯುತ್ತಮ ಚೊಚ್ಚಲ ನಿರ್ದೇಶನ' ವಿಭಾಗದಲ್ಲಿ ನಾಮನಿರ್ದೇಶನಗೊಂಡವರನ್ನು ಪರಿಚಯಿಸುವ ಸಮಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ.

https://www.prajavani.net/cinesamman/season3

ಮಿಥಿಲೇಷ್ ಎಡವಲತ್

'ರೂಪಾಂತರ' ಸಿನಿಮಾ ನಿರ್ದೇಶನಕ್ಕಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಎಂಬಿಎ ಪದವೀಧರರಾಗಿರುವ ಇವರು ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಕೆಲಸ ಮಾಡಿ ಸಿನಿ ಪಯಣದಲ್ಲಿ ಹೆಜ್ಜೆ ಹಾಕಿದವರು. ಕೇರಳದಿಂದ 2004ರಲ್ಲಿ ಬೆಂಗಳೂರಿಗೆ ಬಂದ ಇವರು ಕನ್ನಡ ಮತ್ತು ಮಲಯಾಳ ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಾ ಕಿರುಚಿತ್ರಗಳಲ್ಲಿ ತೊಡಗಿಸಿಕೊಂಡರು. ತಾವು ವಾಸಿಸುತ್ತಿರುವ ಬೆಂಗಳೂರನ್ನೇ ತಮ್ಮ ಮೊದಲ ಸಿನಿಮಾದ ವೇದಿಕೆಯಾಗಿಸಿದರು. ರಾಜಧಾನಿಯಲ್ಲಿ ಕಂಡ ವ್ಯಕ್ತಿಗಳೇ ಇವರ ಸಿನಿಮಾದ ಪಾತ್ರಗಳಾದವು. ಚಿತ್ರಣಗಳು ಕಥಾರೂಪ ಪಡೆದವು. ಬರವಣಿಗೆಯತ್ತ ಹೊರಳಿ 'ರೂಪಾಂತರ' ಕಥೆ ಬರೆದರು. ಇಂಗ್ಲಿಷ್‌ನಲ್ಲಿ ಇವರು ಬರೆದಿದ್ದ ಈ ಚಿತ್ರದ ಕಥೆಗೆ ನಟ ರಾಜ್ ಬಿ.ಶೆಟ್ಟಿ ಸಂಭಾಷಣೆ ಮತ್ತು ಹೆಚ್ಚುವರಿ ಚಿತ್ರಕಥೆ ಬರೆದಿದ್ದರು. ಬರವಣಿಗೆಯ ಶಕ್ತಿ ಪ್ರದರ್ಶಿಸಿದ್ದ 'ರೂಪಾಂತರ' ಸಿನಿಮಾ ನಾಲ್ಕು ಕಥೆಗಳ ಗುಚ್ಛ. ಅದನ್ನು ಭಿನ್ನವಾಗಿ ಪೋಣಿಸಿ ಪ್ರೇಕ್ಷಕರ ಎದುರಿಗೆ ಇರಿಸಿ ಮೆಚ್ಚುಗೆ ಪಡೆದಿದ್ದರು ಮಿಥಿಲೇಷ್.

ರಾಘವೇಂದ್ರ ಎಂ.ನಾಯ್ಕ್

'ಮಾರಿಗೋಲ್ಡ್' ಚಿತ್ರದ ನಿರ್ದೇಶನಕ್ಕಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ಚಿತ್ರರಂಗದ ಹಲವು ವಿಭಾಗಗಳಲ್ಲಿ ಕೆಲಸ ಮಾಡಿದ ಅನುಭವ ಇವರಿಗೆ ಇದೆ. ಸಿನಿಮಾರಂಗದಲ್ಲಷ್ಟೇ ಅಲ್ಲದೆ ಜಾಹೀರಾತು ಮತ್ತು ಸಾಕ್ಷ್ಯಚಿತ್ರಗಳನ್ನು ಇವರು ನಿರ್ದೇಶನ ಮಾಡಿದ್ದಾರೆ. ತಮ್ಮ ಮೊದಲ ಚಿತ್ರದಲ್ಲೇ ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನಲ್ಲಿ ನೋಟು ಅಮಾನ್ಯೀಕರಣದ ಸಂದರ್ಭದಲ್ಲಿ ನಡೆಯುವ ಕಾಲ್ಪನಿಕ ಕಥೆಯನ್ನು ಪ್ರೇಕ್ಷಕರ ಎದುರಿಗೆ ಇಟ್ಟಿದ್ದರು. ಈ ಚಿತ್ರದ ಮೂಲಕ ದಿಗಂತ್‌ಗೆ ಭಿನ್ನವಾದ ಒಂದು ಪಾತ್ರ ಬರೆದಿದ್ದರು.

ಶ್ರೀನಿಧಿ ಬೆಂಗಳೂರು

'ಬ್ಲಿಂಕ್' ಸಿನಿಮಾ ನಿರ್ದೇಶನಕ್ಕಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಈಗಷ್ಟೇ ಬೆರಗುಗಣ್ಣಿನಿಂದ ಸಿನಿಮಾ ಪ್ರಪಂಚವನ್ನು ನೋಡುತ್ತಿರುವ ಶ್ರೀನಿಧಿ ನಾಟಕಗಳ ಬರವಣಿಗೆಯ ಮೂಲಕ ಬಣ್ಣದ ಪ್ರಪಂಚಕ್ಕೆ ಹೆಜ್ಜೆ ಇಟ್ಟವರು. ಬೆಂಗಳೂರಿನಲ್ಲೇ ಬೆಳೆದ ಇವರಿಗೆ ಬಾಲ್ಯದಲ್ಲೇ ಚಿತ್ರರಂಗದ ಸೆಳೆತವಿತ್ತು. ರಂಗಭೂಮಿಯನ್ನು ಬದುಕಿನ ಭಾಗವಾಗಿಸಿದ್ದ ಇವರು 600ಕ್ಕೂ ಅಧಿಕ ನಾಟಕಗಳಲ್ಲಿ ನಟಿಸಿದ್ದಾರೆ. ಅಭಿಜ್ಞಾ ರಂಗತಂಡ ಕಟ್ಟಿದ್ದಾರೆ. ಜೊತೆಗೆ ಪುಸ್ತಕ ಪ್ರೇಮಿಯೂ ಹೌದು. ಭಾರತದ ಮೊದಲ ಮ್ಯೂಸಿಕಲ್ ಸೈಫೈ ಥ್ರಿಲ್ಲರ್ ಸಿನಿಮಾವಾಗಿ 'ಬ್ಲಿಂಕ್' ಅನ್ನು ಪ್ರೇಕ್ಷಕರ ಎದುರಿಗಿಟ್ಟು ಪ್ರಶಂಸೆಗಿಟ್ಟಿಸಿಕೊಂಡವರು. ಅವರ ರಂಗಭೂಮಿ ಗೆಳೆಯರೇ ಸೇರಿ ಈ ಸಿನಿಮಾ ನಿರ್ಮಾಣ ಮಾಡಿದ್ದರು. ಟೈಂ ಟ್ರಾವೆಲ್ ಡ್ರಾಮಾ ಮೂಲಕ ತಮ್ಮೊಳಗಿನ ನಿರ್ದೇಶನದ ಸಾಮರ್ಥ್ಯವನ್ನು ಶ್ರೀನಿಧಿ ತೆರೆದಿಟ್ಟಿದ್ದರು. ಸಂಕಲನ, ಛಾಯಾಚಿತ್ರಗ್ರಹಣ ಹಾಗೂ ಸಂಗೀತದ ಹದವಾದ ಮಿಶ್ರಣದ ಮೂಲಕ ಭಿನ್ನವಾದ ಚಿತ್ರವನ್ನು ನೀಡಿದ್ದರು. ಸದ್ಯ ದೀಕ್ಷಿತ್ ಶೆಟ್ಟಿ ನಟನೆಯ 'ವಿಡಿಯೊ' ಎಂಬ ಸಿನಿಮಾವನ್ನು ತೆರೆಗೆ ತರುವ ಸಿದ್ಧತೆಯಲ್ಲಿದ್ದಾರೆ ಶ್ರೀನಿಧಿ.

ಸಂದೀಪ್ ಸುಂಕದ್

'ಶಾಖಾಹಾರಿ' ಸಿನಿಮಾ ನಿರ್ದೇಶನಕ್ಕಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಶಿವಮೊಗ್ಗದ ಸಂದೀಪ್, 'ಕಾಗುಣಿತ' ಎಂಬ ಕಿರುಚಿತ್ರದಿಂದ ಈ ಬಣ್ಣದ ಲೋಕದ ಪಯಣ ಆರಂಭಿಸಿದರು. 'ಮಠ', 'ಎದ್ದೇಳು ಮಂಜುನಾಥ' ಸಿನಿಮಾಗಳ ಸ್ಕ್ರಿಪ್ಟ್ ಪುಸ್ತಕಗಳು ಕೈಸೇರಿದಾಗ ಸಿನಿಮಾ ಹುಚ್ಚು ಹತ್ತಿಸಿಕೊಂಡ ಇವರು ಸಿನಿಮಾ ಬರವಣಿಗೆಯತ್ತ ಮೊದಲ ಹೆಜ್ಜೆ ಇಟ್ಟದ್ದು ಇಲ್ಲಿಂದಲೇ. ತಮ್ಮ ಮೊದಲ ಸಿನಿಮಾದಲ್ಲೇ ನಟರಾದ ರಂಗಾಯಣ ರಘು ಹಾಗೂ ಗೋಪಾಲಕೃಷ್ಣ ದೇಶಪಾಂಡೆ ಅವರಂಥ ಖ್ಯಾತ ನಟರಿಗೆ ನಿರ್ದೇಶನ ಮಾಡಿದವರು. ಚೊಚ್ಚಲ ಚಿತ್ರದಲ್ಲೇ ನಾಟಕದ ಒಂದೆಳೆಯನ್ನು ಹಿಡಿದು ಭಿನ್ನವಾದ ಒಂದು ಕಥಾಲೋಕವನ್ನು ಸೃಷ್ಟಿಸಿ ಜಿಹ್ವಾನಂದ ನೀಡಿದರು. ಆರಂಭಿಕ ಹೆಜ್ಜೆಯಲ್ಲೇ ಸಿದ್ಧಸೂತ್ರದಿಂದ ದೂರವಿದ್ದು, ಅಚ್ಚುಕಟ್ಟಾದ ಸಿನಿಮಾ ಕಟ್ಟಿ ನಿರ್ದೇಶನದ ಮೇಲಿನ ಬದ್ಧತೆ ತೋರಿದವರು. ಸದ್ಯ ಗೀತಾ ಶಿವರಾಜ್‌ಕುಮಾರ್ ನಿರ್ಮಾಣದ ಧೀರೆನ್ ನಟನೆಯ 'ಪಬ್ಬಾರ್' ಸಿನಿಮಾದ ಚಿತ್ರೀಕರಣದಲ್ಲಿ ಸಂದೀಪ್ ತೊಡಗಿಸಿಕೊಂಡಿದ್ದಾರೆ.

ಚಂದ್ರಜಿತ್ ಬೆಳ್ಳಪ್ಪ

'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ನಿರ್ದೇಶನಕ್ಕಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ನಟ ರಕ್ಷಿತ್ ಶೆಟ್ಟಿ ಅವರ ಸೆವೆನ್ ಆಡ್ಸ್ ಚಿತ್ರಕಥಾ ವಿಭಾಗದಲ್ಲಿ ಗುರುತಿಸಿಕೊಂಡಿರುವ ಇವರು 'ಕಿರಿಕ್ ಪಾರ್ಟಿ' ಮತ್ತು 'ಅವನೇ ಶ್ರೀಮನ್ನಾರಾಯಣ' ಚಿತ್ರಗಳ ಚಿತ್ರಕಥೆ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದರು. 'ಕಥಾಸಂಗಮ' ಚಿತ್ರದ 'ರೇನ್ಬೋ ಲ್ಯಾಂಡ್' ಕಥೆಯನ್ನು ಇವರು ನಿರ್ದೇಶಿಸಿದ್ದಾರೆ. ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಇವರು ಬ್ಲಾಗ್ ಬರೆಯುವ ಹವ್ಯಾಸ ಹೊಂದಿದ್ದಾರೆ. ಈ ಬ್ಲಾಗ್ ಮೂಲಕವೇ ರಕ್ಷಿತ್ ಶೆಟ್ಟಿ ಅವರ ತೆಕ್ಕೆಗೆ ಬಿದ್ದವರು ಚಂದ್ರಜಿತ್. 'ಇಬ್ಬನಿ..'ಮೂಲಕ ಚಂದ್ರಜಿತ್ ಸ್ವತಂತ್ರ ನಿರ್ದೇಶಕರಾದರು. ತಮ್ಮ ಮೊದಲ ಸಿನಿಮಾದಲ್ಲೇ ಒಂದು ಮ್ಯೂಸಿಕಲ್ ಲವ್‌ಸ್ಟೋರಿ ಕಟ್ಟಿಕೊಟ್ಟಿದ್ದ ಇವರು ದೃಶ್ಯಕಾವ್ಯ ಹೆಣೆದಿದ್ದರು. ಪ್ರೇಕ್ಷಕರನ್ನು ಭಾವನಾತ್ಮಕ ದೃಶ್ಯಗಳ ಮೂಲಕವೇ ಕಟ್ಟಿಹಾಕಿದವರು.

ರಘುರಾಜ್ ಗೌಡ, ನಾಗರಾಜ್ ಮಲ್ಲಿಗೇನಹಳ್ಳಿ

'ರಮೇಶ್-ಸುರೇಶ್' ಸಿನಿಮಾ ನಿರ್ದೇಶನಕ್ಕಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ರಘುರಾಜ್ ಗೌರಿಬಿದನೂರಿನವರು. 'ಪಾರ್ವತಿ ಪರಮೇಶ್ವರ' ಧಾರಾವಾಹಿಯಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಇವರು ನಂತರದಲ್ಲಿ ಬಣ್ಣದ ಲೋಕಕ್ಕೆ ಕಾಲಿಟ್ಟವರು. ಜೂನಿಯರ್ ಆರ್ಟಿಸ್ಟ್ ಆಗಿ 'ದ್ಯಾವ್ರೇ' ಸಿನಿಮಾದಲ್ಲಿ ಬಣ್ಣಹಚ್ಚಿದ್ದ ಇವರು ಚಿತ್ರರಂಗದ ಹಲವು ವಿಭಾಗಗಳಲ್ಲಿ ಕೆಲಸ ಮಾಡಿದ್ದಾರೆ. ಗಡ್ಡ ವಿಜಿಯವರ ಸಿನಿಮಾಗಳಲ್ಲಿ ಕೆಲಸ ಮಾಡಿದ ಇವರು ಬಳಿಕ ಸಿನಿಮಾ ನಿರ್ದೇಶನ ದತ್ತ ಆಸಕ್ತಿ ಹುಟ್ಟಿಸಿಕೊಂಡವರು. ನಾಗರಾಜ್ ಶಿವಮೊಗ್ಗದವರು. ರಂಗಭೂಮಿಯಲ್ಲಿ ಕಾರ್ಯನಿರ್ವಹಿಸಿದ ಅನುಭವವುಳ್ಳವರು. ಯಶ್ ರಾಜ್ ಅವರಿಗೆ ಸಿನಿಮಾ ಮಾಡಬೇಕು ಎಂದು ರಘು ಅಂದುಕೊಂಡಿದ್ದರು. ನಾಗರಾಜ್ ಅವರು ಬೆನಕ ಗುಬ್ಬಿಯವರಿಗೆ ಸಿನಿಮಾ ಮಾಡಬೇಕೆಂದಿದ್ದರು. ಇವರಿಬ್ಬರೂ ಜೊತೆಗೂಡಿ ಯಶ್-ಬೆನಕ ನಟನೆಯ 'ರಮೇಶ್ ಸುರೇಶ್' ತೆರೆಗೆ ತಂದರು.

ಸಹ ಪ್ರಾಯೋಜಕರು: ಟಿಟಿಕೆ ಪ್ರೆಸ್ಟೀಜ್, ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್, ಹೋಂಡಾ, ವಿ, ಸದ್ಗುರು ಆಯುರ್ವೇದ, ದಿ ಬೆಂಗಳೂರ್ ಸಿಟಿ ಕೊ-ಆಪರೇಟಿವ್ ಬ್ಯಾಂಕ್, ದಿ ಜನತಾ ಕೊ-ಆಪರೇಟಿವ್ ಬ್ಯಾಂಕ್, ಕೆಎಸ್‌ಡಿಎಲ್. **ಮೊಬಿಲಿಟಿ ಪಾರ್ಟ್ನರ್:** ಮರ್ಸಿಡೀಸ್ ಬೆಂಜ್-ಅಕ್ಷಯ್ ಮೋಟರ್ಸ್.
ಬ್ಯಾಂಕಿಂಗ್ ಪಾರ್ಟ್ನರ್: ಕೆನರಾ ಬ್ಯಾಂಕ್. **ಸ್ಟೈಲ್ ಪಾರ್ಟ್ನರ್:** ಬಿ.ಎಸ್. ಚನ್ನಬಸಪ್ಪ ಆ್ಯಂಡ್ ಸನ್ಸ್.**ಟ್ರಾವೆಲ್ ಪಾರ್ಟ್ನರ್:** ಟ್ರಾವೆಲ್‌ಮಾರ್ಟ್. **ವಾರ್ಡ್‌ರೋಬ್ ಪಾರ್ಟ್ನರ್:** ನ್ಯುಮೆನ್.**ನಾಲೆಜ್ ಪಾರ್ಟ್ನರ್ಸ್:** ಇನ್‌ಸೈಟ್ಸ್‌ಐಎಎಸ್ ಮತ್ತು ಗೀತಂ ಬೆಂಗಳೂರು.**ಇನ್ಶ್ಯೂರೆನ್ಸ್ ಪಾರ್ಟ್ನರ್:** ನ್ಯಾಷನಲ್ ಇನ್ಶ್ಯೂರೆನ್ಸ್.
ಟೆಲಿಕಾಸ್ಟ್ ಪಾರ್ಟ್ನರ್: ಜೀ ಕನ್ನಡ. **ಆಡಿಟ್ ಪಾರ್ಟ್ನರ್:** ಇ ಆ್ಯಂಡ್ ವೈ.

ಚುಟುಕು ಸುದ್ದಿ

ಸುಮಿತ್ ನಿರ್ಗಮನ

ಲಂಡನ್ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಕ್ವಾಲಿಫೈಯರ್ ಸುತ್ತಿನಲ್ಲೇ ಹೊರಬಿದ್ದರು.

ಸೋಮವಾರ ನಡೆದ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ 2-6, 6-4, 2-6ರಿಂದ ಇಟಲಿಯ ಗಿಯುಲಿಯೊ ಜೆಪ್ಪಿಯೇರಿ ಅವರಿಗೆ ಶರಣಾದರು.

ಕ್ರಿಸ್ಟಿ ಅಧಿಕಾರ ಸ್ವೀಕಾರ

ಐಒಸಿ ನೂತನ ಅಧ್ಯಕ್ಷೆ ಕ್ರಿಸ್ಟಿ ಕೊವೆಂಟ್ರಿ (ಎಡ) ಅವರು ನಿಕಟಪೂರ್ವ ಅಧ್ಯಕ್ಷ ಥಾಮಸ್ ಬಾಕ್ ಅವರಿಂದ ಕೀಲಿಕೈ ಸ್ವೀಕರಿಸಿದರು –ಎಎಫ್‌ಪಿ ಚಿತ್ರ

ಲೂಸಾನ್ (ರಾಯಿಟರ್ಸ್): ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ನೂತನ ಅಧ್ಯಕ್ಷೆ, ಜಿಂಬಾಬ್ವೆಯ ಕ್ರಿಸ್ಟಿ ಕೊವೆಂಟ್ರಿ ಅವರು ಸೋಮವಾರ ಲೂಸಾನ್‌ನಲ್ಲಿ ನಿಕಟಪೂರ್ವ ಅಧ್ಯಕ್ಷ ಥಾಮಸ್ ಬಾಕ್ ಅವರಿಂದ ಅಧಿಕಾರ ಸ್ವೀಕರಿಸಿದರು.

ಕಳೆದ ಮಾರ್ಚ್‌ನಲ್ಲಿ ಒಲಿಂಪಿಕ್ ಆಡಳಿತ ಮಂಡಳಿ ಮುಖ್ಯಸ್ಥರಾಗಿ ಆಯ್ಕೆಯಾದ ಮೊದಲ ಮಹಿಳೆ ಮತ್ತು ಮೊದಲ ಆಫ್ರಿಕನ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದರು.

ಈಜು ಸ್ಪರ್ಧೆಯಲ್ಲಿ ಎರಡು ಬಾರಿಯ ಒಲಿಂಪಿಕ್ ಸ್ವರ್ಣ ವಿಜೇತೆಯಾಗಿರುವ 41 ವರ್ಷ ವಯಸ್ಸಿನ ಕೊವೆಂಟ್ರಿ ತಮ್ಮ ದೇಶದ ಕ್ರೀಡಾ ಸಚಿವೆಯೂ ಸೇವೆ ಸಲ್ಲಿಸಿದ್ದಾರೆ.

ನೀರಜ್ ಚೋಪ್ರಾಗೆ ಪ್ರಶಸ್ತಿಯ ಗುರಿ

ನೀರಜ್ ಚೋಪ್ರಾ

ಒಸ್ಟ್ರಾವಾ (ಝೆಕ್ ರಿಪಬ್ಲಿಕ್), (ಪಿಟಿಐ): ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಮಂಗಳವಾರ ನಡೆಯಲಿರುವ ಗೋಲ್ಡನ್‌ಸ್ಪೈಕ್ ಅಥ್ಲೆಟಿಕ್ಸ್ ಕೂಟದಲ್ಲಿ ಪ್ರಶಸ್ತಿ ಗೆಲ್ಲುವ ಗುರಿ ಹೊಂದಿದ್ದಾರೆ.

ಫಿಟ್ನೆಸ್ ಸಮಸ್ಯೆಯಿಂದಾಗಿ ಕಳೆದ ಎರಡು ಆವೃತ್ತಿಗಳಿಂದ ಹೊರಗುಳಿದಿದ್ದ 27 ವರ್ಷ ವಯಸ್ಸಿನ ನೀರಜ್ ಚೋಪ್ರಾ ಈ ಬಾರಿ ಚಿನ್ನಕ್ಕೆ ಗುರಿಯಿಡುವ ಛಲದಲ್ಲಿದ್ದಾರೆ. ಅವರ ಕೋಚ್ ಯಾನ್ ಝೆಲೆಜ್ನಿ ಇಲ್ಲಿ ದಾಖಲೆಯ ಒಂಬತ್ತು ಬಾರಿ ಪ್ರಶಸ್ತಿಯನ್ನು ಗೆದ್ದಿದ್ದಾರೆ.

ಪ್ರಸಕ್ತ ಋತುವಿನಲ್ಲಿ ಉತ್ತಮ ಲಯದಲ್ಲಿರುವ ಚೋಪ್ರಾ ಅವರು ಮೇ ತಿಂಗಳಲ್ಲಿ ದೋಹಾದಲ್ಲಿ ನಡೆದ ಡೈಮಂಡ್ ಲೀಗ್ ಕೂಟದಲ್ಲಿ ಮೊದಲ ಬಾರಿ 90 ಮೀ. ಮೈಲಿಗಲ್ಲು ದಾಟಿದ್ದರು.

ಜರ್ಮನಿಯ ಪ್ರತಿಸ್ಪರ್ಧಿ ಜೂಲಿಯನ್ ವೆಬರ್ ಅವರ ಅನುಪಸ್ಥಿತಿಯಲ್ಲಿ ಇಲ್ಲಿ ಚೋಪ್ರಾ ಪ್ರಶಸ್ತಿಗೆ ಫೇವರಿಟ್ ಎನಿಸಿದ್ದಾರೆ.

ದಿನಿಧಿ, ಗಂಗೂಲಿ ರಾಷ್ಟ್ರೀಯ ದಾಖಲೆ

ರಾಷ್ಟ್ರೀಯ ಈಜು: ಮುಂದುವರಿದ ಕರ್ನಾಟಕದ ಪಾರಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟುಗಳಾದ ದಿನಿಧಿ ದೇಸಿಂಗು ಮತ್ತು ಶೋನ್ ಗಂಗೂಲಿ ಅವರು ಭುವನೇಶ್ವರದಲ್ಲಿ ನಡೆಯುತ್ತಿರುವ 78ನೇ ರಾಷ್ಟ್ರೀಯ ಸೀನಿಯರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು.

ಮಹಿಳೆಯರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ ಒಲಿಂಪಿಯನ್ ದಿನಿಧಿ 2ನಿಮಿಷ 02.97 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರು. ಇದರೊಂದಿಗೆ 2023ರಲ್ಲಿ ಹೈದರಾಬಾದ್‌ನ ಕೂಟದಲ್ಲಿ ನಿರ್ಮಿಸಿದ್ದ ದಾಖಲೆಯನ್ನು (2ನಿ.04.24ಸೆ) ಸುಧಾರಿಸಿಕೊಂಡರು.

ಪುರುಷರ 200 ಮೀಟರ್ ಮೆಡ್ಲೆ ಸ್ಪರ್ಧೆಯಲ್ಲಿ ಶೋನ್ 2 ನಿಮಿಷ 04.34 ಸೆಕೆಂಡ್‌ಗಳಲ್ಲಿ ದಡ ಸೇರಿದರು. ಈ ಮೂಲಕ 2022ರಲ್ಲಿ ಗುವಾಹಟಿಯ ಕೂಟದಲ್ಲಿ ಶಿವ ಎಸ್. (2ನಿ.05.64ಸೆ) ನಿರ್ಮಿಸಿದ್ದ ದಾಖಲೆಯನ್ನು ಮುಳುಗಿಸಿದರು.

4x100 ಮೀಟರ್ ಫ್ರೀಸ್ಟೈಲ್ ಮಿಶ್ರ ರಿಲೆ ಸ್ಪರ್ಧೆಯಲ್ಲೂ ಕರ್ನಾಟಕ ರಾಷ್ಟ್ರೀಯ ದಾಖಲೆ ಬರೆಯಿತು. ರುತುಜಾ ಎಸ್., ಲತಿಷಾ ಮಂದಾನ, ಆಕಾಶ್ ಮಣಿ ಮತ್ತು ತನಿಶ್ ಜಾರ್ಜ್ ಮ್ಯಾಥ್ಯೂ ಅವರನ್ನು ಒಳಗೊಂಡ ತಂಡವು 3 ನಿಮಿಷ 41.18 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿತು. 2023ರಲ್ಲಿ ಕರ್ನಾಟಕ ತಂಡವೇ ನಿರ್ಮಿಸಿದ್ದ ದಾಖಲೆಯನ್ನು ಸುಧಾರಿಸಿಕೊಂಡಿತು.

ಕೂಟದ ಎರಡನೇ ದಿನವಾದ ಸೋಮವಾರ ಕರ್ನಾಟಕ ಮೂರು ಚಿನ್ನ, ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳೊಂದಿಗೆ ಪಾರಮ್ಯ ಮುಂದುವರಿಸಿತು. ಮೊದಲ ದಿನವಾದ ಭಾನುವಾರ ಮೂರು ಚಿನ್ನ ಸೇರಿದಂತೆ ಒಟ್ಟು ಏಳು ಪದಕಗಳನ್ನು ಗೆದ್ದುಕೊಂಡಿತ್ತು.

ರಾಷ್ಟ್ರೀಯ ಸೀನಿಯರ್ಸ್ ಈಜು ಚಾಂಪಿಯನ್‌ಷಿಪ್‌ನ 4x100 ಫ್ರೀಸ್ಟೈಲ್ ಮಿಶ್ರ ರಿಲೆ ಸ್ಪರ್ಧೆಯಲ್ಲಿ ದಾಖಲೆ ಬರೆದ ಕರ್ನಾಟಕದ (ಎಡದಿಂದ) ರುಜುಲಾ ಎಸ್, ಲತೀಶಾ ಮಂದಾನ, ತನಿಶ್ ಜಾರ್ಜ್ ಮ್ಯಾಥ್ಯೂ ಮತ್ತು ಆಕಾಶ್ ಮಣಿ

ಶೋನ್ ಗಂಗೂಲಿ

ಪುರುಷರು: 50 ಮೀ. ಫ್ರೀಸ್ಟೈಲ್: ಜಶುವಾ ಥಾಮಸ್ (ತಮಿಳುನಾಡು)-1, ಹೀರ್ ಗೀತೇಶ್ ಷಾ (ಮಹಾರಾಷ್ಟ್ರ)-2, ಆಕಾಶ್ ಮಣಿ (ಕರ್ನಾಟಕ)-3, ಕಾಲ: 23.06 ಸೆ. 1,500 ಮೀ. ಫ್ರೀಸ್ಟೈಲ್: ಕುಶಾಗ್ರ ರಾವತ್ (ದೆಹಲಿ)-1, ಆರ್ಯನ್ ನೆಹ್ರಾ (ಗುಜರಾತ್)-2, ಅದ್ವೈತ್ ಪಾಗೆ (ಮಧ್ಯಪ್ರದೇಶ)-3, ಕಾಲ: 15ನಿ.32.95 ಸೆ.; 200 ಮೀ. ಮೆಡ್ಲೆ: ಶೋನ್ ಗಂಗೂಲಿ (ಕರ್ನಾಟಕ)-1, ವಿನಾಯಕ್ ವಿಜಯಶಂಕರ್ (ಸರ್ವಿಸಸ್)-2, ಶಿವ ಶ್ರೀಧರ್ (ಕರ್ನಾಟಕ)-3, ಕಾಲ: 2ನಿ.04.34 ಸೆ., ನೂತನ ದಾಖಲೆ, ಹಳೆಯದು: ಶಿವ ಎಸ್. ಕಾಲ: 2ನಿ.05.64 ಸೆ. 50 ಮೀ. ಬ್ರೆಸ್ಟ್ ಸ್ಟ್ರೋಕ್: ಎಂ.ಎಸ್. ಯದೇಶ್ ಬಾಬು (ತಮಿಳುನಾಡು)-1, ವಿದಿತ್‌ಎಸ್.ಶಂಕರ್ (ಕರ್ನಾಟಕ)-2, ಧನುಷ್ ಸುರೇಶ್ (ತಮಿಳುನಾಡು)-3, ಕಾಲ: 28.35 ಸೆ.

ಮಹಿಳೆಯರು: 200 ಮೀ. ಫ್ರೀಸ್ಟೈಲ್: ದಿನಿಧಿ ದೇಸಿಂಗು (ಕರ್ನಾಟಕ)-1, ಭವ್ಯಾ ಸಚದೇವ (ದೆಹಲಿ)-2, ಅದಿತಿ ಸತೀಶರ್ ಹೆಗ್ಡೆ (ಮಹಾರಾಷ್ಟ್ರ)-3, ಕಾಲ: 2ನಿ.02.97 ಸೆ.; 200 ಮೀ. ಮೆಡ್ಲೆ: ಸಾನ್ವಿ ದೇಶ್ವಾಲ್ (ಮಹಾರಾಷ್ಟ್ರ)-1, ಶ್ರೀನಿಧಿ ನಟೇಶನ್ (ತಮಿಳುನಾಡು)-2, ತಾನ್ಯಾ ಷಡಕ್ಷರಿ (ಕರ್ನಾಟಕ)-3, ಕಾಲ: 2ನಿ.21.87 ಸೆ.; 50 ಮೀ. ಬ್ರೆಸ್ಟ್‌ಸ್ಟ್ರೋಕ್: ಮಿತ್ತಪಲ್ಲಿ ರಿತ್ವಿಕಾ (ತೆಲಂಗಾಣ)-1, ಹರ್ಷಿತಾ ಜಯರಾಮ್ (ರೈಲ್ವೇಸ್)-2, ಅವನಿ ಛಾಬ್ರಾ (ಪಂಜಾಬ್)-3, ಕಾಲ: 33.98 ಸೆ.;

4x100 ಮೀ. ಫ್ರೀಸ್ಟೈಲ್ ಮಿಶ್ರ ರಿಲೆ: ಕರ್ನಾಟಕ (ರುಜುಲಾ ಎಸ್., ಲತಿಶಾ ಮಂದಾನ, ಆಕಾಶ್ ಮಣಿ, ತನಿಶ್ ಜಾರ್ಜ್ ಮ್ಯಾಥ್ಯೂ)-1, ತಮಿಳುನಾಡು)-2, ರೈಲ್ವೆ ಕ್ರೀಡಾ ನಿಯಂತ್ರಣ ಮಂಡಳಿ -3, ಕಾಲ: 3ನಿ.41.18 ಸೆ., ನೂತನ ದಾಖಲೆ, ಹಳೆಯದು: ಕರ್ನಾಟಕ 3ನಿ.42.92 ಸೆ.

ಹಾಕಿ ವೃತ್ತಿಜೀವನಕ್ಕೆ ಲಲಿತ್ ವಿದಾಯ

ಲಲಿತ್ ಉಪಾಧ್ಯಾಯ

ನವದೆಹಲಿ (ಪಿಟಿಐ): ಭಾರತದ ಅನುಭವಿ ಫಾರ್ವರ್ಡ್ ಆಟಗಾರ ಲಲಿತ್ ಉಪಾಧ್ಯಾಯ ಅವರು ಅಂತರರಾಷ್ಟ್ರೀಯ ಹಾಕಿ ವೃತ್ತಿಜೀವನಕ್ಕೆ ನಿವೃತ್ತಿ ಘೋಷಿಸಿದ್ದಾರೆ.

ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದ ಭಾಗವಾಗಿದ್ದ 31 ವರ್ಷ ವಯಸ್ಸಿನ ಲಲಿತ್, ತಮ್ಮ 11 ವರ್ಷಗಳ ಹಾಕಿ ಪ್ರಯಾಣಕ್ಕೆ ತೆರೆ ಎಳೆದಿದ್ದಾರೆ. ಅವರು 2014ರ ವಿಶ್ವಕಪ್ ಕೂಟದಲ್ಲಿ ರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡಿದ್ದರು.

ಭಾರತದ ಪರ 183 ಪಂದ್ಯಗಳನ್ನು ಆಡಿರುವ ವಾರಾಣಸಿಯ ಲಲಿತ್ ಅವರು 67 ಗೋಲು ದಾಖಲಿಸಿದ್ದಾರೆ. ಜೂನ್ 15ರಂದು ಆಸ್ಟ್ರೇಲಿಯಾ ವಿರುದ್ಧ ಕೊನೆಯ ಪಂದ್ಯವನ್ನು ಆಡಿದ್ದರು.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವು ಕಂಚಿನ ಪದಕ ಜಯಿಸುವಲ್ಲಿ ಮುಂಚೂಣಿ ಆಟಗಾರನಾಗಿ ಪ್ರಮುಖ ಪಾತ್ರ ವಹಿಸಿದ್ದ ಅವರು, 2024ರ ಪ್ಯಾರಿಸ್ ಕೂಟದಲ್ಲೂ ಅದೇ ಸಾಧನೆಯನ್ನು ಪುನರಾವರ್ತಿಸಿದ್ದರು. ಬಹುಮುಖ ಪ್ರತಿಭೆ, ಮೈದಾನದಲ್ಲಿನ ಬುದ್ಧಿವಂತಿಕೆ ಮತ್ತು ಒತ್ತಡದ ಸಂದರ್ಭಗಳಲ್ಲಿ ಶಾಂತ ಸ್ವಭಾವಕ್ಕೆ ಅವರು ಹೆಸರಾದವರು.

2016ರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ, 2017ರ ಏಷ್ಯಾ ಕಪ್‌ನ ಭಾರತದ ಗೆಲುವಿನಲ್ಲಿ ಅವರು ಮಹತ್ವದ ಕೊಡುಗೆ ನೀಡಿದ್ದರು. 2017ರ ಹಾಕಿ ವರ್ಲ್ಡ್ ಲೀಗ್‌ನಲ್ಲಿ ಕಂಚು, 2018ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಬೆಳ್ಳಿ, 2018ರ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚು ಮತ್ತು 2018ರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಗೆದ್ದ ಭಾರತ ತಂಡದಲ್ಲೂ ಅವರಿದ್ದರು. 2021-22ರ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಮೂರನೇ ಸ್ಥಾನ ಪಡೆದ ಮತ್ತು 2022ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದ ತಂಡದ ಭಾಗವಾಗಿದ್ದರು.

ಭಾರತ ತಂಡಕ್ಕೆ ಅವರು ನೀಡಿದ ಕೊಡುಗೆಗಾಗಿ ಕೇಂದ್ರ ಸರ್ಕಾರ 2021ರಲ್ಲಿ ಅರ್ಜುನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಅಭಿನ್, ಪ್ರಕೃತಿಗೆ ಚಿನ್ನದ ಪದಕ

ರಾಜ್ಯ ಸೀನಿಯರ್ ಅಥ್ಲೆಟಿಕ್ ಕೂಟ: ಡಿಸ್ಕಸ್ ಥ್ರೊನಲ್ಲಿ ನಾಗೇಂದ್ರಗೆ ಸ್ವರ್ಣ

ಪ್ರಮುಖ ಅಂಶಗಳು
- ಪುರುಷರ 10 ಸಾವಿರ ಮೀ. ಓಟದಲ್ಲಿ ಶಿವಾಜಿ ಪ್ರಥಮ
- ಡೆಕಾಥ್ಲಾನ್‌ನಲ್ಲಿ ಚಿತ್ರದುರ್ಗದ ತ್ರಿಲೋಕ್‌ಗೆ ಅಗ್ರಸ್ಥಾನ
- ಹೆಪ್ಟಾಥ್ಲಾನ್‌ನಲ್ಲಿ ಉಡುಪಿಯ ಅಕ್ಷತಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಪಿಯ ಅಭಿನ್ ದೇವಾಡಿಗ ಹಾಗೂ ಚಿತ್ರದುರ್ಗದ ಪ್ರಕೃತಿ ರೂಪಾ ಅವರು ಸೋಮವಾರ ನಡೆದ ಕರ್ನಾಟಕ ರಾಜ್ಯ ಸೀನಿಯರ್ ಅಥ್ಲೆಟಿಕ್ ಕೂಟದಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 200 ಮೀಟರ್ಸ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ಕಂಠೀರವ ಕ್ರೀಡಾಂಗಣದಲ್ಲಿ ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಆಶ್ರಯದಲ್ಲಿ ನಡೆದ ಕೂಟದಲ್ಲಿ ಅಭಿನ್ 20.79 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಬೆಂಗಳೂರಿನ ಪ್ರಸನ್ನ ಕುಮಾರ್ ವಿ.ಎಂ. (20.91ಸೆ) ಮತ್ತು ಜೊನಾಥನ್ ಸ್ಯಾಮುಯೆಲ್ (21.29ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

ಮಹಿಳೆಯರ ವಿಭಾಗದಲ್ಲಿ ಪ್ರಕೃತಿ 23.83 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಅಗ್ರಸ್ಥಾನಿಯಾದರು. ಬೆಂಗಳೂರಿನ ವಿ.ಸುಧೀಕ್ಷಾ (24.04ಸೆ) ಬೆಳ್ಳಿ ಗೆದ್ದರೆ, ಚಿಕ್ಕಮಗಳೂರಿನ ದಿಶಾ ಎ. (24.41ಸೆ) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಫಲಿತಾಂಶ: ಪುರುಷರು: 200 ಮೀ.: ಅಭಿನ್ ದೇವಾಡಿಗ (ಕಾಲ: 20.79ಸೆ, ಉಡುಪಿ)-1, ಪ್ರಸನ್ನ ಕುಮಾರ್ ವಿ.ಎಂ. (ಬೆಂಗಳೂರು)-2, ಜೊನಾಥನ್ ಸ್ಯಾಮುಯೆಲ್ (ಬೆಂಗಳೂರು)-3.

10 ಸಾವಿರ ಮೀ: ಶಿವಾಜಿ ಪರಶುರಾಮ್ (ಕಾಲ: 30ನಿ.29.3ಸೆ, ಉತ್ತರ ಕನ್ನಡ)-1, ಸಂದೀಪ್ ಟಿ.ಎಸ್. (ತುಮಕೂರು)-2, ಚೇತನ್ ಎ ಹೋಳ್ಕರ್ (ಬೆಳಗಾವಿ)-3.

ಡಿಸ್ಕಸ್ ಥ್ರೊ: ನಾಗೇಂದ್ರ ಅಣ್ಣಪ್ಪ (ಎಸೆತ: 52.82 ಮೀ, ಉತ್ತರ ಕನ್ನಡ)-1, ಮೊಹಮ್ಮದ್ ಸಕ್ಲೇನ್ ಅಹ್ಮದ್ (ಮೈಸೂರು)-2, ಸ್ಮಿತ್ ಜಾವಿಯಾ (ದಕ್ಷಿಣ ಕನ್ನಡ)-3.

ಡೆಕಾಥ್ಲಾನ್: ತ್ರಿಲೋಕ್ ಒಡೆಯರ್ (5574 ಅಂಕ, ಚಿತ್ರದುರ್ಗ)-1, ಸನತ್ ಬಿ.ಎಸ್. (ಆಳ್ವಾಸ್, ದಕ್ಷಿಣ ಕನ್ನಡ)-2, ಅಭಿಷೇಕ್ (ಕೋಲಾರ)-3.



ಚಿನ್ನದ ಪದಕ ಗೆದ್ದ ಅಭಿನ್ ದೇವಾಡಿಗ (ಎಡಚಿತ್ರ) ಪ್ರಕೃತಿ ರೂಪಾ ಚಿತ್ರಗಳು: ಎಸ್‌.ಕೆ.ದಿನೇಶ್

ಮಹಿಳೆಯರು: 200 ಮೀ.: ಪ್ರಕೃತಿ ರೂಪಾ (ಕಾಲ: 23.84ಸೆ, ಚಿತ್ರದುರ್ಗ)-1, ವಿ.ಸುದೀಕ್ಷಾ (ಬೆಂಗಳೂರು)-2, ದಿಶಾ ಎ. (ಚಿಕ್ಕಮಗಳೂರು)-3.

10 ಸಾವಿರ ಮೀ: ತೇಜಸ್ವಿನಿ ಎನ್.ಎಲ್. (ಕಾಲ: 38ನಿ.03.3ಸೆ, ಕೆಎಸ್‌ಪಿ)-1, ಶಾಹಿನ್ ಎಸ್.ಡಿ. (ಧಾರವಾಡ)-2, ಯುವರಾಣಿ (ರಾಯಚೂರು)-3.

ಡಿಸ್ಕಸ್ ಥ್ರೊ: ಸುಷ್ಮಾ ಬಿ. (ಎಸೆತ: 41.08 ಮೀ, ದಕ್ಷಿಣ ಕನ್ನಡ)-1, ಮಾಧುರ್ಯ (ಉಡುಪಿ)-2, ಪ್ರಜ್ಞಾ ಗೋಯಲ್ (ಬೆಂಗಳೂರು)-3

ಹೆಪ್ಟಾಥ್ಲಾನ್: ಅಕ್ಷತಾ (4590 ಅಂಕ, ಉಡುಪಿ)-1

ಪ್ಯಾರಿಸ್ ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್‌ಗೆ ಅಂದಾಜು ₹60,000 ಕೋಟಿ ವೆಚ್ಚ

ಪ್ಯಾರಿಸ್ (ಎಎಫ್‌ಪಿ): 2024ರ ಪ್ಯಾರಿಸ್ ಬೇಸಿಗೆ ಒಲಿಂಪಿಕ್ಸ್ ಮತ್ತು ನಂತರ ನಡೆದ ಪ್ಯಾರಾಲಿಂಪಿಕ್ಸ್‌ನಿಂದಾಗಿ ಫ್ರಾನ್ಸ್‌ನ ಬೊಕ್ಕಸಕ್ಕೆ ಸುಮಾರು 60,000 ಕೋಟಿ (6 ಶತಕೋಟಿ ಯೂರೊ) ವೆಚ್ಚವಾಗಿದೆ ಎಂದು ರಾಷ್ಟ್ರೀಯ ಆಡಿಟ್ ಸಂಸ್ಥೆ ಸೋಮವಾರ ಪ್ರಾಥಮಿಕ ಅಂದಾಜು ಮಾಡಿದೆ.

ಕಳೆದ ವರ್ಷದ ಬೇಸಿಗೆ ವೇಳೆ ನಡೆದ ಕ್ರೀಡೆಗಳಿಗೆ 2.77 ಶತಕೋಟಿ ಯೂರೊ ವೆಚ್ಚ ಮಾಡಲಾಗಿದ್ದು, ಇದರಲ್ಲಿ 1.4 ಶತಕೋಟಿ ಯುರೊ ಮೊತ್ತವನ್ನು ಭದ್ರತಾ ಉದ್ದೇಶಗಳಿಗಾಗಿ ವಿನಿಯೋಗಿಸಲಾಗಿದೆ. ಕ್ರೀಡಾ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು 3.19 ಶತಕೋಟಿ ಯೂರೊ ವೆಚ್ಚವಾಗಿದೆ.

ಮಾಜಿ ಕ್ರಿಕೆಟಿಗ ದಿಲೀಪ್ ದೋಷಿ ನಿಧನ

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಆಟಗಾರ, ಎಡಗೈ ಸ್ಪಿನ್ನರ್ ದಿಲೀಪ್ ದೋಷಿ (77) ಅವರು ಹೃದಯಸ್ತಂಭನದಿಂದ ಸೋಮವಾರ ರಾತ್ರಿ ಲಂಡನ್‌ನಲ್ಲಿ ನಿಧನರಾದರು.

1979ರಿಂದ 1983ರ ಅವಧಿಯಲ್ಲಿ ದೋಷಿ ಅವರು 33 ಟೆಸ್ಟ್ ಮತ್ತು 15 ಏಕದಿನ ಪಂದ್ಯಗಳನ್ನು ಆಡಿದ್ದರು. ಕ್ರಮವಾಗಿ 114 ಮತ್ತು 22 ವಿಕೆಟ್‌ಗಳನ್ನು ಪಡೆದಿದ್ದರು. ಸೌರಾಷ್ಟ್ರ ಮತ್ತು ಬಂಗಾಳ ತಂಡಗಳನ್ನು ದೇಶಿ ಕ್ರಿಕೆಟ್‌ನಲ್ಲಿ ಪ್ರತಿನಿಧಿಸಿದ್ದರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 898 ವಿಕೆಟ್‌ಗಳನ್ನು ಪಡೆದಿದ್ದರು.



ಆಸ್ಟ್ರೇಲಿಯಾ ವಿರುದ್ಧ ಚೆನ್ನೈನಲ್ಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದ ಅವರು ಆ ಪಂದ್ಯದಲ್ಲಿ 167ಕ್ಕೆ 8 ವಿಕೆಟ್‌ಗಳನ್ನು ಪಡೆದಿದ್ದರು.

ದೋಷಿ ಅವರು ಪತ್ನಿ ಕಾಲಿಂದಿ, ಪುತ್ರಿ ವಿಶಾಖ ಮತ್ತು ಪುತ್ರ ನಯನ್ ಅವರನ್ನು ಅಗಲಿದ್ದಾರೆ.

ನೋಯ್ಡಾದಲ್ಲಿ ಮಲಬಾರ್ ಗೋಲ್ಡ್ & ಡೈಮಂಡ್ಸ್ ಸಮೂಹದ 400ನೇ ಮಳಿಗೆಗೆ ಚಾಲನೆ

ನೋಯ್ಡಾ: ವಿಶ್ವದ ಅತಿದೊಡ್ಡ ವಿಶ್ವಸಾರ್ಹ ಆಭರಣ ಚಿಲ್ಲರೆ ವ್ಯಾಪಾರಿಗಳಲ್ಲಿ ಒಂದಾದ ಮಲಬಾರ್ ಗೋಲ್ಡ್ & ಡೈಮಂಡ್ಸ್, ತನ್ನ 400ನೇ ಶೋರೂಂ ಅನ್ನು ಉದ್ಘಾಟಿಸಿ ಜಾಗತಿಕ ಮೈಲಿಗಲ್ಲನ್ನು ಸ್ಥಾಪಿಸಿದೆ.

ಉತ್ತರ ಪ್ರದೇಶದ ನೋಯ್ಡಾದ ಸೆಕ್ಟರ್ 18ರಲ್ಲಿ ಹೊಸ ಮಳಿಗೆ ತೆರೆಯುವ ಮೂಲಕ ತನ್ನ ಬ್ರ್ಯಾಂಡ್‌ನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಸ್ತರಣೆಯನ್ನು ಬಲಪಡಿಸಿದೆ.

ಪ್ರಸ್ತುತ ಮಲಬಾರ್ ಸಮೂಹ 13 ದೇಶಗಳಲ್ಲಿನ ತನ್ನ ಉಪಸ್ಥಿತಿ ಹೊಂದಿದ್ದು, ₹ 63,000 ಕೋಟಿ ವಹಿವಾಟು ನಡೆಸುತ್ತಿದೆ. ಈ ವಹಿವಾಟನ್ನು ₹ 78,000 ಕೋಟಿ ಹೆಚ್ಚಳ ಮಾಡುವ ಗುರಿ ಇಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ 15 ದೇಶಗಳು, 22 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ 60 ಶೋರೂಂ ತೆರೆಯುವ ಮೂಲಕ ತನ್ನ ಅಸ್ತಿತ್ವ ವಿಸ್ತರಿಸುವತ್ತ ಹೆಜ್ಜೆ ಹಾಕಿದೆ. ಇದರ ಜತೆಯಲ್ಲಿ ಜಾಗತಿಕ ಕಾರ್ಯಪಡೆಯನ್ನು ಸುಮಾರು 27,250 ಹೆಚ್ಚಿಸುವ ಯೋಜನೆ ಹಾಕಿಕೊಂಡಿದೆ. ಆ ಮೂಲಕ ಉದ್ಯೋಗ ಸೃಷ್ಟಿಸಲು ಬದ್ಧವಾಗಿದೆ.

ನೂತನ ಮಳಿಗೆಗೆ ಚಾಲನೆ ನೀಡಿದ ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮ್ಮದ್ ಮಾತನಾಡಿ, 'ನಮ್ಮ 400ನೇ ಶೋರೂಂ ಅನ್ನು ನೋಯ್ಡಾದಲ್ಲಿ ತೆರೆಯಲು ನಮಗೆ ಸಂತೋಷವಾಗಿದೆ. ಈ ಮೈಲಿಗಲ್ಲು ನಮ್ಮ ಬೆಳವಣಿಗೆಯ ಸಾಕ್ಷಿಯಾಗಿದೆ. ಭಾರತದಾದ್ಯಂತ ಮತ್ತು ಜಾಗತಿಕವಾಗಿ ನಂ.1 ಆಭರಣ ರಿಟೇಲ್ ವ್ಯಾಪಾರಿ ಆಗುವ ಪ್ರಯಾಣದಲ್ಲಿ, ನಮ್ಮ ನಿರಂತರ ವಿಸ್ತರಣೆ ಪ್ರಯತ್ನದ ಹೆಜ್ಜೆ ಗುರುತು ಕಾಣಿಸುತ್ತದೆ. ಈ ಸಂದರ್ಭವನ್ನು ನಿಜವಾಗಿಯೂ ಗಮನಾರ್ಹವಾಗಿಸುವಲ್ಲಿ ನಮ್ಮ ಎಲ್ಲ ಗ್ರಾಹಕರು, ನಿರ್ವಹಣಾ ತಂಡ, ಷೇರುದಾರರು ಮತ್ತು ಇತರ ಪಾಲುದಾರರಿಗೆ ನನ್ನ ಪ್ರಾಮಾಣಿಕ ಕೃತಜ್ಞತೆ ವ್ಯಕ್ತಪಡಿಸಲು ಬಯಸುತ್ತೇನೆ.

ಪ್ರಸ್ತುತ ಹಣಕಾಸು ವರ್ಷದಲ್ಲಿ ₹ 78 ಸಾವಿರ ಕೋಟಿ ವಹಿವಾಟು ಮುಟ್ಟುವ ಗುರಿ ಹೊಂದಿದ್ದೇವೆ. ಉತ್ಪಾದನಾ ಘಟಕಗಳೊಂದಿಗೆ 60 ಹೊಸ ಶೋರೂಂಗಳು ತೆರೆಯಲು ನಾವು ಸಿದ್ಧವಾಗಿದ್ದೇವೆ. ಇದಕ್ಕಾಗಿ ₹ 5,000 ಕೋಟಿಗೂ ಹೆಚ್ಚು ಹೂಡಿಕೆ ಮೂಲಕ ಸಮಗ್ರ ವ್ಯಾಪಾರ ತಂತ್ರವನ್ನು ರೂಪಿಸಿದ್ದೇವೆ.' ನಮ್ಮ ವಿಸ್ತರಣೆಯು ಹೆಚ್ಚುವರಿ 3,500 ನೇರ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ ಎಂದರು.

ಸಮೂಹದ ಉಪಾಧ್ಯಕ್ಷ ಅಬ್ದುಲ್ ಸಲಾಂ ಕೆ.ಪಿ. ಅವರು, ನಮ್ಮ ಕಾರ್ಯಾಚರಣೆಗಳು ಸಂಪೂರ್ಣ ಪಾರದರ್ಶಕತೆ ಮತ್ತು ಕಟ್ಟುನಿಟ್ಟಿನ ಅನುಸರಣೆಯ ಅಡಿಪಾಯದ ಮೇಲೆ ನಿರ್ಮಿಸಲ್ಪಟ್ಟಿವೆ. ಜೊತೆಗೆ ನಮ್ಮ ವ್ಯಾಪಾರ ಸಂಸ್ಥೆಗಳು, ಹಣಕಾಸು ಸಂಸ್ಥೆಗಳು, ಸರ್ಕಾರಿ ನಿಯಂತ್ರಕರೊಂದಿಗೆ ಸಹಕರಿಸುವುದರ ಜೊತೆಗೆ ಜಾಗತಿಕ ಕಾರ್ಯಾಚರಣೆಗಳು ದೃಢ, ವಿಶ್ವಾಸಾರ್ಹ ಮತ್ತು ನಿಂದನೆಗಳನ್ನು ಮೀರಿವೆ ಎಂದು ಹೇಳಿದ್ದಾರೆ.

ಭಾರತ ಕಾರ್ಯಾಚರಣೆಗಳ ವ್ಯವಸ್ಥಾಪಕ ನಿರ್ದೇಶಕ ಓ. ಆಶರ್, 'ಮಲಬಾರ್ ಗೋಲ್ಡ್ & ಡೈಮಂಡ್ಸ್ ಭಾರತದಾದ್ಯಂತ ಉತ್ತಮ ಪ್ರಗತಿ ಸಾಧಿಸುತ್ತಿದೆ. ವರ್ಷಾಂತ್ಯದ ವೇಳೆಗೆ ನಮ್ಮ ಉಪಸ್ಥಿತಿಯನ್ನು ಮತ್ತಷ್ಟು ಬಲಪಡಿಸುತ್ತೇವೆ. 22 ರಾಜ್ಯ ಮತ್ತು 3 ಕೇಂದ್ರಾಡಳಿತ ಪ್ರದೇಶಗಳನ್ನು ತಲುಪುತ್ತೇವೆ.

'ಈ ವರ್ಷದಲ್ಲಿ ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ಸೇರಿದಂತೆ 15 ದೇಶಗಳಿಗೆ ವಿಸ್ತರಿಸುವುದು ಸೇರಿದೆ' ಎಂದು ಮಲಬಾರ್ ಗೋಲ್ಡ್‌ನ ಭಾರತ ಕಾರ್ಯಾಚರಣೆ ವ್ಯವಸ್ಥಾಪಕ ನಿರ್ದೇಶಕ ಶ್ಯಾಮ್‌ಲಾಲ್ ಅಹಮದ್ ಅಭಿಪ್ರಾಯಪಟ್ಟಿದ್ದಾರೆ.

ಮಲಬಾರ್ ಸಮೂಹ ಅಧ್ಯಕ್ಷ ಎಂ.ಪಿ. ಅಹಮ್ಮದ್ 400ನೇ ಶೋರೂಮ್ ಉದ್ಘಾಟಿಸಿದರು. ಓ. ಆಶರ್, ಕೆ.ಪಿ. ವೀರನ್‌ಕುಟ್ಟಿ, ಸಲೀಶ್ ಮ್ಯಾಥ್ಯೂ, ಪಿ.ಕೆ. ಸಿರಾಜ್, ಎನ್‌.ಕೆ. ಜೆಶಾದ್ ಹಾಗೂ ಇತರರಿದ್ದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ವಿಜೃಂಭಿಸಿದ ಪಂತ್, ರಾಹುಲ್

ಗೆಲುವಿಗೆ 371 ರನ್‌ಗಳ ಸವಾಲಿನ ಗುರಿಯನ್ನು ಎದುರಿಸಿರುವ ಇಂಗ್ಲೆಂಡ್ ವಿಕೆಟ್ ನಷ್ಟವಿಲ್ಲದೇ 21 ರನ್ ಗಳಿಸಿದೆ

● ಸಿಡ್ನಿ ಕಿರಣ್

ಲೀಡ್ಸ್: ಭಾರತ ತಂಡ ಮೊದಲ ಟೆಸ್ಟ್‌ನ ನಾಲ್ಕನೇ ದಿನವಾದ ಸೋಮವಾರ ಕಠಿಣ ಪರೀಕ್ಷೆ ಎದುರಿಸಿತ್ತು. ಆದರೆ ಕೆ.ಎಲ್.ರಾಹುಲ್ ಮತ್ತು ರಿಷಭ್ ಪಂತ್ ಅವರು ಅಮೋಘ ಶತಕಗಳನ್ನು ಬಾರಿಸಿ, ಅನುಭವಿ ಆಟಗಾರರ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದರು. ಈಗ ತಂಡ ಮನೋಬಲ ಹೆಚ್ಚಿಸುವಂಥ ಗೆಲುವಿಗೆ ಪ್ರಯತ್ನಿಸುವ ಸ್ಥಿತಿಗೆ ತಲುಪಿದೆ.

ತಂಪಾದ ಗಾಳಿಯ ವಾತಾವರಣದಲ್ಲಿ, ಕಾವೇರಿದ ಇಂಗ್ಲೆಂಡ್ ತಂಡದ ದಾಳಿಯನ್ನು ಎದುರಿಸುವಾಗ ಕೊಂಚ ಎಡವಟ್ಟಾದರೂ ಅಪಾಯ ಎದುರಾಗುವ ಸಾಧ್ಯತೆಯಿತ್ತು. ಆದರೆ ಮಾಜಿ ನಾಯಕ ರಾಹುಲ್ (137, 247ಎ, 4x18) ಮತ್ತು ಹಾಲಿ ಉಪನಾಯಕ ಪಂತ್ (118, 140ಎ, 4x15, 6x3) ಅನುಭವಿ ಯೋಧರ ರೀತಿ ಹೋರಾಡಿದರು; ಆಕರ್ಷಕ ಶತಕ ದಾಖಲಿಸಿದರು.

ಚಹಾ ವಿರಾಮ ಕಳೆದು 21 ಓವರುಗಳ ನಂತರ ಭಾರತ ತಂಡ 364 ರನ್‌ಗಳಿಗೆ ಆಲೌಟ್ ಆಯಿತು. 371 ರನ್‌ಗಳ ಸವಾಲಿನ ಗುರಿಯನ್ನು ಎದುರಿಸಿರುವ ಇಂಗ್ಲೆಂಡ್ ವಿಕೆಟ್ ನಷ್ಟವಿಲ್ಲದೇ 21 ರನ್ ಗಳಿಸಿ ದಿನದಾಟ ಮುಗಿಸಿದೆ. ಅಂತಿಮ ದಿನ ಇಂಗ್ಲೆಂಡ್ ಸಹ ಗೆಲುವಿನ ಯತ್ನಕ್ಕೆ ಮುಂದಾಗಲಿದ್ದು ದಿನದಾಟ ಕುತೂಹಲ ಕೆರಳಿಸಿದೆ. ಮಂಗಳವಾರ ಮಳೆಯಾಗುವ ಮುನ್ಸೂಚನೆಯೂ ಇದೆ.

ಬೆಳಿಗ್ಗೆ ಏಳು ಎಸೆತಗಳಾಗುವಷ್ಟರಲ್ಲಿ ಭಾರತ ತಂಡವು ನಾಯಕ ಶುಭಮನ್ ಗಿಲ್ ಅವರನ್ನು ಕಳೆದುಕೊಂಡಿತ್ತು. ಅವರು ವೇಗಿ ಬ್ರೈಡನ್ ಕಾರ್ಸ್ ಬೌಲಿಂಗ್‌ನಲ್ಲಿ ಚೆಂಡನ್ನು ಸ್ಟಂಪ್ಸ್‌ಗೆ ಎಳೆದುಕೊಂಡರು. ಆಗ ಅನನುಭವಿ ಎನ್ನಬಹುದಾದ ಇಂಗ್ಲೆಂಡ್ ದಾಳಿಗೆ ಅವಕಾಶದ ವಾಸನೆ ಬಡಿದಿತ್ತು. ತಂಡದ ಅನುಭವಿ ವೇಗಿ ಕ್ರಿಸ್ ವೋಕ್ಸ್ ಮತ್ತು ಯುವ ಬೌಲರ್ ಕಾರ್ಸ್ ಬ್ಯಾಟರ್‌ಗಳ ಸಹನೆ ಮತ್ತು ರಕ್ಷಣೆ ಪರೀಕ್ಷಿಸಿದರು. ಬೆನ್ ಸ್ಟೋಕ್ಸ್ ಮತ್ತು ಜೋಶ್ ಟಂಗ್ ಸಹ ಅವರನ್ನು ಸೇರಿಕೊಂಡರು. ಆಫ್ ಸ್ಪಿನ್ನರ್ ಶೋಯೆಬ್ ಬಶೀರ್ ಕೂಡ ಬಿಗುವಾಗಿ ಬೌಲ್ ಮಾಡಿದ್ದರು. ಆದರೆ ಭಾರತದ ಆಟಗಾರರು ತಾಳ್ಮೆ ಕಳೆದುಕೊಳ್ಳಲಿಲ್ಲ.

33 ವರ್ಷ ವಯಸ್ಸಿನ ರಾಹುಲ್ ಆಟ ಶ್ರೇಷ್ಠ ದರ್ಜೆಯದ್ದಾಗಿತ್ತು. ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ್ದ 27 ವರ್ಷ ವಯಸ್ಸಿನ ಪಂತ್ ಕೆಲವು ಸಾಹಸದ ಹೊಡೆತಗಳಿಗೆ ಹೋಗಿ ತಂಡದ ಆಟಗಾರರ ಎದೆಬಡಿತ ಹೆಚ್ಚಿಸಿದರು. ಕೆಲವು ಬಾರಿ ಅಪಾಯ ಆಹ್ವಾನಿಸಿದಂತೆ ಕಂಡರೂ ವಿಕೆಟ್ ಉಳಿಸಿಕೊಂಡರು.

ಲಂಚ್‌ಗೆ ಮೊದಲು ಭಾರತ ತಂಡದ ರನ್ ವೇಗ ಆಮೆಗತಿಯಲ್ಲಿದ್ದು 24.1 ಓವರುಗಳಲ್ಲಿ 63 ರನ್‌ಗಳು ಬಂದಿದ್ದವು. ಪಂದ್ಯದಲ್ಲಿ ಮೊದಲ ಬಾರಿ ರನ್‌ವೇಗ ಈ ಪ್ರಮಾಣಕ್ಕೆ ಇಳಿದಿತ್ತು. ಆದರೆ ನಂತರ ಇಬ್ಬರೂ ವಿಶ್ವಾಸ ಗಳಿಸಿಕೊಂಡರು. ರನ್‌ಗಳು ಹರಿಯತೊಡಗಿದವು. ರಾಹುಲ್ ಅವರ ಡ್ರೈವ್ ಮತ್ತು ಕಟ್‌ಗಳು ಆಕರ್ಷಕವಾಗಿದ್ದವು. ಪಂತ್ ಎಂದಿನಂತೆ ಮುನ್ನುಗ್ಗಿ ಆಡಿ, ಮೂರು ಸಿಕ್ಸರ್‌ಗಳನ್ನೂ ಬಾರಿಸಿದರು.

ಟೆಸ್ಟ್ ಜೀವನದಲ್ಲಿ ಏಳುಬೀಳು ಕಂಡಿರುವ ರಾಹುಲ್ ಮೊದಲನೆಯವರಾಗಿ ಶತಕ ದಾಟಿದರು. ಇದು ಅವರ 9ನೇ ಟೆಸ್ಟ್ ಶತಕ. ಇಂಗ್ಲೆಂಡ್ ನೆಲದಲ್ಲಿ ಮೂರನೇಯದ್ದು. 'ನರ್ವಸ್ ನೈಂಟೀಸ್' ಅವಧಿಯಲ್ಲಿ 26 ಎಸೆತ ಎದುರಿಸಿದ್ದ ಪಂತ್ ನಂತರ ಶತಕ ಗಳಿಸಿ ಸಂಭ್ರಮಿಸಿದರು. ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಬಾರಿಸಿದ ವಿಶ್ವದ ಎರಡನೇ ವಿಕೆಟ್ ಕೀಪರ್ ಎನಿಸಿದರು. ಆದರೆ, ಈ ಬಾರಿ ಅವರು ಲಾಗ ಹಾಕಲಿಲ್ಲ. ಲಾಗ್ ಹಾಕುವಂತೆ ಸ್ಟ್ಯಾಂಡ್‌ನಲ್ಲಿದ್ದ ಸುನಿಲ್ ಗಾವಸ್ಕರ್ ಇಶಾರೆ ಮಾಡಿದರೂ, 'ಮುಂದಿನ ಬಾರಿ' ಎಂದು ಪಂತ್ ಸಂಜ್ಞೆ ಮಾಡಿದರು. ಪಂತ್ ಜೊತೆಗೆ ರಾಹುಲ್ ನಾಲ್ಕನೇ ವಿಕೆಟ್‌ಗೆ 195 ರನ್ (283ಎ) ಸೇರಿಸಿದರು. ಚಹಾ ವಿರಾಮದ (4 ವಿಕೆಟ್‌ಗೆ 298) ಬಳಿಕ ಇಂಗ್ಲೆಂಡ್ ಬೌಲರ್‌ಗಳು 66 ರನ್‌ಗಳಿಗೆ ಭಾರತದ ಉಳಿದ 6 ವಿಕೆಟ್‌ಗಳನ್ನು ಪಡೆದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ
471 (113 ಓವರುಗಳಲ್ಲಿ)
ಇಂಗ್ಲೆಂಡ್
465 (100.4 ಓವರುಗಳಲ್ಲಿ)
ಎರಡನೇ ಇನಿಂಗ್ಸ್: ಭಾರತ
346 (96 ಓವರುಗಳಲ್ಲಿ)
(ಭಾನುವಾರ 2ಕ್ಕೆ 90)

ರಾಹುಲ್ ಬಿ ಕಾರ್ಸ್ 137 (247ಎ, 4x18)
ಗಿಲ್ ಬಿ ಕಾರ್ಸ್ 8 (16ಎ, 4x1)
ಪಂತ್ ಸಿ ಕ್ರಾಲಿ ಬಿ ಬಷೀರ್ 118 (140ಎ, 4x15, 6x3)
ಕರುಣ್ ಸಿ ಮತ್ತು ಬಿ ವೋಕ್ಸ್ 4 (12ಎ, 4x1)
ರವೀಂದ್ರ ಜಡೇಜ ಔಟಾಗದೇ 25 (40ಎ, 4x2, 6x1)
ಶಾರ್ದೂಲ್ ಸಿ ರೂಟ್ ಬಿ ಟಂಗ್ 1 (12ಎ)
ಸಿರಾಜ್ ಸಿ ಸ್ಮಿತ್ ಬಿ ಟಂಗ್ 0 (1ಎ)
ಬೂಮ್ರಾ ಬಿ ಟಂಗ್ 0 (2ಎ)
ಪ್ರಸಿದ್ಧ ಸಿ ಟಂಗ್ ಬಿ ಬಷೀರ್ 0 (11ಎ)
ಇತರೆ: 18 (ಬೈ 5, ಲೆಗ್‌ಬೈ 4, ನೋಬಾಲ್ 6, ವೈಡ್ 3)
ವಿಕೆಟ್ ಪತನ: 3-92 (ಶುಭಮನ್ ಗಿಲ್, 24.6), 4-287 (ರಿಷಭ್ ಪಂತ್, 71.4), 5-333 (ಕೆ.ಎಲ್. ರಾಹುಲ್, 84.2), 6-335 (ಕರುಣ್ ನಾಯರ್, 85.6), 7-349 (ಶಾರ್ದೂಲ್ ಠಾಕೂರ್, 90.1), 8-349 (ಮೊಹಮ್ಮದ್ ಸಿರಾಜ್, 90.2), 9-349 (ಜಸ್‌ಪ್ರೀತ್ ಬೂಮ್ರಾ, 90.4) 10-364 (ಪ್ರಸಿದ್ಧ ಕೃಷ್ಣ, 95.6)
ಬೌಲಿಂಗ್: ಕ್ರಿಸ್ ವೋಕ್ಸ್ 19-4-45-1, ಬ್ರೈಡನ್ ಕಾರ್ಸ್ 19-2-80-3, ಜೋಷ್ ಟಂಗ್ 18-2-72-3, ಶೋಯಬ್ ಬಷೀರ್ 22-1-90-2, ಬೆನ್ ಸ್ಟೋಕ್ಸ್ 15-2-47-1, ಜೋ ರೂಟ್ 3-0-21-0.

ಇಂಗ್ಲೆಂಡ್
ವಿಕೆಟ್ ನಷ್ಟವಿಲ್ಲದೆ 21
(6 ಓವರ್‌ಗಳಲ್ಲಿ)

ಕ್ರಾಲಿ ಔಟಾಗದೇ 12 (25ಎ, 4x2)
ಡಕೆಟ್ ಔಟಾಗದೇ 9 (11ಎ)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 3-0-9-0, ಮೊಹಮ್ಮದ್ ಸಿರಾಜ್ 2-1-9-0, ರವೀಂದ್ರ ಜಡೇಜ 1-0-3-0

ಕೆ.ಎಲ್. ರಾಹುಲ್ ಮತ್ತು ರಿಷಭ್ ಪಂತ್ ಜೊತೆಯಾಟ — ಎಎಫ್‌ಪಿ ಚಿತ್ರ

ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರ ವಿಕೆಟ್ ಪಡೆದ ವೇಗಿ ಬ್ರೈಡನ್ ಕಾರ್ಸ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು — ಎಪಿ ಚಿತ್ರ

ಫ್ಲವರ್ ಸಾಧನೆ ಸರಿಗಟ್ಟಿದ ಪಂತ್

ಪಂತ್ ಅವರು ಟೆಸ್ಟ್ ಪಂದ್ಯವೊಂದರ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಗಳಿಸಿದ ವಿಶ್ವದ ಎರಡನೇ ವಿಕೆಟ್ ಕೀಪರ್–ಬ್ಯಾಟರ್ ಎನಿಸಿದರು. ಮೊದಲ ಇನಿಂಗ್ಸ್‌ನಲ್ಲಿ ಅವರು 134 ರನ್ ಬಾರಿಸಿದ್ದರು. 2001ರಲ್ಲಿ ಜಿಂಬಾಬ್ವೆಯ ಆ್ಯಂಡಿ ಫ್ಲವರ್ ಹರಾರೆಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 141 ಮತ್ತು ಅಜೇಯ 199 ರನ್ ಗಳಿಸಿದ್ದರು.

2019ರಲ್ಲಿ ಸ್ಟೀವನ್ ಸ್ಮಿತ್ ನಂತರ ಆಂಗ್ಲರ ನೆಲದಲ್ಲಿ ಪಂದ್ಯವೊಂದರಲ್ಲಿ ಎರಡು ಶತಕ ಬಾರಿಸಿದ ಮೊದಲ ಬ್ಯಾಟರ್ ಎನಿಸಿದರು.

ಐದು ಶತಕ: ಇದೇ ಮೊದಲು

ಒಂದೇ ಟೆಸ್ಟ್ ಪಂದ್ಯದಲ್ಲಿ ಭಾರತದ ಆಟಗಾರರು 5 ಶತಕ ಬಾರಿಸಿದ್ದು ಇದೇ ಮೊದಲು. ಮೊದಲ ಇನಿಂಗ್ಸ್‌ನಲ್ಲಿ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಮತ್ತು ರಿಷಭ್ ಪಂತ್ ಹಾಗೂ ಎರಡನೇ ಇನಿಂಗ್ಸ್‌ನಲ್ಲಿ ಪಂತ್ ಮತ್ತು ಕೆ.ಎಲ್. ರಾಹುಲ್ ಶತಕ ದಾಖಲಿಸಿದರು.

ಈ ಹಿಂದೆ ಆಸ್ಟ್ರೇಲಿಯಾ ತಂಡ ಮಾತ್ರ ದೇಶದಿಂದ ಹೊರಗೆ ಈ ಸಾಧನೆ ಮಾಡಿತ್ತು. 1951ರಲ್ಲಿ ಜಮೈಕಾದಲ್ಲಿ ಒಂದೇ ಇನಿಂಗ್ಸ್‌ನಲ್ಲಿ ಐವರು (ಕಾಲಿನ್ ಮೆಕ್‌ಡೊನಾಲ್ಡ್, ನೀಲ್ ಹಾರ್ವಿ, ಕೀತ್ ಮಿಲ್ಲರ್, ರಾನ್ ಅರ್ಚರ್ ಮತ್ತು ರಿಚಿ ಬೆನೊ) ಶತಕ ಬಾರಿಸಿದ್ದರು.

ಮುಂಬೈ ತಂಡ ತೊರೆಯಲು ಪೃಥ್ವಿ ಶಾ ನಿರ್ಧಾರ

ಮುಂಬೈ (ಪಿಟಿಐ): ಭಾರತ ತಂಡದ ಮಾಜಿ ಆಟಗಾರ ಪೃಥ್ವಿ ಶಾ ಅವರು ಮುಂಬೈ ತಂಡದ ಜೊತೆ ಸಂಬಂಧ ಕೊನೆಗೊಳಿಸಲು ಮುಂದಾಗಿದ್ದಾರೆ. ದೇಶೀಯ ಕ್ರಿಕೆಟ್‌ನಲ್ಲಿ ಹೊಸ ತಂಡಕ್ಕೆ ಆಡುವ ಉದ್ದೇಶದಿಂದ ಅವರು ಮುಂಬೈ ಕ್ರಿಕೆಟ್ ಸಂಸ್ಥೆಯಿಂದ (ಎಂಸಿಎ) ನಿರಾಕ್ಷೇಪಣಾ ಪತ್ರ ಕೋರಿದ್ದಾರೆ.

25 ವರ್ಷ ವಯಸ್ಸಿನ ಶಾ ಅವರು ದೀರ್ಘ ಮಾದರಿಯ ಕ್ರಿಕೆಟ್‌ನಿಂದ ಹೊರಗಿದ್ದಾರೆ. ಆದರೆ ಸೀಮಿತ ಓವರುಗಳ ಕ್ರಿಕೆಟ್‌ನಲ್ಲಿ ಸಕ್ರಿಯರಾಗಿದ್ದಾರೆ. ಆದರೆ ಆಟಕ್ಕಿಂತ ಹೆಚ್ಚಾಗಿ ಮೈದಾನದಾಚೆಯ ಅಶಿಸ್ತಿನ ನಡವಳಿಕೆಯಿಂದಾಗಿಯೇ ಅವರು ಸುದ್ದಿಗೆ ಗ್ರಾಸವಾಗಿದ್ದಾರೆ.

ಪೃಥ್ವಿ ಶಾ

2017ರಲ್ಲಿ ಅವರು ಮುಂಬೈ ತಂಡಕ್ಕೆ ಪದಾರ್ಪಣೆ ಮಾಡಿದ್ದರು. 'ತಂಡವನ್ನು ಪ್ರತಿನಿಧಿಸಿದ ಅವಧಿಯಲ್ಲಿ ನನಗೆ ಸಂಸ್ಥೆ ನೀಡಿದ ಅವಿರತ ಬೆಂಬಲಕ್ಕೆ ಧನ್ಯವಾದ ಸಲ್ಲಿಸುತ್ತೇನೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಪೃಥ್ವಿ ಶಾ ಅವರು ಭಾರತದ ಪರ ಐದು ಟೆಸ್ಟ್ ಪಂದ್ಯ ಮತ್ತು ಆರು ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಫಿಟ್ನೆಸ್ ಸಮಸ್ಯೆ ಮತ್ತು ಅಶಿಸ್ತಿನ ಕಾರಣ ಅವರನ್ನು ಕಳೆದ ಸಾಲಿನಲ್ಲಿ ಮುಂಬೈ ತಂಡದಿಂದ ಕೈಬಿಡಲಾಗಿತ್ತು. ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯಲ್ಲಿ ಮಧ್ಯಪ್ರದೇಶ ವಿರುದ್ಧ ಕೊನೆಯ ಸಲ ಆಡಿದ್ದರು.